ಶುಕ್ರವಾರ, ನವೆಂಬರ್ 15, 2024 | ₹ 7.00
www.prajavani.net
Prajavani.net prajavani Prajavani Prajavani

# ಪ್ರಜಾ ವಾಣಿ


ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಮಿಂಚಿದ ಶಮಿ**

ವರ್ಷದ ಬಳಿಕ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿರುವ ವೇಗದ ಬೌಲರ್ ಮೊಹಮ್ಮದ್ ಶಮಿ, ರಣಜಿ ಕ್ರಿಕೆಟ್ ಟೂರ್ನಿಯಲ್ಲಿ ಬಂಗಾಳವನ್ನು ಪ್ರತಿನಿಧಿಸಿದ್ದು, ಗುರುವಾರ ನಾಲ್ಕು ವಿಕೆಟ್ ಪಡೆದರು





1. ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿದ್ದ ಕೃಷಿ ಮೇಳದಲ್ಲಿ ದವಸಧಾನ್ಯಗಳನ್ನು ಬಳಸಿ ರಚಿಸಲಾದ ರಂಗೋಲಿ 2. ಮಳೆಯ ನಡುವೆ ಪ್ರದರ್ಶನ ತಾಕುಗಳನ್ನು ಸಾರ್ವಜನಿಕರು ವೀಕ್ಷಿಸಿದರು 3. ನಾಟಿಕೋಳಿಯಂತೆ ಕಾಣುವ ವರ್ಣರಂಜಿತ ಬ್ರಾಯ್ಲರ್ ಕೋಳಿ 'ರಾಜ–2' ಪ್ರದರ್ಶನದಲ್ಲಿ ಗಮನ ಸೆಳೆಯಿತು 4. ₹5 ಲಕ್ಷ ಮೌಲ್ಯದ ಜಾಫರಾಬಾದಿ ಎಮ್ಮೆ

ಪ್ರಜಾವಾಣಿ ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್

### ಹರಿದು ಬಂದ ರೈತ ಸಮುದಾಯ • ನೂರಾರು ಮಳಿಗೆಗಳಲ್ಲಿ ಹಲವು ಪ್ರದರ್ಶನಗಳು

# ಹವಾಮಾನ ಚತುರ 'ಕೃಷಿಮೇಳ'ಕ್ಕೆ ಮಳೆ ಸಿಂಚನ

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷ ವಾಕ್ಯದಡಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ಗುರುವಾರ ಆರಂಭಗೊಂಡ ಕೃಷಿ ಮೇಳದ ಸಂದರ್ಭದಲ್ಲಿ ಸುರಿದ ಮಳೆ, ಸಂಘಟಕರ ಚತುರತೆಯನ್ನು ಪರೀಕ್ಷಿಸಿತು. ಭಾರಿ ಸಂಖ್ಯೆಯಲ್ಲಿ ಬಂದಿದ್ದ ರೈತರನ್ನು, ಆಸಕ್ತರನ್ನು ಪಕ್ಕದ ಚಾವಣಿಗಳ ಅಡಿಗೆ ಆಗಾಗ ಓಡುವಂತೆ ಮಾಡಿತು.

ಬೆಳಿಗ್ಗಿನಿಂದಲೇ ತಂಡೋಪ ತಂಡವಾಗಿ ಬಂದವರು ವೇದಿಕೆ ಕಡೆಗಿಂತ ಪ್ರದರ್ಶನಗಳ ಕಡೆಗೇ ಹೆಚ್ಚು ಧಾವಿಸಿದರು. ವಿಭಿನ್ನ ತಳಿಯ ಕೋಳಿಗಳು, ಆಲಂಕಾರಿಕ ಮೀನುಗಳು, ಗಾಣದ ಎತ್ತು, ಅಧಿಕ ಹಾಲು ಕೊಡುವ ಎಮ್ಮೆ, ಹಳ್ಳಿಕಾರ್ ಎತ್ತು, ಉದ್ದ ಕಿವಿಯ ಆಡುಗಳನ್ನು ಮುಗಿಬಿದ್ದು ನೋಡಿ ಆನಂದಿಸಿದರು.

ಮೇಳದಲ್ಲಿ 700ಕ್ಕೂ ಅಧಿಕ ಮಳಿಗಳು ಇದ್ದವು. ಸಿರಿಧಾನ್ಯ ಆಹಾರಕ್ಕೆ ಸಂಬಂಧಿಸಿದ ವಿಶೇಷ ಮಳಿಗೆಗಳು, ದಾವಣಗೆರೆ ಬೆಣ್ಣೆದೋಸೆ, ಮಂಡಕ್ಕಿ ಮಿರ್ಚಿ, ತುಮಕೂರು ತಟ್ಟೆ ಇಡ್ಲಿ, ಮಂಗಳೂರು ಮೀನೂಟ, ಉತ್ತರ ಕರ್ನಾಟಕದ ರೊಟ್ಟಿ, ಎಣ್ಣೆಗಾಯಿ ಪಲ್ಯ, ಹುಬ್ಬಳ್ಳಿಯ ಗಿರ್ಮಿಟ್ ಮಿರ್ಚಿ, ಮೇಲುಕೋಟೆ ಪುಳಿಯೋಗರೆ, ಬೆಂಗಳೂರು ಬಾಡೂಟ, ದಮ್ ಬಿರಿಯಾನಿ, ಗೌಡ್ರಮನೆ ಹಳ್ಳಿಯೂಟ... ಹೀಗೆ ನಾನಾ ತರಹದ ಆಹಾರ ಮಳಿಗೆಗಳು ಬಾಯಲ್ಲಿ ನೀರೂರಿಸಿದವು. ರೈತರು ಹಾಗೂ ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಮುಸುಕಿನಜೋಳ ಸಂಕರಣ (ಎಂಎಎಚ್ 15-85), ಅಲಸಂದೆ (ಕೆಬಿಸಿ-12), ಸೂರ್ಯಕಾಂತಿ ಸಂಕರಣ (ಕೆಬಿಎಸ್‌ಎಚ್-90), ಬಾಜ್ರ ನೇಪಿಯರ್ ಸಂಕರಣ (ಪಿಬಿಎನ್-342) ಎಂಬ ತಳಿಗಳನ್ನು ಮೇಳದಲ್ಲಿ ಬಿಡುಗಡೆ ಮಾಡಲಾಯಿತು.

ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆ, ಖುಷ್ಕಿ ಬೇಸಾಯದ ಬೆಳೆ ಪದ್ಧತಿಗಳು, ರೇಷ್ಮೆಕೃಷಿ, ತೋಟಗಾರಿಕಾ ಬೆಳೆ, ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯಗಳು, ಸಾವಯವ ಕೃಷಿ ಪದ್ಧತಿಗಳು, ಸಮಗ್ರ ಪೋಷಕಾಂಶಗಳು, ಕೀಟ ನಿರ್ವಹಣೆ, ಮಣ್ಣು ರಹಿತ ಕೃಷಿ, ನೂತನ ಮಾಹಿತಿ ತಂತ್ರಜ್ಞಾನ, ಮಳೆ ನೀರು ಸಂಗ್ರಹ, ಬಿತ್ತನೆ ಬೀಜಗಳ ಪರೀಕ್ಷೆ, ಪಶುಸಂಗೋಪನೆ, ಹೈನುಗಾರಿಕೆ ಸಹಿತ ಅನೇಕ ವಿಚಾರಗಳ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ಮಾಹಿತಿಯನ್ನು ರೈತರು ಪಡೆದರು.

ಹವಾಮಾನಕ್ಕೆ ಹೊಂದಿಕೊಂಡು ಹೋಗುವ ಕೃಷಿಗೆ ಅನುಕೂಲವಾಗುವ ತಾಂತ್ರಿಕತೆ ಪರಿಚಯಿಸಲಾಯಿತು. ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಸೆನ್ಸಾರ್ ಆಧಾರಿತ ತಂತ್ರಜ್ಞಾನ ಪ್ರದರ್ಶಿಸಲಾಗಿದೆ. ಒಂದು ಪ್ರದೇಶಕ್ಕೆ ಔಷಧ ಸಿಂಪಡಣೆಯಾಗಿದ್ದರೆ ಮತ್ತೊಮ್ಮೆ ಆ ಪ್ರದೇಶಕ್ಕೆ ಹೋದರೆ ಔಷಧ ಸಿಂಪಡಣೆಯಾಗದಂತೆ ತಡೆಯುವ ಯಂತ್ರ ಗಮನ ಸೆಳೆಯಿತು. ಮಲ್ಟಿಸ್ಪೆಕ್ಟ್ರಲ್ ಡ್ರೋನ್, ಕೃಷಿ ಡ್ರೋನ್, ರೋಬೋಟ್ ಕೃಷಿ ಯಂತ್ರ, ಹಣ್ಣಿನ ವರ್ಗೀಕರಣಗೊಳಿಸುವ ಯಂತ್ರ, ಸ್ವಯಂಚಾಲಿತ ರಸಗೊಬ್ಬರ ಹರಡುವ ಯಂತ್ರ, ಆಳ ನಿಯಂತ್ರಕ ರೋಟವೇಟರ್, ಸ್ವಯಂಚಾಲಿತ ಬೂಮ್ ಸ್ಪ್ರೇಯರ್ ಸಹಿತ ಅನೇಕ ಯಂತ್ರಗಳನ್ನು ರೈತರು ವೀಕ್ಷಿಸಿದರು.



ಕೃಷಿ ಮೇಳದಲ್ಲಿ ಬಿಡುಗಡೆ ಮಾಡಲಾದ ಸೂರ್ಯಕಾಂತಿಯ ಹೊಸ ತಳಿಯನ್ನು ಸಚಿವ ಎನ್‌. ಚಲುವರಾಯಸ್ವಾಮಿ, ಶಾಸಕ ಎಸ್‌. ಆರ್‌. ವಿಶ್ವನಾಥ್, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ, ಶಾಸಕ ಶರತ್ ಬಚ್ಚೇಗೌಡ ವೀಕ್ಷಿಸಿದರು.




## ಸಮಗ್ರ ಬೇಸಾಯ ಅಳವಡಿಸಿಕೊಳ್ಳಿ: ಚಲುವರಾಯಸ್ವಾಮಿ

**ಬೆಂಗಳೂರು:** ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಸಮಗ್ರ ಕೃಷಿ ಮಾಡಿದರೆ ರೈತರಿಗೆ ಬೇಸಾಯವು ಸುಸ್ಥಿರ ಮತ್ತು ಲಾಭದಾಯಕವಾಗಲಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಮ್ಮಿಕೊಂಡಿರುವ ಕೃಷಿ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿ, 'ಕೃಷಿ ವಿಶ್ವವಿದ್ಯಾಲಯಗಳು ನಡೆಸುವ ಸಂಶೋಧನೆಗಳು ಹಾಗೂ ತಂತ್ರಜ್ಞಾನಗಳನ್ನು ರೈತರು ಅಳವಡಿಸಿಕೊಳ್ಳಬೇಕು. ಆಗ ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭ ಪಡೆಯಲು ಸಾಧ್ಯ' ಎಂದರು.

ರಾಜ್ಯದಲ್ಲಿ 78 ಲಕ್ಷಕ್ಕೂ ಹೆಚ್ಚು ರೈತರು ಹಾಗೂ 1.25 ಕೋಟಿಗೂ ಹೆಚ್ಚು ಕಾರ್ಮಿಕರು ಕೃಷಿಯಲ್ಲಿ ತೊಡಗಿದ್ದಾರೆ. ರಾಜ್ಯ ಸರ್ಕಾರ ಕೃಷಿಗೆ ಗರಿಷ್ಠ ಆದ್ಯತೆ ನೀಡಿದೆ. ಕಳೆದ ಸಾಲಿನಲ್ಲಿ ₹ 1,000 ಕೋಟಿ ಸಬ್ಸಿಡಿಯೊಂದಿಗೆ ಯಂತ್ರೋಪಕರಣ, ನೀರಾವರಿ ಸಲಕರಣೆಗಳನ್ನು ವಿತರಿಸಿದೆ. ₹ 2,100 ಕೋಟಿ ರೂಪಾಯಿ ಬೆಳೆ ವಿಮೆ ಹಣವನ್ನು ನೇರ ನಗದು ವರ್ಗಾವಣೆ ಮೂಲಕ ರೈತರಿಗೆ ಭರಿಸಲಾಗಿದೆ ಎಂದು ಯೋಜನೆಗಳನ್ನು ವಿವರಿಸಿದರು.

ವಿವಿಧ ಬೆಳೆಗಳ ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಸ್ವಯಂಚಾಲಿತ ಯಂತ್ರಗಳನ್ನು ಒಳಗೊಂಡ ಔಷಧ ಸಿಂಪಡಣಾ ಟ್ರ್ಯಾಕ್ಟರ್‌ಗೆ ಚಾಲನೆ ನೀಡಿದ ಕೃಷಿ ಸಚಿವರು ಅದನ್ನು ಚಲಾಯಿಸಿದರು. ಶಾಸಕರಾದ ಎಸ್.ಆರ್. ವಿಶ್ವನಾಥ್ ಹಾಗೂ ಶರತ್ ಬಚ್ಚೇಗೌಡ, ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಜೊತೆಗಿದ್ದರು.

**ಅಂಕಿ ಅಂಶ**

**3.82** ಲಕ್ಷ
ಕೃಷಿ ಮೇಳಕ್ಕೆ ಭೇಟಿ ನೀಡಿದ ಜನರು

**9,350**
ರಿಯಾಯಿತಿ ದರದ ಭೋಜನ ಸವಿದವರು

**ಎಮ್ಮೆ ಬೆಲೆ ₹5 ಲಕ್ಷ**

ಜಾಫರಾಬಾದಿ ಎಮ್ಮೆ ತನ್ನ ವಿಶಿಷ್ಟ ಶೈಲಿ ಮತ್ತು ಬೆಲೆಯ ಕಾರಣಕ್ಕೆ ಅಚ್ಚರಿ ಮೂಡಿಸಿತು. ಒಂದು ಹೊತ್ತಿಗೆ 15ರಿಂದ 25 ಲೀಟರ್ ಹಾಲು ಕೊಡುವ ಈ ಎಮ್ಮೆಯ ಬೆಲೆ ₹ 5 ಲಕ್ಷದಿಂದ ₹ 5.5 ಲಕ್ಷ. ಈ ಎಮ್ಮೆ ವರ್ಷಪೂರ್ತಿ ಹಾಲು ಕೊಡುತ್ತದೆ.



ಕೃಷಿಗೆ ಅನುಕೂಲವಾಗುವ ಹೊಸ ಸಂಶೋಧನೆಗಳು, ನಮಗೆ ಬೇಕಾಗುವ ವಸ್ತುಗಳನ್ನು ಖರೀದಿಸಲು ಈ ಮೇಳ ಉಪಯುಕ್ತವಾಗಿದೆ. ಹೊಸ ತಳಿಗಳ ಬೆಳೆ, ಹಣ್ಣು-ಹೂವು ಮತ್ತು ಕೋಳಿ, ಪ್ರಾಣಿಗಳ ತಳಿಗಳು ಬಹಳ ಚೆನ್ನಾಗಿವೆ.
**ಶಿವರಾಜು ಎನ್.** ರಾಮನಗರ ಜಿಲ್ಲೆ



ಇಲ್ಲಿ ಹೊಸ ವಿಷಯಗಳನ್ನು ಕಂಡಿದ್ದೇವೆ. ಕೃಷಿ ಇಲಾಖೆ ನೆರವಿನಿಂದ ನಮ್ಮ ಬೇಸಾಯ ಪದ್ಧತಿಯಲ್ಲಿ ಇವುಗಳನ್ನು ಅಳವಡಿಸಿಕೊಳ್ಳ ಪ್ರಯತ್ನಿಸುತ್ತೇವೆ. ಕೃಷಿ ಮೇಳಕ್ಕೆ ಮೊದಲ ಬಾರಿಗೆ ಭೇಟಿ ನೀಡಿದ್ದು ಖುಷಿ ನೀಡಿದೆ.
**ಕೆ. ಪದ್ಮಾ,** ಚಿಕ್ಕಬಳ್ಳಾಪುರ ಜಿಲ್ಲೆ



ಮೇಳದಲ್ಲಿ ಕಂಡ ಹೊಸ ಮಾಹಿತಿಯನ್ನು ನಮ್ಮ ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳುತ್ತೇವೆ. ಹಲವು ಹೊಸ ವಿಷಯಗಳನ್ನು ಇಲ್ಲಿ ಕಂಡಿದ್ದೇವೆ. ಬಿತ್ತನೆ ಬೀಜಗಳ ಕುರಿತು ಹೆಚ್ಚು ಮಾಹಿತಿ ಪಡೆದುಕೊಂಡಿದ್ದೇವೆ.
**ಎ. ಮರಿಯಪ್ಪ,** ರಾಮನಗರ ಜಿಲ್ಲೆ



ವಿಶ್ವವಿದ್ಯಾಲಯ ಬಿಡುಗಡೆಗೊಳಿಸಿದ ಹೊಸ ತಳಿಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇವೆ. ಈ ಬೀಜ ಖರೀದಿಸಿ ನಮ್ಮ ಜಮೀನಿನಲ್ಲಿ ಬೆಳೆದು ಆದಾಯ ಮಾಡಿಕೊಳ್ಳುತ್ತೇನೆ. ಉಪಕರಣಗಳು ಅನುಕೂಲವಾಗಲಿವೆ.
**ಸುನಂದಾ,** ಮಾಗಡಿ

### ಬೆಂಗಳೂರು ಕೃಷಿ ವಿ.ವಿ ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗದಿಂದ ಅಭಿವೃದ್ಧಿ

# ಮಾವಿನ ಹಣ್ಣುಗಳ ವಿಂಗಡಣೆಗೆ 'ಎಐ' ತಂತ್ರಜ್ಞಾನ

• ಖಲೀಲಅಹ್ಮದ ಶೇಖ

**ಬೆಂಗಳೂರು:** ಕಪ್ಪು ಚುಕ್ಕೆ, ಹಾನಿ, ಬಣ್ಣ ಹಾಗೂ ಅದರ ಪಕ್ವತೆಯ ಆಧಾರದ ಮೇಲೆ ಮಾವಿನ ಹಣ್ಣುಗಳನ್ನು ವಿಂಗಡಿಸಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧಾರಿತ ಯಂತ್ರ ಕೃಷಿ ಮೇಳದಲ್ಲಿ ಗಮನ ಸೆಳೆಯುತ್ತಿದೆ.

ಸಣ್ಣ ಮತ್ತು ಮಧ್ಯಮ ವರ್ಗದ ಮಾವಿನ ಹಣ್ಣು ಬೆಳೆಗಾರರಿಗೆ ಹಾಗೂ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳು ಈ ಯಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ.

ಮಾವಿನ ಹಣ್ಣಿನ ಪಕ್ವತೆ ಸೂಚ್ಯಂಕ, ಕೊಯ್ಲು ಮಾಡಿದ ನಂತರ ಹಣ್ಣಿಗೆ ಆಗಿರುವ ಹಾನಿಯನ್ನು ಕಂಡು ಹಿಡಿಯಲು '2 ಮೀಟರ್ ಉದ್ದ, 0.5 ಮೀ ಅಗಲ ಹಾಗೂ 1 ಮೀ ಎತ್ತರದ ಛಾಯಾಚಿತ್ರ ಸಂಸ್ಕರಣಾ ವ್ಯವಸ್ಥೆ'ಯನ್ನು ವಿನ್ಯಾಸಗೊಳಿಸಿ, ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಸಂವೇದನಾ ತಂತ್ರಜ್ಞಾನದಂತೆ ಕೆಲಸ ಮಾಡುತ್ತದೆ. ಹಣ್ಣಿನ ಬಣ್ಣ, ಪ್ರಬುದ್ಧತೆ, ಕಪ್ಪು ಚುಕ್ಕೆಗಳ ಆಧಾರದ ಮೇಲೆ ಗುಣಮಟ್ಟದ ಹಣ್ಣುಗಳನ್ನು ಹಾನಿಗೊಳಗಾದ ಹಣ್ಣುಗಳನ್ನು ಪ್ರತ್ಯೇಕ ಚೀಲಗಳಲ್ಲಿ ಸಂಗ್ರಹಿಸುತ್ತದೆ.

'ಮಲ್ಲಿಕಾ ತಳಿಯ ಮಾವಿನ ಹಣ್ಣುಗಳನ್ನು ಎಐ ತಂತ್ರಜ್ಞಾನ ಆಧಾರಿತ ಯಂತ್ರಕ್ಕೆ ಬಳಸಿಕೊಳ್ಳಲಾಗಿದೆ. ಮಾವಿನ ಹಣ್ಣಿಗೆ ಆಗಿರುವ ಹಾನಿಯನ್ನು ಗುರುತಿಸಲು ಒಪೆನ್ ಸಿ.ವಿ., ಪೈಥಾನ್‌ನ ನಂಪೈ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಅಲ್ಗಾರಿದಮ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಕಡಿಮೆ ಸಮಯದ ಬಳಕೆಯಲ್ಲಿ ಹೆಚ್ಚಿನ ಉತ್ಪಾದಕತೆ, ಗುಣಮಟ್ಟದ ವಿಂಗಡಣೆಯೊಂದಿಗೆ ಪರಿಣಾಮಕಾರಿ ಪರಿಹಾರವನ್ನು ಒದಗಿಸುವುದರ ಜೊತೆಗೆ ನಿಖರವಾಗಿ ಕೆಲಸ ಮಾಡುತ್ತದೆ' ಎಂದು ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ದ್ರೋಣಾಚಾರಿ ಮಾನ್ವಿ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಇದು ಮಾವಿನ ಹಣ್ಣುಗಳನ್ನು ರಫ್ತು ಮಾಡಲು ಬೇಕಾಗಿರುವ ಗ್ರೇಡಿಂಗ್ ಮಾನದಂಡಗಳನ್ನು ಪೂರೈಸುತ್ತದೆ. ಮಾವು ಬೆಳೆಗಾರರು, ಸಂಸ್ಕರಣೆದಾರರು, ವ್ಯಾಪಾರಿಗಳು, ಪ್ಯಾಕ್ ಹೌಸ್‌ಗಳು ಹಾಗೂ ತೋಟಗಾರಿಕೆ ಇಲಾಖೆಯವರಿಗೆ ಹೆಚ್ಚು ಸಹಕಾರಿ ಆಗಲಿದೆ. ಎಐ ಯಂತ್ರವೂ ಪ್ರತಿಗಂಟೆ 600 ರಿಂದ 800 ಕೆ.ಜಿ. ಹಣ್ಣುಗಳನ್ನು ವಿಂಗಡಿಸುವ ಸಾಮರ್ಥ್ಯವನ್ನು ಹೊಂದಿದೆ' ಎಂದು ವಿವರಿಸಿದರು.



**ರೈತರ ಶ್ರಮ, ಆರ್ಥಿಕ ವೆಚ್ಚ ಕಡಿಮೆ ಮಾಡುವ ಉದ್ದೇಶದಿಂದ ಎಐ ತಂತ್ರಜ್ಞಾನ ಆಧಾರಿತ ಮಾವಿನ ಹಣ್ಣುಗಳ ವಿಂಗಡಿಸುವ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ**
**ದ್ರೋಣಾಚಾರಿ ಮಾನ್ವಿ,** ಸಹಾಯಕ ಪ್ರಾಧ್ಯಾಪಕ, ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗ



ಮಾವಿನ ಹಣ್ಣುಗಳನ್ನು ವಿಂಗಡಿಸುವ ಎಐ ತಂತ್ರಜ್ಞಾನ ಆಧಾರಿತ ಯಂತ್ರ

## ಪಕ್ಷಿಗಳ ಹಾವಳಿ ನಿಯಂತ್ರಣಕ್ಕೆ ಬರ್ಡ್ ಸ್ಕೇರರ್

ಸೂರ್ಯಕಾಂತಿ ಮತ್ತು ಮೆಕ್ಕೆ ಜೋಳದ ಬೆಳೆಗಳಿಗೆ ಪಕ್ಷಿಗಳ ಹಾವಳಿಯನ್ನು ನಿಯಂತ್ರಿಸಲು ಸೌರಶಕ್ತಿ ಚಾಲಿತ ಬರ್ಡ್ ಸ್ಕೇರರ್ ಉಪಕರಣವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಂಸ್ಕರಣೆ ಮತ್ತು ಆಹಾರ ಎಂಜಿನಿಯರಿಂಗ್ ವಿಭಾಗವು ಅಭಿವೃದ್ಧಿಪಡಿಸಿದೆ.

'ಈ ಉಪಕರಣವು ಪ್ರತಿ 15 ನಿಮಿಷಗಳಂತೆ ಮೂರು ವಿಭಿನ್ನ ರೀತಿಯ ಶಬ್ದ ಮಾಡಲಿದೆ. ತಟ್ಟೆ ಬಡಿಯುವ ಶಬ್ದ, ಸೈರನ್ ಹಾಗೂ ರೆಕಾರ್ಡ್ ಮಾಡಿದ ಮಾನವನ ಧ್ವನಿಯ ಶಬ್ದ ಮಾಡಲಿದೆ. ಇದು ಸೌರಶಕ್ತಿ ಚಾಲಿತವಾಗಿದ್ದು, ಚಾರ್ಜ್ ಮಾಡಲು ಬ್ಯಾಟರಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ' ಎಂದು ದ್ರೋಣಾಚಾರಿ ಮಾನ್ವಿ ವಿವರಿಸಿದರು.

# ಗಿಡ್ಡ ಹಸು, ಕತ್ತೆ ಹಾಲಿನ ಸೋಪು, ಕ್ರೀಂಗಳ ಆಕರ್ಷಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕತ್ತೆ ಹಾಲಿನ ಉತ್ಪನ್ನಗಳು ಕೃಷಿ ಮೇಳದಲ್ಲಿ ಹೆಚ್ಚು ಆಕರ್ಷಿತವಾಗುತ್ತಿವೆ. ಹಾಲಿನ ಸೋಪು, ಮುಖಕ್ಕೆ ಹಚ್ಚುವ ಕ್ರೀಂಗಳನ್ನು ಕಂಡು ಜನರು ಪುಳಕಿತರಾದರು.

'ಕತ್ತೆ ಹಾಲು ಆರೋಗ್ಯದಾಯಕವಾಗಿದ್ದು, ಮಕ್ಕಳಿಗೆ, ಅನಾರೋಗ್ಯದಿಂದ ಇರುವವರಿಗೆ ಕತ್ತೆ ಹಾಲು ಕುಡಿಸುತ್ತಾರೆ. ಅದೇ ಹಾಲಿನಿಂದ ಸೋಪು ಮಾಡಲಾಗಿದೆ. ಇದರಿಂದ ನೈಸರ್ಗಿಕ ಶುಚಿತ್ವದ ಜೊತೆಗೆ ಚರ್ಮದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯ. ಚರ್ಮ ಸುಕ್ಕುಗಟ್ಟುವುದು, ತಲೆಯಲ್ಲಿ ಹೊಟ್ಟು ಬಾರದಂತೆ ತಡೆಯುವುದು ಸಹಿತ ಅನೇಕ ಪ್ರಯೋಜನಗಳಿವೆ' ಎಂದು ಕ್ಷೀರಸಾಗರ ಕತ್ತೆ ಫಾರ್ಮ್‌ನ ರಂಗೇಗೌಡರು ರೈತರಿಗೆ ವಿವರ ನೀಡಿದರು.

'ಡಾಂಕಿ ಮಿಲ್ಕ್ ನೈಟ್ ಕ್ರೀಂ' ಮುಖಕ್ಕೆ ಹಚ್ಚುವುದರಿಂದ ತ್ವಚೆಯ ಕಾಂತಿ ಹೆಚ್ಚಾಗುತ್ತದೆ ಎಂದು ರಂಗೇಗೌಡರು ಮಾಹಿತಿ ನೀಡುವಾಗ ಹೆಣ್ಣುಮಕ್ಕಳ ಮುಖ ಅರಳಿತು. ಕೃಷಿಗೆ ಉಪಯೋಗವಾಗುವ ಕತ್ತೆಯ ಸೆಗಣಿಯಿಂದ ತಯಾರಿಸಿದ ಗೊಬ್ಬರ, ಕತ್ತೆಮೂತ್ರ ಕೂಡ ಪ್ರದರ್ಶನಕ್ಕಿಡಲಾಗಿತ್ತು.

**ಪಂಜಾಬ್ ಕೋಳಿ:** ನಾಟಿಕೋಳಿ, ಗಿರಿರಾಜ ಕೋಳಿಗಳನ್ನು ಹೋಲುವ ವರ್ಣರಂಜಿತ ಮತ್ತು ದೊಡ್ಡ ಕೋಳಿಗಳು ಆಕರ್ಷಕವಾಗಿದ್ದವು. ಅವುಗಳು ಬ್ರಾಯ್ಲರ್ ಕ್ರಾಸ್ ಕೋಳಿಗಳು ಎಂದು ಗಣೇಶ್ ಮತ್ತು ಸಚಿನ್ ವಿವರ ನೀಡುವವರೆಗೆ ಊರ ಕೋಳಿಯ ತಳಿಗಳೇ ಇರಬೇಕು ಎಂದು ಭಾವಿಸುವಂತಿದ್ದವು.

'ಪಂಜಾಬ್‌ನಿಂದ ತಂದು ನಾವು ಪ್ರಯೋಗ ಮಾಡಿದ್ದೇವೆ. ಬಣ್ಣದ ಬ್ರಾಯ್ಲರ್ ಕೋಳಿಗಳು ಕಡಿಮೆ ಮೊಟ್ಟೆ ಇಡುತ್ತವೆ. ವರ್ಷಕ್ಕೆ 100ರಿಂದ 120 ಮೊಟ್ಟೆ ಇಟ್ಟರೆ ಹೆಚ್ಚು. ಆದರೆ, ಎಂಟೇ ತಿಂಗಳಲ್ಲಿ ಮೂರೂವರೆ ಕೆ.ಜಿ. ತೂಗುತ್ತವೆ. ಹಾಗಾಗಿ ಇದನ್ನು ಮಾಂಸಕ್ಕೆ ಬಳಸಲಾಗುತ್ತದೆ. ಸಾಕುವವರಿಗೆ ₹ 25ಕ್ಕೆ ಒಂದರಂತೆ ಕೋಳಿಮರಿಗಳನ್ನು ಒದಗಿಸಲಾಗುವುದು' ಮಾಹಿತಿ ನೀಡಿದರು.

ವರ್ಷಕ್ಕೆ 160ರಿಂದ 180 ಮೊಟ್ಟೆ ಇಡುವ ಜೊತೆಗೆ ಮಾಂಸಕ್ಕೂ ಉಪಯೋಗವಾಗುವ ಸ್ವರ್ಣಧಾರಾ ಕೋಳಿಗಳ ಸಹಿತ ವಿವಿಧ ತಳಿಗಳ ಕೋಳಿಗಳು ಮನಸೆಳೆದವು.

**ಪುಂಗನೂರು ಹಸು:** ಭಾರತದ ಹಸುಗಳ ಮೂಲ ತಳಿಗಳಲ್ಲಿ ಅತಿ ವೇಗದಲ್ಲಿ ಅಳಿವಿನಂಚಿಗೆ ಸಾಗುತ್ತಿರುವ ಪುಂಗನೂರು ಗಿಡ್ಡಹಸುಗಳೆರಡು ತನ್ನ ಆಕಾರ ಮತ್ತು ಸೌಂದರ್ಯದಿಂದ ಸೆಳೆದವು. ದೇಶದಲ್ಲಿ ಈ ತಳಿಯ ಹಸುಗಳು ಒಂದು ಸಾವಿರ ಮಾತ್ರ ಇವೆ. ಅದರಲ್ಲಿ 'ಸ್ವರ್ಣ ಕಪಿಲ' ಹಸು ಕೇವಲ ಐದು ಇವೆ. ಗೊರಸು, ಕಣ್ಣಿನ ರೆಪ್ಪೆಯಿಂದ ಹಿಡಿದು ಎಲ್ಲವೂ ಚಿನ್ನದ ಬಣ್ಣವನ್ನೇ ಹೊಂದಿರುವ ಈ ಹಸು ವಿಶಿಷ್ಟವಾಗಿತ್ತು.

2ರಿಂದ 3 ಅಡಿಯಷ್ಟೇ ಬೆಳೆಯುವ ಈ ಹಸುಗಳ ಬೆಲೆ ಮಾತ್ರ ₹ 1.5 ಲಕ್ಷದಿಂದ ₹ 2 ಲಕ್ಷದವರೆಗೆ ಇದೆ. ಒಂದು ಲೀಟರ್‌ವರೆಗೆ ಹಾಲು ನೀಡುತ್ತಿದೆ. ಇದರ ಹಾಲಿಗೂ ಆಡು, ಮೇಕೆಗಳ ಹಾಲಿನಂತೆ ಭಾರಿ ಬೆಲೆ ಎಂದು ಶ್ರೀ ಕೃಷ್ಣ ಗೋಶಾಲೆಯ ಕೃಷ್ಣಮೂರ್ತಿ ತಿಳಿಸಿದರು.

ಗಾಣದ ಎತ್ತುಗಳು, ಹಳ್ಳಿಕಾರ್ ಎತ್ತುಗಳು, ಉದ್ದಕಿವಿಯ ಆಡು ಸೇರಿದಂತೆ ವಿವಿಧ ತಳಿಯ ಆಡುಗಳನ್ನು ರೈತರು ಕುತೂಹಲದಿಂದ ವೀಕ್ಷಿಸಿದರು.

# 19ರಿಂದ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ–2024

**ಬೆಂಗಳೂರು:** 'ನವೋದ್ಯಮಗಳು ಮತ್ತು ಜಾಗತಿಕ ಮಟ್ಟದ ಹೂಡಿಕೆದಾರರನ್ನು ಒಂದೇ ವೇದಿಕೆಯಲ್ಲಿ ತರಲು ಆಯೋಜಿಸಲಾಗಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2024 ಇದೇ 19ರಿಂದ 21ರವರೆಗೆ ನಡೆಯಲಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

'ಆಸ್ಟ್ರೇಲಿಯ, ಬ್ರಿಟನ್, ಫ್ರಾನ್ಸ್, ಆಸ್ಟ್ರಿಯ, ಡೆನ್ಮಾರ್ಕ್, ಫಿನ್ಲೆಂಡ್, ಪೋಲೆಂಡ್, ಜಪಾನ್, ಜರ್ಮನಿ, ಸ್ವಿಡ್ಜರ್ಲೆಂಡ್, ಇಸ್ರೇಲ್, ಅಮೆರಿಕದ ಸಹಯೋಗದಲ್ಲಿ ಶೃಂಗಸಭೆ ನಡೆಯಲಿದೆ. ಈ ದೇಶಗಳ ನಿಯೋಗಗಳು ಭಾಗಿಯಾಗಲಿವೆ' ಎಂದು ಮಾಹಿತಿ ನೀಡಿದರು.

'ಉದ್ಘಾಟನಾ ಸಮಾರಂಭದಲ್ಲಿ ಜರ್ಮನಿಯ ಆರ್ಥಿಕ ಇಲಾಖೆಯ ಮುಖ್ಯಸ್ಥರು ಭಾಗಿಯಾಗಲಿದ್ದಾರೆ. ಮೂರು ದಿನಗಳ ಶೃಂಗಸಭೆಯಲ್ಲಿ ನವೋದ್ಯಮಗಳಿಗೆ ಸಂಬಂಧಿಸಿದಂತೆ ಹಲವು ವಿಚಾರಗೋಷ್ಠಿಗಳು ನಡೆಯಲಿವೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ನವೋದ್ಯಮಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ' ಎಂದು ತಿಳಿಸಿದರು.

# ವೈದ್ಯೆಗೆ ಪಿಎಸ್‌ಐ ಕಿರುಕುಳ: ಪೊಲೀಸ್ ಕಮಿಷನರ್‌ಗೆ ದೂರು

**ಬೆಂಗಳೂರು:** 'ನಗ್ನ ಫೋಟೊ ಕಳುಹಿಸುವಂತೆ ಪೀಡಿಸುತ್ತಿದ್ದರು' ಎಂದು ಆರೋಪಿಸಿ, ಖಾಸಗಿ ಆಸ್ಪತ್ರೆ ವೈದ್ಯೆಯ ಸಹೋದರರೊಬ್ಬರು, ಬಸವನಗುಡಿ ಠಾಣೆಯ ಪಿಎಸ್‌ಐಯೊಬ್ಬರ ವಿರುದ್ಧ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರಿಗೆ ದೂರು ಸಲ್ಲಿಸಿದ್ದಾರೆ.

'2021ರಲ್ಲಿ ಫೇಸ್‌ಬುಕ್ ಮೂಲಕ ಪಿಎಸ್‌ಐಗೆ ಯುವತಿ ಪರಿಚಯ ಆಗಿದ್ದರು. ಆಗ ಯುವತಿ ಮೈಸೂರಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದರು. ಅದೇ ವರ್ಷ ಪೊಲೀಸ್ ಅಕಾಡೆಮಿಯಲ್ಲಿ ಪಿಎಸ್‌ಐ ತರಬೇತಿಯಲ್ಲಿ ಇದ್ದರು. ಆಗ ಸ್ನೇಹ ಬೆಳೆದಿತ್ತು. ಜತೆಗೆ ಯುವತಿ ಪಿಎಸ್‌ಐ ಅವರಿಂದ ₹80 ಸಾವಿರ ಸಾಲ ಪಡೆದು ವಾಪಸ್ ನೀಡಿದ್ದರು. ನಂತರ, ಪಿಎಸ್‌ಐ ಸಹ ವೈದ್ಯೆಯಿಂದ ಹಂತ ಹಂತವಾಗಿ ₹1.71 ಲಕ್ಷವನ್ನು ಆನ್‌ಲೈನ್ ಮೂಲಕ ಪಡೆದಿದ್ದರು. ಯುವತಿ ಹಣವನ್ನು ವಾಪಸ್ ಕೇಳಿದಾಗ ನಿಂದಿಸಿದ್ದರು. ಯುವತಿ ಆತ್ಮಹತ್ಯೆಗೂ ಯತ್ನಿಸಿದ್ದರು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಪಿಎಸ್‌ಐ ನಗ್ನ ಫೋಟೊ ಕಳಿಸುವಂತೆ ವೈದ್ಯಗೆ ಕಿರುಕುಳ ನೀಡಿದ್ದು, ಇದನ್ನು ನಿರಾಕರಿಸಿದ ವೈದ್ಯೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಕಿರುಕುಳ ಸಹ ನೀಡುತ್ತಿದ್ದರು' ಎಂದು ಆರೋಪಿಸಿ ವೈದ್ಯೆ ಸಹೋದರ ದೂರು ನೀಡಿದ್ದಾರೆ. ಹನುಮಂತನಗರ ಠಾಣೆ ಪೊಲೀಸರಿಗೆ ದೂರನ್ನು ವರ್ಗಾವಣೆ ಮಾಡಲಾಗಿದ್ದು, ಸಹೋದರನ ಹೇಳಿಕೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

### ಸಹಕಾರ ಸಪ್ತಾಹ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಚಿವ ಕೆ.ಎನ್. ರಾಜಣ್ಣ

# ಸಹಕಾರ ಕ್ಷೇತ್ರದ ಶಿಕ್ಷಣ ಪಡೆದವರಿಗೆ ಹುದ್ದೆ ಮೀಸಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಹಕಾರ ಕ್ಷೇತ್ರದಲ್ಲಿ ಶಿಕ್ಷಣ, ತರಬೇತಿ ಪಡೆದವರಿಗೆ ಸಹಕಾರ ಬ್ಯಾಂಕ್‌ಗಳು ಹಾಗೂ ಈ ಕ್ಷೇತ್ರಕ್ಕೆ ಸಂಬಂಧಿಸಿದ ಹುದ್ದೆಗಳನ್ನು ಮೀಸಲಿಡಲು ಪ್ರಯತ್ನಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024 ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜಕಾರಣ ಬಿಟ್ಟರೆ ಸಹಕಾರಿಗಳ ಅಭ್ಯುದಯ ಸಾಧ್ಯ. ಸಹಕಾರ ಕ್ಷೇತ್ರದಲ್ಲಿ ಉತ್ತಮ ಕೆಲಸವಾಗಲು ಕೆಲವು ಅಡಚಣೆಗಳಿವೆ. ಅದರ ನಿವಾರಣೆಗೆ ಕಾಯ್ದೆಯಲ್ಲಿ ತಿದ್ದುಪಡಿ ತರಲಾಗುವುದು ಎಂದರು.

'ಸಹಕಾರ ಪತ್ರಿಕೆ'ಯ ವಿಶೇಷ ಸಂಚಿಕೆ ಬಿಡುಗಡೆ ಮಾಡಿದ ರಾಜಣ್ಣ, 'ಸಹಕಾರ ಸಚಿವಾಲಯದ ನೂತನ ಪ್ರಯತ್ನಗಳ ಮೂಲಕ ಸಹಕಾರ ಚಳವಳಿ ಬಲಪಡಿಸಲಾಗುತ್ತದೆ. ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಸಹಕಾರ ಆಂದೋಲನ ನಡೆಯಬೇಕು' ಎಂದು ಹೇಳಿದರು.

'ಸಹಕಾರ ಸಪ್ತಾಹದ ಮೂಲಕ ಸಹಕಾರ ತತ್ವ-ಆಚರಣೆ ಬಗ್ಗೆ ಜನಜಾಗೃತಿ ಮೂಡಿಸಲಾಗುತ್ತಿದೆ. ಸಪ್ತಾಹದ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಜನಜಾಗೃತಿ ಕಾರ್ಯಕ್ರಮಗಳು ಇರಬೇಕು' ಎಂದು ರಾಜ್ಯ ಸಹಕಾರ ಮಹಾಮಂಡಳ ನಿಯಮಿತದ ಅಧ್ಯಕ್ಷ ಜಿ.ಟಿ. ದೇವೇಗೌಡ ಅಭಿಪ್ರಾಯಪಟ್ಟರು.

ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ್ದರು. ಆದ್ದರಿಂದ ಅವರ ಜನ್ಮದಿನದಂದು ಸಹಕಾರ ಸಪ್ತಾಹವನ್ನು ಹಬ್ಬದ ರೀತಿಯಲ್ಲಿ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಅಧ್ಯಕ್ಷ ಎಸ್. ಟಿ.ಸೋಮಶೇಖರ್, ರಾಜ್ಯ, ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆಯ ನಿವೃತ್ತ ಮುಖ್ಯಸ್ಥ ಡಾ.ಕೆ.ಪಿ. ರಮೇಶ್ ಉಪನ್ಯಾಸ ನೀಡಿದರು.



ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಿಯ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್, ಸಹಕಾರ ಸಂಘಗಳ ನಿಬಂಧಕ ಟಿ.ಎಚ್‌.ಎಂ. ಕುಮಾರ್, ಶಾಸಕ ಎಸ್‌.ಟಿ. ಸೋಮಶೇಖರ್ ಮತ್ತು ರಾಜ್ಯ ಸಹಕಾರ ಮಹಾಮಂಡಳಿ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರು ಸಹಕಾರಿ ಸಂಘಗಳ ಪಿತಾಮಹ ಸಿದ್ದನಗೌಡ ಸಣ್ಣಗೌಡನ ಪಾಟೀಲ್, ಗಾಂಧೀಜಿ ಮತ್ತು ನೆಹರೂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

### ರಾಜರಾಜೇಶ್ವರಿನಗರ ಕ್ಷೇತ್ರದ ಶಾಸಕ ಮುನಿರತ್ನ ವಿರುದ್ಧದ ಪ್ರಕರಣ

# ಹನಿಟ್ರ್ಯಾಪ್‌ಗೆ ಸಂಚು: ಇನ್‌ಸ್ಪೆಕ್ಟರ್ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ಶಾಸಕ ಮುನಿರತ್ನ ಅವರು ನಡೆಸಿದ್ದರು ಎನ್ನಲಾದ ಹನಿಟ್ರ್ಯಾಪ್ ಪ್ರಕರಣದಲ್ಲಿ ಒಳಸಂಚು ರೂಪಿಸಿದ್ದ ಆರೋಪದಡಿ ಹೆಬ್ಬಗೋಡಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಐಯಣ್ಣ ರೆಡ್ಡಿ ಅವರನ್ನು ಸಿಐಡಿಯ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು ಗುರುವಾರ ಬಂಧಿಸಿ, ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆಯೇ ಐಯಣ್ಣ ರೆಡ್ಡಿ ಅವರನ್ನು ವಶಕ್ಕೆ ಪಡೆದ ಎಸ್‌ಐಟಿ ತನಿಖಾಧಿಕಾರಿಗಳು ಬಳಿಕ ಬಂಧಿಸಿದರು.

'ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಐಯಣ್ಣ ರೆಡ್ಡಿ ಅವರನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.



ಐಯಣ್ಣ ರೆಡ್ಡಿ

ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ್ದ ಆರೋಪದಡಿ ರಾಮನಗರ ಜಿಲ್ಲೆಯ ಕಗ್ಗಲಿಪುರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಮುನಿರತ್ನ ಅವರನ್ನು ಬಂಧಿಸಲಾಗಿತ್ತು. ಷರತ್ತುಬದ್ಧ ಜಾಮೀನಿನ ಮೇಲೆ ಮುನಿರತ್ನ ಅವರು ಬಿಡುಗಡೆ ಆಗಿದ್ದಾರೆ. ಅತ್ಯಾಚಾರ ಪ್ರಕರಣ, ಬಿಬಿಎಂಪಿ ಗುತ್ತಿಗೆದಾರರೊಬ್ಬರಿಗೆ ಜಾತಿ ನಿಂದನೆ ಮಾಡಿ, ಕೊಲೆ ಬೆದರಿಕೆ ಹಾಕಿದ್ದ ಪ್ರಕರಣದ ತನಿಖೆಯನ್ನು ಸರ್ಕಾರವು ಎಸ್‌ಐಟಿ ವಹಿಸಿತ್ತು.

'ಐಯಣ್ಣ ರೆಡ್ಡಿ ಅವರು ಕಬ್ಬನ್‌ಪಾರ್ಕ್, ರಾಜಗೋಪಾಲನಗರ, ಯಶವಂತಪುರ, ಪೀಣ್ಯ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಕಳೆದ ಒಂದೂವರೆ ವರ್ಷದಿಂದ ಹೆಬ್ಬಗೋಡಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಮುನಿರತ್ನ ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರದಲ್ಲಿ ಹೆಚ್ಚಿನ ವರ್ಷ ಕೆಲಸ ಮಾಡಿದ್ದರು' ಎಂದು ಮೂಲಗಳು ಹೇಳಿವೆ.

'ಹನಿಟ್ರ್ಯಾಪ್‌ಗೆ ಇನ್‌ಸ್ಪೆಕ್ಟರ್ ನೆರವು ನೀಡಿದ್ದರು. ಅಲ್ಲದೇ ಆರೋಪಿಗಳು ಕೆಲವು ರಾಜಕಾರಣಿಗಳಿಗೆ ಏಡ್ಸ್ ಚುಚ್ಚುಮದ್ದು ಪ್ರಯೋಗಿಸಲು ಸಂಚು ರೂಪಿಸಿದ್ದು, ಗೊತ್ತಿದ್ದರೂ ಇನ್‌ಸ್ಪೆಕ್ಟರ್ ಮಾಹಿತಿ ಬಚ್ಚಿಟ್ಟಿದ್ದರೆಂಬ ಆರೋಪದ ಅಡಿ ಬಂಧಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

**ವಿಚಾರಣೆ ವೇಳೆ ಮಾಹಿತಿ:** 'ಸಂತ್ರಸ್ತೆ ಹಾಗೂ ಬಿಬಿಎಂಪಿ ಮಾಜಿ ಸದಸ್ಯ, ಗೋಕುಲ ಮೊದಲ ಹಂತದ ನಿವಾಸಿ ವೇಲುನಾಯ್ಕರ್ ಅವರನ್ನು ಕೆಲವು ದಿನಗಳ ಹಿಂದೆ ವಿಚಾರಣೆ ನಡೆಲಾಗಿತ್ತು. ವಿಚಾರಣೆ ವೇಳೆ ಇನ್‌ಸ್ಪೆಕ್ಟರ್ ಒಳಸಂಚು ರೂಪಿಸಿದ್ದ ಬಗ್ಗೆ ಮಾಹಿತಿ ನೀಡಿದ್ದರು. ಅದನ್ನು ಆಧರಿಸಿ ಇನ್‌ಸ್ಪೆಕ್ಟರ್ ಬಂಧಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಕರ್ನಾಟಕ ಚಿನ್ನದ ಹೊಳಪು



**ಸಿನಿಮಾ ಪುರವಣಿ**
'ಯಾರನ್ನೋ ಮೆಚ್ಚಿಸುವವ ನಾನಲ್ಲ' 'ಭೈರತಿ ರಣಗಲ್' ಚಿತ್ರದ ನಾಯಕ ನಟ ಶಿವರಾಜ್‌ಕುಮಾರ್ ಜೊತೆ ಮಾತುಕತೆ

ಕ್ಯಾನ್ಸರ್ ತಜ್ಞ ವೈದ್ಯನಿಗೆ ಇರಿತ: ಪ್ರತಿಭಟನೆ 9
ಪುರುಷರಿಗೂ ಉಚಿತ ಬಸ್ ಪ್ರಯಾಣ? 8

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 77,580 | 23,532 | ₹78,120 (ಬೆಂಗಳೂರು) | ₹93,300 (ಬೆಂಗಳೂರು) | 84.46 |

### ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿವಿಧ ಇಲಾಖೆಗಳಲ್ಲಿ ಅಕ್ರಮದ ಆರೋಪ

# ಕೋವಿಡ್: ಎಸ್‌ಐಟಿ ತನಿಖೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರ ಪ್ರಕರಣಗಳ ಕುರಿತು ತನಿಖೆಗೆ ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಎಚ್‌.ಕೆ. ಪಾಟೀಲ, 'ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಔಷಧಿ, ಯಂತ್ರೋಪಕರಣ, ಇತರ ಚಿಕಿತ್ಸಾ ಪರಿಕರಗಳ ಖರೀದಿಯಲ್ಲಿನ ಅಕ್ರಮ, ಸಂಭವಿಸಿದ ಸಾವುಗಳ ಮಾಹಿತಿ ಮುಚ್ಚಿಟ್ಟಿರುವುದು ಸೇರಿದಂತೆ ಎಲ್ಲ ಬಗೆಯ ಅಕ್ರಮಗಳ ಕುರಿತು ಎಸ್‌ಐಟಿ ತನಿಖೆ ನಡೆಸಲು ನಿರ್ಧರಿಸಲಾಗಿದೆ' ಎಂದರು.

ಕೋವಿಡ್ ಅವಧಿಯಲ್ಲಿನ ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಪ್ರಕರಣಗಳ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ನೇತೃತ್ವದ ಆಯೋಗವು ವಿಚಾರಣೆ ನಡೆಸುತ್ತಿದೆ. ಔಷಧಿ, ಯಂತ್ರೋಪಕರಣ ಖರೀದಿಯಲ್ಲಿ ಅಕ್ರಮ ನಡೆಸಿರುವ ಹಲವು ಪ್ರಕರಣಗಳಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆಯೋಗವು ಇತ್ತೀಚೆಗೆ ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ.

ಸಾಂಕ್ರಾಮಿಕದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್‌. ಯಡಿಯೂರಪ್ಪ, ಆಗಿನ ಆರೋಗ್ಯ ಸಚಿವ ಬಿ. ಶ್ರೀರಾಮುಲು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ವಿರುದ್ಧ ತನಿಖೆಗೆ ಶಿಫಾರಸು ಮಾಡಲಾಗಿದೆ. ಅಂತಹ ಎಲ್ಲ ಪ್ರಕರಣಗಳ ತನಿಖೆಯನ್ನೂ ಎಸ್‌ಐಟಿಗೆ ವಹಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

'ಜನರು ಕೋವಿಡ್‌ನಿಂದ ಸಂಕಷ್ಟದಲ್ಲಿದ್ದಾಗ ಆಗಿನ ಸರ್ಕಾರವು ಅಮಾನವೀಯವಾಗಿ ನಡೆದುಕೊಂಡಿತ್ತು' ಎಂದು ಎಂದು ಪಾಟೀಲ ವಿವರಿಸಿದರು.

11ನೇ ಪುಟ ನೋಡಿ

## ಗಣಿಗಾರಿಕೆ: 10 ಪ್ರಕರಣ ಎಸ್‌ಐಟಿಗೆ



ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ ಹತ್ತು 'ಸಿ' ದರ್ಜೆ ಗಣಿಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಕುರಿತ ತನಿಖೆಯನ್ನು ಲೋಕಾಯುಕ್ತದ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ವಹಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಶೇಕಡ 15ಕ್ಕಿಂತ ಹೆಚ್ಚು ಪ್ರಮಾಣದ ನಿಯಮ ಉಲ್ಲಂಘನೆ, ಗಡಿಯ ಹೊರಗೆ ಅಕ್ರಮ ಗಣಿಗಾರಿಕೆ ನಡೆದ ಗಣಿ ಗುತ್ತಿಗೆಗಳನ್ನು 'ಸಿ' ದರ್ಜೆಯಲ್ಲಿ ಗುರುತಿಸಲಾಗಿತ್ತು. 49 ಗಣಿಗಳನ್ನು 'ಸಿ' ದರ್ಜೆಗೆ ಸೇರಿಸಲಾಗಿತ್ತು.

ಈ ಪೈಕಿ ಮೈಸೂರು ಮ್ಯಾಂಗನೀಸ್ ಕಂಪನಿ, ದಶರಥ ರಾಮಿ ರೆಡ್ಡಿ, ಅಲ್ಲಂ ವೀರಭದ್ರಪ್ಪ, ಕರ್ನಾಟಕ ಲಿಂಪೊ, ಅಂಜನಾ ಮಿನರಲ್ಸ್, ರಾಝಿಯಾ ಖಾನಂ, ಮಿಲನಾ ಮಿನರಲ್ಸ್ (ಮಹಾಲಕ್ಷ್ಮಿ ಆ್ಯಂಡ್ ಕೋ), ಎಂ. ಶ್ರೀನಿವಾಸುಲು, ಚನ್ನಕೇಶವ ರೆಡ್ಡಿ (ಲಕ್ಷ್ಮೀನಾರಾಯಣ ಮೈನಿಂಗ್ ಕಂಪನಿ) ಮತ್ತು ಜಿ. ರಾಜಶೇಖರ್ ಗಣಿ ಗುತ್ತಿಗೆ ಪ್ರದೇಶಗಳಲ್ಲಿನ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಎಸ್‌ಐಟಿಗೆ ವಹಿಸಲಾಗುವುದು ಎಂದು ಪಾಟೀಲ ವಿವರಿಸಿದರು.

- ಮೈಕಲ್ ಡಿಕುನ್ಹ ಆಯೋಗದ ಶಿಫಾರಸಿನಂತೆ ತನಿಖೆ
- ಐಜಿಪಿ ಅಥವಾ ಅದಕ್ಕಿಂತ ಮೇಲಿನ ಅಧಿಕಾರಿ ನೇತೃತ್ವ
- ಯಡಿಯೂರಪ್ಪ, ಶ್ರೀರಾಮುಲು ವಿರುದ್ಧದ ಪ್ರಕರಣವೂ ಎಸ್‌ಐಟಿಗೆ

## ಆರು ಪ್ರಕರಣಗಳ ವಸ್ತುಸ್ಥಿತಿ ವರದಿಗೆ ಸೂಚನೆ

ರಾಜ್ಯ ಹಾಗೂ ಹೊರ ರಾಜ್ಯಗಳ ಬಂದರುಗಳ ಮೂಲಕ ರಾಜ್ಯದ ಅದಿರಿನ ಅಕ್ರಮ ರಫ್ತು, ರೈಲಿನ ಮೂಲಕ ಅದಿರು ಕಳ್ಳಸಾಗಣೆ ಸೇರಿದಂತೆ ಸಿಬಿಐ ತನಿಖೆ ನಡೆಸದೇ ವಾಪಸು ನೀಡಿದ್ದ ಆರು ಪ್ರಕರಣಗಳಿಗೆ ಸಂಬಂಧಿಸಿದ ವಸ್ತುಸ್ಥಿತಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಸೂಚಿಸಲಾಗಿದೆ.

ಆಂಧ್ರ ಪ್ರದೇಶದ ಕೃಷ್ಣಪಟ್ಟಣ, ಕಾಕಿನಾಡ, ವಿಶಾಖಪಟ್ಟಣ, ಗೋವಾದ ಮರ್ಮಗೋವಾ, ಪಣಜಿ, ತಮಿಳುನಾಡಿನ ಎನ್ನೋರ್, ಚೆನ್ನೈ ಮತ್ತು ರಾಜ್ಯದ ನವಮಂಗಳೂರು ಮತ್ತು ಕಾರವಾರ ಬಂದರುಗಳ ಮೂಲಕ ಅದಿರಿನ ಅಕ್ರಮ ರಫ್ತು ಮಾಡಿರುವ ಆರೋಪದ ಕುರಿತು ಪ್ರಾಥಮಿಕ ತನಿಖೆ ನಡೆಸಿದ್ದ ಸಿಬಿಐ, ಪ್ರಕರಣಗಳನ್ನು ರಾಜ್ಯ ಸರ್ಕಾರಕ್ಕೆ ವಾಪಸ್ ನೀಡಿತ್ತು. ರೈಲುಗಳ ಮೂಲಕ ಅಕ್ರಮವಾಗಿ ಅದಿರು ಸಾಗಿಸಿದ ಪ್ರಕರಣದ ತನಿಖೆಯೂ ಬಾಕಿ ಇದೆ. ಈ ಎಲ್ಲ ಪ್ರಕರಣಗಳ ಕುರಿತು ಪರಿಶೀಲಿಸಿ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು ಎಂದು ಎಚ್‌.ಕೆ. ಪಾಟೀಲ ತಿಳಿಸಿದರು.

ಸಿಬಿಐ ವಾಪಸ್ ನೀಡಿದ್ದ ಪ್ರಕರಣಗಳ ತನಿಖೆಯನ್ನು ಲೋಕಾಯುಕ್ತ ಎಸ್‌ಐಟಿಗೆ ವಹಿಸಿ 2018ರ ಮಾರ್ಚ್ 21ರಂದು ಆದೇಶ ಹೊರಡಿಸಲಾಗಿತ್ತು.

ಮಣಿಪುರ: ಮತ್ತೆ ಆಫ್‌ಸ್ಪಾ ಕಾಯ್ದೆ ಜಾರಿ 11

## ಚಿನಕುರುಳಿ

ಪ್ರಕಾಶ್ ಶೆಟ್ಟಿ




## ಸಗಟು ಹಣದುಬ್ಬರ 4 ತಿಂಗಳ ಗರಿಷ್ಠ

**ನವದೆಹಲಿ (ಪಿಟಿಐ):** ಅಕ್ಟೋಬರ್ ತಿಂಗಳಿನಲ್ಲಿ ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರಿತ ಹಣದುಬ್ಬರವು ನಾಲ್ಕು ತಿಂಗಳ ಗರಿಷ್ಠ ಮಟ್ಟವಾದ ಶೇ 2.36ರಷ್ಟು ದಾಖಲಾಗಿದೆ.

ತರಕಾರಿಗಳು ಮತ್ತು ತಯಾರಿಕಾ ಸರಕುಗಳ ಬೆಲೆ ಏರಿಕೆಯೇ ಇದಕ್ಕೆ ಕಾರಣ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಗುರುವಾರ ತಿಳಿಸಿದೆ. ಸೆಪ್ಟೆಂಬರ್‌ನಲ್ಲಿ ಸಗಟು ಹಣದುಬ್ಬರವು ಶೇ 1.84ರಷ್ಟಿತ್ತು. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಶೇ (–) 0.26ರಷ್ಟು ದಾಖಲಾಗಿತ್ತು.

ಸೆಪ್ಟೆಂಬರ್‌ನಲ್ಲಿ ಶೇ 11.53ರಷ್ಟಿದ್ದ ಆಹಾರ ಪದಾರ್ಥಗಳ ಬೆಲೆಯು ಅಕ್ಟೋಬರ್‌ನಲ್ಲಿ ಶೇ 13.54ರಷ್ಟು ಹೆಚ್ಚಳವಾಗಿದೆ. ತರಕಾರಿಗಳ ಬೆಲೆಯು ಶೇ 48.73ರಿಂದ ಶೇ 63.04ರಷ್ಟಕ್ಕೆ ಮುಟ್ಟಿದೆ. ಟೊಮೆಟೊ ಮತ್ತು ಈರುಳ್ಳಿ ಬೆಲೆಯು ಕ್ರಮವಾಗಿ ಶೇ 78.73ರಷ್ಟು ಹಾಗೂ ಶೇ 39.25ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದೆ. ತೈಲ ಮತ್ತು ಇಂಧನ ಬೆಲೆಯು ಶೇ 5.79ರಷ್ಟು, ತಯಾರಿಕಾ ವಲಯದ ಸರಕುಗಳ ಬೆಲೆಯು ಶೇ 1.50ರಷ್ಟು ಹೆಚ್ಚಳವಾಗಿದೆ.

### ಹಿಗ್ಗಿದ ವ್ಯಾಪಾರ ಕೊರತೆ



ಅಕ್ಟೋಬರ್‌ನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ವಿದೇಶಿ ವ್ಯಾಪಾರದ ಕೊರತೆಯು ₹2.29 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸುದ್ದಿ 10




## 2025: 19 ದಿನ ಸರ್ಕಾರಿ ರಜೆ

**ಬೆಂಗಳೂರು:** 2025ನೇ ವರ್ಷದ ಸಾರ್ವತ್ರಿಕ ರಜಾ ದಿನಗಳು ಮತ್ತು ಪರಿಮಿತ ರಜಾ ದಿನಗಳ ಪಟ್ಟಿಗೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿದೆ. ಮುಂದಿನ ವರ್ಷದಲ್ಲಿ 19 ಸಾರ್ವತ್ರಿಕ ರಜಾ ದಿನಗಳು ಮತ್ತು 20 ಪರಿಮಿತ ರಜಾ ದಿನಗಳು ಇರಲಿವೆ.

ಪಟ್ಟಿ 8

# ಸುಧಾ, ಮಯೂರ ಓದಿ

# ಡೇರಿ ಅಕೌಂಟೆಂಟ್ ಆತ್ಮಹತ್ಯೆ

ಬೆಂಗಳೂರು: ಖಾಸಗಿ ಹಾಲಿನ ಡೇರಿಯಲ್ಲಿ ಕೆಲಸ ಮಾಡುತ್ತಿದ್ದ ಅಕೌಂಟೆಂಟ್, ಹೊಸರೋಡ್ ನಿವಾಸಿ ಕಾರ್ತಿಕೇಯನ್ (30) ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಇಂದು–ನಾಳೆ ಉಚಿತ ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಧೀ ಫೌಂಡೇಷನ್ ಇದೇ 15 ಮತ್ತು 16ರಂದು 'ಸ್ವಸ್ಥ ಕರ್ನಾಟಕ 2024' ಶೀರ್ಷಿಕೆಯಡಿ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರವನ್ನು ಅರಮನೆ ಮೈದಾನದಲ್ಲಿ (ಪ್ರಿನ್ಸಸ್ ಶ್ರೈನ್ -ಗೇಟ್ ಸಂಖ್ಯೆ 9) ಹಮ್ಮಿಕೊಂಡಿದೆ.

ಈ ಶಿಬಿರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಲಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾರ್ಯಕ್ರಮ ನಿರ್ದೇಶಕ ಡಾ.ಎಸ್. ಸಚ್ಚಿದಾನಂದ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುತ್ತಾರೆ. ಶಿಬಿರದಲ್ಲಿ ಉಚಿತ ತಪಾಸಣೆ, ಸಮಾಲೋಚನೆ ಹಾಗೂ ಚಿಕಿತ್ಸೆ ಇರಲಿದೆ ಎಂದು ಫೌಂಡೇಷನ್ ಅಧ್ಯಕ್ಷೆ ಡಾ.ಜಿ. ಪ್ರಜ್ವಲ ರಾಜ್ ತಿಳಿಸಿದ್ದಾರೆ.



'ಹೃದ್ರೋಗ ತಜ್ಞರು, ಮಕ್ಕಳ ತಜ್ಞರು, ಚರ್ಮ ರೋಗ ತಜ್ಞರು, ನರರೋಗ ತಜ್ಞರು, ಸ್ತ್ರೀರೋಗ ತಜ್ಞರು ಸೇರಿ ವಿವಿಧ ವಿಭಾಗಗಳ ತಜ್ಞ ವೈದ್ಯರು ಶಿಬಿರದಲ್ಲಿ ಪಾಲ್ಗೊಳ್ಳುತ್ತಾರೆ.

ಹೃದ್ರೋಗ, ಕಣ್ಣಿನ ಸಮಸ್ಯೆ, ಚರ್ಮರೋಗ, ಕ್ಯಾನ್ಸರ್ ಸೇರಿ ವಿವಿಧ ರೋಗಗಳು ಹಾಗೂ ಸಮಸ್ಯೆಗಳಿಗೆ ಸಂಭಂಧಿಸಿದಂತೆ ತಪಾಸಣೆ ಹಾಗೂ ಚಿಕಿತ್ಸೆ ಒದಗಿಸಲಾಗುತ್ತದೆ. ಕನ್ನಡ, ಔಷಧಗಳನ್ನು ಉಚಿತವಾಗಿ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

**ನೋಂದಣಿ ಹಾಗೂ ಸಂಪರ್ಕಕ್ಕೆ:** 9886533393 ಅಥವಾ 9449097947

# ವೇತನ ಖಾತೆ ಬದಲಿಸಿ ವಂಚನೆ

## ಅಮೆರಿಕ ಮೂಲದ ಕಂಪನಿ ಸಿಇಒಗೆ ₹16.29 ಲಕ್ಷ ವಂಚಿಸಿದ ಸೈಬರ್ ಕಳ್ಳರು, ಪ್ರಕರಣ ದಾಖಲು

• ಪ್ರಜ್ವಲ್ ಡಿಸೋಜ

**ಮುಖ್ಯಾಂಶಗಳು**

- ಸ್ಥಳೀಯ ಬ್ಯಾಂಕ್ ಸಂಖ್ಯೆ ನೀಡಿದ್ದ ಸೈಬರ್ ವಂಚಕರು
- ಅಧಿಕಾರಿ ವೇತನ ವಿವರ ಪರಿಶೀಲಿಸಿದಾಗ ಬಯಲು

ಬೆಂಗಳೂರು: ಸೈಬರ್ ಕಳ್ಳರು ವಂಚನೆಗೆ ನಾನಾ ತಂತ್ರ ರೂಪಿಸುತ್ತಿದ್ದು, ವೇತನ ಪಾವತಿಯ ಬ್ಯಾಂಕ್ ಖಾತೆ ಬದಲಾವಣೆ ಹೆಸರಿನಲ್ಲಿ ಅಮೆರಿಕ ಮೂಲದ ಕೆನ್ನೈ ಟೆಕ್ನಾಲಜೀಸ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ(ಸಿಇಒ) ₹16.29 ಲಕ್ಷ ವಂಚಿಸಿದ್ದಾರೆ.

ವಂಚನೆ ಪ್ರಕರಣದ ಸಂಬಂಧ ನಗರದ ವಿದ್ಯಾರಣ್ಯಪುರದ ಕಂಪನಿ ಕಚೇರಿಯ ಮಾನವ ಸಂಪನ್ಮೂಲ (ಎಚ್‌ಆರ್) ವಿಭಾಗದ ವ್ಯವಸ್ಥಾಪಕ ಯು.ಜಿ.ಹರೀಶ್ ದೂರು ನೀಡಿದ್ದು, ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನವೆಂಬರ್ 9ರಂದು ಬಿಎನ್‌ಎಸ್ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತಾಂತ್ರಿಕ ಸಾಕ್ಷ್ಯ ಕಲೆಹಾಕಿ ತನಿಖೆ ನಡೆಸಲಾಗುತ್ತಿದೆ' ಎಂದು ಸೈಬರ್ ಠಾಣೆ ಪೊಲೀಸರು ತಿಳಿಸಿದರು.

'ಸಂಬಳ ಪಾವತಿ ಆಗುತ್ತಿರುವ ಬ್ಯಾಂಕ್ ಖಾತೆಯನ್ನು ಬದಲಾವಣೆ ಮಾಡುತ್ತಿದ್ದು, ಅದಕ್ಕೆ ಬೇಕಾದ ದಾಖಲೆಗಳ ವಿವರ ಕಳುಹಿಸುವಂತೆ r**@kenai-us.comನಿಂದ ಸಿಇಒ ಅವರ ಹೆಸರಿನಲ್ಲಿ ಜ.1ರಂದು ವ್ಯವಸ್ಥಾಪಕ ಹರೀಶ್ ಅವರ ಇ-ಮೇಲ್‌ಗೆ ಸಂದೇಶ ಬಂದಿತ್ತು. ಹರೀಶ್ ಅವರು ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐಎಫ್‌ಎಸ್‌ಸಿ ಕೋಡ್ ಕಳುಹಿಸುವಂತೆ ಇ-ಮೇಲ್‌ಗೆ ಪ್ರತಿಕ್ರಿಯಿಸಿದ್ದರು. ಜ.31ರಂದು ಸೈಬರ್ ವಂಚಕರು ಇಂಡಿಯನ್ ಓವರ್ ಸೀಸ್ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐಎಫ್‌ಎಸ್‌ಸಿ ಕೋಡ್ ಅನ್ನು ಇ-ಮೇಲ್ ಮೂಲಕ ರವಾನಿಸಿದ್ದರು. ಮಾರ್ಚ್ 31ರಿಂದ ಅಕ್ಟೋಬರ್ 31ರ ವರೆಗೆ ಪ್ರತಿ ತಿಂಗಳು ಸಂಬಳವು ಕಂಪನಿಯ ಕೋಟೆಕ್ ಮಹೀಂದ್ರ ಬ್ಯಾಂಕ್ ಖಾತೆಯಿಂದ ಇಂಡಿಯನ್ ಓವರ್ ಸೀಸ್ ಬ್ಯಾಂಕ್ ಖಾತೆಗೆ ಒಟ್ಟು ₹16.29 ಲಕ್ಷ ಸಂದಾಯ ಆಗಿತ್ತು' ಎಂದು ನೀಡಿರುವ ದೂರು ಆಧರಿಸಿ, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ.

'ಸಿಇಒ ಅವರು ಅಕ್ಟೋಬರ್‌ನಲ್ಲಿ ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದ್ದರು. ಕೆಲವು ತಿಂಗಳಿಂದ ವೇತನ ಪಾವತಿ ಆಗಿಲ್ಲವೆಂದು ವ್ಯವಸ್ಥಾಪಕರಿಗೆ ಕರೆ ಮಾಡಿ ತಿಳಿಸಿದ್ದರು. ನಂತರ, ವ್ಯವಸ್ಥಾಪಕ ಹರೀಶ್ ಅವರು ವೇತನ ಪಾವತಿ ಆಗಿರುವ ಇಂಡಿಯನ್ ಓವರ್ ಸೀಸ್ ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಐಎಫ್‌ಎಸ್‌ಸಿ ಕೋಡ್ ಅನ್ನು ಸಿಇಒ ಅವರಿಗೆ ಕಳುಹಿಸಿದ್ದರು. ಈ ಖಾತೆಗೆ ವೇತನ ಹಾಕಲು ಮಾಡಿದ್ದ ಇ-ಮೇಲ್ ಸಹ ಕಳುಹಿಸಿದ್ದರು. ಆಗ ಸಿಇಒ ಅವರು 'ನಾನು ಯಾವುದೇ ಇ-ಮೇಲ್ ಮಾಡಿಲ್ಲ' ಎಂಬುದಾಗಿ ಹೇಳಿದ್ದರು. ಆಗ ಸೈಬರ್ ವಂಚನೆ ನಡೆದಿರುವುದು ಗೊತ್ತಾಗಿ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಸೈಬರ್ ವಂಚಕರು ನೀಡಿರುವ ಬ್ಯಾಂಕ್ ಸಂಖ್ಯೆ ಸ್ಥಳೀಯವಾಗಿದ್ದು, ಸೈಬರ್ ಕಳ್ಳರ ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

## ಸಂಪರ್ಕ್ ಸೆ ಸಂಬಂಧ್ ರ್‍ಯಾಲಿ 22ರಂದು ನಗರಕ್ಕೆ

ಬೆಂಗಳೂರು: ಭಾರತೀಯ ಸೇನೆಯ ಹಳೆಯ ಎಂಜಿನಿಯರ್ ಗ್ರೂಪ್ 'ಮದ್ರಾಸ್ ಸ್ಯಾಪರ್ಸ್'ನ 244ನೇ ಸ್ಥಾಪನಾ ದಿನ ಹಾಗೂ ಕಾರ್ಗಿಲ್ ವಿಜಯದ 25ನೇ ವಾರ್ಷಿಕೋತ್ಸವದ ಅಂಗವಾಗಿ ನ.16ರಿಂದ 'ಸಂಪರ್ಕ್ ಸೆ ಸಂಬಂಧ್-ಸಂಬಂಧ್ ಸೆ ಸಂಪರ್ಕ್' ಇ-ಬೈಕ್ ರ್‍ಯಾಲಿ ಆರಂಭಿಸಲಿದೆ. ದಕ್ಷಿಣ ಭಾರತದಲ್ಲಿ ಸಂಚರಿಸಲಿರುವ ಈ ರ್‍ಯಾಲಿ ನ.22ರಂದು ಬೆಂಗಳೂರಿಗೆ ತಲುಪಲಿದೆ.

ಬೆಳಗಾವಿಯಿಂದ ಹೊರಡುವ ರ್‍ಯಾಲಿ ಹುಬ್ಬಳ್ಳಿ, ಮಂಗಳೂರು, ಹಾಸನ ಮೂಲಕ ಬೆಂಗಳೂರಿಗೆ ತಲುಪಲಿದೆ.

ಕನ್ಯಾಕುಮಾರಿ, ತಿರುವನಂತಪುರ, ಬೆಳಗಾವಿ ಮತ್ತು ಹೈದರಾಬಾದ್‌ನಿಂದ ಏಕಕಾಲಕ್ಕೆ ರ್‍ಯಾಲಿಗೆ ಚಾಲನೆ ದೊರೆಯಲಿದೆ. ಬೆಂಗಳೂರಿನಲ್ಲಿ ಎಂಜಿನಿಯರ್-ಇನ್-ಚೀಫ್ ಲೆಫ್ಟಿನೆಂಟ್ ಜನರಲ್ ಅರವಿಂದ್ ವಾಲಿಯಾ ಧ್ವಜಾರೋಹಣ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## 'ಮುಸ್ಲಿಂ ಯುವತಿ ಮೇಲೆ ಹಲ್ಲೆ'

ಹೊಳೆಹೊನ್ನೂರು (ಶಿವಮೊಗ್ಗ): ಹಿಂದೂ ಯುವಕನ ಜೊತೆಗೆ ಓಡಾಡುತ್ತಿರುವುದಾಗಿ ಆರೋಪಿಸಿ ಮುಸ್ಲಿಂ ಸಮುದಾಯದ ಯುವತಿ ಮೇಲೆ ಹಲ್ಲೆ ನಡೆಸಿದ್ದ ಅದೇ ಸಮುದಾಯದ 13 ಮಂದಿ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಮೀಪದ ಅರಬಿಳಚಿ ಗ್ರಾಮದ ಯುವತಿ ಈ ಬಗ್ಗೆ ದೂರು ನೀಡಿದ್ದರು. 'ಹಿಂದೂ ಯುವಕನ ಜೊತೆ ಏಕೆ ಓಡಾಡುತ್ತೀಯಾ ಎಂದು ಪ್ರಶ್ನಿಸಿದ್ದರು. ತಪ್ಪು ಮಾಡಿಲ್ಲ ಎಂದು ಹೇಳಿದರೂ ಹಲ್ಲೆ ನಡೆಸಿದ್ದರು' ಎಂದು ದೂರು ನೀಡಿದ್ದರು.

ಮಸೀದಿ ಸಮಿತಿಯವರು ಕರೆಯುತ್ತಿದ್ದಾರೆ ಎಂದು ತಿಳಿಸಿದ್ದರು. ತಾಯಿ ಜೊತೆಗೆ ಸ್ಥಳಕ್ಕೆ ಹೋಗಿದ್ದಾಗ ಥಳಿಸಿದ್ದರು' ಎಂದು ವಿವರಿಸಿದ್ದರು.



## ಮೇಲ್ಸೇತುವೆಯಿಂದ ಜಿಗಿದು ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಚ್ಮಂಡ್ ಜಂಕ್ಷನ್‌ನ ಮೇಲ್ಸೇತುವೆಯಿಂದ ಜಿಗಿದು ಆತ್ಮಹತ್ಯೆಗೆ ಯತ್ನಿಸಿದ ಕ್ಯಾಬ್ ಚಾಲಕನನ್ನು ಅಶೋಕನಗರ ಸಂಚಾರ ಠಾಣೆ ಪೊಲೀಸರು ಸಮಯ ಪ್ರಜ್ಞೆ ತೋರಿ ರಕ್ಷಿಸಿದ್ದಾರೆ.

ಬಾಗಲೂರು ನಿವಾಸಿ ವೆಂಕಟರಾಜು(37) ರಕ್ಷಣೆಗೊಳಗಾದ ಕ್ಯಾಬ್ ಚಾಲಕ. ಬುಧವಾರ ಸಂಜೆ 6.30ರ ಸುಮಾರಿಗೆ ರಿಚ್ಮಂಡ್ ಜಂಕ್ಷನ್ ಮೇಲ್ಸೇತುವೆಯಲ್ಲಿ ಘಟನೆ ನಡೆದಿದೆ.

ವೆಂಕಟರಾಜುಗೆ ಮದುವೆ ಯಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಬಾಗಲೂರಿನಲ್ಲಿ ಕುಟುಂಬದ ಜೊತೆ ನೆಲಸಿದ್ದರು. ಕೆಲ ತಿಂಗಳ ಹಿಂದೆ ವೆಂಕಟರಾಜು ಅವರ ಅಜ್ಜಿ ಮೃತಪಟ್ಟಿದ್ದರು. ಅದೇ ನೋವಿನಲ್ಲಿ ವೆಂಕಟರಾಜು ಇದ್ದರು. 'ನನ್ನ ಅಜ್ಜಿ ಕರೆಯುತ್ತಿದ್ದಾಳೆ. ನಾನೂ ಹೋಗಬೇಕು' ಎಂದು ಎಲ್ಲೆಂದರಲ್ಲಿ ಓಡಾಟ ನಡೆಸುತ್ತಿದ್ದರು. ಹೀಗಾಗಿ ಮನೆಯವರು ಅವರಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಿದ್ದರು ಎಂದು ಮೂಲಗಳು ತಿಳಿಸಿವೆ.

'ವೆಂಕಟರಾಜು ಅವರಿಗೆ ಬುಧವಾರ ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಸಂಜೆ ಮನೆಗೆ ಕರೆದೊಯ್ಯುತ್ತಿದ್ದರು. ಪತ್ನಿ ಮತ್ತು ಬಾಮೈದ ಕಾರಿನಲ್ಲಿ ಬಾಗಲೂರಿನ ಮನೆಗೆ ಕರೆದೊಯ್ಯುತ್ತಿದ್ದಾಗ ಮಾರ್ಗ ಮಧ್ಯೆ ರಿಚ್ಮಂಡ್ ಜಂಕ್ಷನ್‌ನ ಮೇಲ್ಸೇತುವೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಕಾರಿನಿಂದ ಇಳಿದಿದ್ದ ವೆಂಕಟರಾಜು ಅವರು ಏಕಾಏಕಿ ಸೇತುವೆಯಿಂದ ಜಿಗಿಯಲು ಯತ್ನಿಸಿದ್ದರು. ಮೊಬೈಲ್ ಸಹ ಕೆಳಕ್ಕೆ ಎಸೆದಿದ್ದರು. ಕೂಡಲೇ ಅವರ ಪತ್ನಿ, ಪತಿಯನ್ನು ರಕ್ಷಣೆ ಮಾಡುವಂತೆ ಕೂಗಿಕೊಂಡಿದ್ದರು. ಸೇತುವೆ ಕೆಳಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಶೋಕನಗರ ಠಾಣೆಯ ಪಿಎಸ್‌ಐ ಬಿ.ಎಂ.ಹರೀಶ್ ಕುಮಾರ್ ಮತ್ತು ಹೆಡ್ ಕಾನ್‌ಸ್ಟೆಬಲ್ ಡಿ.ಜಿ. ಲೋಕೇಶ್ ಅವರು ವೆಂಕಟರಾಜು ಅವರನ್ನು ರಕ್ಷಿಸಿ ಮನೆಗೆ ಕಳುಹಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

## ಅಪಘಾತ: ಯುವಕ ಸಾವು

ಪೀಣ್ಯ ದಾಸರಹಳ್ಳಿ: ಸಮೀಪದ ಎಂಟನೇ ಮೈಲಿ ಬಳಿ ಸಂಭವಿಸಿದ ಅಪಘಾತದಲ್ಲಿ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಂಧ್ರಪ್ರದೇಶ ಅಜಯ್ (18) ಮೃತ ಯುವಕ.

ತಿರುವಿನಲ್ಲಿ ಬೈಕ್ ನಿಯಂತ್ರಣ ತಪ್ಪಿದೆ. ಆಗ ವಾಹನವೊಂದು ಡಿಕ್ಕಿ ಹೊಡೆದಿದ್ದು, ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಪೀಣ್ಯ ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

## 12 ಉಗ್ರರ ಹತ್ಯೆ

ಪೆಶಾವರ (ಪಿಟಿಐ): ಪಾಕಿಸ್ತಾನದ ಭದ್ರತಾ ಪಡೆಗಳು ಖೈಬರ್ ಪಖ್ತುಂಖ್ವಾ ಮತ್ತು ಬಲೂಚಿಸ್ತಾನ ಪ್ರಾಂತ್ಯದಲ್ಲಿ ನಡೆಸಿದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ 12 ಭಯೋತ್ಪಾದಕರನ್ನು ಹತ್ಯೆಗೈದಿವೆ ಎಂದು ಸೇನೆ ಹೇಳಿದೆ.



## ಅವ್ಯವಸ್ಥೆಗಳ ಬಗ್ಗೆ ತನಿಖೆ ನಡೆಸಲು ನಿರ್ದೇಶನ

# ಮಹಾರಾಣಿ ವಿ.ವಿ: ಉಪ ಲೋಕಾಯುಕ್ತರ ಪರಿಶೀಲನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಗುರುವಾರ ದಿಢೀರ್ ಭೇಟಿ ನೀಡಿದ ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ ಮತ್ತು ಬಿ.ವೀರಪ್ಪ ಅವರು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಇರುವ ಕುಂದುಕೊರತೆಗಳನ್ನು ಶೀಘ್ರವೇ ಸರಿಪಡಿಸುವಂತೆ ಕುಲಪತಿ, ಉನ್ನತ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

'ಕಾಲೇಜು ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಹಲವು ಸಮಸ್ಯೆಗಳಿವೆ ಎಂದು ಕೆಲ ವಿದ್ಯಾರ್ಥಿನಿಯರು ಲೋಕಾಯುಕ್ತಕ್ಕೆ ಪತ್ರ ಬರೆದಿದ್ದರು. ಇದನ್ನು ಪರಿಶೀಲಿಸುವ ಸಲುವಾಗಿ ಭೇಟಿ ನೀಡಲಾಯಿತು. ಉಪ ಲೋಕಾಯುಕ್ತರು ವಿದ್ಯಾರ್ಥಿನಿಯರ ಜತೆ ಮಾತನಾಡಿ, ಮಾಹಿತಿ ಪಡೆದುಕೊಂಡರು' ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಇಬ್ಬರೂ ಉಪ ಲೋಕಾಯುಕ್ತರು ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣೆ ವಿಭಾಗದ ಹಾಗೂ ವಿಜ್ಞಾನ ವಿಭಾಗದ ಕಾಲೇಜುಗಳಿಗೆ ಮೊದಲು ಭೇಟಿ ನೀಡಿದರು. ಎರಡೂ ಕಾಲೇಜುಗಳ ಕಟ್ಟಡಗಳು ಹಳೆಯದಾಗಿದ್ದು, ಕೆಲವೆಡೆ ಶಿಥಿಲವಾಗಿವೆ. ಬಣ್ಣಗಳು ಮಾಸಿರುವುದು, ಕಿಟಕಿ–ಬಾಗಿಲುಗಳು ಹಾಳಾಗಿರುವುದು ಮತ್ತು ಗೋಡೆಗಳಲ್ಲಿ ನೀರು ಸೋರುತ್ತಿರುವುದನ್ನು ಗಮನಿಸಿದರು ಎಂದು ಹೇಳಿದೆ.

ನಂತರ ಈ ಕಾಲೇಜುಗಳ ಮತ್ತು ಗೃಹ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ನಿಲಯಗಳಿಗೆ ಭೇಟಿದರು. ಕಟ್ಟಡಗಳು ಹಳತಾಗಿರುವುದು, ಶೌಚಾಲಯಗಳು ಸುಸ್ಥಿತಿಯಲ್ಲಿ ಇಲ್ಲದೇ ಇರುವುದು, ಕ್ಯಾಂಟೀನ್‌ನಲ್ಲಿ ಸರಿಯಾಗಿ ಊಟ ನೀಡದಿರುವುದನ್ನು ಉಪ ಲೋಕಾಯುಕ್ತರು ಗಮನಿಸಿದರು ಎಂದು ಪ್ರಕಟಣೆ ತಿಳಿಸಿದೆ.

'ಇವುಗಳನ್ನು ಶೀಘ್ರವೇ ಸರಿಪಡಿಸಬೇಕು ಎಂದು ಸಂಬಂಧಿತರಿಗೆ ಸೂಚಿಸಿದರು. ಈ ಅವ್ಯವಸ್ಥೆಗಳ ಬಗ್ಗೆ ತನಿಖೆ ನಡೆಸಿ, ವರದಿ ನೀಡಿ' ಎಂದು ಲೋಕಾಯುಕ್ತದ ಹೆಚ್ಚುವರಿ ರಿಜಿಸ್ಟ್ರಾರ್‌ಗೆ ಸೂಚಿಸಿದರು.



ವಿದ್ಯಾರ್ಥಿನಿಲಯಗಳ ಶೌಚಾಲಯಗಳನ್ನು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್‌.ಫಣೀಂದ್ರ ಪರಿಶೀಲಿಸಿದರು

### ಸಮಸ್ಯೆಗಳ ಆಗರ


- ಮೂರೂ ಕಾಲೇಜುಗಳ ವಿದ್ಯಾರ್ಥಿ ನಿಲಯಗಳಲ್ಲಿ ಇರುವ ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗಿ ಶೌಚಾಲಯಗಳು ಮತ್ತು ಸ್ನಾನಗೃಹಗಳು ಇಲ್ಲ
- ಇರುವ ಶೌಚಾಲಯಗಳು ಮತ್ತು ಸ್ನಾನಗೃಹಗಳು ಶುಚಿಯಾಗಿಲ್ಲ ಮತ್ತು ಸುಸ್ಥಿತಿಯಲ್ಲಿ ಇಲ್ಲ
- ಎಲ್ಲ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿದಿನ ಒಂದೇ ರೀತಿಯ ಆಹಾರ ನೀಡಲಾಗುತ್ತಿದೆ. ಸಿಹಿ ತಿಂಡಿ, ಮೊಟ್ಟೆ ಮತ್ತು ಮಾಂಸಾಹಾರವನ್ನು ನೀಡುತ್ತಿಲ್ಲ
- ವಿದ್ಯಾರ್ಥಿನಿಯರಿಗೆ ಮಂಚಗಳನ್ನು ಮಾತ್ರ ಒದಗಿಸಲಾಗಿದ್ದು, ನಿಯಮಗಳ ಪ್ರಕಾರ ನೀಡಬೇಕಿದ್ದ ಹಾಸಿಗೆ–ದಿಂಬು ಮತ್ತು ಹೊದಿಕೆಗಳನ್ನು ಒದಗಿಸಿಲ್ಲ
- ವಿದ್ಯಾರ್ಥಿನಿಲಯಗಳ ನೀರಿನ ಓವರ್‌ಹೆಡ್ ಟ್ಯಾಂಕ್‌ಗಳು ಶುಚಿಯಾಗಿಲ್ಲ ಮತ್ತು ಸುಸ್ಥಿತಿಯಲ್ಲಿ ಇಲ್ಲ
- ಗೃಹ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಲಯಕ್ಕೆ ಕಾಯಂ ವಿದ್ಯುತ್ ಸಂಪರ್ಕ ಇಲ್ಲ. ಪರಿಣಾಮವಾಗಿ ಮೊಬೈಲ್, ಲ್ಯಾಪ್‌ಟಾಪ್ ಚಾರ್ಜಿಂಗ್ ಮತ್ತು ಇತರ ಸಾಧನಗಳ ಬಳಕೆ ಸಾಧ್ಯವಾಗುತ್ತಿಲ್ಲ
- ಗೃಹ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಲಯಕ್ಕೆ ಕೊಳವೆಬಾವಿ ಮತ್ತು ಸಂಪ್ ವ್ಯವಸ್ಥೆ ಇರುವುದಿಲ್ಲ. ಕುಡಿಯುವ ನೀರು ಮತ್ತು ಬಳಕೆಯ ನೀರೂ ಸರಿಯಾಗಿ ಸರಬರಾಜು ಆಗುವುದಿಲ್ಲ









ಟ್ರೈ-ಡಯಾ
Tri-Dia
FINE LAB DIAMOND JEWELLERY
BE ROYAL
TURN MOMENTS INTO MASTERPIECES
Our Collections
Eternal VOWS
Bridal collections timeless elegance for lasting love
Noble AFFAIRS
Sophisticated Tri-Dia diamonds, adding regal elegance daily
Luxury SOLITAIRE
Tri-Dia diamonds exude luxury for refined gatherings
Majestic MOMENTS
Tri-Dia majestic diamonds make every occasion unforgettable
Royal ESSENTIALS
Sophisticated Tri-Dia diamonds for quiet confidence and elegance
BE THE SHINE THAT CAPTIVATES THE HEART
Fine Diamond Jewellery for Every Occasion and Personal Triumph
Tri-Dia Promise*
Experience the luxury of Lab diamonds at 60-90% less in price than natural diamonds.
VALUE EXCHANGE GUARANTEE
100% on Gold Rate* (Market Gold Value)
100% on Diamond Rate* (Market Diamond Value)
Customize your dream Jewellery with our Lab Diamonds.
IGI
IGI CERTIFICATION
The global authority in certification in Diamond grading
COLOR & CLARITY
Color Grade: D-E-F
Clarity Grade: VVS-VS
Certification
Certified for guaranteed quality and authenticity.
100% Hallmarked (BIS)
*T&C Apply
Nehru Circle, Seshadripuram, Bengaluru-560020
+91 9164324111
tridia.in
Follow us on
Say "Hi" to start a conversation
+91 9164326222


ಶಿವರಾಜ್‌ಕುಮಾರ್

ನರ್ತನ್ ನಿರ್ದೇಶಿಸಿ, ಶಿವರಾಜ್‌ಕುಮಾರ್, ರುಕ್ಮಿಣಿ ವಸಂತ್ ನಟಿಸಿರುವ 'ಭೈರತಿ ರಣಗಲ್' ಇಂದು (ನ.15) ತೆರೆ ಕಾಣುತ್ತಿದೆ. ಗೀತಾ ಪಿಕ್ಚರ್ಸ್ ನಿರ್ಮಾಣದ ಈ ಸಿನಿಮಾದಲ್ಲಿ ತಮ್ಮ ಪಾತ್ರ ಹಾಗೂ ಸಿನಿ ಪಯಣದ ಕುರಿತು ಇವರಿಬ್ಬರು ಮಾಹಿತಿ ಹಂಚಿಕೊಂಡಿದ್ದಾರೆ...

## 'ಯಾರನ್ನೋ ಮೆಚ್ಚಿಸುವವ ನಾನಲ್ಲ'

ವಿನಾಯಕ ಕೆ.ಎಸ್

1 ಈಗಾಗಲೇ ಗೊತ್ತಿರುವಂತೆ ಇದು 'ಮಫ್ತಿ' ಸಿನಿಮಾದ ಪ್ರೀಕ್ವೆಲ್. ಆ ಚಿತ್ರದಲ್ಲಿ ಜನ ಮೆಚ್ಚಿದ ಪಾತ್ರ 'ಭೈರತಿ ರಣಗಲ್'. ಶ್ರೀಮುರಳಿ ಚಿತ್ರದ ನಾಯಕನಾಗಿದ್ದರೂ ನನ್ನ ಪಾತ್ರಕ್ಕೆ ಜನ ಕಾಯುವಂತೆ ನಿರ್ದೇಶಕರು ಕಥೆ ಮಾಡಿದ್ದರು. ಸಿನಿಮಾ ಚೆನ್ನಾಗಿ ಹೋಗಬೇಕು ಎಂಬ ಕಾರಣಕ್ಕೆ ಆಗ ಒಪ್ಪಿಕೊಂಡೆ. 'ಮಫ್ತಿ' ಚೆನ್ನಾಗಿ ವರ್ಕ್ ಆಯ್ತು. ಶ್ರೀಮುರಳಿ ತುಂಬ ಚೆನ್ನಾಗಿ ನಟಿಸಿದ್ದರು. ಅಲ್ಲಿಂದ ಈ ಚಿತ್ರದ ಪಯಣ ಶುರುವಾಯ್ತು.

2 ಗೀತಾ ಪಿಕ್ಚರ್ಸ್ ನಿರ್ಮಾಣದ ಎರಡನೇ ಸಿನಿಮಾ ಇದು. ನರ್ತನ್ ಕಥೆ ಹೇಳಿದಾಗ ಈ ಸಿನಿಮಾವನ್ನು ನಮ್ಮ ನಿರ್ಮಾಣ ಸಂಸ್ಥೆಯಿಂದಲೇ ಮಾಡಬೇಕೆಂದು ನಿರ್ಧರಿಸಿದೆವು. ನಾರ್ಮಲ್ ರಿವೇಂಜ್ ಸ್ಟೋರಿ, ಆ್ಯಕ್ಷನ್ ಸ್ಟೋರಿ ಅಲ್ಲ. ರಣಗಲ್ ಪಾತ್ರಕ್ಕೆ ಒಂದು ನಿಯತ್ತಿದೆ. ಆತ ಲಾಯರ್ ಆದಾಗ ವೈಟ್ ಆಗಿರುತ್ತಾನೆ. ಹೀರೊ ಆದಾಗ ಬ್ಲಾಕ್ ಶೇಡ್ ತಾಳಿದರೂ ನಿಯತ್ತಾಗಿರುತ್ತಾನೆ.

3 ಬಳ್ಳಾರಿ, ಸಂಡೂರು, ಮೈಸೂರು ಮತ್ತು ಬೆಂಗಳೂರಲ್ಲಿ ಸೆಟ್ ಹಾಕಿ ಚಿತ್ರೀಕರಣ ಮಾಡಿದ್ದೇವೆ. ಬಹುತೇಕ 'ಮಫ್ತಿ' ಕಲಾವಿದರು ಮತ್ತು ತಾಂತ್ರಿಕ ತಂಡವನ್ನೇ ಇಟ್ಟುಕೊಂಡು ಸಿನಿಮಾ ಮಾಡಿದ್ದೇವೆ. ಇದರಲ್ಲಿಯೂ ಶ್ರೀಮುರಳಿ ಒಂದು ಸರ್ಪ್ರೈಸ್ ಪಾತ್ರದಲ್ಲಿ ಬರುತ್ತಾರೆ.


4 ನಾನು ಯಾವಾಗಲೂ ಸ್ಟ್ರೈಟ್ ಫಾರ್ವರ್ಡ್ ವ್ಯಕ್ತಿ. ಪ್ರತಿ ಮನುಷ್ಯನನ್ನೂ ಗೌರವಿಸಬೇಕು. ಅಭಿಮಾನಿಯನ್ನು ಸ್ನೇಹಿತನ ರೀತಿ ನೋಡಬೇಕು. ಇಂಡಸ್ಟ್ರಿಯಲ್ಲಿ ಇದು 39 ನೇ ವರ್ಷ. ಶಿವಣ್ಣ, ಶಿವಣ್ಣ ಎಂದು ಅಭಿಮಾನಿಗಳು ಪ್ರೋತ್ಸಾಹಿಸುವುದೇ ನನಗೆ ಎನರ್ಜಿ. ಹಾಗಾಗಿಯೇ ಈಗಲೂ ಅದೇ ರೀತಿ ಇದ್ದೇನೆ. ಯಾರನ್ನೋ ಮೆಚ್ಚಿಸಲು ನಾನು ಕೆಲಸ ಮಾಡುವುದಿಲ್ಲ. ನನಗೆ ಏನೂ ಅನ್ನಿಸುತ್ತದೆಯೋ ಅದನ್ನೇ ಮಾಡುತ್ತೇನೆ. ಯಾರು ಎಂಟರ್‌ಟೈನ್ ಮಾಡ್ತಾರೋ ಅವರೇ ರಿಯಲ್ ಹೀರೊ.

5 'ಜನುಮದ ಜೋಡಿ' ಕೂಡ ಇದೇ ದಿನ ಬಿಡುಗಡೆಯಾಗಿತ್ತು. ಪಾರ್ವತಮ್ಮ ನಿರ್ಮಾಣ ಮಾಡಿದ್ದರು. ಆ ತಾಯಿ ಸ್ಥಾನವನ್ನು ತುಂಬಿದ ಗೀತಾ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. 1986ರಿಂದ ಸಿನಿಮಾ ಮಾಡ್ತಾ ಇದೀನಿ. ಮಾಡಿದೀನಿ ಅನ್ನೋದಕ್ಕಿಂತ ಮಾಡಿಸಿಕೊಂಡು ಹೋಗಿದ್ದಾರೆ.

6 ನಮ್ಮ ನಿರ್ಮಾಣ ಸಂಸ್ಥೆಯಿಂದ ಬೇರೆಯವರ ಸಿನಿಮಾಗಳನ್ನು ಮಾಡುತ್ತೇವೆ. ಬೇರೆ ನಟರು ನಮ್ಮ ಬ್ಯಾನರ್‌ನಲ್ಲಿ ನಟಿಸುತ್ತಾರೆ. ಮಗಳು ನಿವೇದಿತಾ 'ಶ್ರೀ ಮುತ್ತು' ನಿರ್ಮಾಣ ಸಂಸ್ಥೆಯಿಂದ 'ಫೈರ್‌ಫ್ಲೈ' ಚಿತ್ರ ನಿರ್ಮಾಣ ಮಾಡಿದ್ದಾಳೆ. ಇನ್ನಷ್ಟು ಹೊಸಬರ ಸಿನಿಮಾಗಳನ್ನು ಕೂಡ ಮಾಡುತ್ತೇವೆ. ❖

### ಚಿಕಿತ್ಸೆ ಪಡೆಯುತ್ತಿರುವೆ

'ಆರೋಗ್ಯ ಸಮಸ್ಯೆ ಆಗಿರುವುದು ನಿಜ. ಚಿತ್ರರಂಗದ ಬಹುತೇಕರು ಆರೋಗ್ಯ ವಿಚಾರಿಸಿದ್ದಾರೆ. ಆತಂಕಪಡುವಂಥದ್ದೇನಿಲ್ಲ. ಕಳೆದ ಕೆಲ ದಿನಗಳಿಂದ ಚಿಕಿತ್ಸೆ ಪಡೆಯುತ್ತಿರುವೆ. ಒಂದು ಶಸ್ತ್ರಚಿಕಿತ್ಸೆಗಾಗಿ ಸದ್ಯದಲ್ಲೇ ವಿದೇಶಕ್ಕೆ ಹೋಗುತ್ತಿದ್ದೇನೆ. ಅದಾದ ನಾಲ್ಕು ವಾರಗಳಲ್ಲಿ ಚಿತ್ರೀಕರಣಕ್ಕೆ ಮರಳಬಹುದು ಎಂದು ವೈದ್ಯರು ಹೇಳಿದ್ದಾರೆ. ಎಂದಿನಂತೆ ಸಿನಿಮಾ ಚಟುವಟಿಕೆಗಳನ್ನು ಮುಂದುವರಿಸುತ್ತೇನೆ. '45' ಚಿತ್ರೀಕರಣ ಮುಗಿದಿದೆ. 'ಉತ್ತರಕಾಂಡ' ಚಿತ್ರದಲ್ಲಿ ಭಾಗಿಯಾಗಿರುವೆ. ನಮ್ಮ ನಿರ್ಮಾಣ ಸಂಸ್ಥೆಯಿಂದ ಮತ್ತೊಂದು ಸಿನಿಮಾ ಸೆಟ್ಟೇರಲಿದೆ. ತಮಿಳಿನಲ್ಲಿ ಎರಡು ಸಿನಿಮಾ ಇದೆ. ರಾಮ್‌ಚರಣ್ ಜೊತೆ ಒಂದು ಸಿನಿಮಾ ಮಾಡಬೇಕಿದೆ' ಎಂದರು ಶಿವಣ್ಣ.


ರುಕ್ಮಿಣಿ ವಸಂತ್

## 'ಪುಟ್ಟಿ'ಯಲ್ಲ 'ಡಾ.ಪುಟ್ಟಿ'!

ಅಭಿಲಾಷ್ ಪಿ.ಎಸ್.

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಮೂಲಕ ಜನರ ಪ್ರೀತಿ ನನಗೆ ದೊರಕಿತು. ನಿರೀಕ್ಷೆಗೂ ಮೀರಿ ಎಲ್ಲರೂ ಪ್ರೋತ್ಸಾಹ ನೀಡಿದರು. ಈ ಚಿತ್ರೋದ್ಯಮದಲ್ಲಿ ಹೀಗೇ ಆಗುತ್ತದೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ ಎನ್ನುವುದನ್ನು 'ಬೀರ್‌ಬಲ್' ಬಳಿಕ ತಿಳಿದುಕೊಂಡೆ. ಇಷ್ಟಪಟ್ಟು ಸಿನಿಮಾ ಮಾಡಬೇಕು. ಉಳಿದುದನ್ನು ಪ್ರೇಕ್ಷಕರಿಗೆ ಬಿಡಬೇಕು. ಮಿತಿಮೀರಿದ ನಿರೀಕ್ಷೆ ಇಟ್ಟುಕೊಳ್ಳಬಾರದು ಎನ್ನುವುದನ್ನು ಕಲಿತುಕೊಂಡಿದ್ದೆ. ಆದರೆ 'ಸಪ್ತ..' ಬಳಿಕ ಕನ್ನಡ ಜನರಿಂದ ಸಿಗುತ್ತಿರುವ ಪ್ರೀತಿಯನ್ನು ನಾನೆಂದೂ ಊಹಿಸಿರಲಿಲ್ಲ. ಎರಡನೇ ಸಿನಿಮಾಗೇ ಈ ರೀತಿಯ ಜನ ಬೆಂಬಲ ಸಿಕ್ಕಿರುವುದಕ್ಕೆ ಪಯಣ ಮುಂದುವರಿದಿದೆ. ನನ್ನ ಸಾಮರ್ಥ್ಯದ ಕುರಿತು ನನ್ನೊಳಗಿದ್ದ ಅನುಮಾನಗಳೆಲ್ಲವೂ ಸದ್ಯಕ್ಕೆ ಸುಮ್ಮನಾಗಿವೆ' ಎಂದು ಆರಂಭಿಕ ಹೆಜ್ಜೆಗಳನ್ನು ನೆನಪಿಸಿಕೊಂಡರು ರುಕ್ಮಿಣಿ.

'ಬಿಡುಗಡೆಗೊಂಡಿರುವ 'ಬಘೀರ' ಹಾಗೂ 'ಭೈರತಿ ರಣಗಲ್' ಸಿನಿಮಾದಲ್ಲಿ ವೈದ್ಯೆಯ ಪಾತ್ರಕ್ಕೆ ಬಣ್ಣಹಚ್ಚಿದ್ದೇನೆ. ಇದು ಪಾತ್ರದ ವೃತ್ತಿಯಾಗಿದೆಯಷ್ಟೇ. ಆದರೆ ಎರಡೂ ಕಥೆಗಳು ಭಿನ್ನ. ಕಥೆಗೆ ಈ ಪಾತ್ರಗಳು ಬೇರೆಯೇ ರೀತಿ ಪರಿಣಾಮ ಬೀರಿವೆ. ಇನ್ನು ಮುಂದೆ ಜನರು ನನ್ನನ್ನು 'ಡಾ.ಪುಟ್ಟಿ' ಎನ್ನಬಹುದು' ಎನ್ನುತ್ತಾ ರುಕ್ಮಿಣಿ ನಕ್ಕರು.

'ನಿರ್ಮಾಪಕರಾದ ಗೀತಾ ಶಿವರಾಜ್‌ಕುಮಾರ್ ನನಗೆ ಹೊಸ ರೀತಿಯ ಪ್ರೇರಣೆ. ಪ್ರತಿನಿತ್ಯ ಸೆಟ್‌ಗೆ ಬರುತ್ತಿದ್ದರು. ತಾವೇ ಜವಾಬ್ದಾರಿವಹಿಸಿಕೊಂಡು ಮೇಲ್ವಿಚಾರಣೆ ನಡೆಸುತ್ತಿದ್ದರು. ಜೊತೆಗೆ ಪ್ರತಿಯೊಬ್ಬರಿಗೂ ಅವರ ಕೈಯಾರೆ ಮಾಡಿದ ಊಟ ತಂದು, ಹಂಚಿ ನಮಗೆಲ್ಲರಿಗೂ ಮನೆಯ ಪ್ರೀತಿ ನೀಡಿದರು. ಎಲ್ಲರೂ ಶಿವಣ್ಣನ ಎನರ್ಜಿ ಬಗ್ಗೆ ಹೇಳುತ್ತೇವೆ. ಶಿವಣ್ಣನಷ್ಟೇ ಎನರ್ಜಿ, ಗೀತಾ ಶಿವರಾಜ್‌ಕುಮಾರ್ ಅವರಿಗೂ ಇದೆ. ಜೊತೆಗೆ ತಮ್ಮ ಈ ಶಕ್ತಿಯನ್ನು ಪ್ರೀತಿಯಿಂದ ಎಲ್ಲರಿಗೂ ಅವರು ಹಂಚುತ್ತಿದ್ದರು' ಎನ್ನುತ್ತಾರೆ ರುಕ್ಮಿಣಿ.

'ಶಿವರಾಜ್‌ಕುಮಾರ್ ಬಹಳ ಪ್ರೀತಿಯಿಂದ 'ಭೈರತಿ ರಣಗಲ್' ಸಿನಿಮಾವನ್ನು ಎಲ್ಲರಿಗೂ ತಲುಪಿಸುತ್ತಿದ್ದಾರೆ. ಅವರೊಬ್ಬ ಸಿನಿಮಾವನ್ನು ಪ್ರೀತಿಸುವ ಶ್ರಮಜೀವಿ. ಅವರೊಂದಿಗೆ ಕೆಲಸ ಮಾಡುತ್ತಾ ಹಲವು ವಿಷಯಗಳನ್ನು ಕಲಿತಿದ್ದೇನೆ. ಅವರ ಅನುಭವ ಅಗಾಧ. ಹೀಗಿದ್ದರೂ ನನ್ನನ್ನಾಗಲಿ ಅಥವಾ ಇತರೆ ಕಲಾವಿದರ ನಟನೆಯನ್ನು ಬದಲಾಯಿಸಲು ಹೋಗಿಲ್ಲ. ನಾವು ನಟಿಸುವಾಗ ರಾಜ್‌ಕುಮಾರ್ ಅವರ ಸಿನಿಮಾಗಳ ದೃಶ್ಯಗಳಿಗೆ ಹೋಲಿಕೆ ಕಂಡುಬಂದಲ್ಲಿ ಅದರ ಕುರಿತು ಹೇಳುತ್ತಿದ್ದರು. ಅವರ ಜೊತೆ ತೆರೆಹಂಚಿಕೊಂಡಿರುವುದು ಹೆಮ್ಮೆಯ ವಿಷಯ' ಎಂದರು.

'ವಿಜಯ್ ಸೇತುಪತಿ ಜೊತೆಗಿನ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಮುಂದಿನ ವರ್ಷ ಬಿಡುಗಡೆಯಾಗಲಿದೆ. ಮುರುಗದಾಸ್ ನಿರ್ದೇಶನದ, ಶಿವಕಾರ್ತಿಕೇಯನ್ ನಾಯಕರಾಗಿ ನಟಿಸಿರುವ ಸಿನಿಮಾದ ಚಿತ್ರೀಕರಣ ಬಹುತೇಕ ಪೂರ್ಣಗೊಂಡಿದೆ. ಕನ್ನಡದಲ್ಲಿ ಹೊಸ ಕಥೆಗಳನ್ನು ಕೇಳುತ್ತಿದ್ದೇನೆ, ಮಾತುಕತೆ ನಡೆಯುತ್ತಿದೆ' ಎಂದು ಮಾತಿಗೆ ವಿರಾಮವಿತ್ತರು. ❖


ಪೃಥ್ವಿ ಅಂಬಾರ್, ಪ್ರಿಯಾಂಕಾ ಉಪೇಂದ್ರ

## ಡಿ.13ಕ್ಕೆ 'ಲೈಫ್ ಈಸ್...'

ಪ್ರಿಯಾಂಕಾ ಉಪೇಂದ್ರ, ಪೃಥ್ವಿ ಅಂಬಾರ್ ನಟನೆಯ 'ಲೈಫ್ ಈಸ್ ಬ್ಯೂಟಿಫುಲ್' ಡಿ.13ರಂದು ತೆರೆಗೆ ಬರಲಿದೆ. ನಟ ಉಪೇಂದ್ರ ಚಿತ್ರ ಬಿಡುಗಡೆ ದಿನಾಂಕ ಘೋಷಿಸಿ ತಂಡಕ್ಕೆ ಶುಭ ಹಾರೈಸಿದರು.

'ಸಿನಿಮಾದ ತುಣುಕುಗಳನ್ನು ನೋಡಿದ್ದೇನೆ. ಲಿಫ್ಟ್ ಒಳಗೆ ನಡೆಯುವ ಕಥೆ ಎನ್ನಿಸುತ್ತದೆ. ಬದುಕು ಕೂಡ ಲಿಫ್ಟ್‌ನಂತೆ ಮೇಲೆ, ಕೆಳಗೆ ಹೋಗುತ್ತಿರುತ್ತದೆ. ಹಾಗಾಗಿಯೇ ಇದಕ್ಕೆ ಈ ಶೀರ್ಷಿಕೆ ಇಟ್ಟಿದ್ದಾರೆ. ಈ ಸಿನಿಮಾ ಬಿಡುಗಡೆ ಮೊದಲೇ ಗೊತ್ತಿದ್ದರೆ 'ಯುಐ' ಸಿನಿಮಾ ಬಿಡುಗಡೆ ಇನ್ನೊಂದು ಸ್ವಲ್ಪ ಮುಂದೂಡುತ್ತಿದ್ದೆವು. ಪ್ರಿಯಾಂಕಾ ಅದ್ಭುತ ಕಲಾವಿದೆ. ಅವರಿಂದ ನಾನು ಸಾಕಷ್ಟು ಕಲಿಯುವುದಿದೆ' ಎಂದು ಉಪೇಂದ್ರ ತಮ್ಮ ಪತ್ನಿಯ ಕಾಲೆಳೆಯುತ್ತಲೇ ತಂಡಕ್ಕೆ ಶುಭ ಕೋರಿದರು.

ಸಾಬು ಅಲೋಶಿಯಸ್ ಮತ್ತು ಅರುಣ್‌ಕುಮಾರ್. ಎಂ ಜಂಟಿಯಾಗಿ ಚಿತ್ರವನ್ನು ನಿರ್ದೇಶಿಸಿದ್ದಾರೆ. ನಿರ್ದೇಶಕ ಲೋಹಿತ್ ಎಂ ಗೆಳೆಯರ ಜೊತೆಗೂಡಿ ತಮ್ಮ ಫ್ರೈಡೆ ಫಿಲ್ಮ್ಸ್ ಮೂಲಕ ಚಿತ್ರವನ್ನು ನಿರ್ಮಿಸಿದ್ದಾರೆ. ತಾರಾಗಣದಲ್ಲಿ ಲಾಸ್ಯ ನಾಗರಾಜ್, ಸಿದ್ಲಿಂಗು ಶ್ರೀಧರ್, 'ಕಾಮಿಡಿ ಕಿಲಾಡಿ'ಗಳು ಖ್ಯಾತಿಯ ಮಹಾಂತೇಶ್ ಮುಂತಾದವರಿದ್ದಾರೆ. ನೊಬಿನ್‌ಪೌಲ್ ಸಂಗೀತ ಚಿತ್ರಕ್ಕಿದೆ. ❖


ಚಿತ್ರತಂಡದೊಂದಿಗೆ ಉಪೇಂದ್ರ

## 'ಸಂಜು..'ವಿನ ಹೊಸ ಹಾಡು

**ಶ್ರೀನಗರ ಕಿಟ್ಟಿ**, ರಚಿತಾ ರಾಮ್ ಜೋಡಿಯಾಗಿ ನಟಿಸಿರುವ 'ಸಂಜು ವೆಡ್ಸ್ ಗೀತಾ-2' ಚಿತ್ರದ 'ಅವನು ಸಂಜು ಅವಳು ಗೀತಾ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಉಪೇಂದ್ರ ಹಾಡು ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

'ನನಗೆ ಮೊದಲು ಈ ಚಿತ್ರದ ಕ್ಲೈಮ್ಯಾಕ್ಸ್ ಏನೆಂದು ಗೊತ್ತಾಯ್ತು. ಅದನ್ನು ಕೇಳಿದಾಗಲೇ ಈ ಸಿನಿಮಾ ಸೂಪರ್ ಸಕ್ಸಸ್ ಆಗುತ್ತದೆ ಎಂದಿದ್ದೆ. ಈ ಹಾಡನ್ನು ನೋಡಿದಾಗ ನನ್ನ ನಂಬಿಕೆ ಇನ್ನಷ್ಟು ಗಟ್ಟಿಯಾಗಿದೆ' ಎಂದರು ಉಪೇಂದ್ರ.

ಛಲವಾದಿ ಕುಮಾರ್ ನಿರ್ಮಿಸಿರುವ ಚಿತ್ರಕ್ಕೆ ನಾಗಶೇಖರ್ ನಿರ್ದೇಶನವಿದೆ. ಈ ಗೀತೆಗೆ ಕವಿರಾಜ್ ಸಾಹಿತ್ಯವಿದ್ದು, ಶ್ರೀಧರ್ ವಿ.ಸಂಭ್ರಮ್ ಸಂಗೀತ ನೀಡಿದ್ದಾರೆ.

'ಒಟ್ಟು ಆರು ಹಾಡುಗಳು ಚಿತ್ರದಲ್ಲಿದ್ದು, ಈ ಹಾಡಿನಲ್ಲಿ ಒಬ್ಬ ಸೈನಿಕನ ಪ್ರೇಮಕಥೆಯನ್ನು ಹೇಳಿದ್ದೇನೆ. ಸ್ವಿಟ್ಜರ್‌ಲೆಂಡ್ ಸೈನಿಕನೊಬ್ಬ ತನ್ನ ರಾಣಿಯನ್ನು ಪ್ರೀತಿಸಿ, ಅವಳಿಗೆ ತನ್ನ ಪ್ರೀತಿಯನ್ನು ಹೇಳಿಕೊಳ್ಳಲು ಸಾಧ್ಯವಾಗಿರುವುದಿಲ್ಲ ಎಂಬ ಸನ್ನಿವೇಶದ ಹಾಡಿದು' ಎಂದರು ನಾಗಶೇಖರ್.

ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ನಟ ಚೇತನ್ ಚಂದ್ರ, ರಾಗಿಣಿ ದ್ವಿವೇದಿ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಸಾಧು ಕೋಕಿಲ, ತಬಲಾ ನಾಣಿ, 'ಗಿಚ್ಚಿಗಿಲಿಗಿಲಿ' ವಿನೋದ್, ಖಳನಟ ಸಂಪತ್‌ಕುಮಾರ್ ಸೇರಿದಂತೆ ಸಾಕಷ್ಟು ಕಲಾವಿದರು ತಾರಾಗಣದಲ್ಲಿದ್ದಾರೆ. ❖

ಪಿ.ಎಂ. ಆವಾಸ್ ಯೋಜನೆ: ಸಂಪುಟ ಸಭೆಯಲ್ಲಿ ನಿರ್ಣಯ

# ಅನುದಾನ ಹೆಚ್ಚಳಕ್ಕೆ ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಅಡಿಯಲ್ಲಿ ಕೇಂದ್ರ ಸರ್ಕಾರದ ಪಾಲಿನ ಅನುದಾನವನ್ನು ಹೆಚ್ಚಿಸುವಂತೆ ಪ್ರಧಾನಿಯವರಿಗೆ ಪತ್ರ ಬರೆಯಲು ಗುರುವಾರ ನಡೆದ ಸಂಪುಟ ಸಭೆ ನಿರ್ಧರಿಸಿದೆ.

ಸಭೆಯ ಬಳಿಕ ವಿವರ ನೀಡಿದ ಕಾನೂನು ಸಚಿವ ಎಚ್.ಕೆ. ಪಾಟೀಲ, ‘ಪಿ.ಎಂ. ಆವಾಸ್ ಯೋಜನೆಯ ಪ್ರತಿ ಫಲಾನುಭವಿಗೆ ಕೇಂದ್ರ ಸರ್ಕಾರವು ₹1.5 ಲಕ್ಷ ಅನುದಾನವನ್ನು ಮಾತ್ರ ಒದಗಿಸುತ್ತಿದೆ. ಇದರಿಂದ ಯೋಜನೆ ಅನುಷ್ಠಾನ ಕಷ್ಟವಾಗುತ್ತಿದೆ. ಕೇಂದ್ರದ ಪಾಲಿನ ಅನುದಾನ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಿದ್ದಾರೆ’ ಎಂದರು.

ಪಿ.ಎಂ. ಆವಾಸ್ 2.0 ಯೋಜನೆ ಅನುಷ್ಠಾನಕ್ಕೆ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಮಂಜೂರಾತಿ ಮತ್ತು ಮೇಲುಸ್ತುವಾರಿ ಸಮಿತಿ ರಚನೆ, ವಿವಿಧ ಹಂತಗಳಲ್ಲಿ ಸಮಿತಿಗಳ ರಚನೆ, ಶೇಕಡ 60:40ರ ಅನುಪಾತದಲ್ಲಿ ಕೇಂದ್ರ ಹಾಗೂ ರಾಜ್ಯಗಳು ಅನುದಾನ ಭರಿಸುವುದು ಹಾಗೂ ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ತಿಳಿಸಿರುವ ಎಲ್ಲ ಸುಧಾರಣಾ ಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಪುಟ ಒಪ್ಪಿಗೆ ಸೂಚಿಸಿದೆ.

**ಅಂಗನವಾಡಿಗಳಿಗೆ ಅನುದಾನ:** ರಾಜ್ಯದ 17,551 ಅಂಗನವಾಡಿ ಕೇಂದ್ರಗಳಿಗೆ ಎಲ್‌ಇಡಿ ಮತ್ತು ಇತರೆ ಧ್ವನಿ ಹಾಗೂ ದೃಶ್ಯ ಸಾಧನ, ಆರ್.ಒ. ಕುಡಿಯುವ ನೀರು ಶುದ್ಧೀಕರಣ ಘಟಕ, ಮಳೆ ನೀರಿನ ಕೊಯ್ಲು, ಪೋಷಣ್ ವಾಟಿಕಾ ಮತ್ತು ಇತರೆ ಸೌಲಭ್ಯಗಳನ್ನು ₹174.75 ಕೋಟಿ ವೆಚ್ಚದಲ್ಲಿ ಒದಗಿಸಲು ನಿರ್ಧರಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಪ್ರತಿ ಅಂಗನವಾಡಿಗೆ ₹1 ಲಕ್ಷ ಒದಗಿಸಲಾಗುವುದು ಎಂದು ಪಾಟೀಲ ವಿವರ ನೀಡಿದರು.

ರಾಜ್ಯದ 69,919 ಅಂಗನವಾಡಿ ಕೇಂದ್ರಗಳಿಗೆ ₹20.98 ಕೋಟಿ ವೆಚ್ಚದಲ್ಲಿ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳನ್ನು ವಿತರಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಪ್ರತಿ ಕೇಂದ್ರಕ್ಕೆ ₹3,000 ಮೌಲ್ಯದ ಕಿಟ್ ವಿತರಿಸಲಾಗುವುದು ಎಂದು ಪಾಟೀಲ ಹೇಳಿದರು.

ಉಡುಪಿ ಮತ್ತು ದಾವಣಗೆರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಒಟ್ಟು ₹39.37 ಕೋಟಿ ವೆಚ್ಚದಲ್ಲಿ ತಲಾ 50 ಹಾಸಿಗೆಗಳ ತೀವ್ರನಿಗಾ ಘಟಕ ಸ್ಥಾಪಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ಮಂಡ್ಯ, ಹುಬ್ಬಳ್ಳಿ, ಹಾಸನ, ಬಳ್ಳಾರಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು ₹148.20 ಕೋಟಿ ವೆಚ್ಚದಲ್ಲಿ ತಲಾ 50 ಹಾಸಿಗೆಗಳ ಸಾಮರ್ಥ್ಯದ ತುರ್ತು ನಿಗಾ ಘಟಕ (ಕ್ರಿಟಿಕಲ್ ಕೇರ್ ಯೂನಿಟ್) ನಿರ್ಮಾಣದ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ.

### ಸಂಪುಟ ಸಭೆಯ ಇತರ ನಿರ್ಣಯಗಳು

- ವಿಧಾನ ಪರಿಷತ್‌ನ ಒಂದು ಸ್ಥಾನದ ನಾಮನಿರ್ದೇಶನಕ್ಕೆ ಮುಖ್ಯಮಂತ್ರಿಗೆ ಅಧಿಕಾರ
- ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರಗಳ ನೀತಿ–2024–15ಕ್ಕೆ ಒಪ್ಪಿಗೆ
- ₹28 ಕೋಟಿ ವೆಚ್ಚದಲ್ಲಿ ಬೆಂಗಳೂರಿನಲ್ಲಿ ಕೃತಕ ಬುದ್ಧಿಮತ್ತೆ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ
- ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ (ತಿದ್ದುಪಡಿ) ಸುಗ್ರೀವಾಜ್ಞೆಗೆ ಅನುಮೋದನೆ
- ಬೆಂಗಳೂರಿನ ಹೆಬ್ಬಾಳದಲ್ಲಿ ₹20 ಕೋಟಿ ವೆಚ್ಚದಲ್ಲಿ ಸಿರಿಧಾನ್ಯ ಹಬ್ ಸ್ಥಾಪನೆ
- ಚನ್ನಪಟ್ಟಣದಲ್ಲಿ ₹250 ಕೋಟಿ ವೆಚ್ಚದಲ್ಲಿ ರೇಷ್ಮೆ ಗೂಡಿನ ಮಾರುಕಟ್ಟೆ ನಿರ್ಮಾಣ

### ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ: ತಿದ್ದುಪಡಿ ಮಸೂದೆಗಳಿಗೆ ಸಂಪುಟ ತಡೆ

ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಶೇಕಡ 50ರಷ್ಟು ಸೀಟುಗಳನ್ನು ಅದೇ ಸಮುದಾಯದ ವಿದ್ಯಾರ್ಥಿಗಳಿಗೆ ನೀಡಬೇಕೆಂಬ ಷರತ್ತನ್ನು ಸಡಿಲಿಸುವ ಎರಡು ತಿದ್ದುಪಡಿ ಮಸೂದೆಗಳನ್ನು ಸಂಪುಟ ತಡೆಹಿಡಿದಿದೆ.

‘ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆ’ಯ ಸ್ಥಾನಮಾನ ಹೊಂದಿರುವ ಸಂಸ್ಥೆಗಳಲ್ಲಿ ಶೇ 25ರಷ್ಟು ಸೀಟುಗಳನ್ನು ಅದೇ ಸಮುದಾಯದ ವಿದ್ಯಾರ್ಥಿಗಳಿಗೆ ನೀಡಬೇಕು ಎಂಬ ಬದಲಾವಣೆ ತಿದ್ದುಪಡಿ ಮಸೂದೆಗಳಲ್ಲಿದೆ.

### 55 ಸಜಾ ಕೈದಿಗಳ ಬಿಡುಗಡೆಗೆ ನಿರ್ಧಾರ

ಜೀವಾವಧಿ ಶಿಕ್ಷೆಗೆ ಗುರಿಯಾಗಿ ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 55 ಸಜಾ ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

‘55 ಕೈದಿಗಳನ್ನು ರಾಜ್ಯ ಸರ್ಕಾರ ಸನ್ನಡತೆ ಆಧಾರದಲ್ಲಿ ಅವಧಿಪೂರ್ವ ಬಿಡುಗಡೆ ಮಾಡುತ್ತಿದೆ. ಇನ್ನೂ ಮೂವರು ಕೈದಿಗಳನ್ನು ಕೇಂದ್ರ ಗೃಹ ಸಚಿವಾಲಯದ ಒಪ್ಪಿಗೆ ದೊರೆತ ಬಳಿಕ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ’ ಎಂದರು.

ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿರುವ 19, ಬೆಳಗಾವಿ ಮತ್ತು ಬಳ್ಳಾರಿಯಲ್ಲಿರುವ ತಲಾ ಒಂಬತ್ತು, ಕಲಬುರಗಿಯಲ್ಲಿರುವ ಏಳು, ಮೈಸೂರು ಮತ್ತು ವಿಜಯಪುರದಲ್ಲಿರುವ ತಲಾ ನಾಲ್ಕು, ಧಾರವಾಡದಲ್ಲಿರುವ ಮೂರು ಕೈದಿಗಳ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

# ‘24 ಗಂಟೆ ಊಟಕ್ಕೆ ಅವಕಾಶ ನೀಡಿ’

## ಪ್ರವಾಸೋದ್ಯಮ ಹೋಟೆಲ್ ಮಾಲೀಕರ ಸಂಘ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪ್ರವಾಸಿ ಸ್ಥಳಗಳಲ್ಲಿನ ಹೋಟೆಲ್‌ಗಳಲ್ಲಿ 24 ಗಂಟೆಗಳೂ ಮದ್ಯ ಹಾಗೂ ಊಟದ ವ್ಯವಸ್ಥೆಗೆ ಅವಕಾಶ ನೀಡಬೇಕು ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಹೋಟೆಲ್ ಮಾಲೀಕರ ಸಂಘ ಸರ್ಕಾರಕ್ಕೆ ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಉಮೇಶ್ ಬಾಳಿ, ರಾಜ್ಯ ಮದ್ಯ ಮಾರಾಟಗಾರರ ಸಂಘವು ಇದೇ 20ರಂದು ಕರೆ ನೀಡಿರುವ ಮದ್ಯ ಮಾರಾಟ ಬಂದ್‌ಗೆ ಬೆಂಬಲ ಇಲ್ಲ ಎಂದೂ ಸ್ಪಷ್ಟಪಡಿಸಿದರು.

‘ಪ್ರವಾಸೋದ್ಯಮ ಹಾಗೂ ಅಬಕಾರಿ ಇಲಾಖೆಯ ಅನುಮತಿ ಪಡೆದು ಎರಡು ಸಾವಿರಕ್ಕೂ ಅಧಿಕ ಹೋಟೆಲ್‌ಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರವಾಸೋದ್ಯಮ ಇಲಾಖೆಯಡಿಯ ಹೋಟೆಲ್ ಮತ್ತು ಬಾರ್‌ಗಳು ಹೆಚ್ಚಿನ ಪ್ರಮಾಣದಲ್ಲಿ ವಾರ್ಷಿಕ ಪರವಾನಗಿ ಶುಲ್ಕವನ್ನು ಭರಿಸುತ್ತಿವೆ. ಈ ವಾರ್ಷಿಕ ಶುಲ್ಕವನ್ನು ಕಡಿಮೆ ಮಾಡಿ, ಅಬಕಾರಿ ಲಾಭಾಂಶವನ್ನು ಶೇ 10ರಿಂದ ಶೇ 20ಕ್ಕೆ ಹೆಚ್ಚಿಸಬೇಕು. ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರು ಮದ್ಯ ಸೇವಿಸಲು ಹಾಗೂ ಊಟೋಪಚಾರ ಮಾಡಲು ದಿನದ 24 ಗಂಟೆಗಳೂ ಹೋಟೆಲ್‌ಗಳಿಗೆ ಅವಕಾಶ ನೀಡಬೇಕು’ ಎಂದು ಒತ್ತಾಯಿಸಿದರು.

‘ಪ್ರವಾಸೋದ್ಯಮ ಹೋಟೆಲ್‌ಗಳನ್ನು ನಡೆಸುವವರು ಹೆಚ್ಚಿನ ಬಂಡವಾಳ ಹೂಡಿಕೆ ಮಾಡಿ, ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಬಡ್ಡಿಯನ್ನು ಕಟ್ಟಲಾರದ ಪರಿಸ್ಥಿತಿಯಲ್ಲಿದ್ದಾರೆ. ಆದ್ದರಿಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), ವಿದ್ಯುತ್ ಶುಲ್ಕ, ನೀರಿನ ಕರ ಹಾಗೂ ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ನೀಡಬೇಕು’ ಎಂದು ಆಗ್ರಹಿಸಿದರು.

### ಇದೇ 20ಕ್ಕೆ ಮದ್ಯ ಮಾರಾಟ ಬಂದ್



ಅಬಕಾರಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಇದೇ 20ರಂದು ರಾಜ್ಯದಾದ್ಯಂತ ಮದ್ಯ ಮಾರಾಟ ಬಂದ್‌ಗೆ ಫೆಡರೇಶನ್ ಆಫ್ ವೈನ್ ಮರ್ಚಂಟ್ಸ್ ಅಸೋಸಿಯೇಶನ್ ಕರ್ನಾಟಕ ಕರೆ ನೀಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಶಿಯೇಶನ್ ಪ್ರಧಾನ ಕಾರ್ಯದರ್ಶಿ ಬಿ.ಗೋವಿಂದರಾಜ್ ಹೆಗ್ಡೆ, ‘ಸ್ವಚ್ಛ ಅಬಕಾರಿ ಅಭಿಯಾನ’ದಡಿ ಮದ್ಯ ಮಾರಾಟ ಬಂದ್‌ಗೆ ಕರೆ ನೀಡಲಾಗಿದೆ. ಅಬಕಾರಿ ಇಲಾಖೆಯನ್ನು ಆರ್ಥಿಕ ಸಚಿವರೇ ನಿರ್ವಹಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಬೇಕು. ವ್ಯಾಪಾರಿಗಳು ಪರವಾನಗಿ ಪಡೆಯುವಾಗ ಹಾಗೂ ಮರು ನೋಂದಣಿ ಮಾಡಿಕೊಳ್ಳುವಾಗ ಅಧಿಕಾರಿಗಳು ಲಂಚ ಕೇಳುತ್ತಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ಅಬಕಾರಿ ಕಾಯ್ದೆಯ ಕಲಂ 29 ಅನ್ನು ಪುನರ್ ವಿಮರ್ಶಿಸಿ, ತಿದ್ದುಪಡಿ ಮಾಡಬೇಕು. ಚಿಲ್ಲರೆ ಮದ್ಯ ಮಾರಾಟದ ಮೇಲೆ ಕನಿಷ್ಠ ಶೇ 20 ರಷ್ಟು ಲಾಭಾಂಶ ನೀಡಬೇಕು. ನಕಲಿ ಮದ್ಯ ತಯಾರಿಕರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮದ್ಯದ ಪಾರ್ಸಲ್‌ಗೆ ಸಂಬಂಧಿಸಿದಂತೆ ಕಾನೂನು ತಿದ್ದುಪಡಿ ಮಾಡಿ, ಅವಕಾಶ ಒದಗಿಸಬೇಕು’ ಎಂದು ಒತ್ತಾಯಿಸಿದರು.

# ಕೆರೆ ಒತ್ತುವರಿ ತೆರವಿಗೆ ನ.25ರ ಗಡುವು

## ‘ಹೈಕೋರ್ಟ್ ನಿರ್ದೇಶನದಂತೆ ಕ್ರಮ ಕೈಗೊಳ್ಳದಿದ್ದರೆ ಅಧಿಕಾರಿಗಳ ಮೇಲೆ ಕ್ರಮ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿರುವ ಕೆರೆಗಳ ಒತ್ತುವರಿ ತೆರವಿಗೆ ಬಿಬಿಎಂಪಿ ಮತ್ತೊಂದು ಗಡುವು ನೀಡಿದೆ. ನವೆಂಬರ್ 25ರೊಳಗೆ ಒತ್ತುವರಿ ತೆರವು ಮಾಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

ಬಿಬಿಎಂಪಿ ವ್ಯಾಪ್ತಿಯ ಎಲ್ಲ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಆಡಳಿತ ವಿಭಾಗದ ವಿಶೇಷ ಆಯುಕ್ತರು ನವೆಂಬರ್ 13ರಂದು ‘ತಿಳಿವಳಿಕೆ ಪತ್ರ’ ಜಾರಿ ಮಾಡಿದ್ದು, ಅವರ ವ್ಯಾಪ್ತಿಯಲ್ಲಿರುವ ಕೆರೆಗಳ ಒತ್ತುವರಿಯನ್ನು ಪೂರ್ಣ ತೆರವುಗೊಳಿಸಬೇಕು. ನವೆಂಬರ್ 27ರೊಳಗೆ ವರದಿ ಸಲ್ಲಿಸಬೇಕು ಎಂದು ತಾಕೀತು ಮಾಡಿದ್ದಾರೆ.

ಹೈಕೋರ್ಟ್‌ನಿಂದ ಸಾಕಷ್ಟು ಬಾರಿ ಆಕ್ಷೇಪಕ್ಕೆ ಒಳಗಾಗಿದ್ದ ರಾಜ್ಯ ಸರ್ಕಾರ, ಕೆರೆಗಳು ಮತ್ತು ಪ್ರಾಥಮಿಕ–ದ್ವಿತೀಯ ರಾಜಕಾಲುವೆ ಸಂರಕ್ಷಣೆ ಹಾಗೂ ಒತ್ತುವರಿ ತೆರವುಗೊಳಿಸಲು ಅಧಿಕಾರಿಗಳನ್ನು ನಿಯೋಜಿಸಿ, ಅವರ ಜವಾಬ್ದಾರಿಗಳನ್ನು ನಿಗದಿಪಡಿಸಿ 2023ರ ಆಗಸ್ಟ್ 28ರಂದು ಆದೇಶ ಹೊರಡಿಸಿತ್ತು.

ಕೆರೆಗಳ ಒತ್ತುವರಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸುವುದಾಗಿ ಪ್ರಮಾಣ ಪತ್ರದ ಮೂಲಕ ಬಿಬಿಎಂಪಿ ಕ್ರಿಯಾಯೋಜನೆಯನ್ನೂ ಹೈಕೋರ್ಟ್‌ಗೆ ಸಲ್ಲಿಸಿತ್ತು. ಅದರಂತೆ, 2023ರ ಸೆಪ್ಟೆಂಬರ್ ಮೊದಲ ವಾರದಿಂದ 159 ಕೆರೆಗಳಲ್ಲಿನ ಒತ್ತುವರಿ ಯನ್ನು ತೆರವು ಮಾಡಲು 16 ವಾರಗಳ ಕ್ರಿಯಾಯೋಜನೆಯನ್ನು ಆರಂಭಿಸಿತ್ತು. ಪ್ರಥಮ ವಾರದ ಕೆರೆಗಳ ಒತ್ತುವರಿ ತೆರವು ಕಾರ್ಯ 70 ದಿನದಲ್ಲಿ ಪೂರ್ಣಗೊಳ್ಳಬೇಕಿತ್ತು.

ಡಿಸೆಂಬರ್ ಅಂತ್ಯಕ್ಕೆ 16 ವಾರಗಳ ಕ್ರಿಯಾಯೋಜನೆ ಪ್ರಕ್ರಿಯೆ ಮುಗಿದಿದ್ದು, ಆ ಅವಧಿಯಿಂದ ಲೆಕ್ಕಾಚಾರ ಮಾಡಿದ್ದರೂ 2024ರ ಮಾರ್ಚ್ ಮಧ್ಯಭಾಗದಲ್ಲಿ ಎಲ್ಲ ಕೆರೆಗಳ ಒತ್ತುವರಿ ತೆರವಾಗಬೇಕಿತ್ತು. ಆದರೆ, ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಒತ್ತುವರಿ ತೆರವು ಕಾರ್ಯಾಚರಣೆ ಇನ್ನೂ ಆರಂಭವಾಗೇ ಇಲ್ಲ.

‘ಹೈಕೋರ್ಟ್ ನಿರ್ದೇಶನದಂತೆ ಹಾಗೂ ಕೆರೆಗಳ ಒತ್ತುವರಿ ತೆರವಿನ ಕ್ರಿಯಾಯೋಜನೆಯಂತೆ ಕೆರೆಯ ಅಳತೆ, ಸರ್ವೆ, ಒತ್ತುವರಿ ಗುರುತಿಸುವ ಕಾರ್ಯವಾಗಬೇಕಿತ್ತು. ಈವರೆಗೆ ಯಾವುದೇ ಕ್ರಮವಾಗಿಲ್ಲ ಎಂದು ಮುಖ್ಯ ಆಯುಕ್ತರು 2024ರ ಅಕ್ಟೋಬರ್ 25ರಂದು ನಡೆದ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನವೆಂಬರ್ 25ರೊಳಗೆ ಎಲ್ಲ ಕೆರೆಗಳ ಒತ್ತುವರಿ ಕಾರ್ಯವನ್ನು ಪೂರ್ಣಗೊಳಿಸಬೇಕು. ವಿಫಲವಾದ ಅಧಿಕಾರಿಗಳ ಮೇಲೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ (ನಡತೆ, ವರ್ಗೀಕರಣ ಮತ್ತು ಮೇಲ್ಮನವಿ) ಅನ್ವಯ ಮತ್ತು ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆಯನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುವುದು’ ಎಂದು ಆಡಳಿತ ವಿಭಾಗದ ವಿಶೇಷ ಆಯುಕ್ತರು ಎಲ್ಲ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಎಚ್ಚರಿಕೆ ನೀಡಿದ್ದಾರೆ.

**ಕೆರೆ ಒತ್ತುವರಿ: ಎಲ್ಲೆಲ್ಲಿ ಎಷ್ಟೆಷ್ಟು?**

| ವಲಯ | ಒಟ್ಟು ಕೆರೆಗಳು | ಕೆರೆಗಳ ಒಟ್ಟು ವಿಸ್ತೀರ್ಣ | ಒತ್ತುವರಿ | ತೆರವು | ಬಾಕಿ |
|---|---|---|---|---|---|
| ಬೊಮ್ಮನಹಳ್ಳಿ | 47 | 1,167 ಎಕರೆ 7 ಗುಂಟೆ | 196 ಎಕರೆ 33 ಗುಂಟೆ | 0 | 196 ಎಕರೆ 33 ಗುಂಟೆ |
| ದಕ್ಷಿಣ | 12 | 162 ಎಕರೆ 7 ಗುಂಟೆ | 77 ಎಕರೆ 19 ಗುಂಟೆ | 0 | 77 ಎಕರೆ 198 ಗುಂಟೆ |
| ಮಹದೇವಪುರ | 52 | 1,845 ಎಕರೆ 6 ಗುಂಟೆ | 225 ಎಕರೆ 15 ಗುಂಟೆ | 11 ಎಕರೆ 12 ಗುಂಟೆ | 214 ಎಕರೆ 2.80 ಗುಂಟೆ |
| ಯಲಹಂಕ | 28 | 1,371 ಎಕರೆ 20 ಗುಂಟೆ | 133 ಎಕರೆ 35 ಗುಂಟೆ | 24.16 ಎಕರೆ 9 ಗುಂಟೆ | 50 ಎಕರೆ 21 ಗುಂಟೆ |
| ಪೂರ್ವ | 10 | 303 ಎಕರೆ 24 ಗುಂಟೆ | 116 ಎಕರೆ 35 ಗುಂಟೆ | 2 ಎಕರೆ 21 ಗುಂಟೆ | 113 ಎಕರೆ 32 ಗುಂಟೆ |
| ಆರ್.ಆರ್. ನಗರ | 37 | 852 ಎಕರೆ 19 ಗುಂಟೆ | 160 ಎಕರೆ 6 ಗುಂಟೆ | 0 | 160 ಎಕರೆ 6 ಗುಂಟೆ |
| ದಾಸರಹಳ್ಳಿ | 9 | 220 ಎಕರೆ 13 ಗುಂಟೆ | 9 ಎಕರೆ 2 ಗುಂಟೆ | 0 | 9 ಎಕರೆ 2 ಗುಂಟೆ |
| ಪಶ್ಚಿಮ | 6 | 86 ಎಕರೆ 1 ಗುಂಟೆ | 30 ಎಕರೆ | 6 ಗುಂಟೆ | 29 ಎಕರೆ 34 ಗುಂಟೆ |
| ಒಟ್ಟು | 201 | 6,008 ಎಕರೆ 17 ಗುಂಟೆ | 949 ಎಕರೆ 26 ಗುಂಟೆ | 38 ಎಕರೆ 9 ಗುಂಟೆ | 851 ಎಕರೆ11 ಗುಂಟೆ |


(ಬಿಬಿಎಂಪಿ ಅಂಕಿ–ಅಂಶ)

**ಅಂಕಿ ಅಂಶಗಳು**

**201** ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಒಟ್ಟು ಕೆರೆಗಳು

**159** ಕೆರೆಗಳಲ್ಲಿ ಒತ್ತುವರಿ

**851** ಎಕರೆ ಒಟ್ಟು ಒತ್ತುವರಿ ತೆರವು ಬಾಕಿ



### ಮಲಬಾರ್‌ನಿಂದ ‘ಸ್ವರ್ಣಕೃತಿ’ ಸಂಗ್ರಹ ಬಿಡುಗಡೆ

**ಬೆಂಗಳೂರು:** ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಆಕರ್ಷಕ ಹೊಸ ಸಂಗ್ರಹವಾದ ‘ಸ್ವರ್ಣಕೃತಿ’ ಹೆಸರಿನ ಆಭರಣವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಆಭರಣವು ತನ್ನ ಸಮಕಾಲೀನ ವಿನ್ಯಾಸದೊಂದಿಗೆ ಭಾರತದ ಶ್ರೀಮಂತ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ಇದನ್ನು ನುರಿತ ಕುಶಲಕರ್ಮಿಗಳಿಂದ ಸಿದ್ಧಪಡಿಸಲಾಗಿದೆ. ಈ ಸಂಗ್ರಹವು ವಿಶ್ವದಾದ್ಯಂತ ಇರುವ ಕಂಪನಿಯ ಎಲ್ಲಾ ಮಳಿಗೆಗಳಲ್ಲಿ ಲಭ್ಯವಿದೆ. ಗ್ರಾಹಕರು ಹತ್ತಿರದ ಮಳಿಗೆಗಳಿಗೆ ತೆರಳಿ ಖರೀದಿಸಬಹುದಾಗಿದೆ ಎಂದು ಹೇಳಿದೆ.

‘ಸ್ವರ್ಣಕೃತಿಯೊಂದಿಗೆ ನಾವು ಕೇವಲ ಕರಕುಶಲ ಚಿನ್ನದ ಆಭರಣಗಳ ಸೌಂದರ್ಯವನ್ನಷ್ಟೇ ಆಚರಣೆ ಮಾಡುತ್ತಿಲ್ಲ. ಆಧುನಿಕತೆ ಅಳವಡಿಸಿಕೊಳ್ಳುವ ಜೊತೆಗೆ ಸಂಪ್ರದಾಯ ಮುಂದುವರಿಸಿಕೊಂಡು ಬಂದಿರುವ ಮಹಿಳೆಯರಿಗೆ ಈ ಸಂಗ್ರಹವು ಗೌರವದ ಸಂಕೇತವಾಗಿದೆ’ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ತಿಳಿಸಿದ್ದಾರೆ.

# ‘ಸೀಟ್ ಬ್ಲಾಕಿಂಗ್’ ತಡೆಗೆ ಒಪ್ಪಂದದ ತಿದ್ದುಪಡಿ–ಕೆಇಎ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಜಿನಿಯರಿಂಗ್ ಕೋರ್ಸ್‌ಗಳ ‘ಸೀಟ್ ಬ್ಲಾಕಿಂಗ್’ ದಂಧೆಗೆ ಕಡಿವಾಣ ಹಾಕಲು ಮುಂದಾಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಖಾಸಗಿ ಕಾಲೇಜು ಸಂಘಟನೆಗಳೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಎರಡು ತಿದ್ದುಪಡಿಗಳನ್ನು ಮಾಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಈ ಕುರಿತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ವರದಿ ಸಲ್ಲಿಸಿರುವ ಪ್ರಾಧಿಕಾರ, ಖಾಲಿ ಇರುವ ಸರ್ಕಾರಿ ಕೋಟಾದ ಎಲ್ಲ ಸೀಟುಗಳನ್ನು ಕೆಇಎ ಮೂಲಕವೇ ಭರ್ತಿ ಮಾಡಬೇಕು. ಸಿಇಟಿ ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರವೇ ಕಾಮೆಡ್‌-ಕೆ ಪ್ರವೇಶ ಪ್ರಕ್ರಿಯೆ ಪ್ರಾರಂಭಿಸಬೇಕು ಎನ್ನುವ ಎರಡು ಷರತ್ತುಗಳನ್ನು ಒಪ್ಪಂದದಲ್ಲಿ ಸೇರಿಸಬೇಕು ಎಂದು ಮನವಿ ಮಾಡಿದೆ.

ರಾಜ್ಯ ಸರ್ಕಾರ ಮತ್ತು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ನಡುವಿನ ಒಮ್ಮತದ ಒಪ್ಪಂದದ ಪ್ರಕಾರ, ಸಿಇಟಿ ಮೂಲಕ ಎಲ್ಲ ಸುತ್ತಿನ ಹಂಚಿಕೆಯ ನಂತರ ಉಳಿದ ಸೀಟುಗಳು ಹಾಗೂ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡ ನಂತರ ಪ್ರವೇಶ ಪಡೆಯದ ಸೀಟುಗಳನ್ನು ಆಡಳಿತ ಮಂಡಳಿ ಕೋಟಾದ ಮೂಲಕ ಭರ್ತಿ ಮಾಡಿಕೊಳ್ಳಬಹುದು. ಇದು ಸೀಟ್ ಬ್ಲಾಕಿಂಗ್ ದಂದೆಯ ಮೂಲ ಎನ್ನುವುದು ಕೆಇಎ ವಾದ.

ಬೇಡಿಕೆ ಇರುವ ಕೃತಕ ಬುದ್ಧಿಮತ್ತೆ, ಕಂಪ್ಯೂಟರ್ ಸೈನ್ಸ್ ಮೊದಲಾದ ಕೋರ್ಸ್‌ಗಳಿಗೆ ಆಡಳಿತ ಮಂಡಳಿಗಳು ಒಂದು ಸೀಟಿಗೆ ₹60 ಲಕ್ಷದವರೆಗೂ ಶುಲ್ಕ ವಸೂಲಿ ಮಾಡುತ್ತಿವೆ. ಹಾಗಾಗಿ, ಬೇಡಿಕೆ ಇರುವ ಕೋರ್ಸ್‌ಗಳಿಗೆ ಸಿಇಟಿ ವಿದ್ಯಾರ್ಥಿಗಳು ಪ್ರವೇಶ ಪಡೆಯದಂತೆ ತಂತ್ರ ಮಾಡುತ್ತಿವೆ. ಪ್ರಸಕ್ತ ವರ್ಷ ಅಂತಹ ಎರಡು ಸಾವಿರಕ್ಕೂ ಹೆಚ್ಚು ಸೀಟುಗಳು ಉಳಿದಿದ್ದವು.

ಸೀಟು ಹಂಚಿಕೆಯಾದರೂ ಪ್ರವೇಶ ಪಡೆಯದ ವಿದ್ಯಾರ್ಥಿಗಳಿಗೆ ನೋಟಿಸ್ ನೀಡಲಾಗಿತ್ತು. ‘ಸೀಟ್ ಬ್ಲಾಕಿಂಗ್’ ದಂಧೆ ನಡೆಸುತ್ತಿದ್ದವರ ವಿರುದ್ಧ ಸೈಬರ್ ಅಪರಾಧ, ಮಾದಕ ವಸ್ತು ನಿಯಂತ್ರಣ ಠಾಣೆ(ಸೈಬರ್)ಯಲ್ಲಿ ಬುಧವಾರ ಎಫ್‌ಐಆರ್ ದಾಖಲಿಸಲಾಗಿತ್ತು.

### ಸೀಟ್ ಬ್ಲಾಕಿಂಗ್‌ನಲ್ಲಿ ನಮ್ಮ ಪಾತ್ರವಿಲ್ಲ ಬಿಎಂಎಸ್ ಕಾಲೇಜು ಸ್ಪಷ್ಟನೆ

**ಬೆಂಗಳೂರು:** ‘ಸಿಇಟಿ ಸೀಟ್ ಬ್ಲಾಕಿಂಗ್‌ನಲ್ಲಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಯಾವುದೇ ರೀತಿಯಲ್ಲಿ ಭಾಗಿಯಾಗಿಲ್ಲ’ ಎಂದು ಕಾಲೇಜು ಹೇಳಿದೆ.

‘ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್‌ನಲ್ಲಿ ಬಿಎಂಎಸ್ ಕಾಲೇಜಿನ ಹೆಸರನ್ನು ಅನಗತ್ಯವಾಗಿ ತರಲಾಗಿದೆ. ಈ ಸಂಬಂಧ ಕೆಲವು ಮಾಧ್ಯಮಗಳು ವರದಿಯನ್ನೂ ಮಾಡಿವೆ. ಆದರೆ, ಆರೋಪದಲ್ಲಿ ಯಾವುದೇ ಹುರುಳಿಲ್ಲ’ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ. ‘ಉಳಿದಿರುವ ಸೀಟುಗಳನ್ನು ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲು ಹೆಚ್ಚುವರಿ ಮಾಪ್‌ಅಪ್ ಸುತ್ತನ್ನು ನಡೆಸುವಂತೆ ಸರ್ಕಾರವನ್ನು ಕೋರಿದ್ದೇವೆ’ ಎಂದು ಕಾಲೇಜು ಹೇಳಿದೆ.

# ‘ಸುಪ್ರೀಂ’ ಪೀಠಗಳಿಗೆ ಹೊಸ ರೋಸ್ಟರ್ ನಿಗದಿ

**ನವದೆಹಲಿ (ಪಿಟಿಐ):** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರು ಹೊಸ ಪ್ರಕರಣಗಳ ವಿಚಾರಣೆಯನ್ನು 16 ಪೀಠಗಳಿಗೆ ಹಂಚಿಕೆ ಮಾಡಲು ನೂತನ ರೋಸ್ಟರ್ ಸಿದ್ಧಪಡಿಸಿದ್ದಾರೆ.

ಸಿಜೆಐ ಮತ್ತು ಇತರ ಇಬ್ಬರು ಹಿರಿಯ ನ್ಯಾಯಮೂರ್ತಿಗಳು ಕ್ರಮವಾಗಿ ಮೊದಲ ಮೂರು ಪೀಠಗಳ ನೇತೃತ್ವ ವಹಿಸಲು ನಿರ್ಧರಿಸಲಾಗಿದೆ. ಈ ಪೀಠಗಳು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಮತ್ತು ಪತ್ರಗಳ ಮೂಲಕ ಬಂದ ಅರ್ಜಿಗಳ ವಿಚಾರಣೆ ನಡೆಸಲಿವೆ.



ಸಿಜೆಐ ಅವರ ಆದೇಶದ ಅನುಸಾರ ಹೊಸ ಪ್ರಕರಣಗಳ ಹಂಚಿಕೆಯನ್ನು ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯು ಪ್ರಕಟಿಸಿದೆ. ನವೆಂಬರ್ 11ರಿಂದ ಇದು ಜಾರಿಗೆ ಬಂದಿದೆ.

ನಾಗರಿಕರು ಸುಪ್ರೀಂ ಕೋರ್ಟ್‌ಗೆ ಪತ್ರ ಬರೆದು ಸಲ್ಲಿಸುವ ಅರ್ಜಿಗಳು ಮತ್ತು ಪಿಐಎಲ್‌ಗಳ ವಿಚಾರಣೆಯನ್ನು ಸಿಜೆಐ, ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸೂರ್ಯಕಾಂತ ಅವರ ನೇತೃತ್ವದ ಪೀಠಗಳು ನಡೆಸಲಿವೆ.

ಸಿಜೆಐ ನೇತೃತ್ವದ ಪೀಠವು ಪಿಐಎಲ್‌ಗಳ ಜತೆ ಸಾಮಾಜಿಕ ನ್ಯಾಯ, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಆಯ್ಕೆಗೆ ನಡೆಯುವ ಚುನಾವಣೆಗೆ ಸಂಬಂಧಿಸಿದ ವಿವಾದಗಳು, ಸಂಸದರು ಮತ್ತು ಶಾಸಕರ ಚುನಾವಣೆ, ಹೇಬಿಯಸ್ ಕಾರ್ಪಸ್ ಅರ್ಜಿಗಳು ಒಳಗೊಂಡಂತೆ ಗರಿಷ್ಠ ಪ್ರಕರಣಗಳನ್ನು ನಿಭಾಯಿಸಲಿದೆ. ಸೂರ್ಯಕಾಂತ ನೇತೃತ್ವದ ಪೀಠ ಕೂಡಾ ಚುನಾವಣೆಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಲಿದೆ.

ಈ ಹಿಂದಿನ ಸಿಜೆಐ ಡಿ.ವೈ.ಚಂದ್ರಚೂಡ್ ಅವರೊಂದಿಗೆ ಪೀಠವನ್ನು ಹಂಚಿಕೊಂಡಿದ್ದ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದೀವಾಲಾ ಅವರು ಸಿವಿಲ್ ಪ್ರಕರಣಗಳ ಜತೆ ನೇರ ಮತ್ತು ಪರೋಕ್ಷ ತೆರಿಗೆಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವರು.



ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಗುರುವಾರ ನಡೆದ ಮಾಜಿ ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರೂ ಅವರ ಜನ್ಮದಿನದ ಕಾರ್ಯಕ್ರಮದಲ್ಲಿ ಬಾಲಕನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಧ್ವಜ ಸ್ವೀಕರಿಸಿದರು

## ನಗರದಲ್ಲಿ ಮತ್ತೆ ಸುರಿದ ಮಳೆ



ಗುರುವಾರ ಮಳೆ ಬಂದಾಗ ನಗರದ ಬಳಿ ಏರ್‌ಪೋರ್ಟ್ ರಸ್ತೆಯಲ್ಲಿ ರೈಲ್ವೆ ಮೇಲ್ಸೇತುವೆಯ ಕೆಳಗೆ ದ್ವಿಚಕ್ರ ವಾಹನ ಸವಾರರು ಆಶ್ರಯ ಪಡೆದಿದ್ದರು

ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

**ಬೆಂಗಳೂರು:** ಕೆಲವು ದಿನಗಳ ಬಿಡುವಿನ ನಂತರ ನಗರದಲ್ಲಿ ಗುರುವಾರ ಮತ್ತೆ ಮಳೆ ಆರಂಭವಾಯಿತು. ಜಿಕೆವಿಕೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹಮ್ಮಿಕೊಂಡಿದ್ದ ಕೃಷಿಮೇಳದ ಉತ್ಸಾಹಕ್ಕೆ ನೀರೆರಚಿತು. ಹಲವು ಕಡೆಗಳಲ್ಲಿ ರಸ್ತೆಗಳಲ್ಲೇ ನೀರು ಹರಿಯಿತು.

ಹೆಬ್ಬಾಳದಲ್ಲಿ ರಸ್ತೆಯಲ್ಲೇ ನೀರು ಹರಿದ ಕಾರಣ ಏರ್‌ಪೋರ್ಟ್ ಕಡೆಗೆ ಸಾಗುವ ವಾಹನಗಳಿಗೆ ತೊಡಕಾಯಿತು. ಎಂ.ಜಿ. ರಸ್ತೆ, ರಾಜಾಜಿನಗರ, ಕಬ್ಬನ್ ಪಾರ್ಕ್, ಶಾಂತಿನಗರ, ಜಯನಗರ, ರಾಜರಾಜೇಶ್ವರಿ ನಗರ, ಕೆ.ಆರ್. ಮಾರ್ಕೆಟ್, ಕಾರ್ಪೊರೇಷನ್ ಸರ್ಕಲ್, ಮೈಸೂರು ರಸ್ತೆ, ವಿಜಯನಗರ, ಮಾಗಡಿ ರಸ್ತೆ, ಮಲ್ಲೇಶ್ವರ, ಯಶವಂತಪುರ ಸೇರಿದಂತೆ ಬಹುತೇಕ ಕಡೆಗಳಲ್ಲಿ ಮಳೆಯಾಗಿದೆ.

**1 ಸೆಂ.ಮೀ.ಗಿಂತ ಅಧಿಕ ಮಳೆ:** ದೊಡ್ಡಬಿದರಕಲ್ಲು 1.3 ಸೆಂ.ಮೀ., ಚೌಡೇಶ್ವರಿ ನಗರ 1.05 ಸೆಂ.ಮೀ., ಬಾಗಲಗುಂಟೆ 1 ಸೆಂ.ಮೀ., ಪೀಣ್ಯ ಕೈಗಾರಿಕಾ ವಲಯ 1 ಸೆಂ.ಮೀ. ಮಳೆಯಾಗಿದೆ.

## ನಗರದಲ್ಲಿ ಇಂದು

**‘ಕುರುಬ್ಕಿ’ ಕುರುಬರ ಜತೆಗೊಂದು ಪಯಣ:** ಅತಿಥಿಗಳು: ನೀಲಕಂಠ ಮಾಮ, ಕೋಟಿಗಾನಹಳ್ಳಿ ರಾಮಯ್ಯ, ಚಂದ್ರಪ್ಪ ಸೊಬಟಿ, ಗೋಪಿಕೃಷ್ಣ, ‘ರತ್ನಪಕ್ಷಿ’, ‘ಟಗರಜೋಗಿ ತಲ್ಲಣಗಳು’ ಪುಸ್ತಕ ಬಿಡುಗಡೆ, ಛಾಯಾಚಿತ್ರ ಹಾಗೂ ಕಲಾಕೃತಿ ಪ್ರದರ್ಶನ, ಆಯೋಜನೆ: ದಖ್ಖನಿ ಡೈರೀಸ್, ಸ್ಥಳ: ಸಮಗತ ಫೌಂಡೇಷನ್, 4ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಳಿಗ್ಗೆ 11

**14ನೇ ವಾರ್ಷಿಕ ಘಟಿಕೋತ್ಸವ ಹಾಗೂ ಅರುಣ್ ಯೋಗಿರಾಜ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ, ಆಯೋಜನೆ:** ಜೈನ್ ವಿಶ್ವವಿದ್ಯಾಲಯ, ಸ್ಥಳ: ಪ್ರೆಸ್ಟೀಜ್ ಶ್ರೀ ಹರಿ ಕೋಡೆ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 11

**ಕರುನಾಡ ಸಂಭ್ರಮ, 69ನೇ ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ಕೆ.ಪುಟ್ಟರಾಜು, ಅಧ್ಯಕ್ಷತೆ: ಸುರೇಶ್ ಎಸ್., ಮುಖ್ಯ ಭಾಷಣ: ಅಮರೇಂದ್ರ ಹೊಲ್ಲಂಬಳ್ಳಿ, ಆಯೋಜನೆ: ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಧರ್ಮಸಂಸ್ಥೆ, ಸ್ಥಳ: ಶ್ರೀ ಲ.ನ. ಬಯಲು ರಂಗಮಂದಿರ, ಕೋಟೆ, ಬೆಳಿಗ್ಗೆ 10

**ಚಿಣ್ಣರ ಉತ್ಸವ:** ಅತಿಥಿಗಳು: ಭಾವನಾ ರಾಮಣ್ಣ, ಬಿ.ಆರ್. ನಾಯ್ಡು, ನಿಶ್ಚಲ್ ಬಿ.ಎಚ್., ಧನಲಕ್ಷ್ಮಿ, ಆಯೋಜನೆ: ಎ.ಎಂ.ಎಸ್. ಗ್ರೂಪ್, ಸ್ಥಳ: ಜವಾಹರ್ ಬಾಲಭವನ, ಕಬ್ಬನ್ ಉದ್ಯಾನ, ಮಧ್ಯಾಹ್ನ 12

**ಕನ್ನಡ ರಾಜ್ಯೋತ್ಸವ, ನಾಟಕೋತ್ಸವ:** ‘ರಣದುಂದುಭಿ’ ನಾಟಕ ಪ್ರದರ್ಶನ: ರಚನೆ: ಎನ್.ಎನ್.ರಾವ್, ನಿರ್ದೇಶನ: ವೆಂಕಟರಮಣಯ್ಯ ಡಿ., ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಶಾರದ ಕಾಲೇಜು, ಮಾಗಡಿ ಮುಖ್ಯರಸ್ತೆ, ತಾವರೆಕೆರೆ, ಸಂಜೆ 4

**ಹನುಮಗಿರಿ ಬೆಟ್ಟದ ಮೇಲೆ ಕಾರ್ತಿಕ ಹುಣ್ಣಿಮೆ ದಿಪೋತ್ಸವ:** ಆಶೀರ್ವಚನ: ಶಿವರುದ್ರ ಸ್ವಾಮೀಜಿ, ಮಧುಸೂದನಾನಂದಪುರಿ ಸ್ವಾಮೀಜಿ, ನಿರ್ಭಯಾನಂದ ಸ್ವರಸ್ವತಿ, ಆಯೋಜನೆ: ಅರ್ಕೇಶ್ವರ ಹಾಗೂ ವೀರಾಂಜನೇಯ ದೇವಸ್ಥಾನ, ಸ್ಥಳ: ಹನುಮಗಿರಿ ಬೆಟ್ಟ, ಎಜಿಎಸ್ ಬಡಾವಣೆ, ಅರೇಹಳ್ಳಿ, ಸಂಜೆ 5

**ತಿಂಗಳ ಉಪನ್ಯಾಸ ಕಾರ್ಯಕ್ರಮ:** ಪ್ರಸ್ತಾವನೆ: ಡಿ.ಕೆ. ಚಿತ್ತಯ್ಯ ಪೂಜಾರ್, ‘ಕುವೆಂಪು ಕಾದಂಬರಿಗಳಲ್ಲಿ ಮಹಿಳಾ ಲೋಕ’ ವಿಷಯದ ಬಗ್ಗೆ ಉಪನ್ಯಾಸ: ಗುರುಪಾದಪ್ಪ ಮರಿಗುದ್ದಿ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಹಾಗೂ ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

**ಮರೆಯಲಾಗದ ಮಹನೀಯರು ಸರಣಿಯಲ್ಲಿ ವಿ.ಸೀತಾರಾಮಯ್ಯ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಮೈಸೂರು ಅನಂತಸ್ವಾಮಿ ಅವರಿಗೆ ನುಡಿನಮನ:** ಎಸ್.ದಿವಾಕರ್, ಬಿ.ಆರ್. ಲಕ್ಷ್ಮಣರಾವ್, ನಗರ ಶ್ರೀನಿವಾಸ ಉಡುಪ, ಸಿದ್ಧಲಿಂಗ ಪಟ್ಟಣಶೆಟ್ಟಿ ಅವರಿಗೆ ಗೀತ ಗೌರವ, ಅಧ್ಯಕ್ಷತೆ: ವೈ.ಕೆ. ಮುದ್ದುಕೃಷ್ಣ, ಉಪಸ್ಥಿತಿ: ಶಾಂತಾ ಅನಂತ ಸ್ವಾಮಿ, ಹೇಮಾ ಪಟ್ಟಣಶೆಟ್ಟಿ, ಜ್ಯೋತಿ ಲಕ್ಷ್ಮೀನಾರಾಯಣ ಭಟ್ಟ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

**‘ಕನ್ನಡ ಕಾರ್ಯಕರ್ತರು ಕಂಡಂತೆ ಎಲ್.ಎಸ್.ಎಸ್.’ ವಿಚಾರ ಸಂಕಿರಣ:** ಅಧ್ಯಕ್ಷತೆ: ಶೇಷಶಾಸ್ತ್ರಿ, ನಿರ್ವಹಣೆ: ಬಾ.ಹ. ಉಪೇಂದ್ರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ರವೀಂದ್ರ ಕಲಾಕ್ಷೇತ್ರ ಮಹಿಳಾ ವಿಶ್ರಾಂತಿ ಕೊಠಡಿ, ಜೆ.ಸಿ.ರಸ್ತೆ, ಸಂಜೆ 5.30

**ಶರಣೆ ನೀಲಾಂಬಿಕೆ ಜಯಂತಿ:** ಉದ್ಘಾಟನೆ: ಎಸ್. ಮಹದೇವಯ್ಯ, ಅಧ್ಯಕ್ಷತೆ: ಕೆ.ವಿ.ನಾಗರಾಜಮೂರ್ತಿ, ಉಪನ್ಯಾಸ: ಪ್ರಮೀಳಾ ಫಾಲನೇತ್ರ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಜಯನಗರ ಘಟಕ, ಕದಳಿ ಮಹಿಳಾ ವೇದಿಕೆ, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ 8ನೇ ವಿಭಾಗ, ಸಂಜೆ 5.30

**ವಿದ್ವಾನ್ ಎಂ.ಎ. ನರಸಿಂಹಾಚಾರ್ ಅವರ ಜನ್ಮ ಶತಮಾನೋತ್ಸವ ಸಮಾರಂಭ:** ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಅತಿಥಿ: ಮಧುರೈ ಟಿ.ಎನ್. ಶೇಷಗೋಪಾಲನ್, ಶತಮಾನೋತ್ಸವ ವಿಶೇಷ ಪ್ರಶಸ್ತಿ: ರಂಜನಿ ಗಾಯತ್ರಿ, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಮಲ್ಲೇಶ್ವರ, ಸಂಜೆ 6.30

**200ರ ಹುಣ್ಣಿಮೆ ಹಾಡು ಮತ್ತು 8ನೇ ರೈತಸ್ನೇಹಿ ಮಲ್ಲೇಶ್ವರ ಕಡಲೆಕಾಯಿ ಪರಿಷೆ:** ಉದ್ಘಾಟನೆ: ವೀರಪ್ಪ ಮೊಯಿಲಿ, ಅತಿಥಿಗಳು: ಡಿ.ಕೆ. ಶಿವಕುಮಾರ್, ರಾಮಲಿಂಗಾರೆಡ್ಡಿ, ಶಿವರಾಜ್ ತಂಗಡಗಿ, ಬಿ.ಕೆ. ಹರಿಪ್ರಸಾದ್, ಉಪಸ್ಥಿತಿ: ಶೋಭಾ ಕರಂದ್ಲಾಜೆ, ಸಿ.ಎನ್. ಅಶ್ವತ್ಥ ನಾರಾಯಣ, ಮುನಿರತ್ನ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಶ್ರೀ ಭ್ರಮರಾಂಭ ಸಮೇತ ಶ್ರೀ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 4.30

**ವೀರಲೋಕ ಪುಸ್ತಕ ಸಂತೆ: ಕನ್ನಡ ಧ್ವಜಾರೋಹಣ:** ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಸಿ.ಕೆ. ರಾಮಮೂರ್ತಿ, ಕಾರ್ಯಕ್ರಮ ಉದ್ಘಾಟನೆ: ಅಂಕೇಗೌಡ, ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ: ತೇಜಸ್ವಿ ಸೂರ್ಯ, ಪುಸ್ತಕ ಮಳಿಗೆ ಉದ್ಘಾಟನೆ: ಟಿ.ಎ. ನಾರಾಯಣಗೌಡ, ಮಕ್ಕಳ ಮೇಳ ಉದ್ಘಾಟನೆ: ಪ್ರೊ.ಜಯಕರ್ ಎಸ್.ಎಂ., ಆಹಾರ ಮೇಳ ಉದ್ಘಾಟನೆ: ವಿ.ಎಸ್. ಉಗ್ರಪ್ಪ, ಮುಖ್ಯ ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಮಾನಸ, ಉಪಸ್ಥಿತಿ: ವೀರಕಪುತ್ರ ಶ್ರೀನಿವಾಸ, ಆಯೋಜನೆ: ವೀರಲೋಕ, ಸ್ಥಳ: ಶಾಲಿನಿ ಮೈದಾನ, ಜಯನಗರ, ಬೆಳಿಗ್ಗೆ 10

**ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ**
**nagaradalli_indu@prajavani.co.in**

ಬಗರ್ ಹುಕುಂ ಯೋಜನೆಯಡಿ ಭೂ ಮಂಜೂರಾತಿ ಕೋರಿಕೆ

# ಅರ್ಜಿ ವಿಂಗಡಣೆಗೆ ನ.25ರ ಗಡುವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಗರ್ ಹುಕುಂ ಯೋಜನೆಯಡಿ ಭೂ ಮಂಜೂರಾತಿ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಅರ್ಹ ಮತ್ತು ಅನರ್ಹ ಅರ್ಜಿದಾರರನ್ನು ವಿಂಗಡಿಸಿ ನವೆಂಬರ್ 25ರೊಳಗೆ ಪಟ್ಟಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಎಲ್ಲ ತಹಶೀಲ್ದಾರ್‌ಗಳಿಗೆ ಗಡುವು ನೀಡಿದ್ದಾರೆ.

ಗುರುವಾರ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ರಾಜ್ಯದ ಎಲ್ಲ ತಹಶೀಲ್ದಾರ್‌ಗಳ ಜತೆ ಸಭೆ ನಡೆಸಿದ ಅವರು, ಬಗರ್ ಹುಕುಂ ಅರ್ಜಿಗಳ ವಿಲೇವಾರಿ ಪ್ರಗತಿ ಪರಿಶೀಲಿಸಿದರು. ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಅರ್ಜಿ ವಿಲೇವಾರಿಯಲ್ಲಿ ಪ್ರಗತಿ ಇಲ್ಲದಿರುವುದನ್ನು ಗಮನಿಸಿದ ಅವರು, ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

‘ಬಗರ್ ಹುಕುಂ ಯೋಜನೆ ಬಡವರಿಗಾಗಿ ಇರುವುದು. ಬಡವರ ಕೆಲಸದ ವಿಚಾರದಲ್ಲಿ ಅಧಿಕಾರಿ ವರ್ಗದಿಂದ ಈ ಮಟ್ಟದ ಅಸಡ್ಡೆಯನ್ನು ನಿರೀಕ್ಷಿಸಿರಲಿಲ್ಲ. ರಾಜ್ಯದ 14 ಲಕ್ಷ ರೈತರು ಬಗರ್ ಹುಕುಂ ಅಡಿ ಭೂ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಆದರೆ, ಈ ಅರ್ಜಿಗಳ ಪೈಕಿ ಅರ್ಹ, ಅನರ್ಹ ಅರ್ಜಿದಾರರನ್ನು ಗುರುತಿಸಲು ಒಂದೂವರೆ ವರ್ಷ ಬೇಕೆ’ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

‘ಒಂದು ವರ್ಷದಿಂದ ನಿರಂತರಾಗಿ ಜಿಲ್ಲೆಗಳಲ್ಲಿ ಭೇಟಿ ನೀಡಿ ಬಗರ್ ಹುಕುಂ ಅರ್ಜಿ ವಿಲೇವಾರಿ ಪರಿಶೀಲಿಸಿದ್ದೇನೆ. ಪ್ರತಿ ತಿಂಗಳು ವಿಡಿಯೊ ಕಾನ್ಫರೆನ್ಸಿಂಗ್ ನಡೆಸುತ್ತಿದ್ದೇನೆ. ಆದರೂ, ಕೆಲವು ತಹಶೀಲ್ದಾರರು ಅಸಡ್ಡೆ ತೋರುತ್ತಿದ್ದಾರೆ. ಇದನ್ನು ಸಹಿಸುವುದಿಲ್ಲ. ನವೆಂಬರ್ 25 ರೊಳಗೆ ಪಟ್ಟಿ ಅಂತಿಮಗೊಳ್ಳಬೇಕು. ನವೆಂಬರ್ 26ರಂದು ಎಲ್ಲ ಜಿಲ್ಲಾಧಿಕಾರಿಗಳೂ ನನಗೆ ಪಟ್ಟಿ ಸಲ್ಲಿಸಬೇಕು’ ಎಂದು ಸೂಚಿಸಿದರು.

**ಸಭೆಯಲ್ಲೇ ನೋಟಿಸ್:** ಬಗರ್ ಹುಕುಂ ಅರ್ಜಿ ವಿಲೇವಾರಿಯಲ್ಲಿ ಅಸಡ್ಡೆ ತೋರಿರುವ ಮಾಲೂರು ತಾಲ್ಲೂಕು ತಹಶೀಲ್ದಾರ್ ರಮೇಶ್ ಅವರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಸಚಿವರು ಸಭೆಯಲ್ಲೇ ಸೂಚಿಸಿದರು.

ಮಾಲೂರು ತಾಲ್ಲೂಕಿನಲ್ಲಿ ಬಗರ್ ಹುಕುಂ ಅಡಿ ಭೂ ಮಂಜೂರಾತಿ ಕೋರಿ 10,771 ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಈವರೆಗೆ ಸ್ಥಳ ಪರಿಶೀಲನೆಗೊಂಡಿರುವ ಅರ್ಜಿಗಳ ಸಂಖ್ಯೆ ಕೇವಲ 55 ಮಾತ್ರ. ಸಭೆಯ ಆರಂಭದಲ್ಲೇ ರಮೇಶ್ ಅವರ ಜತೆ ಮಾತನಾಡಲು ಸಚಿವರು ಯತ್ನಿಸಿದರು. ಆದರೆ, ಅವರು ಸಭೆಗೆ ಒಂದು ಗಂಟೆ ತಡವಾಗಿ ಹಾಜರಾದರು. ಸಚಿವರ ಪ್ರಶ್ನೆಗಳಿಗೂ ಸರಿಯಾಗಿ ಉತ್ತರಿಸಲಿಲ್ಲ. ರಮೇಶ್ ಅವರಿಗೆ ತಕ್ಷಣ ಶೋಕಾಸ್ ನೋಟೀಸ್ ಜಾರಿಗೊಳಿಸುವಂತೆ ಸಚಿವರು ಸೂಚನೆ ನೀಡಿದರು.

**‘ನಾಚಿಕೆ ಇಲ್ಲವೆ?’:** ಬಗರ್ ಹುಕುಂ ಅರ್ಜಿ ವಿಲೇವಾರಿ ಸೇರಿದಂತೆ ಕಂದಾಯ ಇಲಾಖೆಯ ಬಹುತೇಕ ಕೆಲಸಗಳಲ್ಲಿ ಮೈಸೂರು ಜಿಲ್ಲೆ ಹಿಂದುಳಿದಿರುವುದನ್ನು ಗಮನಿಸಿದ ಕೃಷ್ಣ ಬೈರೇಗೌಡ, ‘ಮೈಸೂರು ಕಳಪೆ ಜಿಲ್ಲೆಯಾಗುತ್ತಿದೆ. ಅಧಿಕಾರಿಗಳೇ ನಿಮಗೆ ನಾಚಿಕೆ ಆಗುವುದಿಲ್ಲವೆ’ ಎಂದು ತರಾಟೆಗೆ ತೆಗೆದುಕೊಂಡರು.

### ‘ಉತ್ತಮ ಕೆಲಸ ಮಾಡಿದರೆ ಸನ್ಮಾನ’

ಶೇಕಡ 80ರಷ್ಟು ಬಗರ್ ಹುಕುಂ ಅರ್ಜಿಗಳನ್ನು ವಿಲೇವಾರಿ ಮಾಡಿರುವ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ತಹಶೀಲ್ದಾರ್ ಶ್ರೀಧರ್ ಶೇಖರ್ ಮತ್ತು ಮುಂಡಗೋಡು ತಾಲ್ಲೂಕು ತಹಶೀಲ್ದಾರ್ ಶಂಕರ್ ಗೌಡಿ ಅವರನ್ನು ಕಂದಾಯ ಸಚಿವರು ಸಭೆಯಲ್ಲಿ ಪ್ರಶಂಸಿಸಿದರು.

‘ಕೆಲಸ ಮಾಡಿ ಎಂದರೆ ಬಗರ್ ಹುಕುಂ ಆ್ಯಪ್ ಸಹಕರಿಸುತ್ತಿಲ್ಲ, ನೆಟ್‌ವರ್ಕ್ ಇಲ್ಲ ಎಂದು ಸಲ್ಲದ ಕಾರಣ ನೀಡುವವರೇ ಹೆಚ್ಚು. ಆದರೆ, ನೆಟ್‌ವರ್ಕ್ ಇಲ್ಲದೇ ಇದ್ದರೂ ಗುಡ್ಡಗಾಡು ಪ್ರದೇಶದ ಈ ಅಧಿಕಾರಿಗಳು ಹೇಗೆ ಶೇ.80ರಷ್ಟು ಬಗರ್ ಹುಕುಂ ಅರ್ಜಿ ವಿಲೇವಾರಿ ಮಾಡಲು ಸಾಧ್ಯವಾಯಿತು? ಈ ರೀತಿ ಕಾಲಮಿತಿಯೊಳಗೆ ಅರ್ಜಿ ವಿಲೇವಾರಿ ಮಾಡುವವರನ್ನು ಮುಂದಿನ ತಿಂಗಳಲ್ಲಿ ಬೆಂಗಳೂರಿಗೆ ಆಹ್ವಾನಿಸಿ ಸನ್ಮಾನಿಸುತ್ತೇನೆ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

## ‘ಅಪರೂಪದ ಕಾಯಿಲೆ: ಮಕ್ಕಳಿಗೆ ಅಗತ್ಯ ಚಿಕಿತ್ಸೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರೂಪದ ಕಾಯಿಲೆ ಹೊಂದಿರುವ ಮಕ್ಕಳಿಗೆ ಅಗತ್ಯ ಚಿಕಿತ್ಸೆ ಒದಗಿಸಲು ಸರ್ಕಾರ ಬದ್ಧವಾಗಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ಭರವಸೆ ನೀಡಿದರು.



ಶರಣ ಪ್ರಕಾಶ್ ಪಾಟೀಲ

ಕೇರ್ ಆ್ಯಂಡ್ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಟ್ರಸ್ಟ್ (ಸಿಪಿಸಿಟಿ) ನಗರದಲ್ಲಿ ಗುರುವಾರ ಆಯೋಜಿಸಿದ್ದ, ಬೆನ್ನು ಮೂಳೆಯ ಸ್ನಾಯು ಕ್ಷೀಣತೆಯಿಂದ ಬಳಲು-ತ್ತಿರುವವರಿಗೆ ಉಚಿತ ಔಷಧ ನೀಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಅಪರೂಪದ ಕಾಯಿಲೆ ಎದುರಿಸುತ್ತಿರುವವರಿಗೆ ಚಿಕಿತ್ಸೆ ಹಾಗೂ ಉಚಿತ ಔಷಧಕ್ಕೆ ಖಾಸಗಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಕ್ರಮ-ವಹಿಸಲಾಗಿದೆ. ಇದರಿಂದ ಸಮಸ್ಯೆ ಎದುರಿಸುತ್ತಿರುವವರ ಕುಟುಂಬಕ್ಕೆ ಆರ್ಥಿಕ ಹೊರೆ ತಗ್ಗಲಿದೆ. ಚಿಕಿತ್ಸೆ ಹಾಗೂ ಔಷಧಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದಲೂ ಹೆಚ್ಚುವರಿಯಾಗಿ ₹75 ಕೋಟಿ ನೀಡಲಾಗಿದೆ’ ಎಂದರು.

‘ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಅಪರೂಪದ ಕಾಯಿಲೆ ಹೊಂದಿರುವ ಮಕ್ಕಳ ಚಿಕಿತ್ಸೆಗಾಗಿ ದೇಶದಲ್ಲೇ ಮೊದಲ ಬಾರಿ ಶ್ರೇಷ್ಠತಾ ಕೇಂದ್ರ ಸ್ಥಾಪಿಸಲಾಗಿದೆ’ ಎಂದು ಹೇಳಿದರು.

### ನಗರ ವ್ಯಾಪ್ತಿಯಲ್ಲಿ ಕೃಷಿ ಭೂಮಿ ಪರಿವರ್ತನೆಗೆ ಡಿ.ಸಿ ಅನುಮೋದನೆ ಅಗತ್ಯವಿಲ್ಲ: ಕಾಯ್ದೆ

# ಕಾನೂನು ಮೀರಿ ಭೂ ಪರಿವರ್ತನೆ

• ಆರ್. ಮಂಜುನಾಥ್

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಭೂ ಪರಿವರ್ತನೆ ಅಗತ್ಯವಿಲ್ಲ ಎಂಬ ಕಾನೂನನ್ನು ಮೀರಿ ಕೃಷಿ ಜಮೀನುಗಳನ್ನು ಕೃಷಿಯೇತರ ಬಳಕೆಗೆ ಒಂದು ವರ್ಷದಿಂದ ಪರಿವರ್ತನೆ ಮಾಡಲಾಗುತ್ತಿದೆ.

ಸರ್ಕಾರದ ಕಾನೂನನ್ನು ಮುಚ್ಚಿಟ್ಟು, ಅದು ಅನುಷ್ಠಾನಕ್ಕೆ ಬಾರದಂತೆ ‘ಕಾಣದ ಕೈ’ಗಳು ಕಾರ್ಯಭಾರ ನಡೆಸುತ್ತಿವೆ. ಹೀಗಾಗಿ, ಭೂ ಪರಿವರ್ತನೆಗೆ ಮಾಲೀಕರಿಂದ ಅರ್ಜಿಗಳನ್ನು ಜಿಲ್ಲಾಧಿಕಾರಿಯವರು ಸ್ವೀಕರಿಸುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಶುಲ್ಕವನ್ನು ಪಾವತಿಸಿ ಕೊಳ್ಳುತ್ತಿರುವುದರಿಂದ ಭೂಮಾಲೀಕರಿಗೆ ಅನಗತ್ಯ ಆರ್ಥಿಕ ಹೊರೆಯಾಗುತ್ತಿದೆ.

‘ಮಾಸ್ಟರ್ ಪ್ಲಾನ್’ ವ್ಯಾಪ್ತಿಯಲ್ಲಿರುವ ಕೃಷಿ ಜಮೀನನ್ನು ಕೃಷಿಯೇತರ ಅಗತ್ಯಗಳಿಗೆ ಬಳಸಿಕೊಳ್ಳಲು ಜಿಲ್ಲಾಧಿಕಾರಿಯವರ ಅನುಮತಿಯ ಅಗತ್ಯವಿಲ್ಲ. ಸಂಬಂಧಿಸಿದ ನಗರ ಯೋಜನಾ ಪ್ರಾಧಿಕಾರದಿಂದ ನಿರ್ಮಾಣ ನಕ್ಷೆ ಪಡೆಯುವ ಸಂದರ್ಭದಲ್ಲಿ ನಿಗದಿತ ಸ್ವಯಂ ಘೋಷಣೆಯೊಂದಿಗೆ ಅಗತ್ಯ ಶುಲ್ಕ ಪಾವತಿಸಿದರೆ ಸಾಕು ಎಂದು ಕಂದಾಯ ಇಲಾಖೆ 2023ರಲ್ಲೇ ಆದೇಶ ಹೊರಡಿಸಿದೆ. ಆದರೆ, ಇದನ್ನು ಜಿಲ್ಲಾಧಿಕಾರಿಯವರು ಪಾಲಿಸುತ್ತಿಲ್ಲ.

ನಗರ ಪ್ರದೇಶಗಳಲ್ಲಿ ಭೂಪರಿವರ್ತನೆ ಪ್ರಕ್ರಿಯೆಯನ್ನು ಸರಳಗೊಳಿಸಲು ರಾಜ್ಯ ಸರ್ಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964ಕ್ಕೆ ತಿದ್ದುಪಡಿ ತಂದು, ರಾಜ್ಯಪಾಲರ ಸಮ್ಮತಿಯನ್ನೂ ಪಡೆದು 2023ರ ಜುಲೈ 27ರಂದು ಅಧಿಸೂಚನೆ ಹೊರಡಿಸಿದೆ.

**ಮುಖ್ಯಾಂಶಗಳು**

- 2023ರಲ್ಲೇ ಕಾನೂನಿಗೆ ತಿದ್ದುಪಡಿ
- ಯೋಜನಾ ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಲು ಅವಕಾಶ
- ಬಿಡಿಎ, ಬಿಬಿಎಂಪಿಗೆ ಹೆಚ್ಚಿನ ವರಮಾನ

ಕರ್ನಾಟಕ ಭೂ ಕಂದಾಯ ಕಾಯ್ದೆ -1964ರ ಸೆಕ್ಷನ್ 95ಕ್ಕೆ ತಿದ್ದುಪಡಿ ತರಲಾಗಿದ್ದು, ಕೃಷಿ ಅಥವಾ ಇತರೆ ಉದ್ದೇಶಕ್ಕೆ ಬಳಸಲಾಗುತ್ತಿರುವ ಜಮೀನು, ಕರ್ನಾಟಕ ನಗರ ಮತ್ತು ಗ್ರಾಮಾಂತರ (ಕೆಟಿಸಿಪಿ) ಯೋಜನಾ ಕಾಯ್ದೆ 1961ರಂತೆ ‘ಮಾಸ್ಟರ್ ಪ್ಲಾನ್’ನಲ್ಲಿ ವಸತಿ ಅಥವಾ ಇತರೆ ಉದ್ದೇಶಕ್ಕೆಂದು ನಮೂದಾಗಿದ್ದರೆ, ಜಿಲ್ಲಾಧಿಕಾರಿಯವರಿಂದ ಭೂ ಪರಿವರ್ತನೆ ಪ್ರಕ್ರಿಯೆ ಅಗತ್ಯವಿರುವುದಿಲ್ಲ. ಇಂತಹ ಜಮೀನು ಹೊಂದಿರುವವರು ನಗರ ಯೋಜನೆ ಪ್ರಾಧಿಕಾರಕ್ಕೆ ಅಗತ್ಯ ಶುಲ್ಕ ಪಾವತಿಸಬೇಕು ಎಂದು ತಿಳಿಸಲಾಗಿದೆ.

ಸ್ಥಳೀಯ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಿಂದ ಹೊರಗಿದ್ದು, ಮಾಸ್ಟರ್ ಪ್ಲಾನ್‌ನಲ್ಲಿ ಪ್ರಕಟಿಸಲಾಗಿರದ ಜಮೀನು ಅಥವಾ ಕೃಷಿ ಜಮೀನನ್ನು ಪರಿವರ್ತಿಸಲು ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಬೇಕು. ಸಂಬಂಧಿಸಿದ ಯೋಜನಾ ಪ್ರಾಧಿಕಾರದ ಸಮ್ಮತಿ ಪಡೆದು, ಶುಲ್ಕ ಪಾವತಿಸಿಕೊಂಡು ಜಿಲ್ಲಾಧಿಕಾರಿಯವರು ಪರಿವರ್ತನೆ ಮಾಡಬಹುದು. 15 ದಿನದಲ್ಲಿ ಯೋಜನಾ ಪ್ರಾಧಿಕಾರದಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದರೆ, ಅದನ್ನು ಸಮ್ಮತಿ ಎಂದು ಭಾವಿಸಬೇಕು.

ಭೂ ಪರಿವರ್ತನೆಗಾಗಿ ಅರ್ಜಿ ಸಲ್ಲಿಸಿದ 30 ದಿನಗಳೊಳಗೆ ಜಿಲ್ಲಾಧಿಕಾ-ರಿಯವರು ಅನುಮೋದನೆ ನೀಡದಿದ್ದರೆ, ‘ಪರಿವರ್ತನೆಗೆ ಅನುಮೋದನೆ ನೀಡಲಾಗಿದೆ’ ಎಂದು ಭಾವಿಸಲಾಗುತ್ತದೆ. ನಿಗದಿತ ಶುಲ್ಕ ಪಾವತಿಸಿದ ಕೂಡಲೇ ಜಿಲ್ಲಾಧಿಕಾರಿ ಅದಕ್ಕೆ ಅನುಮೋದನೆ ನೀಡಬೇಕು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

### ‘ಅಗತ್ಯವಾದ ನಿಯಮ ರೂಪಿಸಿಲ್ಲ’

‘ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತಂದು, ಅಧಿಸೂಚನೆಯನ್ನೂ ಹೊರಡಿಸಲಾಗಿದೆ. ಆದರೆ, ರಾಜ್ಯದಾದ್ಯಂತ ಜಾರಿಯಾಗಲು ಅಗತ್ಯವಾದ ನಿಯಮಗಳನ್ನು ಇನ್ನೂ ರೂಪಿಸಿಲ್ಲ. ಹೀಗಾಗಿ, ಇಂತಹ ಪರಿವರ್ತನೆಯಾಗದ ಜಮೀನಿಗೆ ಶುಲ್ಕ ಕಟ್ಟಿಸಿಕೊಂಡು ಅಗತ್ಯ ಅನುಮೋದನೆಯನ್ನು ನೀಡಲು ಬಿಬಿಎಂಪಿ ಹಾಗೂ ಬಿಡಿಎಗೆ ಸಾಧ್ಯವಾಗುತ್ತಿಲ್ಲ. ನಿಯಮಗಳನ್ನು ರೂಪಿಸಲು ಕೆಲವು ಜಿಲ್ಲಾಧಿಕಾರಿಗಳೇ ತಡೆಯಾಗಿದ್ದಾರೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಕಂದಾಯ ಇಲಾಖೆಯ ಅಧಿಕಾರಿಗಳು ತಿಳಿಸಿದರು.

‘ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ಒತ್ತಾಸೆಯಿಂದಲೇ ಕಾನೂನಿಗೆ ತಿದ್ದುಪಡಿ ತರಲಾಗಿದೆ. ಜನಪರವಾದ ಈ ಕಾಯ್ದೆಯ ಅನುಷ್ಠಾನಕ್ಕೆ ಕೆಲವು ಅಧಿಕಾರಿಗಳೇ ಅಡ್ಡಿಯಾಗಿದ್ದಾರೆ’ ಎಂದರು.



ಕೃಷ್ಣ ಬೈರೇಗೌಡ

ಈ ಕುರಿತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಪ್ರತಿಕ್ರಿಯೆ ಪಡೆಯಲು ಪತ್ರಿಕೆ ಪ್ರಯತ್ನಿಸಿತು. ಆದರೆ, ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

‘ಕಾಯ್ದೆ ರೂಪಿಸಲಾಗಿದೆ. ಆದರೆ, ಅನುಷ್ಠಾನವಾಗಿಲ್ಲ’ ಎಂದು ಸಚಿವರ ಕಚೇರಿ ಸಿಬ್ಬಂದಿ ಮಾಹಿತಿ ನೀಡಿದರು.

### ‘ಸರ್ಕಾರದಿಂದ ನಾಗರಿಕರಿಗೆ ಮೋಸ’



ಪದ್ಮನಾಭ ರೆಡ್ಡಿ

‘ನಗರ ವ್ಯಾಪ್ತಿಯಲ್ಲಿ ಭೂಪರಿವರ್ತನೆಯನ್ನು ಸರಳೀಕರಣ ಮಾಡಲಾಗುತ್ತದೆ ಮತ್ತು ನಾಗರಿಕರಿಗಾಗುತ್ತಿರುವ ತೊಂದರೆ, ಕಚೇರಿ ಅಲೆದಾಟವನ್ನು ತಪ್ಪಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ ಎಂದು ಸರ್ಕಾರ ಹೇಳಿದೆ. ಆದರೆ, ಅದನ್ನು ಅನುಷ್ಠಾನಕ್ಕೆ ತರದೆ ಮೋಸ ಮಾಡುತ್ತಿದೆ’ ಎಂದು ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಪದ್ಮನಾಭರೆಡ್ಡಿ ದೂರಿದರು.

‘ಜಿಲ್ಲಾಧಿಕಾರಿಯವರು ಅಕ್ರಮವಾಗಿ ಭೂಪರಿವರ್ತನೆ ಮಾಡುತ್ತಿದ್ದು, ಕಂದಾಯ ಸಚಿವರಿಗೆ ಇದರ ಅರಿವಿದ್ದರೂ ಸುಮ್ಮನಿದ್ದಾರೆ. ಕೂಡಲೇ ಕಾನೂನು ಜಾರಿಗೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಬಿಬಿಎಂಪಿ ವ್ಯಾಪ್ತಿಗೆ ಬಂದಿರುವ 110 ಹಳ್ಳಿ ಸೇರಿದಂತೆ ಪುರಸಭೆ, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿದ್ದ ಕೃಷಿ ಜಮೀನಿಗೆ ಭೂ ಪರಿವರ್ತನೆ ಅಗತ್ಯವಿಲ್ಲ. ಆದರೂ ಅವುಗಳಿಗೆ ಬಿ–ಖಾತಾ ನೀಡಿ ಸಮಸ್ಯೆಯುಂಟು ಮಾಡಲಾಗುತ್ತಿದೆ. ಜೊತೆಗೆ, ಬಿಡಿಎ ಹಾಗೂ ಬಿಬಿಎಂಪಿ ಬರಬಹುದಾದ ವರಮಾನಕ್ಕೂ ತಡೆಯಾಗಿದೆ’ ಎಂದು ಹೇಳಿದರು.

## ಸುದ್ದಿ 2 ನಿಮಿಷ

### ವಕ್ಫ್- ತೇಜಸ್ವಿ ಸೂರ್ಯ ವಿರುದ್ಧದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ

ಬೆಂಗಳೂರು: ‘ಜಮೀನಿನ ಪಹಣಿಯಲ್ಲಿ ವಕ್ಫ್ ಎಂದು ತೋರಿಸಿದ ಪರಿಣಾಮ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಹರನಗಿರಿ ರೈತ ಚನ್ನಪ್ಪ ಸಿ.ಬಾಳಿಕಾಯಿ (24) ಅಲಿಯಾಸ್ ರುದ್ರಪ್ಪ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂಬ ಮಾಹಿತಿಯನ್ನು ಸಾಮಾಜಿಕ ಜಾಲತಾಣದಲ್ಲಿ ಬಿತ್ತರಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ಎಲ್.ಎಸ್.ತೇಜಸ್ವಿ ಸೂರ್ಯ ವಿರುದ್ಧ ದಾಖಲಿಸಿದ್ದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಹಾವೇರಿ ಸೆನ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸುವಂ-ತೆ ಕೋರಿ ತೇಜಸ್ವಿ ಸೂರ್ಯ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ತೇಜಸ್ವಿ ಸೂರ್ಯ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಇದು ಸ್ವಯಂ ಪ್ರೇರಿತವಾದ ದುರುದ್ದೇಶ-ಪೂರಿತ ಮತ್ತು ಕಾನೂನು ಬಾಹಿರ ದೂರು.ಪೊಲೀಸರು ಸ್ಪಷ್ಟನೆ ನೀಡಿದ ಬಳಿಕ ಟ್ವೀಟ್ ಡಿಲೀಟ್ ಮಾಡಲಾಗಿದೆ. ಮೇಲ್ನೋಟಕ್ಕೆ ಇದು ಭಾರತೀಯ ನಾಗರಿಕ ಸಂಹಿತೆ-2023ರ (ಬಿಎನ್‌ಎಸ್) ಕಲಂ 353 (2) ಅಡಿ ಅಪರಾಧ ಆಗುವುದಿಲ್ಲ. ಅರ್ಜಿದಾರರು ಸಂಸದರಾಗಿದ್ದು, ಯಾವುದೇ ಸಮುದಾಯಗಳ ಮಧ್ಯೆ ದ್ವೇಷ ಬಿತ್ತುವ ಕೆಲಸ ಮಾಡಿಲ್ಲ. ಆದ್ದರಿಂದ ಎಫ್‌ಐಆರ್ ರದ್ದುಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಎಫ್‌ಐಆರ್‌ಗೆ ಮಧ್ಯಂತರ ತಡೆ ನೀಡಿತು. ಅಂತೆಯೇ, ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಡಿಸೆಂಬರ್ 4ಕ್ಕೆ ಮುಂದೂಡಿತು. ಅರ್ಜಿದಾರರ ಪರ ಅನಿರುದ್ಧ ಎ.ಕುಲಕರ್ಣಿ ವಕಾಲತ್ತು ವಹಿಸಿದ್ದಾರೆ.



### ಎಐ ಫೆಲೋಶಿಪ್‌ಗೆ ಐಐಎಸ್‌ಸಿ ಆಯ್ಕೆ

ಲಂಡನ್ (ಪಿಟಿಐ): ಲಂಡನ್‌ನ ಇಂಪೀರಿಯಲ್ ಕಾಲೇಜಿನ ಕೃತಕ ಬುದ್ಧಿಮತ್ತೆ (ಎಐ) ಮತ್ತು ಜಾಗತಿಕ ವಿಜ್ಞಾನ ಫೆಲೋಶಿಪ್ ಕಾರ್ಯ-ಕ್ರಮಕ್ಕೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ಹೈದರಾಬಾದ್‌ನ ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಕೇಂದ್ರ (ಎನ್‌ಸಿಬಿಎಸ್) ಆಯ್ಕೆಯಾಗಿವೆ.

ಎರಡು ವರ್ಷಗಳ ಫೆಲೋಶಿಪ್ ಕಾರ್ಯಕ್ರಮದಲ್ಲಿ ಸಂಶೋಧಕರು ಒಂದು ವರ್ಷ ಇಂಪೀರಿಯಲ್ ಕಾಲೇಜಿನಲ್ಲಿ ಹಾಗೂ ನಂತರದ ವರ್ಷದಲ್ಲಿ ತಮ್ಮ ಮೂಲ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತ-ದೆ. ಎಐ ಕುರಿತ ಜ್ಞಾನ ಹೆಚ್ಚಿಸುವುದು ಈ ಕಾರ್ಯಕ್ರಮದ ಉದ್ದೇಶ. ಸ್ಮಿಟ್ ಸೈನ್ಸಸ್ ಸಂಸ್ಥೆಯು ಇದಕ್ಕೆ ಹಣಕಾಸು ನೆರವು ನೀಡುತ್ತಿದೆ.



ಅಮೆರಿಕದ ಡಸಾಲ್ಟ್ ಸಿಸ್ಟಮ್ಸ್ ಉಪಾಧ್ಯಕ್ಷ ಸುಚಿತ್ ಜೈನ್ ಮತ್ತು ರಾಮಯ್ಯ ಟೆಕ್ನಾಲಜಿ ಬಿಜಿನೆಸ್ ಇನ್‌ಕ್ಯುಬೇಟರ್ (ಆರ್‌ಟಿಬಿಐ) ಪರವಾಗಿ ರಾಮಯ್ಯ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್. ಜಯರಾಂ ಒಪ್ಪಂದಕ್ಕೆ ಸಹಿ ಹಾಕಿದರು

## ಅಮೆರಿಕದ ಡಸಾಲ್ಟ್ ಸಿಸ್ಟಮ್ಸ್ ಆರ್‌ಟಿಬಿಐ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾವಿನ್ಯ ಮತ್ತು ಉದ್ಯಮಶೀಲ ಪರಿಸರ ವ್ಯವಸ್ಥೆಯ-ಲ್ಲಿ ವೇಗವರ್ಧನೆ ತರಲು ಅಮೆರಿಕದ ಡಸಾಲ್ಟ್ ಸಿಸ್ಟಮ್ಸ್ ಜೊತೆಗೆ ರಾಮಯ್ಯ ಟೆಕ್ನಾಲಜಿ ಬಿಜಿನೆಸ್ ಇನ್‌ಕ್ಯುಬೇಟರ್ (ಆರ್‌ಟಿಬಿಐ) ಒಪ್ಪಂದ ಮಾಡಿಕೊಂಡಿದೆ.

ಅಂತರರಾಷ್ಟ್ರೀಯ ಲೆಕ್ಕಾಚಾರ ಹಾಗೂ ಜಾಗತಿಕ ಮಟ್ಟದಲ್ಲಿ ಪರಸ್ಪರ ಸಹಕಾರ ಹಾಗೂ ಯೋಜನೆಗಳನ್ನು ಕಂಡುಕೊಳ್ಳಲು ಈ ಒಪ್ಪಂದ ಮಾಡಿ-ಕೊಳ್ಳಲಾಗಿದೆ ಎಂದು ಆರ್‌ಟಿಬಿಐ ತಿಳಿಸಿದೆ.

ರಾಮಯ್ಯ ಯುನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ (ಆರ್‌ಯುಎಎಸ್) 2018ರಲ್ಲಿ ಸ್ಟಾರ್ಟ್‌ಅಪ್ ನೀತಿಯ ಅಡಿಯಲ್ಲಿ ಆರ್‌ಟಿಬಿಐ ಅನ್ನು ಸ್ಥಾಪಿಸಲಾಗಿದೆ. ಕರ್ನಾಟಕ ಸರ್ಕಾರದ ಐಟಿ–ಬಿಟಿ ಇಲಾಖೆಯ ಬೆಂಬಲ ಕೂಡ ಸಿಕ್ಕಿತ್ತು. ಇದೀಗ ಬೇರೆ ದೇಶದ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮಟ್ಟಕ್ಕೆ ಬೆಳೆದಿದೆ.

ಡಸಾಲ್ಟ್ ಸಿಸ್ಟಮ್ಸ್ ಅಮೆರಿಕಾಸ್ ಕಾರ್ಪೋರೇಶನ್ ಉಪಾಧ್ಯಕ್ಷ ಸುಚಿತ್ ಜೈನ್ ನೇತೃತ್ವದಲ್ಲಿ ಮೂವರು ಸದಸ್ಯರ ನಿಯೋಗ ಆರ್‌ಟಿಬಿಐಗೆ ಭೇಟಿ ನಿಡಿದ್ದು, ಆರ್‌ಯುಎಎಸ್ ಕುಲಪತಿ ಎಂ.ಆರ್. ಜಯರಾಮ್ ನೇತೃತ್ವದಲ್ಲಿ ಚರ್ಚೆಗಳು ನಡೆದವು. ವಿಜ್ಞಾನ, ಎಂಜಿನಿಯರಿಂಗ್, ತಂತ್ರಜ್ಞಾನ, ಮ್ಯಾನೇಜ್‌ಮೆಂಟ್ ವಿಭಾಗಗಳಲ್ಲಿ ಸಾಮರ್ಥ್ಯ ನಿರ್ಮಾಣ ಮಾಡಲು ಮತ್ತು ಬಾಂಧವ್ಯ ಬೆಸೆಯಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಆರ್‌ಟಿಬಿಐ ಮುಖ್ಯಸ್ಥರು ತಿಳಿಸಿದ್ದಾರೆ.

## ಅರ್ಷ್ ದಲ್ಲಾ ಒಪ್ಪಿಸುವಂತೆ ಭಾರತ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ’ಖಾಲಿಸ್ತಾನ್ ಟೈಗರ್ ಪಡೆ’ಯ ಅಘೋಷಿತ ಮುಖ್ಯಸ್ಥ ಅರ್ಷದೀಪ್ ಸಿಂಗ್ ಗಿಲ್ ಅಲಿಯಾಸ್ ಅರ್ಷ್ ದಲ್ಲಾನನ್ನು ತನಗೆ ಒಪ್ಪಿಸಬೇಕು ಎಂದು ಭಾರತ ಮತ್ತೆ ಮನವಿ ಮಾಡಲಿದೆ.

ಗಿಲ್‌ನನ್ನು ಈಚೆಗೆ ಕೆನಡಾದಲ್ಲಿ ಪೊಲೀಸರು ಬಂಧಿಸಿದ್ದಾರೆ. ಈ ಹಿಂದೆ ಭಾರತ ಸಲ್ಲಿಸಿದ್ದ ಮನವಿ ಕೆನಡಾ ಪ್ರಧಾನಿ ಪರಿಶೀಲನೆಯಲ್ಲಿದೆ. ತನಗೆ ಒಪ್ಪಿಸಲು ಭಾರತ ಕೋರಿರುವ 26 ಆರೋಪಿಗಳಲ್ಲಿ ಈತನೂ ಒಬ್ಬ.

ಅರ್ಷ್ ದಲ್ಲಾ ವಿರುದ್ಧದ ಕ್ರಿಮಿನಲ್ ದಾಖಲೆಗಳು ಹಾಗೂ ಕೆನಡಾದಲ್ಲಿಯೂ ಆತ ಕಾನೂನುಬಾಹಿರ ಚಟುವಟಿಕೆಗ-ಳಲ್ಲಿ ತೊಡಗಿರುವುದನ್ನು ಉಲ್ಲೇಖಿಸಿ ಆತನನ್ನು ಒಪ್ಪಿಸಬೇಕು ಎಂದು ಭಾರತ ಕೋರಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಹೇಳಿದ್ದಾರೆ.

ಅರ್ಷ್ ದಲ್ಲಾ ವಿರುದ್ಧ ಕೊಲೆ, ಕೊಲೆಯತ್ನ, ಸುಲಿಗೆ, ಭಯೋತ್ಪಾದನಾ ಚಟುವಟಿಕೆಗಳು, ಉಗ್ರರಿಗೆ ಹಣಕಾಸು ನೆರವು ಸೇರಿದಂತೆ ಸುಮಾರು 50 ಪ್ರಕರಣಗಳು ಇವೆ. ಭಾರತದ ಕೋರಿಕೆ ಆಧರಿಸಿ ಇಂಟರ್‌ಪೋಲ್ 2022ರ ಮೇ ತಿಂಗಳು ‘ರೆಡ್ ಕಾರ್ನರ್ ನೋಟಿಸ್’ ಕೂಡಾ ಜಾರಿಗೊಳಿಸಿತ್ತು.

### ಪ್ರವಾಸಕ್ಕೆ ಬಂದಿದ್ದ ವಿದೇಶಿಗ: ಹೋಟೆಲ್ ಕೊಠಡಿಯಲ್ಲಿ ಶವ ಪತ್ತೆ

# ಮಾಲ್ದೀವ್ಸ್ ಪ್ರಜೆಯ ಶಂಕಾಸ್ಪದ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಪ್ರವಾಸಕ್ಕೆ ಬಂದಿದ್ದ ಮಾಲ್ದೀವ್ಸ್ ಪ್ರಜೆಯೊಬ್ಬರು ನಗರದ ಹೋಟೆಲ್‌ವೊಂದರ ಕೊಠಡಿಯಲ್ಲಿ ಶಂಕಾಸ್ಪದವಾಗಿ ಮೃತಪಟ್ಟಿದ್ದು, ಈ ಸಂಬಂಧ ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಸನ್ ಸುಹೇಲ್(44) ಮೃತಪಟ್ಟವರು.

‘ಭಾರತದ ವಿವಿಧ ಸ್ಥಳಗಳ ವೀಕ್ಷಣೆಗೆ ಬಂದಿದ್ದ ಹಸನ್ ಸುಹೇಲ್ ಅವರು ನ.10ರಂದು ಆರ್.ಟಿ.ನಗರದ ಕನಕಶ್ರೀ ಹೋಟೆಲ್‌ನಲ್ಲಿ ಕೊಠಡಿ ಪಡೆದುಕೊಂಡಿದ್ದರು. ಅಂದು ಹೊರಗೆ ಹೋಗಿ ಹೋಟೆಲ್‌ಗೆ ವಾಪಸ್ ಬಂದಿದ್ದರು. 11ರಂದು ನಗರದ ವಿವಿಧೆಡೆ ಸುತ್ತಾಟ ನಡೆಸಿದ್ದರು. 12ರಂದು ಕೊಠಡಿ ಖಾಲಿ ಮಾಡಬೇಕಿತ್ತು. ಆದರೆ, ಬೆಳಗ್ಗಿನ ತಿಂಡಿಗೂ ಹೊರಕ್ಕೆ ಬಂದಿರಲಿಲ್ಲ. ಹೋಟೆಲ್ ಸಿಬ್ಬಂದಿ ಮಧ್ಯಾಹ್ನ ಕೊಠಡಿ ಬಳಿಗೆ ತೆರಳಿ ಬಾಗಿಲು ತೆಗೆಯುವಂತೆ ಕೂಗಿದ್ದರು. ಆ ಕಡೆಯಿಂದ ಯಾವುದೇ ಪ್ರಕ್ರಿಯೆ ಬಂದಿರಲಿಲ್ಲ. ನಂತರ, ನಮಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸರು ಹೇಳಿದರು.

‘ಸ್ಥಳಕ್ಕೆ ತೆರಳಿ ಬಾಗಿಲು ಒಡೆದು ಪರಿಶೀಲಿಸಲಾಯಿತು. ಹಸನ್ ಸುಹೇಲ್ ಅವರು ಹಾಸಿಗೆಯಿಂದ ಕೆಳಕ್ಕೆ ಬಿದ್ದಿದ್ದರು. ವಾಂತಿ ಮಾಡಿಕೊಂಡಿದ್ದರು. ಕಡಿಮೆ ರಕ್ತದ ಒತ್ತಡದಿಂದ ಅಸ್ವಸ್ಥರಾಗಿ ಕುಸಿದು ಬಿದ್ದು ಮೃತಪಟ್ಟಿರುವ ಶಂಕೆಯಿದೆ. ಮರಣೋತ್ತರ ಪರೀಕ್ಷೆಯ ಬಳಿಕ ಸಾವಿಗೆ ನಿಖರವಾದ ಕಾರಣ ಗೊತ್ತಾಗಲಿದೆ. ಎಂ.ಎಸ್.ರಾಮಯ್ಯ ಆಸ್ಪತ್ರೆಯ ಶವಾಗಾರದಲ್ಲಿ ಮೃತದೇಹ ಇಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಮಾಲ್ದೀವ್ಸ್ ರಾಯಭಾರಿ ಕಚೇರಿಗೆ ಮಾಹಿತಿ ನೀಡಲಾಗಿದೆ. ಸಂಬಂಧಿಕರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಗುವುದು’ ಎಂದು ಪೊಲೀಸರು ತಿಳಿಸಿದರು.

‘ನವೆಂಬರ್ 13ರಂದು ಭೋಪಾಲ್ ಹಾಗೂ 14ರಂದು ಮುಂಬೈಗೆ ತೆರಳಲು ಹಸನ್ ಸುಹೇಲ್ ಅವರು ವಿಮಾನದ ಟಿಕೆಟ್ ಕಾಯ್ದಿರಿಸಿದ್ದರು. 14ರಂದು ಸಂಜೆಯೇ ತಮ್ಮ ದೇಶಕ್ಕೆ ವಾಪಸ್ ಆಗಲು ಟಿಕೆಟ್ ಪಡೆದಿದ್ದರು’ ಎಂದು ಮೂಲಗಳು ತಿಳಿಸಿವೆ.

### ಲೈಂಗಿಕ ದೌರ್ಜನ್ಯ: ಶಾಲೆಯ ಕಾರ್ಯದರ್ಶಿ ವಶ

ನೆಲಮಂಗಲ: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಬೆಂಗಳೂರು ಉತ್ತರ ತಾಲ್ಲೂಕಿನ ಶಾಲೆಯೊಂದರ ಕಾರ್ಯದರ್ಶಿ ಈರತ್ತಯ್ಯ(50) ಅವರನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಿದ್ಯಾರ್ಥಿನಿಯರನ್ನು ಕರೆದು ಅಸಭ್ಯ ವರ್ತನೆ ತೋರುವುದು, ಬಲವಂತದಿಂದ ಮುತ್ತು ಕೊಡುವುದನ್ನು ಮಾಡುತ್ತಿದ್ದರು ಎಂಬ ಆರೋಪದಡಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಈರತ್ತಯ್ಯ ಅವರ ವಿರುದ್ಧ ಮಾದನಾಯಕನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನೊಂದ ವಿದ್ಯಾರ್ಥಿನಿಯೊಬ್ಬಳು ವಿಷಯವನ್ನು ತಮ್ಮ ಪೋಷಕರ ಬಳಿ ಹೇಳಿಕೊಂಡಿದ್ದರು. ಪೋಷಕರು ಗುರುವಾರ ಪೊಲೀಸರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗೆ ದೂರು ನೀಡಿದ್ದರು.

ಆರಂಭದಲ್ಲಿ ಒಬ್ಬ ವಿದ್ಯಾರ್ಥಿನಿ ಮಾತ್ರ ದೂರು ನೀಡಿದ್ದರು. ನಂತರ ಇನ್ನೂ ಮೂವರು ದೂರು ನೀಡಿದರು. ನಾಲ್ವರ ದೂರು ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರ್ಯದರ್ಶಿಯ ಕೃತ್ಯ ಖಂಡಿಸಿ, ಪೋಷಕರು ಶಾಲೆಯ ಬಳಿ ಗುರುವಾರ ಪ್ರತಿಭಟನೆ ನಡೆಸಿದರು.



ಕನ್ನಡ ಯುವಜನ ಸಂಘದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ‘ಆಡಳಿತದಲ್ಲಿ ಕನ್ನಡ–ಅಧಿಕಾರಿಗಳ ಪಾತ್ರ’ ಕುರಿತು ಉಪನ್ಯಾಸ ನೀಡಿದ ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್. ಜಯರಾಮರಾಜೇ ಅರಸು ಅವರನ್ನು ಸನ್ಮಾನಿಸಲಾಯಿತು. ಕನ್ನಡ ಯುವಜನ ಸಂಘದ ಅಧ್ಯಕ್ಷ ಜಗದೀಶ ರೆಡ್ಡಿ, ಕುವೆಂಪು ವಿಚಾರ ವೇದಿಕೆಯ ಎಂ.ಸಿ. ನರೇಂದ್ರ, ರಂಗಕರ್ಮಿ ಆರ್. ವೆಂಕಟರಾಜು, ಅಶೋಕ್ ರೆಡ್ಡಿ, ಕೆ. ಶ್ರೀಧರ ಮೂರ್ತಿ, ಮಹಾಂತೇಶ ದೇಸಾಯಿ ಉಪಸ್ಥಿತರಿದ್ದರು

# ಕಾರು ನಿಲುಗಡೆ ವಿಚಾರಕ್ಕೆ ಗಲಾಟೆ: ವೃದ್ಧರಿಗೆ ಇರಿತ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮನೆ ಎದುರು ಕಾರು ನಿಲುಗಡೆ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ವೃದ್ಧರೊಬ್ಬರಿಗೆ ಚಾಕುವಿನಿಂದ ಇರಿದಿದ್ದ ಆರೋಪಿಯನ್ನು ಅನ್ನಪೂರ್ಣೇಶ್ವರಿನ-ಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾಗರಬಾವಿ 2ನೇ ಹಂತದ ವಿನಾಯಕ ಬಡಾವಣೆಯ ನಿವಾಸಿ ದಳಪತಿ (70) ಅವರಿಗೆ ಚಾಕುವಿನಿಂದ ಇರಿಯಲಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ದಳಪತಿ ಅವರು ಅಪಾಯದಿಂದ ಪಾರಾಗಿದ್ದಾರೆ.

ಕೃತ್ಯ ಎಸಗಿದ ಆರೋಪದಡಿ ನಾಗರಬಾವಿಯ ನಿವಾಸಿ, ಕ್ಯಾಬ್ ಚಾಲಕ ರಾಘವೇಂದ್ರ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಚಾಕು ಇರಿತಕ್ಕೆ ಒಳಗಾದ ದಳಪತಿ ಹಾಗೂ ಆರೋಪಿ ರಾಘವೇಂದ್ರ ಅಕ್ಕಪಕ್ಕದ ಮನೆಯ ನಿವಾಸಿಗಳು. ದಳಪತಿ ಅವರು ತಮ್ಮ ಕಾರನ್ನು ಬುಧವಾರ ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ಮನೆಯ ಎದುರು ತಂದು ನಿಲ್ಲಿಸಿದ್ದರು. ಅದೇ ಸಮಯಕ್ಕೆ ಕಾರಿನಲ್ಲಿ ಬಂದಿದ್ದ ಆರೋಪಿ, ಕಾರನ್ನು ಬೇರೆಡೆ ನಿಲ್ಲಿಸುವಂತೆ ಸೂಚಿಸಿದ್ದ. ದಳಪತಿ ಮನೆಯಲ್ಲಿ ಇದ್ದವರು ಹೊರಗೆ ಬಂದು, ಕಾರನ್ನು ಏಕೆ ಬೇರೆ ಸ್ಥಳದಲ್ಲಿ ನಿಲ್ಲಿಸಬೇಕೆಂದು ಪ್ರಶ್ನಿಸಿದ್ದರು. ಅಲ್ಲದೇ ನಾವು ಬಹಳ ವರ್ಷಗಳಿಂದ ಈ ಸ್ಥಳದಲ್ಲೇ ಕಾರು ನಿಲುಗಡೆ ಮಾಡುತ್ತಿದ್ದೇವೆ. ಸಾರ್ವಜನಿಕರ ಸ್ಥಳದಲ್ಲಿ ಕಾರು ನಿಲ್ಲಿಸಲಾಗಿದೆ ಎಂಬುದಾಗಿ ಹೇಳಿದ್ದರು. ಆಗ ವಾಗ್ವಾದ ನಡೆದಿತ್ತು’ ಎಂದು ಪೊಲೀಸರು ತಿಳಿಸಿದರು.

‘ದಳಪತಿ ಅವರ ಸೊಸೆ ಹಾಗೂ ಆರೋಪಿ ಮಧ್ಯೆ ವಾಗ್ವಾದ ನಡೆಯುತ್ತಿದ್ದ ಸಮಯದಲ್ಲಿ ದಳಪತಿ ಅವರು ಮನೆಯಿಂದ ಹೊರಕ್ಕೆ ಬಂದಿದ್ದರು. ಅವರೂ ಕ್ಯಾಬ್ ಚಾಲಕನನ್ನು ಪ್ರ-ಶ್ನಿಸಿದ್ದರು. ಇದರಿಂದ ಸಿಟ್ಟಿಗೆದ್ದ ಆರೋಪಿ ಚಾಕುವಿನಿಂದ ಇರಿದು ಪರಾರಿ ಆಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ದಳಪತಿ ಕುಟುಂಬಸ್ಥರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.



ಜ್ಯೋತಿಷ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ‘ಜ್ಯೋತಿಷ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು

### ಗೋಲ್ಡ್ ಟ್ರೀ ಆಸ್ಟ್ರೋ ಸಂಸ್ಥೆಯ ಕಾರ್ಯಕ್ರಮ

## 80 ಮಂದಿಗೆ ಜ್ಯೋತಿಷ ರತ್ನ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ವಿದ್ಯಾರಣ್ಯಪುರ ಬಡಾವಣೆಯಲ್ಲಿ ಗೋಲ್ಡ್ ಟ್ರೀ ಆಸ್ಟ್ರೋ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಪದವಿ ಪ್ರದಾನ ಹಾಗೂ ಸುವರ್ಣ ಸಂಭ್ರಮ ರಾಜ್ಯೋತ್ಸವ ಸಮಾರಂಭದಲ್ಲಿ 80ಕ್ಕೂ ಹೆಚ್ಚುಮಂದಿಗೆ ‘ಜ್ಯೋತಿಷ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗೋಲ್ಡ್ ಟ್ರೀ ಆಸ್ಟ್ರೋ ಇಂಡಿಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪಂಡಿತ್ ದಿನೇಶ್.ಎನ್ ಮಾತನಾಡಿ, ‘ವೈಜ್ಞಾನಿಕ ಜ್ಯೋತಿಷಶಾ-ಸ್ತ್ರ ಪ್ರಸಾರ ಹಾಗೂ ಶ್ರೀಸಾಮಾನ್ಯರಿಗೂ ಜ್ಯೋತಿಷಶಾಸ್ತ್ರ ಪರಿಚಯಿಸುವ ಉದ್ದೇಶದಿಂದ ನಕ್ಷತ್ರನಾಡಿ ಅಭಿಯಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜ್ಯೋತಿಷ ಶಾಸ್ತ್ರದ ಕುರಿತು ಜನರಲ್ಲಿ ಆಳವಾಗಿ ಬೇರೂರಿರುವ ಮೂಢನಂಬಿಕೆ ಗಳನ್ನು ದೂರವಾಗಿಸಿ, ಶುದ್ಧ ವೈಜ್ಞಾನಿಕ ತಳಹದಿಯ ಜ್ಯೋತಿಷ ಶಾಸ್ತ್ರ ಪರಿಚಯಿಸುವ ಸಂಕಲ್ಪ ಹೊಂದಲಾಗಿದೆ’ ಎಂದು ತಿಳಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸ ಲಾಯಿತು. ವಿವಿಧ ಜಾನಪದ ಕಲಾತಂಡಗಳ ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ಗಮನ ಸೆಳೆದವು. ಚಲನಚಿತ್ರ ಕಲಾವಿದೆ ನಾಗಿಣಿ ಭರಣ, ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಸದಸ್ಯ ಜಗದೀಶ ಹಿರೇಮನಿ ಉಪಸ್ಥಿತರಿದ್ದರು.

## ಹೂತ ಶವ ಹೊರತೆಗೆದು ಪರೀಕ್ಷೆ

ನವಲಗುಂದ (ಧಾರವಾಡ ಜಿಲ್ಲೆ): ಮೂರು ವರ್ಷದ ಮಗನ ಸಾವಿನ ಕುರಿತು ತಾಯಿ ಸಂಶಯ ವ್ಯಕ್ತಪಡಿಸಿ ದೂರು ನೀಡಿದ್ದರಿಂದ ಗುರುವಾರ ನವಲಗುಂದ ತಾಲ್ಲೂಕಿನ ಯಮನೂರಿನಲ್ಲಿ ಶವವನ್ನು ಹೊರತೆಗೆದು ಮರಣೋತ್ತರ ನಡೆಸಲಾಯಿತು.

ಯಮನೂರಿನ ವೆಂಕಪ್ಪ ಮತ್ತು ಶಾಂತಾ ದಂಪತಿ ಪುತ್ರ ಯಲ್ಲಪ್ಪ (3) ನವೆಂಬರ್ 8ರಂದು ಮೃತಪಟ್ಟಿದ್ದ. ‘ಹಿತ್ತಲ ಬಳಿ ಆಡುವಾಗ ಕಬ್ಬಿಣದ ಬಂಡ್‌ಫರ್ಮ್ ಬಿದ್ದು ಯಲ್ಲಪ್ಪ ಮೃತಪಟ್ಟಿದ್ದಾಗಿ ಪಕ್ಕದ ಪಕ್ಕದ ಮನೆಯ ನಾಗಲಿಂಗ ಜೋಗಿ ತಿಳಿಸಿದ್ದರು. ಯಲ್ಲಪ್ಪನ ಅಂತ್ಯಕ್ರಿಯೆ ಬಳಿಕ ನಾಗಲಿಂಗ ನಾಪತ್ತೆ ಆಗಿದ್ದಾರೆ. ಹೀಗಾಗಿ, ಮಗನ ಸಾವಿನ ಬಗ್ಗೆ ಸಂಶಯ ಇದ್ದು, ತನಿಖೆ ಮಾಡಬೇಕು’ ಎಂದು ಶಾಂತಾ ದೂರು ನೀಡಿದ್ದರು.

### ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ದರ ಪಾವತಿಸುವ ವ್ಯವಸ್ಥೆ


# ಕೆಎಸ್‌ಆರ್‌ಟಿಸಿ ಬಸ್: ಸ್ಮಾರ್ಟ್ ಇಟಿಎಂ ಶುರು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಯುಪಿಐ ಆಧಾರಿತ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿ ಟಿಕೆಟ್ ದರ ಪಾವತಿಸುವ ತಂತ್ರಜ್ಞಾನವಿರುವ ಸ್ಮಾರ್ಟ್ ಇಟಿಎಂ ಆರಂಭವಾಗಿದೆ. ಎಟಿಎಂ ಕಾರ್ಡ್ ಸ್ವೈಪ್ ಮಾಡಿ ಪಾವತಿಸುವ ವ್ಯವಸ್ಥೆ ಇನ್ನೊಂದು ತಿಂಗಳಲ್ಲಿ ಅನುಷ್ಠಾ-ನಗೊಳ್ಳಲಿದೆ.

ಬಸ್‌ಗಳಲ್ಲಿ ಬಣ್ಣಬಣ್ಣದ ಟಿಕೆಟ್‌ಗಳನ್ನು ಇಟ್ಟುಕೊಂಡು ಪ್ರಯಾಣದ ದೂರಕ್ಕೆ ಅನುಗುಣವಾಗಿ ಟಿಕೆಟ್ ಹರಿದು ಕೊಡುವ ಪದ್ಧತಿ ಇತ್ತು. 20 ವರ್ಷಗಳ ಹಿಂದೆ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್‌ಗಳನ್ನು (ಇಟಿಎಂ) ಪರಿಚಯಿಸುವ ಮೂಲಕ ಹಳೆ ಪದ್ಧತಿಯನ್ನು ಕೊನೆಗೊಳಿಸಿತ್ತು. ಈಗ ಹಳೆ ಮಷೀನ್‌ಗಳ ಬದಲಾಗಿ ಆಧುನಿಕ ತಂತ್ರಜ್ಞಾನ ಇರುವ ಮಷೀನ್‌ಗಳು ನಿರ್ವಾಹಕರ ಕೈಗೆ ಬಂದಿವೆ.

ಆ್ಯಂಡ್ರಾಯ್ಡ್ ತಂತ್ರಾಂಶ ಆಧಾರಿತ ಟಚ್ ಸ್ಕ್ರೀನ್, ವೈರ್‌ಲೆಸ್ ಸಂವಹನ ಮತ್ತು ವೇಗದ ಪ್ರಕ್ರಿಯೆ ವ್ಯವಸ್ಥೆಗಳನ್ನು ಈ ಸ್ಮಾರ್ಟ್ ಇಟಿಎಂ ಹೊಂದಿದೆ. ಸುಲಭವಾಗಿ ಟಿಕೆಟ್ ನೀಡುವುದಕ್ಕೆ ಅನುಕೂಲವಾಗುವಂತೆ ಯಂತ್ರವನ್ನು ವಿನ್ಯಾಸಗೊಳಿಸಲಾಗಿದೆ.



ಕೆಎಸ್‌ಆರ್‌ಟಿಸಿಯ ಸ್ಮಾರ್ಟ್ ಇಟಿಎಂ

ಡೈನಮಿಕ್ ಕ್ಯೂಆರ್ ಕೋಡ್ ಆಧಾರಿತ ಪಾವತಿ ವ್ಯವಸ್ಥೆಯ ಪ್ರಾಯೋಗಿಕ ಬಳಕೆಯನ್ನು ನವೆಂಬರ್‌ನಲ್ಲಿ ಕೆಎಸ್‌ಆರ್‌ಟಿಸಿ ಡಿಪೊದಲ್ಲಿ ಮಾಡಲಾಗಿದೆ. ಪ್ರಾಯೋಗಿಕ ಬಳಕೆ ಯಶಸ್ವಿಯಾಗಿರುವುದರಿಂದ ಈಗ ಇಟಿಎಂಗಳನ್ನು ನಿರ್ವಾಹಕರಿಗೆ ನೀಡಲಾಗಿದೆ. ಈ ತಿಂಗಳ ಅಂತ್ಯದ ಒಳಗೆ ಎಲ್ಲ ಬಸ್‌ಗಳಲ್ಲಿ ಯುಪಿಐ ಆಧಾರಿತ ಟಿಕೆಟ್ ನೀಡಲಾಗುತ್ತದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

**ಹೇಗೆ ನಿರ್ವಹಿಸುತ್ತದೆ?:** ಮೊದಲು ಬಸ್ ಎಲ್ಲಿದೆ ಎಂದು ಬೋರ್ಡಿಂಗ್ ಪಾಯಿಂಟ್ ತೋರಿಸುತ್ತದೆ. ಆನಂತರ ಪ್ರಯಾಣಿಕರು ಇಳಿಯುವ ನಿಲ್ದಾಣವನ್ನು ಆಯ್ಕೆ ಮಾಡಲಾಗುತ್ತದೆ. ಎಷ್ಟು ಪ್ರಯಾಣಿಕರು ಎಂಬುದನ್ನು ನಮೂದು ಮಾಡಲಾಗುತ್ತದೆ. ಆನಂತರ ಪ್ರಿಂಟ್ ಆಪ್ಶನ್ ಬರುತ್ತದೆ. ಅಲ್ಲಿ ಕ್ಯಾಶ್ ಮತ್ತು ಯುಪಿಐ ಎಂಬ ಎರಡು ಆಯ್ಕೆಗಳು ಬರುತ್ತವೆ. ನಗದು ಪಾವತಿ ಮಾಡುವುದಿದ್ದರೆ ‘ಕ್ಯಾಶ್’ ಆಯ್ಕೆ ಮಾಡಿದರೆ ಟಿಕೆಟ್ ಪ್ರಿಂಟ್ ಬರುತ್ತದೆ.

ಯುಪಿಐ ಕ್ಲಿಕ್ ಮಾಡಿದರೆ ಡೈನಮಿಕ್ ಕ್ಯೂಆರ್ ಕೋಡ್ ಬರುತ್ತದೆ. ಅದನ್ನು ಪ್ರಯಾಣಿಕರು ಸ್ಕ್ಯಾನ್ ಮಾಡಿದಾಗ ಅವರ ಯುಪಿಐ ಆ್ಯಪ್‌ನಲ್ಲಿ ಪ್ರಯಾಣ ದರ ಬರುತ್ತದೆ. ಅವರು ಪಿನ್ ನಮೂದಿಸಿ, ಪಾವತಿಗೆ ಸಮ್ಮತಿ ಒತ್ತಿದಾಗ ಹಣ ಪಾವತಿ ಯಶಸ್ವಿಯಾದ ಸಂಕೇತ ಬರುತ್ತದೆ. ಆನಂತರ ಪ್ರಿಂಟ್ ಬರುತ್ತದೆ. ನೆಟ್‌ವರ್ಕ್ ಸಮಸ್ಯೆ ಅಥವಾ ಬೇರೆ ಕಾರಣದಿಂದ ಹಣ ಪಾವತಿಯಾಗದೇ ಇದ್ದರೆ ಪ್ರಿಂಟ್ ಬರುವುದಿಲ್ಲ. ಟಿಕೆಟ್‌ನಲ್ಲಿ ವಹಿವಾಟಿನ ವಿವರವೂ ನಮೂದಾಗಿರುತ್ತದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಈಗ ನೆಮ್ಮದಿ:** ‘ಹೊಸ ಇಟಿಎಂ ಹಗುರವಾಗಿದೆ. ಅಲ್ಲದೇ ಚಿಲ್ಲರೆ ಸಮಸ್ಯೆ ತಪ್ಪಿರುವುದರಿಂದ ಪ್ರಯಾಣಿಕರಿಗೂ, ನಮಗೂ ಅನುಕೂಲವಾಗಿದೆ. ಸಂಗ್ರಹವಾದ ನಗದು ಇರುವಾಗ ಒತ್ತಡದಿಂದ ಸರಿಯಾಗಿ ನಿದ್ದೆಯೂ ಬರುವುದಿಲ್ಲ. ಯುಪಿಐ ವವಸ್ಥೆ ಬಂದಿರುವುದರಿಂದ ನೆಮ್ಮದಿಯಾಗಿ ನಿದ್ದೆ ಮಾಡಬಹುದು’ ಎಂದು ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ ಚಂದ್ರಶೇಖರ್ ಪ್ರತಿಕ್ರಿಯಿಸಿದರು.

**ಅಂಕಿ ಅಂಶ**

**10,245** ಹೊಸ ಸ್ಮಾರ್ಟ್ ಇಟಿಎಂಗಳ ಸಂಖ್ಯೆ

**8,800** ಒಟ್ಟು ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಖ್ಯೆ

**5%** ಹೆಚ್ಚುವರಿಯಾಗಿ ಕಾಯ್ದಿರಿಸಿಕೊಂಡಿರುವ ಸ್ಮಾರ್ಟ್ ಇಟಿಎಂಗಳ ಪ್ರಮಾಣ

### ಎಲ್ಲರಿಗೂ ತರಬೇತಿ: ಅನ್ಬುಕುಮಾರ್

ಈಗ ಹೆಚ್ಚಿನವರು ಫೋನ್‌ಪೇ, ಗೂಗಲ್‌ಪೇ ಸಹಿತ ಯುಪಿಐ ಆಧಾರಿತ ತಂತ್ರಜ್ಞಾನವನ್ನೇ ಬಳಸುತ್ತಾರೆ. ಅದಕ್ಕೆ ಸರಿಯಾಗಿ ಕೆಎಸ್‌ಆರ್‌ಟಿಸಿ ಕೂಡ ಆಧುನಿಕತೆಗೆ ಹೊಂದಿಕೊಳ್ಳುತ್ತಿದೆ. ಕೇಂದ್ರ ಸರ್ಕಾರ ಪರಿಚಯಿಸಲಿರುವ ಒಂದು ದೇಶ ಒಂದು ಕಾರ್ಡ್‌ಗೂ ಹೊಸ ಸ್ಮಾರ್ಟ್ ಇಟಿಎಂ ಹೊಂದಿಕೊಳ್ಳಲಿದೆ’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹೊಸ ಸ್ಮಾರ್ಟ್ ಇಟಿಎಂಗಳನ್ನು ಒಂದು ತಿಂಗಳ ಹಿಂದೆಯೇ ಎಲ್ಲ ಬಸ್ ನಿರ್ವಾಹಕರಿಗೆ ನೀಡಲಾಗಿದೆ. ಹೊಸ ಮಷೀನ್‌ನಲ್ಲಿ ನಗದು ಪಡೆದು ಟಿಕೆಟ್ ನೀಡುವುದನ್ನು ಈಗ ಎಲ್ಲರೂ ಕಲಿತಿದ್ದಾರೆ. ಆನಂತರ ಯುಪಿಐ ಮೂಲಕ ಹಣ ಪಾವತಿಸಿಕೊಂಡು ಟಿಕೆಟ್ ನೀಡುವ ಬಗ್ಗೆ ತರಬೇತಿ ನೀಡಲಾಗಿದೆ’ ಎಂದು ಮಾಹಿತಿ ನೀಡಿದರು. ‘ಎಟಿಎಂ ಕಾರ್ಡ್ ಸ್ವೈಪ್ ಮಾಡುವ ತಂತ್ರಜ್ಞಾನವನ್ನು ಕೂಡ ಇದರಲ್ಲಿಯೇ ಅಳವಡಿಸಲಾಗುತ್ತಿದ್ದು, ಈ ಬಗ್ಗೆ ಬ್ಯಾಂಕ್‌ಗಳ ಜೊತೆಗೆ ಮಾತುಕತೆ ನಡೆಸಲಾಗುತ್ತಿದೆ. ಬ್ಯಾಂಕ್ ಒಪ್ಪಿಗೆ ಸಿಕ್ಕಿದ ಕೂಡಲೇ ಈ ಬಗ್ಗೆಯೂ ಚಾಲಕ/ನಿರ್ವಾಹಕರಿಗೆ ತರಬೇತಿ ನೀಡಲಾಗುವುದು. ಇನ್ನೊಂದು ತಿಂಗಳಲ್ಲಿ ಈ ವ್ಯವಸ್ಥೆಯೂ ಜಾರಿಗೆ ಬರಲಿದೆ’ ಎಂದರು.

### ಬೆಂಗಳೂರು ರೇಸ್

## ಆಫ್ರಿಕನ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ ಟರ್ಫ್ ಕ್ಲಬ್ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಫ್ರಿಕನ್ ಗೋಲ್ಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರಾಕ್ ಬ್ಯಾಂಕ್ 6, ಫೈನಲ್ ಕಾಲ್ 9, ಯಾನ್ನಿಕ್ 8
2ನೇ ರೇಸ್: ಬೋರ್ಬನ್ ಬೇ 1, ಎಮಿರಾಲ್ಡೊ 6, ಸೇಕ್ರೆಡ್ ಕ್ರಿಯೇಟರ್ 8
3ನೇ ರೇಸ್: ಕೌಂಟ್ ಬೇಸಿ 5, ಟೊರೊಬ್ರಾವೊ 6, ಇಂಪೀರಿಯಲ್ ಸ್ಟಾರ್ 7
4ನೇ ರೇಸ್: ರಿಯಲ್ ಹ್ಯಾಪಿನೆಸ್ 3, ಎಂಫಾಟಿಕ್ 5, ಡೊಮಿನ 9
5ನೇ ರೇಸ್: ಆಸ್ಪೀಸಿಯಸ್ ಕ್ವೀನ್ 2, ವಿಕ್ಟೋರಿಯಾ ದೊರೆಸಾನಿ 7, ಸಸ್ಸಿ 4
6ನೇ ರೇಸ್: ಆಫ್ರಿಕನ್ ಗೋಲ್ಡ್ 4, ಗಲಹಡ್ 5
7ನೇ ರೇಸ್: ಕ್ಯಾಟ್ ವಿಸ್ಕರ್ಸ್ 4, ದಿ ಗ್ರೇ ಗೆರೆನಿಯಮ್ 1, ಪೆರಿಡಾಟ್ 3
8ನೇ ರೇಸ್: ಮೇನ್ ಮ್ಯಾಜಿಕ್ 3, ದಿ ಗ್ಯಾಲರಿ ಟೈಮ್ 5, ಪ್ರೈಸ್‌ಲೆಸ್ ಪ್ರಿನ್ಸ್ 1

**ಉತ್ತಮ ಬೆಟ್: ಬೋರ್ಬನ್ ಬೇ**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 4,5,6,7,8 | 3,4,5 | 6,7,8 |

# ‘ಧರ್ಮಕ್ಕಿಂತ ಪ್ರೀತಿ ಮುಖ್ಯ’

## ಧರ್ಮಸ್ಥಳದಲ್ಲಿ ಆಸನ ಸೌಲಭ್ಯವುಳ್ಳ ವಿಸ್ತೃತ ಭೋಜನಾಲಯ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಉಜಿರೆ (ದಕ್ಷಿಣ ಕನ್ನಡ):** ‘ಭಕ್ತಿ ಮತ್ತು ಧರ್ಮಕ್ಕಿಂತಲೂ ಪರಸ್ಪರ ಪ್ರೀತಿ ಮತ್ತು ವಿಶ್ವಾಸವೇ ಮುಖ್ಯ. ಪ್ರಯತ್ನ, ಪ್ರಾರ್ಥನೆ ಮತ್ತು ಪ್ರಾಮಾಣಿಕತೆಯಿಂದ ದೇಶದ ಸರ್ವತೋಮುಖ ಪ್ರಗತಿ ಸಾಧ್ಯ’ ಎಂದು ಕಂಚಿ ಕಾಮಕೋಟಿ ಪೀಠಾಧಿಪತಿ ಶಂಕರ ವಿಜಯೇಂದ್ರ ಸರಸ್ವತಿ ಶಂಕರಾಚಾರ್ಯ ಸ್ವಾಮೀಜಿ ಹೇಳಿದರು.

ಧರ್ಮಸ್ಥಳದಲ್ಲಿ ಗುರುವಾರ ಅನ್ನಪೂರ್ಣ ಭೋಜನಾಲಯದ ಮೇಲಂತಸ್ತಿನಲ್ಲಿ, ಆಸನ ಸೌಲಭ್ಯವುಳ್ಳ ವಿಸ್ತೃತ ಭೋಜನಾಲಯ ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳದ ಅನ್ನದಾನ ಮತ್ತು ನ್ಯಾಯದಾನ ಪದ್ಧತಿಯನ್ನು ಶ್ಲಾಘಿಸಿದ ಶ್ರೀಗಳು, ಕೇರಳದಲ್ಲಿ ಅಭಿಮಾನ, ತಮಿಳುನಾಡಿನಲ್ಲಿ ಅಧ್ಯಯನ, ಆಂಧ್ರದಲ್ಲಿ ಆಚಾರ ಮತ್ತು ಕರ್ನಾಟಕದಲ್ಲಿ ಅನ್ನದಾನ ಶ್ರೇಷ್ಠವಾಗಿದೆ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರಿಗೆ ‘ಮಲೆನಾಡು ರತ್ನ’ ಬಿರುದು ನೀಡಿ ಸ್ವಾಮೀಜಿ ಗೌರವಿಸಿದರು.

ಕಾಸರಗೋಡು ಎಡನೀರು ಮಠದ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ. ಹರೀಶ್ ಕುಮಾರ್, ಡಿ. ಸುರೇಂದ್ರ ಕುಮಾರ್ ಇದ್ದರು. ಡಿ. ಹರ್ಷೇಂದ್ರ ಕುಮಾರ್ ಸ್ವಾಗತಿಸಿದರು. ಅನ್ನಪೂರ್ಣ ಭೋಜನಾಲಯದ ವ್ಯವಸ್ಥಾಪಕ ಸುಬ್ರಹ್ಮಣ್ಯ ಪ್ರಸಾದ್ ವಂದಿಸಿದರು. ಶ್ರೀಧರ ಭಟ್ ಮತ್ತು ಸುನಿಲ್ ಪಂಡಿತ್ ನಿರೂಪಿಸಿದರು.



ಧರ್ಮಸ್ಥಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂಚಿ ಕಾಮಕೋಟಿ ಪೀಠಾಧಿಪತಿ ಶಂಕರ ವಿಜಯೇಂದ್ರ ಸರಸ್ವತಿ ಶಂಕರಾಚಾರ್ಯ ಸ್ವಾಮೀಜಿ ಅವರು ಅನ್ನಪೂರ್ಣ ಭೋಜನಾಲಯದ ಮೇಲಂತಸ್ತಿನಲ್ಲಿ, ಆಸನ ಸೌಲಭ್ಯವುಳ್ಳ ವಿಸ್ತೃತ ಭೋಜನಾಲಯ ಉದ್ಘಾಟಿಸಿದರು

# ಪೆಟ್ರೋಲ್ ಬಾಂಬ್ ಸ್ಫೋಟ ವಿದ್ಯಾರ್ಥಿಗಳಿಗೆ ದಂಡ

ಪ್ರಜಾವಾಣಿ ವಾರ್ತೆ

**ಹಾಸನ:** ಹೊರವಲಯದ ರಾಜೀವ್ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳಾದ ಹಾಸನದ ಲೋಕಕಿರಣ್, ಕೆ.ಆರ್. ಪೇಟೆಯ ಆದರ್ಶ ಎಂ ಮತ್ತು ಕುಣಿಗಲ್‌ನ ಜಿತೇಂದ್ರ ಅವರು ರೀಲ್ಸ್ ಮಾಡುವ ನೆಪದಲ್ಲಿ ಪೆಟ್ರೋಲ್ ಬಾಂಬ್ ಸ್ಫೋಟಿಸಿ ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಗುರುವಾರ ವಿಡಿಯೊ ಹರಿದಾಡಿತ್ತು.

ನವೆಂಬರ್ 12ರಂದು ರಾತ್ರಿ ಕಾಲೇಜು ಮುಂಭಾಗದ ರಸ್ತೆಯಲ್ಲಿ ಪ್ಲಾಸ್ಟಿಕ್ ಕವರ್‌ಗೆ ಪೆಟ್ರೋಲ್ ತುಂಬಿ, ದಾರದಿಂದ ಕಟ್ಟಿ, ಅದರ ಮೇಲೆ ಆಟಂಬಾಂಬ್ ಇಟ್ಟು ಸ್ಫೋಟಿಸಿ ವಿಡಿಯೊ ಮಾಡಿದ್ದರು.

ಘಟನೆ ನಡೆದ ಸ್ಥಳದ ಸಮೀಪದಲ್ಲೇ ಪೆಟ್ರೋಲ್ ಟ್ಯಾಂಕರ್ ನಿಂತಿತ್ತು. ಎಚ್‌ಪಿ ಸಂಸ್ಥೆಯ ಸಮೀಪವೇ ಬಾಂಬ್ ಸ್ಫೋಟಿಸಿದ್ದು, ಅನಾಹುತ ತಪ್ಪಿದೆ.

‘ವಿದ್ಯಾರ್ಥಿಗಳ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದು, ದಂಡ ವಿಧಿಸಲಾಗಿದೆ’ ಎಂದು ಎಸ್‌ಪಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ.



ಹಾಸನದ ಹೊರವಲಯದಲ್ಲಿ ರೀಲ್ಸ್ ನೆಪದಲ್ಲಿ ಕಾಲೇಜು ವಿದ್ಯಾರ್ಥಿಗಳು ಪೆಟ್ರೋಲ್ ಬಾಂಬ್ ಸ್ಫೋಟಿಸಿದರು. ಹಿಂದೆ ಪೆಟ್ರೋಲ್ ಟ್ಯಾಂಕರ್ ಇತ್ತು.

# 24ಕ್ಕೆ ಕೆ–ಸೆಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪದವಿ ಕಾಲೇಜು ಉಪನ್ಯಾಸಕರ ಅರ್ಹತಾ ಪರೀಕ್ಷೆ (ಕೆ-ಸೆಟ್) ನ.24ರಂದು 12 ಜಿಲ್ಲೆಗಳಲ್ಲಿ ನಡೆಯಲಿದೆ. ರಾಯಚೂರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯೂ ಸಹ ಅಂದೇ ಬೆಂಗಳೂರಿನಲ್ಲಿ ನಡೆಯಲಿದೆ. ಈ ಎರಡೂ ಪರೀಕ್ಷೆಗಳ ಪ್ರವೇಶ ಪತ್ರವನ್ನು ಬಿಡುಗಡೆ ಮಾಡಲಾಗಿದೆ. ಕೆ-ಸೆಟ್ ಪರೀಕ್ಷೆಯನ್ನು 1.05 ಲಕ್ಷ ಅಭ್ಯರ್ಥಿಗಳು, ರಾಯಚೂರು ವಿವಿ ಸಹಾಯಕ ಉಪನ್ಯಾಸಕರ ನೇಮಕಾತಿ ಪರೀಕ್ಷೆಯನ್ನು 2 ಸಾವಿರ ಅಭ್ಯರ್ಥಿಗಳು ತೆಗೆದುಕೊಂಡಿದ್ದಾರೆ ಎಂದು ವಿವರಿಸಿದರು.

**ಜಿಟಿಟಿಸಿ ಪರೀಕ್ಷೆ:** ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ (ಜಿಟಿಟಿಸಿ) ವಿವಿಧ ಹುದ್ದೆಗಳಿಗೆ ಡಿ. 9, 10, 11 ಮತ್ತು 14ಕ್ಕೆ ಪರೀಕ್ಷೆ ನಡೆಯಲಿದೆ.

# ‘ಚುಟುಕು ಭೂಷಣ’ ಗೌರವ ಪ್ರಶಸ್ತಿಗೆ ಆಯ್ಕೆ

**ಹುಬ್ಬಳ್ಳಿ:** ‘ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು ನೀಡುವ ‘ಚುಟುಕು ಭೂಷಣ’ ಗೌರವ ಪ್ರಶಸ್ತಿ–2024ಕ್ಕೆ ಚುಟುಕು ಸಾಹಿತ್ಯದಲ್ಲಿ ಸಾಧನೆ ಮಾಡಿದ ನಾಡಿನ ನಾಲ್ವರು ಶ್ರೀಗಳು ಸೇರಿ ಆರು ಜನರನ್ನು ಆಯ್ಕೆ ಮಾಡಲಾಗಿದೆ’ ಎಂದು ಪರಿಷತ್‌ನ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರ ಶಂಕರಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಭಾರತೀ ಸ್ವಾಮೀಜಿ, ಗದಗ ಜಿಲ್ಲೆಯ ಮುಂಡರಗಿ ಅನ್ನದಾನೀಶ್ವರ ಮಠದ ಅನ್ನದಾನೀಶ್ವರ ಶಿವಯೋಗಿ ಸ್ವಾಮೀಜಿ, ಬಸವಕಲ್ಯಾಣದ ರಂಭಾಪುರಿ ಶಾಖಾಮಠದ ಅಭಿನವ ಘನಲಿಂಗ ರುದ್ರಮುನಿ ಸ್ವಾಮೀಜಿ, ಕಲಬುರಗಿ ಜಿಲ್ಲೆಯ ನಾಲವಾರ ಕೋರಿಸಿದ್ದೇಶ್ವರ ಸಂಸ್ಥಾನಮಠದ ಸಿದ್ಧತೋಟೇಂದ್ರ ಶಿವಾಚಾರ್ಯ ಸ್ವಾಮೀಜಿ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ ನಿವೃತ್ತ ಪ್ರಾಧ್ಯಾಪಕ ಪ್ರೊ.ಜಿ.ಯು.ನಾಯಕ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಶಾಲಾ ಶಿಕ್ಷಕಿ ಶಾಂತಾ ಪುತ್ತೂರು ಅವರನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಪ್ರಶಸ್ತಿ ಪ್ರದಾನ ಡಿಸೆಂಬರ್‌ನಲ್ಲಿ ನಡೆಯಲಿದೆ.

# ಪಶ್ಚಿಮಘಟ್ಟ ಸೆಸ್: ದಿನಕ್ಕೆ10 ಪೈಸೆ

**ಬೆಂಗಳೂರು:** ಪಶ್ಚಿಮಘಟ್ಟ ಸಂರಕ್ಷಣೆ ಮತ್ತು ಜೀವಜಲದ ಬಗ್ಗೆ ಅರಿವು ಮೂಡಿಸಲು ನೀರಿನ ಶುಲ್ಕದಲ್ಲಿ ತಿಂಗಳಿಗೆ ₹2 ಅಥವಾ ₹3 ಹಸಿರು ಸೆಸ್ ಹಾಕಿದರೆ ದಿನಕ್ಕೆ ಸರಾಸರಿ 10 ಪೈಸೆಯೂ ಹೊರೆಯಾಗದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಸೆಸ್ ಕುರಿತು ಜನಾಭಿಪ್ರಾಯ ಪಡೆಯಲಾಗುವುದು, ನಂತರ ಸಿ.ಎಂ, ಹಾಗೂ ಡಿ.ಸಿ.ಎಂ ಜತೆ ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುವುದು. ಜನರು ಆಕ್ಷೇಪ ವ್ಯಕ್ತಪಡಿಸಿದರೆ ಪ್ರಸ್ತಾವ ಕೈಬಿಡಲಾಗುವುದು ಎಂದು ಸ್ಪಷ್ಟಪಡಿಸಿದರು.

# ಪಿಎಸ್‌ಐ ನೇಮಕ ಪರೀಕ್ಷೆ: ಅಂತಿಮ ಫಲಿತಾಂಶ ಪ್ರಕಟ

**ಬೆಂಗಳೂರು:** ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ಪಿಎಸ್‌ಐ) 402 ಹುದ್ದೆಗಳ ನೇಮಕಾತಿ ಪರೀಕ್ಷೆಯ ಅಂತಿಮ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಗುರುವಾರ ಪ್ರಕಟಿಸಿದೆ.

ಅ.3ರಂದು ನಡೆದಿದ್ದ ಲಿಖಿತ ಪರೀಕ್ಷೆಯಲ್ಲಿ (ಪತ್ರಿಕೆ -1 ಮತ್ತು 2) ಅಭ್ಯರ್ಥಿಗಳು ಅಂತಿಮವಾಗಿ ಪಡೆದ ಅಂಕಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಸದರಿ ಪಟ್ಟಿಯನ್ನು ನೇಮಕಾತಿ ವಿಭಾಗದ ಪೊಲೀಸ್ ಮಹಾನಿರ್ದೇಶಕರಿಗೆ ಹಸ್ತಾಂತರಿಸಲಾಗುವುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ. ತಾತ್ಕಾಲಿಕ ಅಂಕಪಟ್ಟಿಗೆ ಬಂದ ಎಲ್ಲ ಆಕ್ಷೇಪಣೆಗಳನ್ನೂ ಕೂಲಂಕಶವಾಗಿ ಪರಿಶೀಲಿಸಿದ್ದು, ಈಗಾಗಲೇ ಅಭ್ಯರ್ಥಿಗಳು ಪಡೆದಿರುವ ಅಂಕಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ. ಪತ್ರಿಕೆ-1ರ ಉತ್ತರ ಪತ್ರಿಕೆಗಳನ್ನು ಎರಡು ಬಾರಿ ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ. ಎಂಟು ಅಂಕ ಹಾಗೂ ಅದಕ್ಕಿಂತ ಹೆಚ್ಚು ವ್ಯತ್ಯಾಸ ಕಂಡುಬಂದ ಉತ್ತರ ಪತ್ರಿಕೆಗಳನ್ನು ಮೂರನೇ ಮೌಲ್ಯಮಾಪನ ಮಾಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in





**ಸುಭಾಷಿತ**

ಮಕ್ಕಳು ಉದ್ಯಾನದಲ್ಲಿನ ಮೊಗ್ಗುಗಳಂತೆ. ಅವರನ್ನು ಮುತುವರ್ಜಿಯಿಂದ, ಪ್ರೀತಿಯಿಂದ ಪೋಷಿಸಬೇಕು. ಅವರು ದೇಶದ ಭವಿಷ್ಯ, ನಾಳಿನ ಪ್ರಜೆಗಳು.

–ಜವಾಹರಲಾಲ್ ನೆಹರೂ

# ‘ಬುಲ್ಡೋಜರ್ ನ್ಯಾಯ’ಕ್ಕೆ ಲಗಾಮು ಕೋರ್ಟ್ ತೀರ್ಪಿನ ಪಾಲನೆ ಮುಖ್ಯ

**ದೇಶದ** ಕೆಲವು ರಾಜ್ಯಗಳಲ್ಲಿ ವ್ಯಾಪಕವಾಗಿ ಬಳಕೆಗೆ ಬಂದಿದ್ದ ‘ಬುಲ್ಡೋಜರ್ ನ್ಯಾಯ’ದ ವಿಚಾರವಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಹಾಗೂ ಅದು ರೂಪಿಸಿರುವ ನಿಯಮಗಳು ಸಂವಿಧಾನದ ಅತ್ಯುತ್ತಮ ಆಶಯಗಳನ್ನು, ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತತ್ವವನ್ನು ಎತ್ತಿಹಿಡಿಯುವಂತೆ ಇವೆ. ಸಂವಿಧಾನದ ಆಶಯಗಳನ್ನು, ಕಾನೂನಿಗೆ ಅನುಗುಣವಾದ ಆಡಳಿತ ಎಂಬ ತಾತ್ವಿಕತೆಯನ್ನು ಪಾಲಿಸುವಂತೆ ಸರ್ಕಾರಗಳಿಗೆ ತಿಳಿಹೇಳುವ ಕೆಲಸವನ್ನು ಸುಪ್ರೀಂ ಕೋರ್ಟ್ ತೀರ್ಪು ಮಾಡಿದೆ. ಕೆಲವು ಅಪರಾಧ ಪ್ರಕರಣಗಳಲ್ಲಿ ಆರೋಪಿ ಸ್ಥಾನದಲ್ಲಿ ಇರುವ ವ್ಯಕ್ತಿಗಳಿಗೆ ಸೇರಿದ ಕಟ್ಟಡಗಳು ಅತಿಕ್ರಮಣ ಮಾಡಿಕೊಂಡ ಜಾಗದಲ್ಲಿ ಇವೆ ಎಂಬ ನೆಪ ಒಡ್ಡಿ, ಆ ಕಟ್ಟಡಗಳನ್ನು ಧ್ವಂಸಗೊಳಿಸುವ ಕೆಲಸ ಮಾಡುತ್ತಿದ್ದ ಕೆಲವು ರಾಜ್ಯ ಸರ್ಕಾರಗಳನ್ನು ಸುಪ್ರೀಂ ಕೋರ್ಟ್‌ನ ಈ ತೀರ್ಪು ‘ದೋಷಿ’ ಎಂದು ಸ್ಪಷ್ಟವಾಗಿ ಕರೆದಂತಿದೆ. ಕಾನೂನಿನ ಪ್ರಕ್ರಿಯೆಗಳನ್ನು ಪಾಲಿಸದೆ ವ್ಯಕ್ತಿಯೊಬ್ಬನಿಗೆ ಶಿಕ್ಷೆ ವಿಧಿಸುವ ಅಧಿಕಾರವು ಪ್ರಭುತ್ವಕ್ಕೆ ಇಲ್ಲ ಎಂಬುದನ್ನು ಕೋರ್ಟ್ ಸ್ಪಷ್ಟಪಡಿಸಿದೆ. ಸಂವಿಧಾನದ 142ನೇ ವಿಧಿಯ ಅಡಿಯಲ್ಲಿ ತನಗೆ ಇರುವ ವಿಶೇಷವಾದ ಅಧಿಕಾರವನ್ನು ಬಳಸಿ ಮಾರ್ಗಸೂಚಿಗಳನ್ನು ರೂಪಿಸಿರುವ ಸುಪ್ರೀಂ ಕೋರ್ಟ್, ಈ ಮಾರ್ಗಸೂಚಿಗಳನ್ನು ಪಾಲನೆ ಮಾಡದ ಅಧಿಕಾರಿಗಳು ಕಾನೂನು ಕ್ರಮಕ್ಕೆ ಗುರಿಯಾಗಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದೆ. ಈ ಮೂಲಕ, ಈ ಮಾರ್ಗಸೂಚಿಗಳಿಗೆ ಬಲ ತಂದುಕೊಡುವ ಕೆಲಸವನ್ನೂ ಮಾಡಿದೆ. ಕಟ್ಟಡಗಳನ್ನು ಧ್ವಂಸಗೊಳಿಸುವ ಮೊದಲು ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್ ನೀಡಬೇಕು, ಮೇಲ್ಮನವಿ ಸಲ್ಲಿಸಲು ಅವಕಾಶ ಇರಬೇಕು ಎಂದು ಕೂಡ ಹೇಳಿದೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುವ ಅಧಿಕಾರಿಗಳು, ಧ್ವಂಸಗೊಂಡ ಕಟ್ಟಡವನ್ನು ತಮ್ಮದೇ ಖರ್ಚಿನಲ್ಲಿ ಮರುನಿರ್ಮಿಸಿ ಕೊಡುವ ಹೊಣೆ ಹೊರಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದೆ.



‘ಬುಲ್ಡೋಜರ್ ನ್ಯಾಯ’ದ ಕಾರಣದಿಂದಾಗಿ ತಮ್ಮ ಮನೆಗಳನ್ನು ಕಳೆದುಕೊಂಡವರಿಗೆ ಈಗ ಪರಿಹಾರ ಸಿಗುತ್ತದೆಯೇ ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ

ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಸಾರಾಂಶ ಬಹಳ ಸ್ಪಷ್ಟವಾಗಿದೆ. ಕಾನೂನಿಗೆ ಅನುಗುಣವಾದ ಆಡಳಿತಕ್ಕೆ ಆದ್ಯತೆ ನೀಡುವುದು, ಸಂವಿಧಾನದ ವಿವಿಧ ಅಂಗಗಳ ನಡುವೆ ಹಂಚಿಕೆಯಾಗಿರುವ ಅಧಿಕಾರಕ್ಕೆ ಗೌರವ ಕೊಡುವುದು, ಆರೋಪ ಸಾಬೀತಾಗುವವರೆಗೂ ಆರೋಪಿಯು ನಿರ್ದೋಷಿ ಎಂಬ ತತ್ವಕ್ಕೆ ಬೆಲೆ ಕೊಡುವುದು ಹಾಗೂ ಸಾಮೂಹಿಕ ಶಿಕ್ಷೆ ಕೊಡುವುದು ತಪ್ಪು ಎಂಬುದು ತೀರ್ಪಿನ ಸಾರಾಂಶ. ಸಹಜ ನ್ಯಾಯ ಪ್ರಕ್ರಿಯೆಯ ಮೂಲಭೂತ ಅಂಶಗಳಿವು. ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ, ಅದರಲ್ಲೂ ಮುಖ್ಯವಾಗಿ ಮುಸ್ಲಿಮರ ವಿರುದ್ಧ, ದುರ್ಬಲ ಸಮುದಾಯಗಳ ವಿರುದ್ಧ ರಾಜಕೀಯ ಅಸ್ತ್ರವಾಗಿ ಬುಲ್ಡೋಜರ್‌ಗಳನ್ನು ಬಳಕೆ ಮಾಡಲಾಗುತ್ತಿದೆ. ದುರುದ್ದೇಶದಿಂದ, ‘ದಿಢೀರ್ ನ್ಯಾಯ’ದ ಸಾಧನವಾಗಿ ಬುಲ್ಡೋಜರ್‌ಗಳ ಬಳಕೆ ಆಗುತ್ತಿದೆ. ‘ಅಧಿಕಾರಿಗಳು ಸಹಜ ನ್ಯಾಯದ ಮೂಲಭೂತ ತತ್ವಗಳನ್ನು ಪಾಲಿಸದೇ ಇದ್ದಾಗ, ಬುಲ್ಡೋಜರ್‌ಗಳು ಕಟ್ಟಡವನ್ನು ಧ್ವಂಸಗೊಳಿಸುವ ಭೀತಿಯ ದೃಶ್ಯಗಳು ಅರಾಜಕ ಸ್ಥಿತಿಯನ್ನು ನೆನಪಿಸುತ್ತವೆ’ ಎಂದು ಕೋರ್ಟ್ ಬೇಸರದಿಂದ ಹೇಳಿದೆ. ಆದರೆ, ನ್ಯಾಯವನ್ನು ಈ ರೀತಿ ವಿಕೃತಗೊಳಿಸಿದ್ದಕ್ಕೆ ಸರ್ಕಾರಗಳು ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಕೆಲಸವನ್ನು ಈ ಹಿಂದೆ ಮಾಡಿವೆ, ಕೋರ್ಟ್‌ಗಳು ಈ ಹಿಂದೆಯೂ ಈ ವಿಚಾರವಾಗಿ ಆಡಿದ ಕಟು ಮಾತುಗಳು ಹಾಗೂ ಟೀಕೆಗಳು ಸರ್ಕಾರಗಳಲ್ಲಿ ಅಳುಕು ಮೂಡಿಸಿದಂತೆ ಕಾಣುತ್ತಿಲ್ಲ. ‘ಬುಲ್ಡೋಜರ್ ನ್ಯಾಯ’ದ ಮೂಲ ಇರುವುದು ಉತ್ತರಪ್ರದೇಶದಲ್ಲಿ. ಮಧ್ಯಪ್ರದೇಶ, ಉತ್ತರಾಖಂಡ, ಗುಜರಾತ್, ರಾಜಸ್ಥಾನ ರಾಜ್ಯ ಸರ್ಕಾರಗಳು ಇದೇ ಬಗೆಯ ಕ್ರಮಕ್ಕೆ ಮುಂದಾಗಿದ್ದವು. ಅಲ್ಪಸಂಖ್ಯಾತರ ಕುರಿತಾಗಿನ ಪೂರ್ವಗ್ರಹಗಳು ಹಾಗೂ ‘ದಿಢೀರ್ ನ್ಯಾಯ’ಕ್ಕಾಗಿನ ಆಗ್ರಹಗಳ ನಡುವೆ ಈ ಬಗೆಯ ಕ್ರಮಗಳು ವ್ಯಾಪಕವಾಗಿ ಬಳಕೆಯಾಗಿದ್ದವು. ಆದರೆ, ಈ ಕ್ರಮಗಳು ಪ್ರಜೆಗಳ ಜೀವಿಸುವ ಸ್ವಾತಂತ್ರ್ಯವನ್ನೇ ಕಿತ್ತುಕೊಂಡಿದ್ದವು.

ಈಗ ಸುಪ್ರೀಂ ಕೋರ್ಟ್ ಬಹಳ ಉತ್ತಮವಾದ ತೀರ್ಪೊಂದನ್ನು ನೀಡಿದೆ. ಆದರೆ ತೀರ್ಪು ಎಷ್ಟು ಉತ್ತಮವಾಗಿ ಅನುಷ್ಠಾನಕ್ಕೆ ಬರುತ್ತದೆ ಎಂಬುದು ಬಹಳ ಮುಖ್ಯವಾಗುತ್ತದೆ. ದ್ವೇಷ ಭಾಷಣ ಹಾಗೂ ಗೋರಕ್ಷಣೆಯ ಹೆಸರಿನಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವ ಪ್ರವೃತ್ತಿಯನ್ನು ಹತ್ತಿಕ್ಕಲು ಈ ಹಿಂದೆ ಹೊರಡಿಸಿದ್ದ ಮಾರ್ಗಸೂಚಿಗಳನ್ನು ರಾಜ್ಯ ಸರ್ಕಾರಗಳು ಮತ್ತು ಕಾನೂನು ಜಾರಿ ಸಂಸ್ಥೆಗಳು ಸರಿಯಾಗಿ ಅನುಷ್ಠಾನಕ್ಕೆ ತರಲಿಲ್ಲ. ಕೋರ್ಟ್ ಕೆಲವು ವಾರಗಳ ಹಿಂದೆ ಪ್ರಾಥಮಿಕ ಸೂಚನೆಗಳನ್ನು ನೀಡಿದ್ದ ನಂತರದಲ್ಲಿಯೂ ಬುಲ್ಡೋಜರ್ ಬಳಸಿ ಕಟ್ಟಡ ಧ್ವಂಸಗೊಳಿಸಿದ ಪ್ರಕರಣಗಳು ವರದಿಯಾಗಿವೆ. ಈಗ ಸುಪ್ರೀಂ ಕೋರ್ಟ್ ನೀಡಿರುವ ಸೂಚನೆಗಳಲ್ಲಿ ಒಂದಿಷ್ಟು ಲೋಪಗಳನ್ನು ಹುಡುಕಿ, ಮಾರ್ಗಸೂಚಿಗಳ ಉದ್ದೇಶವನ್ನು ವಿಫಲಗೊಳಿಸುವ ಯತ್ನಗಳೂ ನಡೆಯಬಹುದು. ಕಾನೂನಿನ ಅಡಿಯಲ್ಲಿ ನೋಟಿಸ್ ನೀಡುವುದು, ಮೇಲ್ಮನವಿ ಸಲ್ಲಿಸುವುದು ಹಾಗೂ ಸೂಕ್ತ ಪರಿಹಾರ ಪಡೆದುಕೊಳ್ಳುವುದಕ್ಕೆ ಮಾರ್ಗಸೂಚಿಗಳು ಅವಕಾಶ ಕಲ್ಪಿಸುತ್ತವೆಯಾದರೂ ತೊಂದರೆಗೆ ಒಳಗಾದವರಿಗೆ ಅವುಗಳ ಪ್ರಯೋಜನ ಪೂರ್ಣಪ್ರಮಾಣದಲ್ಲಿ ದೊರೆಯಬೇಕು. ಈ ಹಿಂದೆ ‘ಬುಲ್ಡೋಜರ್ ನ್ಯಾಯ’ದ ಕಾರಣದಿಂದಾಗಿ ತಮ್ಮ ಮನೆಗಳನ್ನು ಕಳೆದುಕೊಂಡವರಿಗೆ ಈಗ ಪರಿಹಾರ ಸಿಗುತ್ತದೆಯೇ ಎಂಬ ಪ್ರಶ್ನೆಯೂ ಈ ಸಂದರ್ಭದಲ್ಲಿ ಮುಖ್ಯವಾಗುತ್ತದೆ.

## ದಿನದ ಟ್ವೀಟ್

### ನಾಚಿಕೆಯಿಂದ ತಲೆತಗ್ಗಿಸಬೇಕು



ಬುಲ್ಡೋಜರ್ ಕ್ರಿಯೆ ನೋಡಿ ಸಂಭ್ರಮಿಸಿದ ನೊಯ್ಡಾದ ಆ್ಯಂಕರ್‌ಗಳು ಸುಪ್ರೀಂ ಕೋರ್ಟ್ ತೀರ್ಪಿನ ನಂತರ ನಾಚಿಕೆಯಿಂದ ತಲೆತಗ್ಗಿಸಬೇಕು. ಅವರು ಉತ್ತೇಜನ ನೀಡಿದ್ದರಿಂದಾಗಿ ಉತ್ತರ ಪ್ರದೇಶ ಸರ್ಕಾರಕ್ಕೆ ಕಾನೂನು ಉಲ್ಲಂಘಿಸಲು, ಜನರ ಮನೆ ಮತ್ತು ಜೀವನವನ್ನು ಧ್ವಂಸಗೊಳಿಸಲು ಧೈರ್ಯ ಬಂತು...

**ರೋಹಿಣಿ ಸಿಂಗ್,** ಪತ್ರಕರ್ತೆ

## ಕಿಡಿನುಡಿ



ಜನರಿಗೆ ಗೃಹಸಾಲ ಪಡೆಯಲು ಇ-ಖಾತಾ ಬೇಕಾಗುತ್ತದೆ. ಈಗಿರುವ ವ್ಯವಸ್ಥೆಯಲ್ಲಿ ಅರ್ಜಿ ಸಲ್ಲಿಸಿದ ಶೇಕಡ 5-6ರಷ್ಟು ಜನರಿಗೆ ಮಾತ್ರ ಇದು ಸಿಗುತ್ತಿದೆ. ಇ-ಖಾತಾ ನೀಡುವ ವ್ಯವಸ್ಥೆಯನ್ನು ಸರಳೀಕರಿಸಬೇಕು. ಆದರೆ ಸರ್ಕಾರ ಲಂಚಕ್ಕೆ ಅವಕಾಶ ನೀಡಿ ಜನರಿಗೆ ತೊಂದರೆ ಕೊಡುತ್ತಿದೆ.

**ಆರ್. ಅಶೋಕ,** ವಿರೋಧ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಸೋಮವಾರ, 15-11-1999

- **ಮುಷರಫ್ ಹತ್ಯೆ ಯತ್ನ ಆರೋಪ: ಷರೀಫ್ ಸೆರೆ**

ಇಸ್ಲಾಮಾಬಾದ್, ನ. 14– ಪಾಕಿಸ್ತಾನದ ಪದಚ್ಯುತ ಪ್ರಧಾನಿ ನವಾಜ್ ಷರೀಫ್ ಅವರನ್ನು ಪರ್ವೇಜ್ ಮುಷರಫ್ ಅವರ ಹತ್ಯೆ ಯತ್ನ ಮತ್ತು ವಿದ್ರೋಹದ ಆರೋಪ ಮೇಲೆ ವಿಚಾರಣೆಗೊಳಪಡಿಸಲು ಅಧಿಕೃತವಾಗಿ ಬಂಧಿಸಿ ಗುಪ್ತವಾಗಿ ಕರಾಚಿಗೆ ಕರೆದೊಯ್ಯಲಾಗಿದೆ. ಈ ಆರೋಪಗಳ ಮೇಲೆ ಷರೀಫ್ ಅವರಿಗೆ ಮರಣದಂಡನೆ ವಿಧಿಸಬಹುದಾಗಿದೆ ಎಂದು ಪತ್ರಿಕಾ ವರದಿಗಳು ತಿಳಿಸಿವೆ.

- **ಸಹಕಾರ ಸಂಘಗಳಲ್ಲಿ ಪರಿಶಿಷ್ಟರಿಗೆ ಪ್ರಾತಿನಿಧ್ಯಕ್ಕೆ ಕ್ರಮ: ಕೃಷ್ಣ**

ಬೆಂಗಳೂರು, ನ. 14– ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಹೇಳಿದರು.

ಸಹಕಾರ ಸಂಘಗಳು ಹಾಗೂ ಚಳವಳಿಯಲ್ಲಿ ಪರಿಶಿಷ್ಟರು ಮತ್ತು ಅಲ್ಪಸಂಖ್ಯಾತ ವರ್ಗದವರ ಸಕ್ರಿಯ ಪಾತ್ರದ ಕೊರತೆ ಕಾಣುತ್ತಿದೆ. ಇದನ್ನು ಸರಿಪಡಿಸಲು ಸರ್ಕಾರ ದೃಢ ಸಂಕಲ್ಪ ಮಾಡಿದ್ದು, ಈ ಸಂಬಂಧ ಆಡಳಿತಾತ್ಮಕ ಆಜ್ಞೆ ಸದ್ಯದಲ್ಲೇ ಹೊರಬೀಳಲಿದೆ ಎಂದು ಅವರು ಪ್ರಕಟಿಸಿದರು.

## 50 ವರ್ಷಗಳ ಹಿಂದೆ

ಶುಕ್ರವಾರ, 15-11-1974

- **ಕುಗ್ಗಿದ್ದ ಮುಂಗಾರು ಭತ್ತ ಸಂಗ್ರಹ ಮತ್ತೆ ಚುರುಕು**

ನವದೆಹಲಿ, ನ. 14– ಮುಂಗಾರು ಧಾನ್ಯಗಳ, ವಿಶೇಷತಃ ಭತ್ತದ ಸಂಗ್ರಹ ಮೊದಮೊದಲು ನಿರಾಶೆ ಹುಟ್ಟಿಸುವಂತಿದ್ದಿತಾದರೂ ಈಗ ಅದು ರಾಷ್ಟ್ರದಾದ್ಯಂತ ಚುರುಕುಗೊಂಡಿರುವುದಾಗಿ ಕೃಷಿ ಮತ್ತು ನೀರಾವರಿ ಖಾತೆ ರಾಜ್ಯ ಸಚಿವ ಎ.ಪಿ. ಶಿಂಧೆ ಇಂದು ತಿಳಿಸಿದ್ದಾರೆ.

ನಿನ್ನೆಯವರೆಗೆ ಭತ್ತದ ಸಂಗ್ರಹ 28 ಲಕ್ಷ ಟನ್ ಆಗಿತ್ತು. ಮುಂಗಾರು ಬೆಳೆಯ ಪ್ರಮುಖ ಪ್ರದೇಶಗಳಲ್ಲಿ ಅನಾವೃಷ್ಟಿ ಮತ್ತು ಪ್ರವಾಹದ ಕಾರಣ ಧಾನ್ಯ ಸಂಗ್ರಹ ‘ಬಹಳ ಕಡಿಮೆ’ ಪ್ರಮಾಣದಲ್ಲಾಗುವುದೆಂಬ ಹೆದರಿಕೆ ಈಚಿನ ಕೆಲವು ವಾರಗಳವರೆಗೆ ಇತ್ತೆಂದು ಸಚಿವರು ತಿಳಿಸಿದರು.

- **ನಗರದಲ್ಲಿ ರಷ್ಯಾ ಅಂತರಿಕ್ಷ ನೌಕೆ ಮಾದರಿಗಳ ಪ್ರದರ್ಶನ**

ಬೆಂಗಳೂರು, ನ. 14– ಪ್ರಪ್ರಥಮ ಮಾನವ ನಿರ್ಮಿತ ಉಪಗ್ರಹ ‘ಸ್ಪೂಟ್ನಿಕ್’ನಿಂದ ಇತ್ತೀಚಿನ ಬಾಹ್ಯಾಕಾಶ ಸಂಶೋಧನೆಗಳವರೆಗೆ ರಷ್ಯದ ಬಾಹ್ಯಾಕಾಶ ವಿಜ್ಞಾನ ಪ್ರಗತಿಯನ್ನು ಪರಿಚಯ ಮಾಡಿಕೊಡುವ ಚಿತ್ರ, ಮಾದರಿಗಳಿಂದ ಕೂಡಿದ ಒಂದು ತಿಂಗಳ ಪ್ರದರ್ಶನವೊಂದು ಇಂದಿನಿಂದ ನಗರದ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಪ್ರಾರಂಭವಾಯಿತು.

ಸಂವಿಧಾನದ ಆಧಾರದಲ್ಲಿ ಸ್ನೇಹದ ನಗು ಅನುಭವಿಸುತ್ತಿರುವುದನ್ನು ಮರೆಮಾಚಲಾಗದು

# ಚಲಿಸುವ ಗೋಡೆಗಳನ್ನು ಕಟ್ಟುವಿರಾ?



ವಿಶ್ಲೇಷಣೆ

ಸಬಿತಾ ಬನ್ನಾಡಿ

**ಇತಿಹಾಸದ** ಚಕ್ರ ಮುಂದಕ್ಕೆ ಮಾತ್ರ ಚಲಿಸುತ್ತದೆ ಎಂಬುದು ನಮ್ಮಲ್ಲಿನ ಆಧಾರವಿಲ್ಲದ ನಂಬಿಕೆ ಮಾತ್ರ. ಸ್ವಲ್ಪ ಎಚ್ಚರ ತಪ್ಪಿದರೂ ಅದು ಹಿಮ್ಮುಖವಾಗಿ ಚಲಿಸಿ, ಪ್ರಪಾತದೆಡೆಗೆ ಸಾಗುವ ಸಾಧ್ಯತೆಗಳು ಪ್ರಖರವಾಗಿರುತ್ತವೆ. ಇಂದಿನವರ ಬಾಯಿಯಲ್ಲಿ ಹಿಂದಿನ ಅದೇ ತಾರತಮ್ಯದ, ವಿಭಜನೆಯ, ಆಯ್ದ ಶ್ರೇಷ್ಠತೆಯ, ಅಹಮ್ಮಿನ ಹೂಂಕಾರದ ಮತ್ತು ಪುರಾತನದ ಕನವರಿಕೆಯ ಮಾತುಗಳೇ ಮೊನಚುಗಳಾಗಿ ಬರುತ್ತವೆಂದರೆ ಅವರು ಅವನ್ನು ಮರುಸ್ಥಾಪಿಸುವ ಅವಕಾಶಕ್ಕಾಗಿ ಕಾದು ಕೂತಿದ್ದಾರೆ, ಹೊಂಚು ಹಾಕುತ್ತಿದ್ದಾರೆ ಎಂದೇ ಅರ್ಥ.

ಈ ಕಾರಣದಿಂದಲೇ, ಇತಿಹಾಸದ ಗಾಯಗಳನ್ನು ನೆನಪಿಸಿದರೆ, ‘ಇಲ್ಲವೇ ಇಲ್ಲ. ಅದೆಲ್ಲ ಬರೀ ಸುಳ್ಳು. ನಿಮ್ಮನ್ನು ದಿಕ್ಕು ತಪ್ಪಿಸಲು ಹೂಡುವ ತಂತ್ರ’ ಎಂದು ಅವರು ದಿಕ್ಕು ತಪ್ಪಿಸುತ್ತಿರುತ್ತಾರೆ. ಗಾಯಗೊಂಡ ತಲೆಮಾರುಗಳೇ ಮಾಯವಾದ ಮೇಲೆ ಹೊಸ ತಲೆಮಾರಿನವರ ಎದುರಿಗೆ ಮಾರೀಚನ ವೇಷ ತೊಡುತ್ತಾರೆ. ಇದುವರೆಗೂ ದೊರಕಿದ ಎಷ್ಟೋ ಬಿಡುಗಡೆಗಳನ್ನು ಮರೆಮಾಚಿ ಇಂದಿನ ವ್ಯವಸ್ಥೆಯೊಳಗಿನ ಕೆಲವು ತಪ್ಪು ನಡೆಗಳನ್ನು ನೆಪವಾಗಿಸಿಕೊಂಡು ವಿಭಜನೆಯ ತಮ್ಮ ಶಾಸನಗಳನ್ನು ಒಗ್ಗೂಡುವಿಕೆಯೆಂಬಂತೆ ಬಿಂಬಿಸಿ ಜಾರಿಗೆ ತರಲು ತುದಿಗಾಲಲ್ಲಿ ನಿಂತಿರುತ್ತಾರೆ.

ಕೆಲವೇ ದಶಕಗಳ ಹಿಂದೆ ಹೀಗೊಂದು ಇತಿಹಾಸದ ಚಕ್ರ ನೋಡು ನೋಡುತ್ತಿದ್ದಂತೆಯೇ ಉರುಳುರುಳಿ ಬಿದ್ದದ್ದನ್ನು ನೆನಪಿಸಿಕೊಳ್ಳಬೇಕಾದ ಕಾಲ ಬಂದಿದೆ. ಯಾಕೆಂದರೆ ಈ ಬೆಳವಣಿಗೆಗಳು ವಿಶ್ವವ್ಯಾಪಿಯಾಗಿ ನಡೆಯುವ ಎಲ್ಲ ಲಕ್ಷಣಗಳಿವೆ. 1939ರಿಂದ ಇರಾನ್‌ನಲ್ಲಿ ಬಹಳ ಇತ್ಯಾತ್ಮಕವಾದ ಬೆಳವಣಿಗೆಗಳಾದವು. ರೇಹ್‌ಜಾ ಶಾ, ಮಹಿಳೆಯರಿಗೆ ಎಲ್ಲ ರಂಗಗಳಲ್ಲಿ ಮುಕ್ತ ಅವಕಾಶ ನೀಡಿದರು, ಉನ್ನತ ಶಿಕ್ಷಣ ಪಡೆಯುವುದನ್ನು ಪ್ರೋತ್ಸಾಹಿಸಿದರು. ತಲೆಯ ಮೇಲೆ ಸ್ಕಾರ್ಫ್ ಕೂಡ ಧರಿಸಬೇಕಾಗಿಲ್ಲ ಎಂದು ಆದೇಶಿಸಿದರು. ಇದರ ಫಲವಾಗಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬಂದರು. ಆಧುನಿಕ ಉಡುಗೆಗಳನ್ನು ಧರಿಸಿ, ಗಂಡಸರ ಜೊತೆಗೆ ಸಮಸಮವಾಗಿ ವೃತ್ತಿಯಲ್ಲಿ ಬೆರೆಯುತ್ತಾ, ವೀಕೆಂಡ್‌ಗಳಲ್ಲಿ ಪಿಕ್‌ನಿಕ್‌ಗಳನ್ನು ಮಾಡಿಕೊಂಡು ಒಂದು ಸಂತಸದ ಸಾಮಾಜಿಕ ವಾತಾವರಣ ಸೃಷ್ಟಿಯಾಗಿ ಎಲ್ಲವೂ ಚೆನ್ನಾಗಿದೆ ಎಂಬ ನಿರುಮ್ಮಳ ಭಾವ ಮೂಡಿದ ಆ ಸುಂದರ ಕಾಲವು 70ರ ದಶಕದತನಕವೂ ಮುನ್ನಡೆಯಿತು.

ಆದರೆ, ಇವನ್ನೆಲ್ಲ ನೋಡಿ ಕುದಿಗೊಂಡ ಮನಸ್ಸುಗಳು ಕಾಲಕ್ಕೆ ಕಾದಿದ್ದವು. ತಾವು ಅಧಿಕಾರ ಪಡೆಯಬೇಕೆಂದರೆ ಪ್ರತಿಚಿಂತನೆಯನ್ನು ಜನರ ಮನದೊಳಗೆ ಹರಿಬಿಡಬೇಕು. ‘ಇದು ಸ್ವರ್ಗವಲ್ಲ, ಧರ್ಮದ ವಿಡಂಬನೆ’ ಎಂದು ಬಿಂಬಿಸಬೇಕು. ತಮ್ಮ ಧರ್ಮದ ಮೇಲೆ ದಾಳಿಯಾಗುತ್ತಿದೆ ಎಂದು ಜನರೊಳಗೆ ಭಯವನ್ನು ಬಿತ್ತಬೇಕು ಎಂದು ಲೆಕ್ಕಹಾಕಿದ್ದವು. ಮಾತ್ರವಲ್ಲ, ಆಧುನಿಕತೆ ಎಂಬುದು ಎಡಪಂಥೀಯ ಚಿಂತನೆಯಾಗಿದ್ದು ಅದನ್ನು ವಿರೋಧಿಸಬೇಕು ಎನ್ನುವುದನ್ನು ಕಾರ್ಯಗತಗೊಳಿಸತೊಡಗಿದರು. ‘ನಮ್ಮ ಧರ್ಮದ ಅನನ್ಯತೆಯನ್ನು ಸ್ಥಾಪಿಸುವುದು ಎಷ್ಟು ಮುಖ್ಯ’ ಎಂಬ ಪ್ರವಚನದಿಂದ ಜನ ಕ್ರಮೇಣ ಪ್ರಭಾವಿತರಾಗತೊಡಗಿದರು.

ಮಹಿಳೆಯರೂ ಇದಕ್ಕೆ ಕೈಜೋಡಿಸಿ, ತಲೆಯ ಮೇಲೆ ಸ್ಕಾರ್ಫ್ ಧರಿಸುವುದು ತಮ್ಮ ಪರಂಪರೆ ಎಂದು ಭಾವಿಸಿದರು. 1979ರಲ್ಲಿ ದಂಗೆಯೆದ್ದು ಆಗಿನ ಸರ್ಕಾರವನ್ನು ಕೆಳಕ್ಕಿಳಿಸಿ ಬಂದ ಇಸ್ಲಾಂ ಮೂಲಭೂತವಾದಿ ಆಯತ್ ಉಲ್ಲಾ ಖಮೇನಿ ದೇಶದ ಹೆಸರನ್ನು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಎಂದು ಬದಲಿಸಿ ಹೆಣ್ಣುಮಕ್ಕಳು ಬುರ್ಖಾ ಧರಿಸುವುದನ್ನು ಕಡ್ಡಾಯ ಮಾಡಿದ. ಧರ್ಮದ ಬಗೆಗೆ ವಿಮರ್ಶೆ ಮಾಡುವವರ ವಿರುದ್ಧ ಫತ್ವಾ ಹೊರಡಿಸಿದ. ಆಧುನಿಕ ರಾಷ್ಟ್ರದಿಂದ ಧಾರ್ಮಿಕ ರಾಷ್ಟ್ರವಾಗಿ ಇರಾನ್ ಪರಿವರ್ತನೆ ಆಯಿತು. ನೈತಿಕ ಪೊಲೀಸ್‌ಗಿರಿಯ ಹೆಸರಿನಲ್ಲಿ ಗೂಂಡಾಗಳ ಪಡೆ ಸಿದ್ಧವಾಯಿತು. ತಲೆವಸ್ತ್ರದ ಮರೆಯಿಂದ ಒಂದು ಕೂದಲು ಕಂಡರೂ ಅಂಥವಳನ್ನು ದಂಡಿಸುವುದು ಹೆಚ್ಚಾಯಿತು. ಇದರ ವಿರುದ್ಧ ಅಲ್ಲಿನ ಹೆಂಗಳೆಯರು ಎರಡು ವರ್ಷಗಳಿಂದ ಆಗಾಗ ಪ್ರತಿಭಟನೆ ಮಾಡಿ ಜೈಲುಪಾಲಾಗಿದ್ದಾರೆ, ಕೊಲೆಯಾಗಿದ್ದಾರೆ.



ರಾಜಧಾನಿ ಟೆಹರಾನಿನಲ್ಲಿ ಈಚೆಗೆ ವಿಶ್ವವಿದ್ಯಾಲಯದ ಮುಂಭಾಗದಲ್ಲಿ ವಿದ್ಯಾರ್ಥಿನಿಯೊಬ್ಬಳಿಗೆ ಹೀಗೇ ಝಂಕಿಸಿದಾಗ ಆಕೆ ಉಡುಪನ್ನು ಕಿತ್ತುಹಾಕಿ ಒಳ ಉಡುಪಿನಲ್ಲಿ ತಿರುಗಾಡಿ ಪ್ರತಿಭಟಿಸಿದಳು. ಅವಳಿಗೆ ತಲೆ ಸರಿ ಇಲ್ಲ ಎಂದು ಹೇಳಿ ಅವಳನ್ನು ಜೈಲಿಗೆ ಹೊತ್ತೊಯ್ದಿದ್ದಾರೆ. ಇಂತಹ ಉಸಿರುಗಟ್ಟಿಸುವ ವಾತಾವರಣವನ್ನು ಧರ್ಮ, ದೇಶ, ಪರಂಪರೆ ಹೆಸರಿನಲ್ಲಿ ಸೃಷ್ಟಿಸುವಾಗ ಮೊದಲು ಬಲಿಯಾಗುವುದು ಹೆಣ್ಣು ಎಂಬುದನ್ನು ಹೇಳಿದರೆ ಎಷ್ಟೋ ಸಲ ಹೆಣ್ಣುಮಕ್ಕಳೇ ಒಪ್ಪುವುದಿಲ್ಲ. ಯಾಕೆಂದರೆ ಈಗೀಗ ಮಹಿಳಾ ನಾಯಕಿಯರು ಮುನ್ನೋಟವಿಲ್ಲದೇ ಅಧಿಕಾರಕ್ಕಾಗಿ, ಗೆಲುವಿಗಾಗಿ, ಕೆಲವೊಮ್ಮೆ ಇವನ್ನೆಲ್ಲಾ ನಿಜವೆಂದೇ ನಂಬಿ ನಮ್ಮ ದೇಶದಲ್ಲೂ ಹೀಗೆಲ್ಲ ಮಾತಾಡತೊಡಗಿದ್ದಾರೆ.

ಇಂಥದ್ದೇ ಬೆಳವಣಿಗೆ ಅಫ್ಗಾನಿಸ್ತಾನದಲ್ಲೂ ಆಯಿತು. ಬದಲಾವಣೆಗಳನ್ನು ಎಡಪಂಥೀಯವೆಂದು ಹೀಗಳೆಯಲಾಯಿತು. ಜನರನ್ನು ಎಡಪಂಥ-ಬಲಪಂಥ ಎಂದು ವಿಭಜಿಸಲಾಯಿತು. ಇಸ್ಲಾಂ ರಾಷ್ಟ್ರೀಯತೆಯನ್ನಿಟ್ಟುಕೊಂಡು ಯಾವೆಲ್ಲಾ ರಾಷ್ಟ್ರಗಳು ಹೀಗೆ ನಲಿವಿಲ್ಲದ-ಸೊಗಸಿಲ್ಲದ ಸಾಮಾಜಿಕತೆಯನ್ನು ಹೇರಿದ್ದಾವೋ ಅವರನ್ನೇ ಅನುಕರಣೆ ಮಾಡುವ ಅಗತ್ಯ ಇದೆಯೇ?


ಸಂವಿಧಾನದ ಆಧಾರದಲ್ಲಿ ನಾವು ಸ್ನೇಹದ ನಗುವನ್ನು ಅನುಭವಿಸುತ್ತಿರುವುದನ್ನು ಮರೆಮಾಚಬೇಕಾಗಿದೆಯೇ? ಹಿಂದೂ ರಾಷ್ಟ್ರದ ಅಜೆಂಡಾ ಏನು ಎಂದು ಎಲ್ಲಾದರೂ ಬಹಿರಂಗವಾಗಿದೆಯೇ? ಉತ್ತರ ಪ್ರದೇಶದ ಮಹಿಳಾ ಆಯೋಗ ನಡೆಸಿರುವ ಮಾತುಕತೆ, ಚಿಂತನೆಯು ಆ ಅಜೆಂಡಾದ ಕೆಲವು ಲಕ್ಷಣಗಳ ಮುನ್ಸೂಚನೆಯಂತೆ ಕಾಣುತ್ತಿದೆ. ಯಾವುದಾದರೂ ಕೆಲವು ಬಿಡಿ ಘಟನೆಗಳನ್ನು ಎದುರಿಟ್ಟುಕೊಂಡು ತಮ್ಮ ಹೊಂಚು ಶುರುಮಾಡುವುದು ಇಂತಹ ಸನ್ನಿವೇಶಗಳಲ್ಲಿ ಸಾಮಾನ್ಯ ಸಂಗತಿ. ಉತ್ತರಪ್ರದೇಶದಲ್ಲಿ ದೇಶದಲ್ಲೇ ಅತಿಹೆಚ್ಚು ಸಂಖ್ಯೆಯಲ್ಲಿ ಅತ್ಯಾಚಾರಗಳಾಗುತ್ತಿರುವುದನ್ನು ಅಪರಾಧ ದಾಖಲೆಗಳ ರಾಷ್ಟ್ರೀಯ ಬ್ಯೂರೊ ವರದಿಯೇ ಹೇಳಿದೆ. ಇದನ್ನು ತಡೆಯುವ ಬಗೆಗೆ ಎಲ್ಲ ರಾಜ್ಯಗಳಲ್ಲೂ ಗಂಭೀರವಾಗಿ ಯೋಚಿಸಬೇಕಾದುದು ಅತೀ ಅವಶ್ಯಕ.

ಹೀಗಿರುವಾಗ ಅಲ್ಲಿನ ಮಹಿಳಾ ಆಯೋಗವು ಹಾಸ್ಯಾಸ್ಪದ ಮಾತುಗಳನ್ನು ಆಡಿದೆ. ಬಟ್ಟೆ ಹೊಲಿಯುವ ದರ್ಜಿ, ಜಿಮ್ ತರಬೇತುದಾರ, ವಾಹನ ಚಾಲಕ... ಇಂತಹ ವೃತ್ತಿಯಲ್ಲಿರುವವರು ಅತ್ಯಾಚಾರಿಗಳ ಪಟ್ಟಿಯಲ್ಲಿದ್ದಾರೆ. ಹೀಗಾಗಿ, ‘ಮಹಿಳೆಯರ ಕೂದಲನ್ನು ಪುರುಷರು ಕತ್ತರಿಸಬಾರದು ಹಾಗೂ ಅವರು ಮಹಿಳೆಯರಿಗೆ ಬಟ್ಟೆ ಹೊಲಿಯಲು ಅಳತೆ ತೆಗೆದುಕೊಳ್ಳುವ ಕೆಲಸ ಮಾಡಬಾರದು, ಜಿಮ್‌ಗಳಲ್ಲಿ ಮಹಿಳೆಯರಿಗೆ ಮಹಿಳಾ ತರಬೇತಿದಾರರು ಇರಬೇಕು’ ಎಂದಿದ್ದಾರೆ ಆಯೋಗದ ಪ್ರಮುಖರು. ಯಾಕೋ ವಾಹನ ಚಾಲನೆಗೆ ಮಹಿಳೆಯರೇ ಇರಬೇಕು ಎಂದಿಲ್ಲ! ಹೀಗೇ ಮುಂದುವರಿದರೆ ಶಾಲೆ, ಬಸ್ಸು, ಮಾಲ್, ಸಿನಿಮಾ, ಮದುವೆ ಮಂಟಪ ಎಲ್ಲೆಲ್ಲೂ ಪ್ರತ್ಯೇಕ ವ್ಯವಸ್ಥೆ ಬೇಕು ಎಂದೂ ಹೇಳಬಹುದು.

ಬುರ್ಖಾ ಬದಲಿಗೆ ಗೂಂಘಟ್‌ಗಳನ್ನು ಕಡ್ಡಾಯ ಮಾಡಿ ಚಲಿಸುವ ಗೋಡೆಗಳನ್ನೇ ನಿರ್ಮಿಸಿದರೂ ಆಶ್ಚರ್ಯ ಇಲ್ಲ. ಕೊನೆಗೆ ಹೆಣ್ಣುಮಕ್ಕಳು ಗಂಡನನ್ನು ನೋಡಿಕೊಂಡಿರುವುದೇ ಭೂಷಣ ಎಂದು ಫತ್ವಾ ಹೊರಡಿಸಬಹುದು. ಪ್ರತ್ಯೇಕತೆಯ ಈ ಚಿಗುರನ್ನು ಈಗಲೇ ಚಿವುಟಬೇಕಾಗಿದೆ. ಈಗ ಬೇಕಿರುವುದು, ಚಿಕ್ಕ ವಯಸ್ಸಿನಿಂದಲೇ ಗಂಡು ಮತ್ತು ಹೆಣ್ಣುಮಕ್ಕಳಿಗೆ ಪರಸ್ಪರರ ಬಗ್ಗೆ ಅರಿವು ಮೂಡಿಸುವುದು. ಲೈಂಗಿಕ ಶಿಕ್ಷಣ ನೀಡಿ ಅತ್ಯಾಚಾರದಂತಹ ಆಕ್ರಮಣ ಅದೆಷ್ಟು ಹೀನ ಎಂಬುದನ್ನು ಮನಗಾಣಿಸುವುದು. ಸೆಕ್ಸ್ ಬಗೆಗೆ ಎಲ್ಲವನ್ನೂ ಮುಚ್ಚಿಟ್ಟು ಹದಿಹರೆಯದಲ್ಲಿ ಇಂಟರ್‌ನೆಟ್, ಗೆಳೆಯರ ಜಾಲದಲ್ಲಿ ತಪ್ಪು ಮಾಹಿತಿ ಪಡೆದು ಅಪರಾಧಿಗಳಾಗುವುದನ್ನು ತಡೆಯುವುದು.

ಇದಕ್ಕಾಗಿ ಗಂಡುಮಕ್ಕಳ ಜೊತೆಗೆ ಹೆಂಗಸರು ಹೆಚ್ಚು ಹೆಚ್ಚು ಮಾತಾಡಬೇಕಾಗಿದೆ. ತಾನು ಪುರುಷನೆಂಬ ಅಹಮಿಕೆ, ಪುರುಷನೇ ಪ್ರಧಾನ ಎಂಬ ಹುಸಿಭಾವವನ್ನು ಮುರಿದು ಇಬ್ಬರಿಗೂ ಸಮಾನ ಮೌಲ್ಯವಿದೆ ಎಂಬುದನ್ನು ಕಾರ್ಯರೂಪಕ್ಕೆ ತರಲು ಎಲ್ಲರೂ ಸಜ್ಜಾಗಬೇಕಿದೆ. ಪ್ರಗತಿಪರವಾಗಿ ಇರುವುದನ್ನು ಲೇವಡಿ ಮಾಡುತ್ತಾ ಇಂತಹ ಮೂಢರನ್ನೆಲ್ಲಾ ತಜ್ಞರಾಗಿಸಿದರೆ, ಪೀಠದಲ್ಲಿ ಕೂರಿಸಿದರೆ ಏನಾಗಬಹುದು ಎನ್ನುವುದಕ್ಕೆ ಉದ್ದೇಶಿತ ಈ ಪ್ರಸ್ತಾವ ಒಂದು ಜ್ವಲಂತ ನಿದರ್ಶನ. ಆದರೆ ಇದು ನಿರ್ಲಕ್ಷಿಸುವ ವಿಚಾರವಲ್ಲ, ಎಚ್ಚರಕ್ಕೇ ಎಚ್ಚರ ಬರಬೇಕಾದ ವಿಚಾರ.

## ಚುರುಮುರಿ



### ಬೊಂಬೆ ಆಡ್ಸೋನು...

• ಬಿ.ಎನ್. ಮಲ್ಲೇಶ್

**ಹರಟೆಕಟ್ಟೆಯಲ್ಲಿ** ಗುಡ್ಡೆ ರೂಪಾಯಿ ನೋಟು ಗುಪ್ಪೆ ಹಾಕ್ಕಂಡು ಎಣಿಸ್ತಾ ಕುಂತಿದ್ದ. ‘ಏನೋ ಗುಡ್ಡೆ, ಇಟಾಕಂದು ರೊಕ್ಕ? ಎಲ್ಲಾತು ಕಮಾಯಿ?’ ತೆಪರೇಸಿ ಕೇಳಿದ.

‘ಇದು ಚನ್ನಪಟ್ಣ ಮಹಿಮೆ ಕಣ್ರಲೆ, ವೋಟಿಗೆ ಐದು ಸಾವಿರ... ಒಳ್ಳೆ ಕಮಾಯಿ ಆತು’ ಎಂದ ಗುಡ್ಡೆ.

‘ಹೌದಾ? ಪ್ರಾಕ್ಸಿ ಹಾಕಿದ್ಯಾ?’

‘ನಿನ್ತೆಲಿ, ಪ್ರಾಕ್ಸಿ ಅಲ್ಲ, ಬೆಳಿಗ್ಗಿ ಒಂದು ಪಾರ್ಟಿ, ರಾತ್ರಿಗೆ ಒಂದು ಪಾರ್ಟಿ. ಪ್ರಚಾರಕ್ಕೆ ಅಂತ ಜನರನ್ನ ಕರ್ಕೊಂಡು ಹೋಗೋ ಕಾಂಟ್ರಾಕ್ಟ್ ತಗಂಡಿದ್ದೆ. ಎರಡೂ ಕಡಿ ಕೈ ತುಂಬಾ ರೊಕ್ಕ, ಹೊಟ್ಟೆ ತುಂಬಾ ಎಣ್ಣೆ...’ ಗುಡ್ಡೆ ನಕ್ಕ.

‘ಒಳ್ಳೆ ಪಾಕಡ ನೀನು, ಅದಿರ್ಲಿ ಯಾರು ಗೆಲ್ಲಬೋದು?’ ದುಬ್ಬೀರ ಕೇಳಿದ.

‘ಗೊತ್ತಿಲ್ಲ, ಬೊಂಬೆ ಆಡ್ಸೋನು... ಮ್ಯಾಲೆ ಕುಂತಾನೆ...’ ಗುಡ್ಡೆ ಆಕಾಶ ತೋರಿಸಿದ. ಎಲ್ಲರೂ ಗೊಳ್ಳಂತ ನಕ್ಕರು.

‘ಅಲ್ಲೋ ಗುಡ್ಡೆ, ಬರೀ ರೊಕ್ಕ ಎಣಿಸ್ಕಂಡ್ ಬಂದಿದೀಯಲ್ಲ, ಚನ್ನಪಟ್ನದ ಬೀದಿ ಬೀದೀಲಿ ರಾಜಕಾರಣಿಗಳ ಕಣ್ಣೀರು, ಕೆಟ್ಟಾ ಕೊಳಕ ಮಾತು ಬೇಕಾದಷ್ಟು ಬಿದ್ದಿದ್ವಲ್ಲ, ಅವನ್ನೆಲ್ಲ ಆರಿಸ್ಕಂಡು ಬರೋದಲ್ವಾ?’ ಮಂಜಮ್ಮ ಕೇಳಿದಳು.

‘ಯಾಕೆ, ನಂಗೇನ್ ತೆಲಿ ಕೆಟ್ಟೇತಾ?’ ಗುಡ್ಡೆ ತಲೆ ಒಗೆದ.

‘ಅಲ್ಲ ಈ ರಾಜಕಾರಣಿಗಳು ತಮಗೆ ಆಗದೋರಿಗೆ ಅಡ್ಡ ಹೆಸರು ಇಟ್ಟು ಕರಿಯೋದು ಜಾಸ್ತಿ ಆಗೇತಪ, ನಮ್ ಜಮೀರ್ ಅಹ್ಮದ್ ಸಾಹೇಬ್ರು ಮೊನ್ನೆ ಕುಮಾರಣ್ಣಂಗೆ ಅದೇನೋ ಅಂದದ್ದು ದೊಡ್ಡ ಸುದ್ದೀನೇ ಆಗೋತು’ ತೆಪರೇಸಿ ಆಕ್ಷೇಪಿಸಿದ.

‘ಜಮೀರ್ ಸಾಹೇಬ್ರು ಈಗ ಯಾರಿಗೆ ಏನರೆ ಹೆಸರಿಟ್ಟು ಕರೀಲಿ, ಅವರು ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದಾಗ್ಲೇ ನಾನು ಅವರಿಗೊಂದು ಹೆಸರಿಟ್ಟಿದ್ದೆ’ ಎಂದ ಗುಡ್ಡೆ.

‘ಹೌದಾ, ಏನದು ಹೆಸರು?’

‘ಜಮೀರ್ ಅಹ್ಮದ್ ಸಿದ್ದುಕಿ... ಅಂತ.’

‘ಮೊದಲೇನಿತ್ತು?’

‘ಜಮೀರ್ ಅಹ್ಮದ್ ಕುಮಾರಣ್ಣಂದುಕಿ... ಅಂತ ಇತ್ತು...’

ಗುಡ್ಡೆ ಕೀಟಲೆಗೆ ಎಲ್ಲರೂ ಮತ್ತೊಮ್ಮೆ ನಕ್ಕರು.

## ಸಂಗತ

# ಚೆಂದದ ಬಾಲ್ಯವೇ ಉಡುಗೊರೆ

ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿದೆ ಅನ್ನುವುದಷ್ಟೇ ಆಗಬಾರದು. ಅವರಿಗೆಷ್ಟು ಪ್ರೀತಿ ಕೊಟ್ಟೆವು, ಬಾಲ್ಯವನ್ನು ಎಷ್ಟರಮಟ್ಟಿಗೆ ಬಿಟ್ಟುಕೊಟ್ಟೆವು ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು

• ಸದಾಶಿವ್ ಸೊರಟೂರು

‘**ಈಗಿನ** ಮಕ್ಕಳಿಗೆ ಒಳ್ಳೆಯ ಬಾಲ್ಯವಿಲ್ಲ’ ಎಂದು ದೊಡ್ಡವರು ಬೇಸರದಿಂದ ಹೇಳುವ ಮಾತನ್ನು ಆಲಿಸಿದಾಗ ಅಚ್ಚರಿಯಾಗುತ್ತದೆ. ಇದು, ಈ ಕಾಲಘಟ್ಟದ ದೊಡ್ಡ ದನಿ. ‘ಈಗಿನ ಮಕ್ಕಳು ಸರಿಯಾಗಿ ತಮ್ಮ ಬಾಲ್ಯವನ್ನು ಕಳೆಯುತ್ತಿಲ್ಲ. ನಮ್ಮ ಬಾಲ್ಯ ಅದ್ಭುತವಾಗಿತ್ತು. ಪಾಪ, ನಮ್ಮ ಬಾಲ್ಯದಲ್ಲಿದ್ದಷ್ಟು ಖುಷಿ ಈಗಿನ ಮಕ್ಕಳಿಗಿಲ್ಲ...’ ಇಂಥವೇ ಕರುಣೆ ಉಕ್ಕಿಸುವ ಮಾತುಗಳು ದೊಡ್ಡವರಿಂದ ಬರುತ್ತವೆ.

ಸುಮ್ಮನೆ ಯೋಚಿಸಿ ನೋಡಿ. ಆಗ ನಿಮ್ಮ ಮನೆಗೊಂದು ಅಂಗಳವಿತ್ತು, ಹಿತ್ತಿಲೂ ಇತ್ತು. ಊರಲ್ಲಿ ಕೆರೆ ಇತ್ತು, ಹರಿಯುವ ನದಿ ಇತ್ತು, ಅಂಗಳದಲ್ಲಿ ಮಣ್ಣಿತ್ತು, ಪಕ್ಕದ ಮನೆಯ ಪುಟಾಣಿಗಳಿಗೂ ಸಮಯವಿತ್ತು. ಹಳ್ಳಿಯಲ್ಲೇ ಬದುಕಿತ್ತು, ನಗರದ ಬಗ್ಗೆ ಒಂದು ಕುತೂಹಲವಿತ್ತು. ಮಕ್ಕಳಲ್ಲಿ ಮುಗ್ಧ ಮನಸ್ಸು ಇತ್ತು, ಅವರಿಗೆ ಅವರದೇ ಕನಸಿತ್ತು. ಬೀದಿ ತುಂಬಾ ಅವರದೇ ಆಟವಿತ್ತು, ಪಾಠ ಕಲಿಸುವ ಶಾಲೆಯಿತ್ತು... ಈಗ ಏನಿದೆ? ಇಷ್ಟೆಲ್ಲಾ ಬದಲಾದರೂ ಮಕ್ಕಳ ಬಾಲ್ಯ ಮಾತ್ರ ಮೊದಲಿನಂತೆಯೇ ಇರಬೇಕೆಂದು ಬಯಸುತ್ತೇವೆ.

ಹಿತ್ತಿಲು ಮರೆಯಾಗಿದೆ. ಅಂಗಳವು ಕಾರು ಪಾರ್ಕಿಂಗ್ ಜಾಗವಾಗಿದೆ. ಕೆರೆ ಮುಚ್ಚಿಹೋಗಿ ಅಲ್ಲಿ ಕಟ್ಟಡ ಬಂದಿದೆ. ನದಿಯು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ! ಅಂಗಳದ ತುಂಬಾ ಸಿಮೆಂಟ್ ಹೊದಿಕೆ ಬಂದಿದೆ. ಈಗ ಯಾರಿಗೂ ಸಮಯವಿಲ್ಲ; ಆದರೆ ಮನೆಗಳಲ್ಲಿ ಒಳ್ಳೆಯ ಗಡಿಯಾರಗಳಿವೆ. ಮಕ್ಕಳ ಮುಗ್ಧ ಲೋಕಕ್ಕೆ ಕಲ್ಲು ಎಸೆಯಲಾಗಿದೆ. ಅವರ ಕನಸನ್ನು ಅವರ ಬದಲು ನಾವು ಕಾಣುತ್ತಿದ್ದೇವೆ. ಆಟವಿಲ್ಲ; ಮಕ್ಕಳನ್ನು ತುಂಬಿಸಿಕೊಂಡು ಹೋಗಲು ಶಾಲೆಯ ಹಳದಿ ಬಸ್ಸು ಸದಾ ಸಿದ್ಧವಿರುತ್ತದೆ. ಕಲಿಕೆ ಅನ್ನುವುದು ಮಗುವಿನ ಮುಂದಿನ ದೊಡ್ಡ ಸವಾಲು ಎನ್ನುವಂತೆ ಭಾಸವಾಗುತ್ತಿದೆ... ಹೇಳಿ ನಿಮ್ಮ ಬಾಲ್ಯವನ್ನು ಮಕ್ಕಳ ಈಗಿನ ಬಾಲ್ಯದ ಜೊತೆ ಹೇಗೆ ಹೋಲಿಸಿಕೊಳ್ಳುತ್ತೀರಿ?

ಮಕ್ಕಳ ಮುಗ್ಧ ಬಾಲ್ಯದೊಳಗೆ ನಾವು ಪದೇ ಪದೇ ಇಣುಕುತ್ತಿದ್ದೇವೆ ಮತ್ತು ಅದನ್ನು ನಿಯಂತ್ರಿಸುತ್ತ ಇದ್ದೇವೆ. ಮಕ್ಕಳ ನಗು ನಮ್ಮ ಅಳತೆಯಲ್ಲಿಯೇ ಇರಬೇಕು. ಅವರ ಅಳು ಕೂಡ ನಮ್ಮ ನಿಲುಕಿನಲ್ಲೇ ಇರಬೇಕು. ನಾವು ‘ಅಂಕಲ್ ಮುಂದೆ ಹಾಡು ಹೇಳು’ ಅಂದಾಗ ಮಗು ಹಾಡಬೇಕು. ಕುಣಿ ಅಂದಾಗ ಕುಣಿಯಬೇಕು. ಮಕ್ಕಳು ಮಲಗುವುದನ್ನೂ ಏಳುವುದನ್ನೂ ನಾವೇ ನಿಯಂತ್ರಿಸುತ್ತೇವೆ.

ಹಾಗಾದರೆ ಮಕ್ಕಳ ಮೇಲೆ ನಮ್ಮ ನಿಯಂತ್ರಣ ಇರಬಾರದೇ ಎಂಬ ಪ್ರಶ್ನೆ ಮೂಡುತ್ತದೆ. ನಮ್ಮದು ನಿಯಂತ್ರಣ ಅಲ್ಲ; ಅದು ಸ್ವಾತಂತ್ರ್ಯಹರಣದ ಹದ್ದು ಮೀರಿದ ಕೆಲಸ. ನಾವು ನಮ್ಮ ಮಕ್ಕಳನ್ನು ನಮ್ಮ ಹೆಗ್ಗಳಿಕೆಯ ಆಟಿಕೆಯಾಗಿ ಬಳಸಿಕೊಳ್ಳುತ್ತ ಇದ್ದೇವೆ. ಮಗು ಬರೆಯುವ ಬರಹವನ್ನು, ಮುದ್ದಾಗಿ ಹಾಡುವ ಹಾಡನ್ನು ವಿಡಿಯೊ ಮಾಡಿ, ಇಂಟರ್ನೆಟ್ ವೇದಿಕೆಗಳ ಮೂಲಕ ಹಂಚಿಕೊಂಡು ಮೆಚ್ಚುಗೆ ಗಳಿಸುತ್ತೇವೆ. ಹಾಡುವುದನ್ನು ನಾವೇ ಕಲಿಸಿರಬಹುದು, ಅದು ನಮ್ಮದೇ ಮಗು ಆಗಿರಬಹುದು. ಆದರೆ ಮಗುವು ಸಂಪೂರ್ಣವಾಗಿ ನಮಗೆ ಸೇರಿದ್ದು ಎಂದು ಭಾವಿಸಬಾರದು. ಮಗುವಿಗೂ ಅದರದೇ ಆದ ಖಾಸಗಿತನ ಇರುತ್ತದೆ.

ನನಗೆ ಪ್ರತಿಬಾರಿಯೂ ಖಲೀಲ್ ಗಿಬ್ರಾನ್‌ನ ಈ ಮಾತು ನೆನಪಾಗುತ್ತದೆ. ಇದು ಹಳೆಯದಾದರೂ ಮಕ್ಕಳನ್ನು ನಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಹವಣಿಸುವಾಗ ನೆನಪಾಗುತ್ತದೆ. ಆ ಮಾತು ಹೀಗಿದೆ: ‘ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ಅವರು ನಿಮ್ಮ ಮೂಲಕ ಬರುತ್ತಾರೆಯೇ ವಿನಾ ನಿಮ್ಮಿಂದ ಅಲ್ಲ. ಅವರು ನಿಮ್ಮೊಂದಿಗೇ ಇದ್ದರೂ ನಿಮ್ಮ ಒಡೆತನಕ್ಕೆ ಒಳಪಟ್ಟವರಲ್ಲ. ನಿಮ್ಮ ಒಲವನ್ನು ಅವರಿಗೆ ನೀವು ನೀಡಬಹುದು, ಆಲೋಚನೆಗಳನ್ನಲ್ಲ. ಅವರಿಗಿದೆ ಅವರವೇ ಆದ ಆಲೋಚನೆಗಳು...’

‘ನಿಮ್ಮ ಮಕ್ಕಳಿಗೆ ನೀವು ಏನಾದರೂ ಕೊಡಬೇಕು ಎಂದು ಬಯಸಿದರೆ ಅವರಿಗೆ ಒಳ್ಳೆಯ ಬಾಲ್ಯವನ್ನು ಕೊಡಿ. ಒಳ್ಳೆಯ ಬಾಲ್ಯ ಒಳ್ಳೆಯ ವ್ಯಕ್ತಿತ್ವ ರೂಪಿಸಬಲ್ಲದು. ನೀವು ಈಗ ಏನಾಗಿದ್ದರೂ ಅದು ನಿಮಗೆ ದಕ್ಕಿದ ಬಾಲ್ಯದ ಕಾಣಿಕೆಯೇ ಆಗಿದೆ...’ ಎನ್ನುತ್ತಾರೆ ಶಿಕ್ಷಣ ತಜ್ಞ ಜಾನ್ ಡ್ಯೂಯಿ.



ಮಕ್ಕಳನ್ನು ಮಕ್ಕಳಂತೆ ನೋಡುವ ಹೊಸ ಕಾಲವೊಂದು ಬರಬೇಕಿದೆ. ಇಂದು ಬಾಲ್ಯ ಚೆನ್ನಾಗಿಲ್ಲ ಅನ್ನುವ ದೂರಿದೆ. ಅದು ಮಕ್ಕಳ ದೂರಲ್ಲ, ಅದು ನಮ್ಮದೇ ದೂರು. ಯಾಕೆಂದರೆ ನಾವು ತಕ್ಕಮಟ್ಟಿಗೆ ಒಳ್ಳೆಯ ಬಾಲ್ಯವನ್ನು ಉಂಡು ಬಂದವರು. ಅದು ನಮ್ಮ ಮಕ್ಕಳಿಗೆ ಇಲ್ಲವೆಂದು ಅರಿವಾಗಿಯೂ ನಾವು ಸುಮ್ಮನೆ ದೂರುತ್ತಾ ಕೂರುವುದರಲ್ಲಿ ಅರ್ಥವಿಲ್ಲ.

ಲೇಖಕಿ ಬೆಲ್ ಹುಕ್ ‘ಪ್ರತಿನಿತ್ಯವೂ ಅದೆಷ್ಟು ಮಕ್ಕಳು ಹೆತ್ತವರ ಪ್ರೀತಿಗಾಗಿ ಹಸಿದು ಸಾಕಾಗಿ ಮಲಗುತ್ತಾರೋ ಏನೋ... ಅದರಲ್ಲೂ ಅಪ್ಪನ ಪ್ರೀತಿಗಾಗಿ ಮಕ್ಕಳು ಪ್ರತಿಕ್ಷಣ ಒದ್ದಾಡುತ್ತಾರೆ...’ ಎನ್ನುತ್ತಾರೆ.

ಮಕ್ಕಳಿಗೆ ಒಳ್ಳೆಯ ಶಾಲೆ ಹಾಗೂ ಓದು ಕೊಡಿಸಿದೆ ಅನ್ನುವುದಷ್ಟೇ ಆಗಬಾರದು. ಅವರಿಗೆಷ್ಟು ಪ್ರೀತಿ ಕೊಟ್ಟೆವು, ಅವರ ಬಾಲ್ಯವನ್ನು ಅವರಿಗೆ ಎಷ್ಟರ ಮಟ್ಟಿಗೆ ಬಿಟ್ಟುಕೊಟ್ಟೆವು, ಅವರನ್ನು ಅದೆಷ್ಟು ಪ್ರೀತಿಸಿದೆವು, ಮಕ್ಕಳನ್ನು ಬರೀ ಮಕ್ಕಳನ್ನಾಗಿ ಎಷ್ಟು ಕಂಡೆವು, ಅವರ ಜೊತೆ ಎಷ್ಟು ಹೊತ್ತು ಕಳೆದೆವು? ಇಂತಹ ಪ್ರಶ್ನೆಗಳನ್ನು ನಮಗೇ ಕೇಳಿಕೊಂಡರೆ, ಉತ್ತರ ಒಂದು ಸುದೀರ್ಘ ಮೌನವಷ್ಟೆ... ಮಕ್ಕಳ ದಿನಾಚರಣೆ ಸಂದಿದೆ. ದಿನಾಚರಣೆಯ ಮಾತು, ಭಾಷಣಗಳಲ್ಲಿ ನಮ್ಮ ಮಕ್ಕಳು ತೊಯ್ದುಹೋಗದೆ ಅವರತನ ಅವರಿಗೆ ದಕ್ಕಲಿ. ನಾಳಿನ ನಾಡು ಚೆಂದವಾಗಲಿ.

## ವಾಚಕರ ವಾಣಿ

### ಸರಳ ಮದುವೆ: ಅನುಕರಣೀಯ ನಡೆ

‘ಮದುವೆ ಖರ್ಚಿನಲ್ಲಿ ಶಾಲೆಗಳಿಗೆ ನೀರಿನ ಯಂತ್ರ’ (ಪ್ರ.ವಾ., ನ. 13). ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಹೊನ್ನವಳ್ಳಿ ಬಿದಿರುಮೆಳೆ ಕೊಪ್ಪಲಿನ ಎಂಜಿನಿಯರ್ ಶಿವಕುಮಾರ್- ಸಂಗೀತಾ ಸರಳವಾಗಿ ಮದುವೆಯಾಗಿ, ಉಳಿದ ಹಣವನ್ನು ಬಳಸಿ ಹೋಬಳಿಯ 26 ಸರ್ಕಾರಿ ಶಾಲೆಗಳಿಗೆ ಒಟ್ಟು ₹ 5 ಲಕ್ಷ ವೆಚ್ಚದಡಿ ಕುಡಿಯುವ ನೀರಿನ ಶುದ್ಧೀಕರಣ ಯಂತ್ರಗಳನ್ನು ಕೊಡುಗೆಯಾಗಿ ನೀಡಿರುವುದು ಶ್ಲಾಘನೀಯ. ಇವತ್ತಿನ ದಿನಗಳಲ್ಲಿ ಉಳ್ಳವರು ಬಿಡಿ, ಆರ್ಥಿಕವಾಗಿ ಸಬಲರಲ್ಲದವರೂ ಸಾಲಸೋಲ ಮಾಡಿ ಮದುವೆಗಾಗಿ ಲಕ್ಷಗಟ್ಟಲೆ ಹಣ ವ್ಯಯಿಸುವುದನ್ನು ನಾವು ನೋಡುತ್ತೇವೆ. ಆದರೆ ಶಿವಕುಮಾರ್- ಸಂಗೀತಾ ಜೋಡಿ ಇರಿಸಿರುವ ಈ ನಡೆ ಇತರರಿಗೂ ಅನುಕರಣೀಯ.

**ನಿಖಿತಾ ಶಶಾಂಕ್ ಭಟ್,** ಬೆಂಗಳೂರು

### ಕನ್ನಡದಲ್ಲಿ ಪ್ರಶ್ನೆಪತ್ರಿಕೆ: ಪ್ರಾಧಿಕಾರಕ್ಕೆ ಆಗದೇ?

ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ಪ್ರಶ್ನೆಪತ್ರಿಕೆಯನ್ನು ಕನ್ನಡದಲ್ಲಿಯೂ ನೀಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಸೂಚಿಸಿರುವುದು (ಪ್ರ.ವಾ., ನ.14) ಸರಿಯಾಗಿದೆ. ಕೆ-ಸೆಟ್ ಪರೀಕ್ಷೆಯ ಮನೋವಿಜ್ಞಾನ ಪ್ರಶ್ನೆಪತ್ರಿಕೆಯನ್ನು ಇಂಗ್ಲಿಷ್‌ನಲ್ಲಿ ಮಾತ್ರವೇ ನೀಡುವ ನಿರ್ಧಾರ ಸರಿಯಲ್ಲ. ಇತ್ತೀಚಿನ ವರ್ಷಗಳಲ್ಲಿ ಪ್ರಶ್ನೆ ಪತ್ರಿಕೆಗಳ ಕನ್ನಡ ಅನುವಾದ ಸರಿಯಾಗಿ ಆಗದಿರುವ ಕಾರಣ ಅಭ್ಯರ್ಥಿಗಳು ಗೊಂದಲಕ್ಕೀಡಾಗಿ ಅಂಕಗಳನ್ನು ಕಳೆದುಕೊಳ್ಳುತ್ತಿರುವ ಅಪಾಯ ಹೆಚ್ಚಾಗುತ್ತಿದೆ. ಇನ್ನು ಕೆಲವೇ ದಿನಗಳಲ್ಲಿ ಕೆ-ಸೆಟ್ ಪರೀಕ್ಷೆ ಇರುವುದರಿಂದ ಮತ್ತು ಈಗಾಗಲೇ ಪ್ರಶ್ನೆಪತ್ರಿಕೆ ಸಿದ್ಧವಾಗಿರುವುದರಿಂದ ಇಂಗ್ಲಿಷ್ ಜೊತೆಗೆ ಕನ್ನಡ ಭಾಷೆಯಲ್ಲಿ ಸಹ ಈ ಪ್ರಶ್ನೆಪತ್ರಿಕೆಯನ್ನು ಪೂರೈಸಲು ಸಾಧ್ಯವಿದೆಯೇ ಎನ್ನುವ ಪ್ರಶ್ನೆ ಮೂಡುತ್ತದೆ.

ಮನೋವಿಜ್ಞಾನಕ್ಕೆ ಸಂಬಂಧಿಸಿದ ವಿಷಯ ಮತ್ತು ಪರಿಭಾಷೆಗಳನ್ನು ಕನ್ನಡಕ್ಕೆ ಅನುವಾದ ಮಾಡಲು ಸಾಧ್ಯವಿಲ್ಲ ಎಂಬ ಮಾತು ಹಾಸ್ಯಾಸ್ಪದ. ಅನೇಕ ಕನ್ನಡ ವಿದ್ವಾಂಸರು ಕನ್ನಡ ಭಾಷೆಗೆ ಸರಿಸಮಾನವಾಗಿ ಇಂಗ್ಲಿಷ್ ಭಾಷೆಯಲ್ಲೂ ಪ್ರಾವೀಣ್ಯ ಪಡೆದಿದ್ದಾರೆ. ಅಂಥವರ ನೆರವನ್ನು ಪಡೆದು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಾಧ್ಯವಿಲ್ಲವೇ?

**ಪ್ರೊ. ಬಸಪ್ಪ ಯ.ಬಂಗಾರಿ,** ಬೆಂಗಳೂರು

### ಬಾಕು ಸಮ್ಮೇಳನ: ದೃಢ ನಿರ್ಧಾರ ಅಗತ್ಯ

ಜಾಗತಿಕ ತಾಪಮಾನ ಹೆಚ್ಚಳದ ಬಿಸಿ ತಟ್ಟುತ್ತಿರುವ ಸಂದರ್ಭದಲ್ಲಿ ಹವಾಮಾನ ಬದಲಾವಣೆ ತಡೆಗಾಗಿ ಜಗತ್ತಿನ ಪ್ರಮುಖ ದೇಶಗಳು ನವೆಂಬರ್ 11ರಿಂದ ಹತ್ತು ದಿನಗಳ ಕಾಲ ಬಾಕು ನಗರದಲ್ಲಿ ಸಭೆ ನಡೆಸುತ್ತಿವೆ. ವಾತಾವರಣಕ್ಕೆ ಬಿಡುಗಡೆಯಾಗುವ ಮಲಿನಕಾರಕಗಳಿಂದ ಜಗತ್ತು ಅತಿಯಾದ ತಾಪಕ್ಕೆ ತುತ್ತಾಗುತ್ತಿದೆ.

ಈ ವರ್ಷ ಬಿಸಿಗಾಳಿ, ಚಂಡಮಾರುತ, ಅತಿಮಳೆ, ಭೂಕುಸಿತದಂತಹ ಹಲವು ವೈಪರೀತ್ಯಗಳಿಗೆ ಜಗತ್ತಿನ ಹಲವು ರಾಷ್ಟ್ರಗಳು ತುತ್ತಾಗಿವೆ. ಇದನ್ನು ಗಮನದಲ್ಲಿ ಇರಿಸಿಕೊಂಡು ದೃಢಹೆಜ್ಜೆ ಇಡಬೇಕಾಗಿದೆ. ಅಧಿಕೃತವಾಗಿ ಇಂತಹ ಸಭೆಗಳೇನೋ ನಡೆದುಹೋಗುತ್ತವೆ. ತೆಗೆದುಕೊಂಡ ನಿರ್ಧಾರಗಳು, ಘೋಷವಾಕ್ಯಗಳು ಕೇಳಲು ಆಕರ್ಷಣೀಯವಾಗಿ ಇರುತ್ತವೆ. ಆದರೆ ನಂತರ ಅವುಗಳ ಅನುಷ್ಠಾನ, ನಿಯಮಗಳ ಪಾಲನೆ ಎಲ್ಲವೂ ನಿರ್ಲಕ್ಷ್ಯಕ್ಕೆ ಒಳಪಡುತ್ತವೆ. ಬಾಕು ಸಮ್ಮೇಳನ ಕೂಡ ಅದೇ ರೀತಿ ಆಗದಿರಲಿ.

**ಅಮರ್ ಹೀರಾ,** ರಾಯಚೂರು

### ಹರಿಯುವ ನೀರಿಗೆ ಸೆಸ್?

ಪಶ್ಚಿಮಘಟ್ಟ ಪ್ರದೇಶದಲ್ಲಿ ಹುಟ್ಟಿ, ಹರಿಯುವ ನದಿಗಳ ನೀರು ಬಳಸುವ ನಗರಗಳಿಗೆ ಹಸಿರು ಸೆಸ್ ವಿಧಿಸಲು ಅರಣ್ಯ ಇಲಾಖೆ ಚಿಂತನೆ ನಡೆಸಿರುವುದಾಗಿ ವರದಿಯಾಗಿದೆ. ಈ ಕುರಿತು ಪ್ರಸ್ತಾವ ಸಲ್ಲಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದು ಪಶ್ಚಿಮಘಟ್ಟವನ್ನು ಸಂರಕ್ಷಿಸಲು ಹಸಿರು ಸೆಸ್ ವಿಧಿಸುವ ಅಗತ್ಯ ಇದೆ ಎಂದಿದ್ದಾರೆ.

ಹರಿವ ನೀರಿಗೆ ದೊಣೆ ನಾಯಕನ ಅಪ್ಪಣೆಯೇ ಎಂಬ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ. ಉಚಿತವಾಗಿ ಸಿಕ್ಕರೆ ಬೇಕಾಬಿಟ್ಟಿ ಬಳಸುತ್ತಾ ಅದನ್ನು ಪೋಲು ಮಾಡಿ ಹಾಳುಗೆಡವುವರ ಸಂಖ್ಯೆಯೇನೂ ಕಡಿಮೆ ಇಲ್ಲ. ಹಾಗೆಂದು ಸೆಸ್ ವಿಧಿಸುತ್ತಾ ಸಾಗಿದರೆ ಕೊನೆ ಮೊದಲಿಲ್ಲ. ಜೊತೆಗೆ ವಿಧಿಸಿದ ಸೆಸ್ ಹಣ ಅದೇ ಉದ್ದೇಶಕ್ಕೆ ಬಳಕೆ ಆಗುತ್ತದೆ ಎಂಬುದೂ ಖಾತರಿ ಇಲ್ಲ. ಇದಕ್ಕೆ ಭಿಕ್ಷುಕರ ಸೆಸ್, ಗ್ರಂಥಾಲಯ ಸೆಸ್ ಮುಂತಾದವನ್ನು ಉದಾಹರಿಸಬಹುದು. ನಾನಾ ಹೆಸರುಗಳಲ್ಲಿ ಸಂಗ್ರಹಿಸುವ ಸೆಸ್ ಹಣವನ್ನು, ಸಂಗ್ರಹಿಸಿದ ಉದ್ದೇಶಕ್ಕೆ ಮಾತ್ರವೇ ವ್ಯಯಿಸಿದರೆ ಒಳಿತು. ಇಲ್ಲವಾದರೆ ಸೆಸ್ ಅರ್ಥಹೀನ. ಹಾಗಾಗಿ ಸೆಸ್ ಚಿಂತನೆ ಬಿಟ್ಟು ಪಶ್ಚಿಮಘಟ್ಟಗಳ ಉಳಿವಿಗೆ ವಿಶೇಷ ಅನುದಾನ ನೀಡುವತ್ತ ಗಮನಹರಿಸಲಿ.

**ಪತ್ತಂಗಿ ಎಸ್. ಮುರಳಿ,** ಬೆಂಗಳೂರು

### ಪಾದಚಾರಿ ಮಾರ್ಗ ಒತ್ತುವರಿ: ಪರಿಹಾರ ಕಷ್ಟಸಾಧ್ಯ

ರಸ್ತೆ ಮೇಲೆ ವ್ಯಾಪಾರಕ್ಕೆ ಅವಕಾಶ ಇಲ್ಲ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ (ಪ್ರ.ವಾ., ನ.13). ಈ ಮಾತು ಹೊಸದೇನಲ್ಲ ಹಾಗೂ ಈ ಸಮಸ್ಯೆ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾದುದಲ್ಲ. ಇದು ಕರ್ನಾಟಕದ ಬಹುತೇಕ ಎಲ್ಲ ನಗರ ಹಾಗೂ ಪಟ್ಟಣಗಳ ಸಮಸ್ಯೆ. ನಗರಗಳ ಕೆಲವು ಮುಖ್ಯ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳಷ್ಟೇ ಅಲ್ಲದೆ ರಸ್ತೆಗಳನ್ನು ಸಹ ಆಕ್ರಮಿಸಿ ನಿರ್ಭಯವಾಗಿ ವ್ಯಾಪಾರ ವಹಿವಾಟನ್ನು ಮಾಡುತ್ತಿದ್ದಾರೆ. ಯಾವುದೇ ಪಕ್ಷವಾಗಲಿ, ಯಾವ ಅಧಿಕಾರಿಗಳೇ ಆಗಲಿ ಇಂಥವರನ್ನು ಏನೂ ಮಾಡಲಾಗದ ಪರಿಸ್ಥಿತಿ ಇದೆ. ಅವರನ್ನು ಎದುರುಹಾಕಿಕೊಂಡರೆ ಎಲ್ಲಿ ತಮ್ಮ ವೋಟಿಗೆ ಸಂಚಕಾರ ಬರುತ್ತದೆಯೋ ಎಂಬ ಆತಂಕ ನಮ್ಮ ಜನಪ್ರತಿನಿಧಿಗಳಿಗೆ ಇರುವುದೇ ಇದಕ್ಕೆ ಮುಖ್ಯ ಕಾರಣ.

ಜನಪ್ರತಿನಿಧಿಗಳ ಈ ದೌರ್ಬಲ್ಯವನ್ನು ಇಂತಹ ವ್ಯಾಪಾರಿಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿರಬಹುದು. ಈ ಸಮಸ್ಯೆಯು ಪಾದಾಚಾರಿಗಳಿಗೆ ಮಾತ್ರವಲ್ಲದೆ ವಾಹನ ಸವಾರರನ್ನೂ ಕಾಡುತ್ತದೆ. ಮುಖ್ಯ ರಸ್ತೆಗಳಲ್ಲಿ ಇಂತಹ ವ್ಯಾಪಾರಿಗಳನ್ನು ಪೊಲೀಸರು ಒಂದುಕಡೆಯಿಂದ ಎತ್ತಂಗಡಿ ಮಾಡುತ್ತಾ ಹೋದಂತೆ, ಅವರು ಮತ್ತೆ ಅಲ್ಲೇ ವ್ಯಾಪಾರ ಆರಂಭಿಸುವುದನ್ನು ನಾವೆಲ್ಲರೂ ನೋಡಿರುತ್ತೇವೆ. ಜನಪ್ರತಿನಿಧಿಗಳಲ್ಲಿ ಇಚ್ಛಾಶಕ್ತಿ ಮೂಡಿದರೆ, ಸಾರ್ವಜನಿಕ ಹೋರಾಟ ತೀವ್ರಗೊಂಡರೆ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ.

**ಕಡೂರು ಫಣಿಶಂಕರ್,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

# ಪರಿಸರ ವರ್ಧನೆ ಹೊಸ ಬೆಳಕಿನ ಸೂಚನೆ

ಹವಾಮಾನ ವೈಪರೀತ್ಯದ ಈ ಹೊತ್ತಲ್ಲಿ, ಎಲ್ಲರೂ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡುತ್ತಿದ್ದಾರೆ. ಯಾರದ್ದೋ ಹಿತಾಸಕ್ತಿಗಾಗಿ ಅಲ್ಲ, ನಮ್ಮ ಉಳಿವಿಗೆ, ನಮ್ಮೆಲ್ಲರ ಭವಿಷ್ಯಕ್ಕಾಗಿ ನಾವು ಪರಿಸರದ ಕುರಿತು ಜಾಗೃತರಾಗಬೇಕಾಗಿದೆ. ಈ ದಿಸೆಯಲ್ಲಿ ಇಡೀ ಜಗತ್ತಿಗೆ ಆದರ್ಶರಾಗುವ ಅವಕಾಶ ಈಗ ನಮ್ಮ ಮುಂದಿದೆ

• ರಾಮಸ್ವಾಮಿ ಹುಲಕೋಡು



**ಹಸುರತ್ತಲ್! ಹಸುರಿತ್ತಲ್!**
**ಹಸುರೆತ್ತಲ್ ಕಡಲಿನಲಿ**
**ಹಸುರುಗಟ್ಟಿತೊ ಕವಿಯಾತ್ಮಂ**
**ಹಸುರ್‌ನೆತ್ತರ್ ಒಡಲಿನಲಿ!**

ರಾಷ್ಟ್ರಕವಿ ಕುವೆಂಪು ಅವರ ಕವಿಯಾತ್ಮ ಹಸಿರುಗಟ್ಟಿತ್ತು. ದೇಹದಲ್ಲೂ ಹಸಿರು ರಕ್ತವೇ ಹರಿದಾಡುತ್ತಿತ್ತು. ಹೀಗೆ ಎಲ್ಲೆಲ್ಲೂ ಹಸಿರೇ ತುಂಬಿರಬೇಕೆಂದು ಕವಿ ಆಶಿಸಿದ್ದರು. ಅದರ ಶೃಂಗದಂತೆ ಬೀಜದಂತೆ ಬಣ್ಣಿಸಲಾಗುವ ಈ ಕವನವು 'ಇನ್ನೂ ಹಸಿರಾಗಿದೆ'. ಎಲ್ಲಿ ನಮ್ಮ ಮನಸ್ಸು ದೇಹವೆಲ್ಲಾ ಹಸಿರಾಗುತ್ತದೋ, ನಾಡು ಹಸಿರಾಗಿರಬೇಕು ಎಂದು ನಾವೆಲ್ಲರೂ ಕಾಯುತ್ತಿದ್ದೇವೆ. ಐದು ದಶಕಗಳಲ್ಲಿ ನಡೆದ ಕೆಲವು 'ಹಸಿರು' ಚಳವಳಿಗಳು ಮಾದರಿಯಾಗಿವೆ. ಹಸಿರು ಹಾದಿಯ ತೋರಿವೆ, ಬದುಕನ್ನು ಹಸನಾಗಿಸಿವೆ.

## ಪರಿಸರ ಒಪ್ಪಿದೆವು ಅಪ್ಪಿದೆವು

'ಸರ್ಕಾರಿ ಅಧಿಕಾರಿಗಳು, ಆಗಾಗ್ಗೆ ತನ್ನ ಭಾಷಣಗಳಲ್ಲಿ ಪರಿಸರ ಪ್ರೇಮ ಸ್ಫುರಿಸುತ್ತಿದ್ದ ಇಂದಿರಾಗಾಂಧಿಯವರಲ್ಲಿ ಭಾರತದ ಪರಿಸರ ಪ್ರೇಮದ ಮೂಲವನ್ನು ಕಾಣಬಹುದು. ಆದರೆ ಭಾರತದ ಪರಿಸರ ಚಳವಳಿ ಎಂಬುದರ ಮೂಲ ಚಿಪ್ಕೋ ಆಂದೋಲನದಲ್ಲಿದೆ' ಎನ್ನುತ್ತಾರೆ ಹೆಸರಾಂತ ಪರಿಸರ ಚಿಂತಕರಾದ ಪ್ರೊ.ಮಾಧವ ಗಾಡ್ಗಿಲ್ ಮತ್ತು ರಾಮಚಂದ್ರ ಗುಹಾ. ಹೀಗೆಯೇ, ನಮ್ಮ ರಾಜ್ಯದ ಪರಿಸರ ಚಳವಳಿಯ ಮೂಲವನ್ನು ಚಿಪ್ಕೋ ಚಳವಳಿಯಿಂದ ಪ್ರೇರಣೆ ಗೊಂಡಿದ್ದ 'ಅಪ್ಪಿಕೋ' ಚಳವಳಿಯಲ್ಲಿ ಗುರುತಿಸಬಹುದು.

1983ರ ಸೆಪ್ಟೆಂಬರ್ 8ರಂದು ಶಿರಸಿ ತಾಲ್ಲೂಕಿನ ಕಳಸೆ ಕಾಡಿನಿಂದ ಆರಂಭವಾದ 'ಚಿಪ್ಕೋ' ಮಾದರಿಯಲ್ಲಿಯೇ, ಅರಣ್ಯ ಕಡಿತಲೆಯನ್ನು ತಡೆಯಲು 'ಅಪ್ಪಿಕೋ' ಚಳವಳಿಯನ್ನು ಅಲ್ಲಿನ ಸ್ಥಳೀಯರು, ಅದರಲ್ಲಿಯೂ ಮುಖ್ಯವಾಗಿ ಯುವಕರು, ಮಹಿಳೆಯರು ಮತ್ತು ಶಾಲಾ ಮಕ್ಕಳು ನಡೆಸಿದ್ದರು. ಅಲ್ಪ ಸಮಯದಲ್ಲಿಯೇ ಉತ್ತರ ಕನ್ನಡದಿಂದ ಕೊಡಗಿನವರೆಗೆ ಈ ಚಳವಳಿ ಹಬ್ಬಿತ್ತು. ನೈಸರ್ಗಿಕ ಕಾಡನ್ನು ಕಡಿದು ಏಕ ಜಾತಿಯ ಸಾಗುವಾನಿ ನೆಡುತೋಪು ನಿರ್ಮಾಣ ಮತ್ತು ಪ್ಲೈವುಡ್ ಕಾರ್ಖಾನೆಗಳಿಗೆ ನೀಡಲಾಗುವ ಅತಿ ಕಡಿಮೆ ದರದ ಕಚ್ಚಾ ವಸ್ತು ಪೂರೈಕೆ ವಿರುದ್ಧ ಈ ಹೋರಾಟ ನಡೆದಿತ್ತು. ಕೊನೆಗೆ, ಈ ಜನಾಂದೋಲನಕ್ಕೆ ಮಣಿದು, ಅರಣ್ಯದಲ್ಲಿನ ಹಸಿರು ಮರಗಳನ್ನು ಕಡಿಯುವುದನ್ನು ಸಂಪೂರ್ಣವಾಗಿ ನಿಷೇಧಿಸುವ ಆಜ್ಞೆಯನ್ನು ರಾಜ್ಯ ಸರ್ಕಾರ ಹೊರಡಿಸಿತು.

80ರ ದಶಕದಲ್ಲಿಯೇ ಪರಿಸರಕ್ಕೆ ಸಂಬಂಧಿಸಿ ನಡೆದ ಇನ್ನೊಂದು ಬಹುದೊಡ್ಡ ಆಂದೋಲನ, 'ಪಶ್ಚಿಮಘಟ್ಟ ಉಳಿಸಿ ಅಭಿಯಾನ'. 1987ರಲ್ಲಿ ಕೊಡಗಿನ ತಲಕಾವೇರಿಯಿಂದ ಆರಂಭಗೊಂಡಿದ್ದ ಈ ಪಾದಯಾತ್ರೆ ಉತ್ತರ ಕನ್ನಡದ ಸೂಪಾ ಮೂಲಕ ಗೋವಾವನ್ನು ಪ್ರವೇಶಿಸಿತ್ತು. ಪಶ್ಚಿಮಘಟ್ಟದ ಮಹತ್ವ ಮತ್ತು ಅರಣ್ಯ ಸಂರಕ್ಷಣೆಯ ಅನಿವಾರ್ಯ ಕುರಿತು ಜಾಗೃತಿ ಮೂಡಿಸುವಲ್ಲಿ ಈ ಆಂದೋಲನ ಯಶಸ್ವಿಯಾಗಿತ್ತು.

ಈ ಪಾದಯಾತ್ರೆಯನ್ನು ಉದ್ಘಾಟಿಸಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಶಿವರಾಮ ಕಾರಂತರು, 'ಅರಣ್ಯಗಳ ಮರ ಕಡಿದು, ಅಲ್ಲಿ ಗಣಿ ಅಗೆದು, ಲೂಟಿ ಮಾಡಿ ತಮ್ಮ ಬದುಕನ್ನು ನಡೆಸುವವರಲ್ಲಿ ಅರಣ್ಯನಾಶದಿಂದ ಎಷ್ಟೆಲ್ಲ ಹಾನಿಯಾಗಿದೆ ಎಂದು ಹೇಳಿದರೂ ತಿಳಿಯಲಾರದ ಅಜ್ಞಾನ ತುಂಬಿದೆ. ಶಕ್ತಿ ಉತ್ಪಾದನೆಯ ನೆಪದಲ್ಲಿ, ಉದ್ಯಮ ವರ್ಧನೆಯ ನೆಪದಲ್ಲಿ ಇನ್ನೂ ಉಳಿದಿರುವ ನೈಸರ್ಗಿಕ ಸಂಪತ್ತನ್ನು ನಾವು ಕೊಚ್ಚಿ ಕಡಿದು- ಮುಗಿಸುತ್ತಾ ಬಂದಿದ್ದೇವೆ. ಇದು ಇಲ್ಲಿಗೇ ನಿಲ್ಲಬೇಕು' ಎಂದು ಗುಡುಗಿದ್ದರು.

### ಪರಿಸರ ಜಾಗೃತಿ ಮೂಡಿಸಿದ ಸುಂದರಲಾಲ್ ಬಹುಗುಣ

ಉತ್ತರ ಕನ್ನಡದ ಶಿರಸಿಯಲ್ಲಿ 1981ರ ಜನವರಿಯಲ್ಲಿ ಬೃಹತ್ ಅಣೆಕಟ್ಟುಗಳ ಸಾಧಕ ಬಾಧಕಗಳ ಚರ್ಚೆಗೆ ರಾಷ್ಟ್ರ ಮಟ್ಟದ ಸಮ್ಮೇಳನವೊಂದನ್ನು ಆಯೋಜಿಸಲಾಗಿತ್ತು. ಆ ಸಮ್ಮೇಳನದಲ್ಲಿ ಚಿಪ್ಕೋ ಖ್ಯಾತಿಯ ಸುಂದರಲಾಲ್ ಬಹುಗುಣ ಭಾಗವಹಿಸಿದ್ದರು. ಹೀಗೆ ಬಂದವರು ರಾಜಸ್ಥಾನದಲ್ಲಿ ಮರ ಕಡಿಯುವುದನ್ನು ತಪ್ಪಿಸಲು ಹೋಗಿ ಜೀವ ಕೊಟ್ಟ ಅಮೃತಾ ಕತೆ ಹೇಳುತ್ತಲೇ ಚಿಪ್ಕೋ ಚಳವಳಿಯ ಯಶಸ್ಸನ್ನು ಮನವರಿಕೆ ಮಾಡಿಕೊಡುತ್ತಾ, ರಾಜ್ಯದಲ್ಲಿ ಅಪ್ಪಿಕೋ ಚಳವಳಿ ಆರಂಭವಾಗಲು ಕಾರಣಕರ್ತರಾದರು.

ಮುಂದೆ ನಾಲ್ಕಾರು ಬಾರಿ ರಾಜ್ಯಕ್ಕೆ ಬಂದರು. ತುಂಗಾ ಮೂಲ ಉಳಿಸಿ ಹೋರಾಟ, ಗುಂಡ್ಯ ಜಲವಿದ್ಯುತ್ ಯೋಜನೆ ವಿರುದ್ಧದ ಹೋರಾಟ ಸೇರಿದಂತೆ ಅನೇಕ ಪರಿಸರ ಹೋರಾಟಗಳಲ್ಲಿ ಅವರು ಭಾಗವಹಿಸಿದ್ದರು. ರಾಜ್ಯದ ಪರಿಸರವಾದಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮಾರ್ಗದರ್ಶನ ನೀಡಿದರು.

ಇವರ ಬಾಯಿಂದ ಅಮೃತಾ ಕತೆ ಕೇಳಿದ ಪಿ. ಲಂಕೇಶ್ ಅವರು ಟೀಕೆ-ಟಿಪ್ಪಣಿಯಲ್ಲಿ ಹೀಗೆ ದಾಖಲಿಸಿದ್ದಾರೆ: 'ನಾವು ಉಣ್ಣುವ ಅನ್ನ, ಜೀವ ಕೊಡುವ ಉಸಿರು, ನೀರು, ನೆರಳು, ಗಂಧ, ಉಡುಪು, ವಸತಿ ಎಲ್ಲದಕ್ಕೂ ಕಾರಣವಾದ ಸಸ್ಯರಾಶಿಯ ಬಗೆಗಿನ ಅಮೃತಮಯ ಕತೆಯನ್ನು ಸುಂದರಲಾಲ್ ಬಹುಗುಣ ಎಂಬ ಹಿಮಾಲಯದ ತಪಸ್ವಿ ಎಲ್ಲ ನಮಗೆ ಹೇಳಿದರು. ಕನ್ನಡ ನಾಡಿನ ಎಲ್ಲ ಜಾಣ ಜಾಣೆಯರ ಮನಸ್ಸಿನಲ್ಲಿ ಈ ಅಮೃತಮಯ ಕತೆ ಅನುರಣಿಸಲೆಂದು, ನಮ್ಮ ಸಸ್ಯ ಸಂಪತ್ತು ಸಜೀವವಾಗಿ ಉಳಿಯುವಂತಾಗಲೆಂದು ಆಶಿಸುವೆ'.



ಸುಂದರಲಾಲ್ ಬಹುಗುಣ ಮತ್ತು ಪಾಂಡುರಂಗ ಹೆಗಡೆ ಮರವನ್ನು ಅಪ್ಪಿಕೊಂಡು ಅಪ್ಪಿಕೋ ಚಳವಳಿಗೆ ಚಾಲನೆ ನೀಡಿದ ಸಂದರ್ಭ (ಸಂಗ್ರಹ ಚಿತ್ರ)

ಈ ಅಭಿಯಾನದ ಬೆನ್ನಲ್ಲೇ ಉತ್ತರ ಕನ್ನಡದಲ್ಲಿ ಕೈಗಾ ಅಣು ಸ್ಥಾವರ ಸ್ಥಾಪನೆ ವಿರುದ್ಧ ಹೋರಾಟ ಆರಂಭಗೊಂಡಿತ್ತು. ಸಾಹಿತಿ ಶಿವರಾಮ ಕಾರಂತರ ನೇತೃತ್ವ ವಹಿಸಿದ್ದರು. ಇದನ್ನು ಚುನಾವಣಾ ವಿಷಯವಾಗಿಸುವ ಉದ್ದೇಶದಿಂದ 1989ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸಿದ್ದರು ಕೂಡ. ಆದರೆ, ಈ ಹೋರಾಟಕ್ಕೆ ಫಲ ಸಿಗಲಿಲ್ಲ. ಹರಿಹರದ ಪಾಲಿಫೈಬರ್ ಕಾರ್ಖಾನೆಯ ಮಾಲಿನ್ಯದ ವಿರುದ್ಧ ನಡೆದ ಚಳವಳಿ ಕೂಡ 80ರ ದಶಕದಲ್ಲಿಯೇ ನಡೆದ ಮತ್ತೊಂದು ಪರಿಸರ ಹೋರಾಟವಾಗಿತ್ತು.

ಕರ್ನಾಟಕ ಚಿನ್ನದ ಹೊಳಪು

1981ರ ಜನವರಿಯಲ್ಲಿ 'ಪ್ರಜಾವಾಣಿ'ಯು 'ವಿಷದ ನೆರಳಿನಲ್ಲಿ ನಲುಗಲು' ಎಂಬ ಸಂದರ್ಶನದ ವರದಿಯನ್ನು ಪ್ರಕಟಿಸುವ ಮೂಲಕ ಈ ಕಾರ್ಖಾನೆಯ ಮಾಲಿನ್ಯದ ಕುರಿತು ರಾಜ್ಯದ ಗಮನ ಸೆಳೆದಿತ್ತು. ಮುಂದೆ ಧಾರವಾಡದ ಸಮಾಜ ಪರಿವರ್ತನಾ ಸಮುದಾಯ, ಪಶ್ಚಿಮಘಟ್ಟ ಉಳಿಸಿ ಆಂದೋಲನ ಮತ್ತು ರಾಣೆಬೆನ್ನೂರಿನ ತುಂಗಭದ್ರಾ ಪರಿಸರ ಸಮಿತಿ ಈ ಮಾಲಿನ್ಯದ ವಿರುದ್ಧ ವ್ಯವಸ್ಥಿತ ಹೋರಾಟ ಕಟ್ಟಿದ್ದವು.

### ಬೀದರ್ ಹೋರಾಟ; ಹೊಸ ತಿರುವು

ಪಶ್ಚಿಮ ಘಟ್ಟದ ಭಾಗದಲ್ಲಿ ನಡೆಯುತ್ತಿದ್ದ ಪರಿಸರ ಹೋರಾಟ ಉತ್ತರ ಕರ್ನಾಟಕದತ್ತ ವಿಸ್ತರಿಸಿದ್ದು ಬೀದರ್ ಹೋರಾಟದ ಮೂಲಕ. ರಾಜ್ಯ ಸರ್ಕಾರ ಹಿಂದುಳಿದಿದ್ದ ಬೀದರ್ ಜಿಲ್ಲೆಯನ್ನು ಕೈಗಾರಿಕೀಕರಣ ಮಾಡುವ ಉದ್ದೇಶದಿಂದ 1984ರಲ್ಲಿ ಯೋಜನೆ ರೂಪಿಸಿ, 1,300 ಎಕರೆ ಕೃಷಿ ಭೂಮಿಯನ್ನು ಕೈಗಾರಿಕಾ ಎಸ್ಟೇಟ್ ಆಗಿ ಪರಿವರ್ತಿಸಿತ್ತು. ಇಲ್ಲಿ ಕಾರ್ಖಾನೆ ಆರಂಭಿಸುವ ಕಂಪನಿಗಳಿಗೆ ಸಬ್ಸಿಡಿ ಕೂಡ ಘೋಷಿಸಲಾಗಿತ್ತು. ಹೀಗಾಗಿ 45ಕ್ಕೂ ಹೆಚ್ಚು ಫಾರ್ಮಾ ಕಂಪನಿಗಳು ಆರಂಭವಾಗಿದ್ದವು. ಇವುಗಳ ರಾಸಾಯನಿಕ ತ್ಯಾಜ್ಯದ ವಿಲೇವಾರಿಗೆ ಸರ್ಕಾರ ವ್ಯವಸ್ಥೆ ಮಾಡಿರಲಿಲ್ಲ. ಪರಿಣಾಮ ಇದು ಸುತ್ತಮುತ್ತಲಿನ ಪ್ರದೇಶಗಳಿಗೆ ಹರಡಿ, ಮೊದಲಿಗೆ ಸಾವಿರಾರು ಜಾನುವಾರುಗಳು ಬಲಿಯಾಗಿದ್ದವು. ಅಂತರ್ಜಲ ವಿಷವಾಗಿತ್ತು, ಅಸಹನೀಯ ವಿಷಪೂರಿತ ವಾಸನೆ ಕೂಡ ಹರಡಿತು. ಮಣ್ಣಿನಲ್ಲಿ ರಾಸಾಯನಿಕಗಳ ಅಂಶ ಹೆಚ್ಚಾಗಿ ಹೊಲಗಳು ಬಂಜರಾದವು. ಇದರ ವಿರುದ್ಧ ಕರ್ನಾಟಕ ವಿಮೋಚನಾ ರಂಗದ ನೇತೃತ್ವದಲ್ಲಿ ಜನಾಂದೋಲನ ನಡೆದು, ಮಾಲಿನ್ಯಕ್ಕೆ ತಡೆ ಬಿದ್ದಿತ್ತು. ಕಾರ್ಖಾನೆಗಳ ಮಾಲಿನ್ಯದ ವಿರುದ್ಧ ಇದೇ ರೀತಿಯ ಭದ್ರಾವತಿ, ಮೈಸೂರು, ನಂಜನಗೂಡು ಮತ್ತು ರಾಜಧಾನಿ ಬೆಂಗಳೂರಿನಲ್ಲಿ ಸಣ್ಣ-ಪುಟ್ಟ ಹೋರಾಟಗಳು ಐದು ದಶಕಗಳಲ್ಲಿ ನಡೆದಿವೆ.

> ಅರಣ್ಯ, ಜಲ ಮೂಲಗಳು, ಪರಿಸರ ಉಳಿವಿಗಾಗಿ ಮಾದರಿ ಹೋರಾಟಗಳಿಗೆ ಸಾಕ್ಷಿಯಾದ ಕರುನಾಡು

### ಗಣಿಗಾರಿಕೆ ವಿರುದ್ಧ ಗೆಲುವು

ಪಶ್ಚಿಮಘಟ್ಟ ಪ್ರದೇಶದಲ್ಲಿನ ಮ್ಯಾಂಗನೀಸ್ ಗಣಿಗಾರಿಕೆ ವಿರುದ್ಧ ಆರಂಭವಾದ ರಾಜ್ಯದಲ್ಲಿನ ಗಣಿಗಾರಿಕೆ ವಿರುದ್ಧದ ಪರಿಸರ ಹೋರಾಟ, ಸಂಡೂರಿನ ದೇವದಾರಿಯಲ್ಲಿನ ಗಣಿಗಾರಿಕೆಯನ್ನು ತಡೆಯುವಲ್ಲಿ ಬಂದು ನಿಂತಿದೆ. ಕುದುರೆಮುಖದಲ್ಲಿ ಗಣಿಗಾರಿಕೆ ನಡೆಸುತ್ತಿದ್ದ ಕುದುರೆಮುಖ ಐರನ್ ಓರ್ ಕಂಪನಿಯ (ಕೆಐಒಸಿಎಲ್) ನಾಡಿನ ಜೀವ ನದಿಯಾದ ತುಂಗಾ ನದಿಯ ಮೂಲವಾದ ಗಂಗಡಿಕಲ್ಲಿನಲ್ಲಿ ಮತ್ತು ನೆಲ್ಲಿಬೀಡಿನಲ್ಲಿ ಹೊಸ ಗಣಿಗಾರಿಕೆ ನಡೆಸಲು ಮುಂದಾದಾಗ ತುಂಗಾನದಿ ತೀರದ ಜನತೆ, ಪ್ರಗತಿಪರ ಸಂಘಟನೆಗಳು, ಪರಿಸರವಾದಿಗಳು, ರೈತ ಸಂಘಟನೆಗಳು ಒಟ್ಟಾಗಿ ಸೇರಿ 'ತುಂಗಾ ಮೂಲ ಉಳಿಸಿ' ಎಂಬ ಹೋರಾಟ ನಡೆಸಿದ್ದವು. ನಂತರ ಕುದುರೆಮುಖ ಕಂಪನಿಯ ಗಣಿಗಾರಿಕೆ ಅವಧಿಯನ್ನು ವಿಸ್ತರಿಸುವುದನ್ನು ವಿರೋಧಿಸಿ, 'ತುಂಗಭದ್ರಾ ಉಳಿಸಿ ಹೋರಾಟ ಒಕ್ಕೂಟ' ರಚಿಸಿಕೊಂಡು ಬೃಹತ್ ಹೋರಾಟ ನಡೆಸಲಾಗಿತ್ತು. ನೂರಕ್ಕೂ ಹೆಚ್ಚು ಸಂಘಟನೆಗಳು ಈ ಹೋರಾಟ ಒಕ್ಕೂಟದ ಭಾಗವಾಗಿದ್ದವು. ಈ ಕಾರಣದಿಂದಾಗಿ ರಾಜ್ಯದ ಪರಿಸರ ಹೋರಾಟದಲ್ಲಿ ಇದೊಂದು ಮೈಲಿಗಲ್ಲಾಯಿತು. ಜಾಗೃತ ಜನರ ಹೋರಾಟ, ನ್ಯಾಯಾಲಯದ ಆದೇಶದ ಕಾರಣದಿಂದಾಗಿ ಕೊನೆಗೆ ಕುದುರೆಮುಖ ಕಂಪನಿಯ ಗಣಿಗಾರಿಕೆ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಇದಾದ ಒಂದು ದಶಕದ ನಂತರ, ಬಳ್ಳಾರಿಯಲ್ಲಿನ ಅಕ್ರಮ ಗಣಿಗಾರಿಕೆಯ ವಿರುದ್ಧ ದನಿ ಎದ್ದಿತು. ಧಾರವಾಡದ ಸಮಾಜ ಪರಿವರ್ತನಾ ಸಮುದಾಯ ನ್ಯಾಯಾಲಯದ ಮೆಟ್ಟಿಲೇರಿದರೆ, ಇತ್ತ ರಾಜಕೀಯ ವಿರೋಧ ಕೂಡ ಬಲವಾಗಿತ್ತು. ಈ ಅಕ್ರಮ ಗಣಿಗಾರಿಕೆಯ ಕುರಿತು ನಡೆದಿದ್ದ ಲೋಕಾಯುಕ್ತ ತನಿಖೆಯಿಂದ ಕೇವಲ ಮೂರು ವರ್ಷಗಳಲ್ಲಿ ರಾಜ್ಯಸರ್ಕಾರಕ್ಕೆ ₹36 ಸಾವಿರ ಕೋಟಿ ನಷ್ಟವಾಗಿರುವುದು ಬಹಿರಂಗಗೊಂಡಿತ್ತು. ಈ ಕಾರಣಕ್ಕಾಗಿಯೇ ಲೋಕಾಯುಕ್ತ ತನಿಖಾ ವರದಿಯು, 'ಕಬ್ಬಿಣದ ಅದಿರಿನ ರಫ್ತು ಹಾಗೂ ಕರ್ನಾಟಕದೊಳಗಿನ ಇದರ ವ್ಯವಹಾರಗಳನ್ನು ನಿಷೇಧಿಸಬೇಕು' ಎಂದು ಶಿಫಾರಸು ಕೂಡ ಮಾಡಿತ್ತು. 2011ರ ಜುಲೈ 29ರಂದು ಸುಪ್ರೀಂ ಕೋರ್ಟ್ ಬಳ್ಳಾರಿ ಜಿಲ್ಲೆಯಲ್ಲಿನ ಎಲ್ಲಾ ಗಣಿಗಾರಿಕೆ ಚಟುವಟಿಕೆಯನ್ನು ನಿಷೇಧಿಸಿತ್ತು. ನಂತರ ಆಗಸ್ಟ್ 28ರಂದು ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಗಣಿಗಾರಿಕೆಯನ್ನೂ ನಿಷೇಧಿಸಲಾಯಿತು. ಇತ್ತೀಚೆಗೆ ಗದಗ ಜಿಲ್ಲೆಯ ಕಪ್ಪತ್ತಗುಡ್ಡದಲ್ಲಿ ಗಣಿಗಾರಿಕೆಗೆ ಅನುಮತಿ ಕೋರಿ ಒಟ್ಟು 28 ಪ್ರಸ್ತಾವಗಳು ಸಲ್ಲಿಕೆಯಾಗಿವೆ. ಇದರ ವಿರುದ್ಧ ಜಾಗೃತ ಸಮುದಾಯ ಹೋರಾಟದ ಎಚ್ಚರಿಕೆ ನೀಡಿದ್ದು, ರಾಜ್ಯ ಸರ್ಕಾರ ಅನುಮತಿ ನೀಡಲು ಹಿಂದೇಟು ಹಾಕಿದೆ. ಶಿವಮೊಗ್ಗ ಜಿಲ್ಲೆಯ ಅಂಬಾರಗುಡ್ಡದಲ್ಲಿ ಗಣಿಗಾರಿಕೆ ನಡೆಸುವ ಪ್ರಯತ್ನ ಕೂಡ ಜನರ ವಿರೋಧದ ಕಾರಣದಿಂದ ಮಣ್ಣುಪಾಲಾಗಿದೆ.

### ಹೋರಾಟದ ಹೊಳೆಗೆ ಹತ್ತಾರು ತೊರೆ

ರಾಜ್ಯದಲ್ಲಿ ಪರಿಸರದ ಸಂರಕ್ಷಣೆಗಾಗಿ ನಡೆಯುತ್ತಿರುವ ಹೋರಾಟದ ಹೊಳೆಗೆ ಹತ್ತಾರು ತೊರೆಗಳು ಬಂದು ಸೇರಿಕೊಂಡಿವೆ. ಶರಾವತಿ ಟೇಲ್‌ರೇಸ್ ಅಣೆಕಟ್ಟು ನಿರ್ಮಾಣದ ವಿರುದ್ಧ, ಉಡುಪಿ ಜಿಲ್ಲೆಯ ನಂದಿಕೂರಿನಲ್ಲಿ ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧ, ಮಂಗಳೂರಿನ ತಣ್ಣೀರಬಾವಿ ಹಡಗು ಗುಜರಿ ಸ್ಥಾಪನೆ ವಿರುದ್ಧ ಹೋರಾಟಗಳು ನಡೆದವು. ಮಂಗಳೂರಿನಲ್ಲಿ ಕೊಜೆಂಟ್ರಿಕ್ಸ್‌ಗೆ ವಿರೋಧ ವ್ಯಕ್ತವಾಯಿತು, ಎಂಆರ್‌ಪಿಎಲ್ ಮಾಲಿನ್ಯದ ವಿರುದ್ಧ ಜನ ಬೀದಿಗಿಳಿದರು. ಪಶ್ಚಿಮ ಘಟ್ಟದಲ್ಲಿ ಮ್ಯಾಂಗನೀಸ್ ಗಣಿಗಾರಿಕೆ ವಿರುದ್ಧ ಹೋರಾಟ ನಡೆದವು. ಈ ಹೊತ್ತಿನಲ್ಲಿಯೇ ನೀಲಗಿರಿ ಮತ್ತು ಅಕೇಶಿಯಾ ನೆಡುತೋಪುಗಳ ನಿರ್ಮಾಣದ ವಿರುದ್ಧವು ಪಶ್ಚಿಮಘಟ್ಟ ಪ್ರದೇಶದಲ್ಲಿ ಹೋರಾಟ ಜೋರಾಗಿತ್ತು. ಒತ್ತುವರಿ ವಿರುದ್ಧವೂ ಪರಿಸರವಾದಿಗಳು ಹೋರಾಟ ಕಟ್ಟಿದ್ದರು. ಮೈಸೂರು ಜಿಲ್ಲೆಯ ಚಾಮಲಾಪುರದಲ್ಲಿ ವಿದ್ಯುತ್ ಕೇಂದ್ರದ ವಿರುದ್ಧ ನಡೆದ ಹೋರಾಟ ರಾಜ್ಯದ ಗಮನ ಸೆಳೆದಿತ್ತು. ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಭಾಗವಹಿಸಿದ್ದ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಗುಬ್ಬಗದ್ದೆಯ ಅರಣ್ಯ ಉಳಿಸುವ ಹೋರಾಟ ರಾಜ್ಯಮಟ್ಟದಲ್ಲಿ ಸುದ್ದಿಯಾಗಿತ್ತು.

ಇನ್ನು, ನೇತ್ರಾವತಿ ತಿರುವು ಯೋಜನೆ, ಗುಂಡ್ಯ ಜಲವಿದ್ಯುತ್ ಯೋಜನೆ, ಕೊಡಗಿನಲ್ಲಿ ಕೇರಳಕ್ಕೆ 400 ಕೆ.ವಿ ಹೈಟೆನ್ಶನ್ ವಿದ್ಯುತ್ ಮಾರ್ಗ ನಿರ್ಮಿಸುವ ಯೋಜನೆ, ವಾರಾಹಿ ಪಂಪ್ಡ್ ಸ್ಟೋರೇಜ್ ಯೋಜನೆ, ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಹೆದ್ದಾರಿ ಅಭಿವೃದ್ಧಿ ಯೋಜನೆಗಳ ವಿರುದ್ಧ ನಡೆದ ಹೋರಾಟಗಳು ಕೂಡ ಪರಿಸರದ ದೃಷ್ಟಿಯಿಂದ ಮಹತ್ವ ಪಡೆದಿವೆ. ಶರಾವತಿ ಉಳಿಸಿ ಆಂದೋಲನ, ಕೊಪ್ಪಳಕ್ಕೆ ಹಿಂದೆ ನೀರೊದಗಿಸುತ್ತಿದ್ದ ಹಿರೇಹಳ್ಳವನ್ನು ಉಳಿಸುವ ಚಳವಳಿ, ತುಂಗಭದ್ರಾ ಮಾಲಿನ್ಯದ ವಿರುದ್ಧ ಹೋರಾಟ, ಪಲ್ಗುಣಿ ನದಿ ಉಳಿವಿಗಾಗಿ ನಡೆಸಲಾಗುತ್ತಿರುವ ಚಟುವಟಿಕೆಗಳು, ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಹೋರಾಟ ಕೂಡ ಗಮನಸೆಳೆಯುತ್ತಿವೆ. ಹವಾಮಾನ ವೈಪರೀತ್ಯದ ಈ ಹೊತ್ತಲ್ಲಿ, ಎಲ್ಲರೂ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡುತ್ತಿದ್ದಾರೆ. ಯಾರದ್ದೋ ಹಿತಾಸಕ್ತಿಗಾಗಿ ಅಲ್ಲ, ನಮ್ಮ ಉಳಿವಿಗೆ, ನಮ್ಮೆಲ್ಲರ ಭವಿಷ್ಯಕ್ಕಾಗಿ ನಾವು ಪರಿಸರದ ಕುರಿತು ಜಾಗೃತರಾಗಬೇಕಾಗಿದೆ. ಈ ನಿಟ್ಟಿನಲ್ಲಿ ಇಡೀ ಜಗತ್ತಿಗೆ ಆದರ್ಶರಾಗುವ ಅವಕಾಶ ಈಗ ನಮ್ಮ ಮುಂದಿದೆ.

ಲೇಖಕ: ಪತ್ರಕರ್ತ

## ಕನ್ನಡದ ಹೆಮ್ಮೆ

### ಸಾಲುಮರದ ತಿಮ್ಮಕ್ಕ




ಗಿಡಮರಗಳ ಲಾಲನೆ-ಪಾಲನೆ ಮತ್ತು ಪರಿಸರ ಸಂರಕ್ಷಣೆಗೆ ಟೊಂಕ ಕಟ್ಟಿ ನಿಂತಿರುವ ಸಾವಿರಾರು ಪರಿಸರ ಪ್ರೇಮಿಗಳಿಗೆ ಆದರ್ಶ ಸಾಲುಮರದ ತಿಮ್ಮಕ್ಕ. 'ವೃಕ್ಷ ಮಾತೆ' ಎನ್ನುವುದು ಅವರ ಅನ್ವರ್ಥನಾಮ. ಅಕ್ಷರ ಜ್ಞಾನ ಇಲ್ಲದೆಯೂ ಜಗತ್ತು ಮೆಚ್ಚುವಂತಹ ಕಾರ್ಯವನ್ನು ಮಾಡಬಹುದು ಎಂಬುದನ್ನು ತೋರಿಸಿದವರು. ಹಸಿರಿನಿಂದ ನಳನಳಿಸುತ್ತಿರುವ ಗಿಡ ಮರಗಳಲ್ಲೇ ಮಕ್ಕಳನ್ನು ಕಂಡವರು. ರಸ್ತೆಗಳ ಬದಿಯಲ್ಲಿ 8000ಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು, ಕಿ.ಮೀಗಟ್ಟಲೆ ದೂರದಿಂದ ನೀರು ಹೊತ್ತು ತಂದು ಉಣಿಸಿ, ಅವುಗಳನ್ನು ಹೆಮ್ಮರವಾಗಿ ಮಾಡುವುದರ ಮೂಲಕ ಮಕ್ಕಳು ಇಲ್ಲದ ಕೊರಗನ್ನು ದೂರ ಮಾಡಿಕೊಂಡವರು ತಿಮ್ಮಕ್ಕ. ಎಲೆಮರೆ ಕಾಯಿಯಂತಿದ್ದ ತಿಮ್ಮಕ್ಕ ಮತ್ತು ಪರಿಸರ ಉಳಿಸುವ ಅವರ ನಿಸ್ವಾರ್ಥ ಕಾಳಜಿಯನ್ನು ಜಗತ್ತಿನ ಮುಂದೆ ತೆರೆದಿಟ್ಟಿದ್ದು, 1994ರ ಜೂನ್ 19ರ 'ಪ್ರಜಾವಾಣಿ'ಯ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ 'ಸಾಲುಮರಗಳ ಸಂಗಾತಿ ತಿಮ್ಮಕ್ಕ' ಎಂಬ ಚಿತ್ರ ಬರಹ. ಪರಿಸರ ಸಂರಕ್ಷಣೆ ವಿಚಾರದಲ್ಲಿ ರಾಷ್ಟ್ರ-ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವ ಬೀರಿರುವ ಶತಾಯುಷಿ ತಿಮ್ಮಕ್ಕ ಈಗ ಕರ್ನಾಟಕ ಸರ್ಕಾರದ ಪರಿಸರ ರಾಯಭಾರಿ. ಅವರ ಹೆಸರಿನಲ್ಲಿ ರಾಜ್ಯದಾದ್ಯಂತ ಅಭಿವೃದ್ಧಿ ಪಡಿಸಿರುವ ವೃಕ್ಷೋದ್ಯಾನಗಳು ಸರ್ಕಾರ ಮತ್ತು ಜನರು ಮರಗಳ 'ಮಹಾ ತಾಯಿ'ಯ ಮೇಲೆ ಇಟ್ಟ ಗೌರವಕ್ಕೆ ಸಾಕ್ಷಿ.

### ಎಸ್.ಆರ್.ಹಿರೇಮಠ

**ಜನನ: ನವೆಂಬರ್ 5 , 1944**


ಸಾಮಾನ್ಯ ಎಂಜಿನಿಯರ್ ಒಬ್ಬರು ಜನಪರ ಕಾಳಜಿಯ ಬೆನ್ನಿಗೆ ಬಿದ್ದು, ಹೋರಾಟವನ್ನೇ ವ್ರತವಾಗಿ ಮಾಡಿಕೊಂಡು ರಾಜಕೀಯ, ಸಾಮಾಜಿಕ 'ಪರಿವರ್ತನೆ'ಗೆ ಕಾರಣವಾಗಿದ್ದು ಕರ್ನಾಟಕದ ಇತಿಹಾಸದಲ್ಲಿ ಮೈಲಿಗಲ್ಲು. ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಬೆಳವಣಿಕಿಯಲ್ಲಿ ಹುಟ್ಟಿದರೂ ಅವರ ಹೋರಾಟ ದೇಶದಗಲ. ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್.ಹಿರೇಮಠ ಹೆಸರು ಕೇಳಿದರೆ ಗಣಿಗಳ್ಳರು, ಭ್ರಷ್ಟರು ನಡುಗುತ್ತಾರೆ. ಅಮೆರಿಕದಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಎಂ.ಎಸ್. ಪದವಿ ಪಡೆದ ಹಿರೇಮಠರು, ಭಾರಿ ಸಂಬಳದ ಉದ್ಯೋಗದಲ್ಲಿ ಸುಖವನ್ನೇ ಸೂರೆಗೊಳ್ಳಬಹುದಿತ್ತು. ಇಂದಿರಾಗಾಂಧಿ ಹೇರಿದ ತುರ್ತುಪರಿಸ್ಥಿತಿ ವಿರುದ್ಧ ಷಿಕಾಗೊದಲ್ಲಿ ಹೋರಾಟ ನಡೆಸಿ, ವಿಶ್ವಸಂಸ್ಥೆಯ ಗಮನ ಸೆಳೆದಿದ್ದರು. ಭಾರತಕ್ಕೆ ಮರಳಿದ ಬಳಿಕವೂ ಅವರು ವಿಶ್ರಮಿಸಿದವರಲ್ಲ. ಹರಿಹರ ಪಾಲಿಫೈಬರ್ಸ್ ವಿರುದ್ಧ ಹೋರಾಟ, ಒಡಿಶಾದ ಬಸ್ತರ್ ಜಿಲ್ಲೆಯಲ್ಲಿ ಆದಿವಾಸಿಗಳ ಜಮೀನು ಕಬಳಿಸಿದವರ ವಿರುದ್ಧದ ಚಳವಳಿಯಲ್ಲಿ ಭಾಗಿಯಾದರು. ಬಸ್ತರ್‌ನಲ್ಲಿ ಕಾಡುಗಳ್ಳರು ಕಡಿದಿದ್ದ ಮರಗಳು ಮಾರುಕಟ್ಟೆಗಳಲ್ಲಿ ಬಿಕರಿಯಾಗಿದ್ದವು. ಈ ಅಕ್ರಮ ಸಾಬೀತಿಗೆ ದೇಶದಲ್ಲೇ ಮೊದಲ ಬಾರಿಗೆ ಮರಗಳ ಡಿಎನ್‌ಎ ಮಾಡಿಸಿದ್ದ ಹಿರೇಮಠರು, ಕಳ್ಳರಿಗೆ ಶಿಕ್ಷೆ ಕೊಡಿಸಿದ್ದರು. ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಬಳ್ಳಾರಿಯ ಗಣಿ ಉದ್ಯಮಿಗಳು ನಡೆಸಿದ್ದ ಅದಿರು ಕಳವಿನ ಬೆನ್ನು ಹತ್ತಿದ ಹಿರೇಮಠರು, ಅಕ್ರಮ ಗಣಿಗಾರಿಕೆಗೆ ತಡೆಹಾಕಿಸಲು ದೊಡ್ಡ ಮಟ್ಟದ ಕಾನೂನು ಹೋರಾಟವನ್ನೇ ನಡೆಸಿದರು. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ, ಸಚಿವ ಜನಾರ್ದನ ರೆಡ್ಡಿ ಸೇರಿ ಹಲವು ಜನಪ್ರತಿನಿಧಿಗಳು ಜೈಲಿಗೆ ಹೋಗಲು ಹಿರೇಮಠರ ಹೋರಾಟವೇ ಕಾರಣ.



### ಗುಂಡಪ್ಪ ವಿಶ್ವನಾಥ್

**ಜನನ: ಫೆಬ್ರುವರಿ 12, 1949**

ಭಾರತದ ಕ್ರಿಕೆಟ್‌ನಲ್ಲಿ ಕಂಗೊಳಿಸಿದ ಕರ್ನಾಟಕದ ಅಮೂಲ್ಯ ರತ್ನಗಳಲ್ಲಿ ಜಿ.ಆರ್.ವಿಶ್ವನಾಥ್ ಒಬ್ಬರು. ತಮ್ಮ ಕಲಾತ್ಮಕ ಬ್ಯಾಟಿಂಗ್‌ನಿಂದ ರಾಜ್ಯದ ಮತ್ತು ದೇಶದ ಹೆಸರನ್ನು ಎತ್ತರಕ್ಕೇರಿಸಿದವರು ಭದ್ರಾವತಿಯ ವಿಶ್ವನಾಥ್. 1970ರ ದಶಕದಲ್ಲಿ ಭಾರತ ತಂಡದ ಬ್ಯಾಟಿಂಗ್ ಆಧಾರಸ್ತಂಭವಾಗಿದ್ದ ಅವರು ವೇಗದ ಮತ್ತು ಸ್ಪಿನ್ ಎಸೆತಗಳನ್ನು ಅಧಿಕಾರಯುತವಾಗಿ ಆಡಬಲ್ಲವರಾಗಿದ್ದರು. ಲೇಟ್ ಕಟ್ ಹೊಡೆತ ಅವರಿಗೆ ಹೆಚ್ಚಿನ ಪ್ರಸಿದ್ಧಿ ತಂದಿತ್ತು. ಮದರಾಸಿನಲ್ಲಿ (ಈಗಿನ ಚೆನ್ನೈ) 1974–75ರಲ್ಲಿ ಅವರು ವೆಸ್ಟ್ ಇಂಡೀಸ್ ವಿರುದ್ಧ ಗಳಿಸಿದ ವೀರೋಚಿತ 97 ರನ್‌ಗಳ ಇನಿಂಗ್ಸ್ ಕ್ರಿಕೆಟ್ ಪ್ರಿಯರ ಸ್ಮೃತಿಪಟಲದಲ್ಲಿ ಅಚ್ಚಳಿಯದೇ ಉಳಿದಿದೆ. ಅಂಥ ಕೆಲವು ಸ್ಮರಣೀಯ ಇನಿಂಗ್ಸ್‌ಗಳನ್ನು 'ವಿಶಿ' ಆಡಿದ್ದಾರೆ. 1979–80ರಲ್ಲಿ ಇಂಗ್ಲೆಂಡ್ ವಿರುದ್ಧ ಸುವರ್ಣ ಮಹೋತ್ಸವ ಟೆಸ್ಟ್ ಪಂದ್ಯದಲ್ಲಿ ವಿಕೆಟ್ ಕೀಪರ್ ಬಾಬ್ ಟೇಲರ್ ಅವರಿಗೆ ಅಂಪೈರ್ ಔಟ್ ತೀರ್ಪು ನೀಡಿದರೂ, ಆ ಬಗ್ಗೆ ಅನುಮಾನ ಹೊಂದಿದ ನಾಯಕ ವಿಶ್ವನಾಥ್ ಅವರನ್ನು ವಾಪಸು ಕರೆಸಿಕೊಂಡಿದ್ದರು. ಭಾರತ ಆ ಪಂದ್ಯ ಸೋತರೂ, ವಿಶ್ವನಾಥ್ ಕ್ರೀಡಾ ಸ್ಫೂರ್ತಿ ಗೆದ್ದಿತ್ತು.



## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖಂಡ ಸಂಜಯ್ ರಾವುತ್ ಅವರ ಹೇಳಿಕೆ ಆಧರಿಸಿದೆ ಎನ್ನಲಾಗುತ್ತಿರುವ 'ಪುಧಾರಿ ನ್ಯೂಸ್' (ಮರಾಠಿ ವಾಹಿನಿ) ಗ್ರಾಫಿಕ್ಸ್‌ನ ಸ್ಕ್ರೀನ್ ಶಾಟ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ವಿಧಾನಸಭಾ ಚುನಾವಣೆಯಲ್ಲಿ ಶಿವಸೇನಾ ಗೆದ್ದು, ಉದ್ಧವ್ ಠಾಕ್ರೆ ಮತ್ತೆ ಮುಖ್ಯಮಂತ್ರಿ ಬಂದರೆ, ಫಲವಂತಿಕೆ ದರವು ಹೆಚ್ಚಾಗಿರುವ ಮುಸ್ಲಿಂ ಮಹಿಳೆಯರಿಗೆ ಪೌಷ್ಟಿಕಾಂಶಗಳ ಸೇವನೆಗೆ ಅನುಕೂಲವಾಗುವಂತೆ ತಿಂಗಳಿಗೆ ₹6,000ದಂತೆ ಆರ್ಥಿಕ ನೆರವು ನೀಡಲಿದೆ ಎಂಬುದಾಗಿ ರಾವುತ್ ಹೇಳಿದ್ದಾರೆ ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಗ್ರಾಫಿಕ್ಸ್‌ನ ಅಕ್ಷರ ವಿನ್ಯಾಸಕ್ಕಿಂತ (ಫಾಂಟ್), 'ಪುಧಾರಿ ನ್ಯೂಸ್' ಸುದ್ದಿವಾಹಿನಿಯಲ್ಲಿ ಬಳಸಲಾಗುವ ಗ್ರಾಫಿಕ್ಸ್ ಅಕ್ಷರ ವಿನ್ಯಾಸ ಭಿನ್ನವಾಗಿದೆ. ಜತೆಗೆ, ಈ ಗ್ರಾಫಿಕ್ಸ್ ಬಗ್ಗೆ ಸುದ್ದಿವಾಹಿನಿಯ ಮುಖ್ಯಸ್ಥರನ್ನು ಸಂಪರ್ಕಿಸಿದಾಗ, ಇದು ನಕಲಿ ಎಂದು ಅವರು ಸ್ಪಷ್ಟಪಡಿಸಿದರು. ಮುಸ್ಲಿಂ ಮಹಿಳೆಯರಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವ ಬಗ್ಗೆ ಯಾವುದೇ ರೀತಿಯ ಹೇಳಿಕೆಯನ್ನು ಸಂಜಯ್ ರಾವುತ್ ಅವರು ನೀಡಿಲ್ಲ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ಚಂಚಲ ಮನಸ್ಸು!

ನುಡಿ ಬೆಳಗು 67



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಸಂಪತ್ತು ಗಳಿಸುವುದಷ್ಟೇ ಸಾಧನೆ ಅಲ್ಲ; ಸಾಧನೆ ಮಾಡುವುದೇ ಒಂದು ಸಂಪತ್ತು.

ಒಂದು ಬಸ್ ನದಿಗೆ ಬಿದ್ದಿತ್ತು. ಬಸ್‌ನೊಳಗ ಇದ್ದವರೆಲ್ಲಾ ಕಾಪಾಡಿ ಕಾಪಾಡಿ ಅಂತ ಕೂಗುತ್ತಿದ್ದರು. ಒಬ್ಬವ ಮಾತ್ರ 'ಕಂಡಕ್ಟರ್ ಎಲ್ಲಿದಾನ್ರಿ, ಕಂಡೆಕ್ಟರ್ ಎಲ್ಲದನಾನ್ರಿ' ಅಂತ ಹುಡುಕುತಿದ್ದ. 'ಅಲ್ಲೋ ಎಲ್ಲ ಮುಳುಗಾಕತ್ತಾರ ಈಗ ನಿನಗೆ ಕಂಡಕ್ಟರ್ ಯಾಕೆ?' ಎಂದು ಒಬ್ಬ ಕೇಳಿದ. ಅದಕ್ಕೆ ಇವ 'ಅಲ್ರೀ ಟಿಕೆಟ್ ಹಿಂದೆ 5 ರೂಪಾಯಿ ಬರೆದು ಕೊಟ್ಟಾನ' ಎಂದ. ಅಂದರ ಸಾವಿನ ದವಡೆಯಲ್ಲಿಯೇ ನಮಗೆ ಸಂಪತ್ತಿನದ್ದೇ ಚಿಂತೆ. ಸಂಪತ್ತು ಬ್ಯಾಡ ಅಂತ ಯಾರಿಗೆ ಇಚ್ಛೆ ಅದ? ಪರಿಶ್ರಮ ಬೇಡ ಅಂತ ಯಾರಿಗೆ ಅದ? ಯಾವ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಫೇಲಾಗಬೇಕು ಅಂತೈತಿ? ಯಾವ ವ್ಯಾಪಾರಿಗೆ ನಷ್ಟ ಆಗಬೇಕು ಅಂತೈತಿ? ಎಲ್ಲರಿಗೂ ಬಯಕೆ ಅದ. ಆದರೂ ನಾವು ಅಂದುಕೊಂಡಂತೆ ನಡೆಯವಲ್ಲು ಯಾಕ? ದೋಷ ಎಲ್ಲೈತಿ? ಸಮಸ್ಯೆ ಎಲ್ಲೈತಿ ಅಂದರ ಸಮಸ್ಯೆ ಹೊರಗಿಲ್ಲ, ನಮ್ಮೊಳಗೇ ಐತಿ. ಪ್ರಯತ್ನ ಮಾಡತೇನೆ ಎಂಬ ಬಯಕೆ ಇದ್ದರೂ ಒಳಗೊಂದು ಚಂಚಲ ಮನಸ್ಸು ಐತಲ್ಲ, ಅದೇ ದೋಷ. ಇದರಿಂದಲೇ ನಮಗೆ ಸಾಧನೆ ಮಾಡಲು ಸಾಧ್ಯವಿಲ್ಲ. ಇದಕ್ಕೆ ವಿಕ್ಷಿಪ್ತ ದೋಷ ಅಂತ ಕರೀತಾರ.

ಗಾಳಿಯನ್ನು ಕಟ್ಟಿ ಹಿಡಿಯಬಹುದು, ಆದರ ಮನಸ್ಸನ್ನು ನಿಲ್ಲಿಸೋದು ಕಷ್ಟ. ಮನಸ್ಸು ಎಷ್ಟು ಚಂಚಲ ಅಂದರ, ಒಬ್ಬ ಬೆಳಿಗ್ಗೆ 5ಕ್ಕೇ ಏಳಬೇಕು ಅಂತ ಅಲಾರಾಂ ಇಟ್ಟಕೊಂಡ. ಅಲಾರಾಂ ಆದಾಗ ಇನ್ನೊಂದು ಐದು ನಿಮಿಷ ಮಲಗಿ ಏಳ್ತೀನಿ ಅಂದವ ಎದ್ದಿದ್ದು ಬೆಳಿಗ್ಗೆ 8 ಗಂಟೆಗೆ. ಅಲಾರಾಂ ಇಟ್ಟದ್ದೂ ಅದೇ ಮನಸ್ಸು, ಹೊಳ್ಳಿ ಮಲಕಳಕ್ಕೆ ಹೇಳಿದ್ದೂ ಅದೇ ಮನಸ್ಸು.

ಒಬ್ಬ ಸಂಸಾರ ಸಾಕು ಅಂತ ಮಠಕ್ಕೆ ಬಂದ. ಸಾಯಂಕಾಲ ಆದ ತಕ್ಷಣ ಗುರುಗಳಿಗೆ 'ಬರ್ತೀನಿ ಅಪ್ಪಾರೆ' ಎಂದ. ಗುರುಗಳು ಕೇಳಿದರು, 'ಯಾಕೋ ಎಲ್ಲಿಗೆ ಹೊಂಟಿ' ಎಂದು ಕೇಳಿದರು. 'ಮನಿಗೆ' ಅಂದ. ಇದು ಮನಸ್ಸಿನ ಗುಣಧರ್ಮ. ಒಮ್ಮೆ ಪುಸ್ತಕ ಓದಬೇಕು ಅಂತ ಕೈಯಲ್ಲಿ ಹಿಡಿತೈತಿ, ಒಂದೈದು ನಿಮಿಷ ಮೊಬೈಲ್ ನೋಡಿ ಆಮೇಲೆ ಓದೋಣ ಅಂತೈತಿ ಮನಸ್ಸು. ಇದು ಮನಸ್ಸಿನ ಚಾಂಚಲ್ಯ ಗುಣ.

ಒಬ್ಬವ ಗುರುಗಳಿಗೆ ನಮಸ್ಕಾರ ಮಾಡಿ ಇವತ್ತಿಂದ ಓಸಿ ಆಡೋದು ಬಿಟ್ಟೆ ಎಂದ. ಗುರುಗಳು ಆಶೀರ್ವಾದ ಮಾಡಿ ಕಲ್ಲು ಸಕ್ಕರೆ ಕೊಟ್ಟರು. ಕಲ್ಲು ಸಕ್ಕರೆ ನೋಡಿದ್ದೇ 'ಗುರುಗಳು ಕೊಟ್ಟಾರ, ಇದನ್ನು ಎಣಿಸಿ ನೋಡೋಣ. ಕೊನೇ ಪ್ರಯತ್ನ ಅಂತ ಆ ನಂಬರಿಗೆ ಹಾಕೋಣ' ಅಂತ ಹೇಳತೈತಿ ಮನಸ್ಸು. ಅಂದರೆ ಅಜ್ಜಾರು ಕೊಟ್ಟ ಕಲ್ಲು ಸಕ್ಕರೆಯನ್ನೂ ಎಣಿಸಿ ನಂಬರಿಗೆ ದೊಡ್ಡು ಹಚ್ಚೋ ಭಕ್ತರೂ ಅದಾರ. ಮನಸ್ಸು ಒಮ್ಮೆ ಹಾಂಗೆ ಮಾಡಸ್ತೈತಿ ಇನ್ನೊಮ್ಮೆ ಹೀಂಗ ಮಾಡಸ್ತೈತಿ.

ಮನಸ್ಸಿನ ಚಂಚಲ ಸ್ವಭಾವವನ್ನು ಕಟ್ಟಿ ಹಾಕುವುದು ಕಷ್ಟ. ಎಲ್ಲಿ ಕಾಣತೈತಿ, ಕೇಳಸತೈತಿ, ರುಚಿ ಹತ್ತತೈತಿ ಅಲ್ಲಿ ಹೋಗಿ ಬೀಳತೈತಿ ಮನಸ್ಸು. ಒಮ್ಮೆ ವಿಪರೀತ ವಿಚಾರ ಮಾಡತೈತಿ. ನಮ್ಮೊಳಗಿರುವ ಮನಸ್ಸೇ ಹೀಂಗ ಮಾಡಿದರೆ ರಕ್ಷಣೆ ಮಾಡೋರು ಯಾರು? ಎಲ್ಲ ಪ್ರಯತ್ನ ಮಾಡಬೇಕು ಅಂತೀವಿ. ಆದರ ಮನಸ್ಸು ಚಂಚಲ. ಇದರಿಂದ ತಪ್ಪಿಸಿಕೊಳ್ಳಬೇಕು. ಮನಸ್ಸು ನಿಯಂತ್ರಣದಲ್ಲಿಡಬೇಕು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 15, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಕಾರ್ತಿಕ ಶುಕ್ಲ ಚತುರ್ದಶಿ ಗಂ. 06-20 ನಂತರ ಪೂರ್ಣಿಮಾ ಗಂ. 26-59 ನಕ್ಷತ್ರ: ಭರಣಿ ಗಂ. 21-55 ಯೋಗ: ವ್ಯತೀಪಾತ ಗಂ. 07-30 ನಂತರ ವರಿಯಾನ್ ಗಂ. 27-33 ಕರಣ: ವಣಿಜ ಗಂ. 06-20, ತುಲಾ ಮಾಸದ 29 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-34 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 12 ಜುಮಾದುಲ್ಲಾವಲ್, ದಿನ ವಿಶೇಷ : ತ್ರಿಪುರೋತ್ಸವ, ರಥಯಾತ್ರಾ (ಜೈನ್), ಗುರುನಾನಕ್ ಜಯಂತಿ, ಪುಷ್ಕರ ಉತ್ಸವ, ಅದೃಷ್ಟ ಸಂಖ್ಯೆ : 7, 3

**ಮೇಷ:** ಯಾವುದೇ ಕೆಲಸವನ್ನು ಗುತ್ತಿಗೆಯನ್ನು ನೀಡುವ ರೀತಿಯಲ್ಲಿ ತೀರ್ಮಾನಿಸಬೇಡಿ. ಕೆಲಸಗಳನ್ನು ಸಾಧಿಸಿಕೊಳ್ಳ ಬೇಕಿದ್ದರೆ ಅವಿರತ ಶ್ರಮ ಅಗತ್ಯ. ವಿಮಾ ಸಲಹೆಗಾರರ ಪ್ರಯತ್ನ ನಿಷ್ಫಲವಾಗಬಹುದು.

**ವೃಷಭ:** ಅಪೇಕ್ಷಿತರಿಗೆ ಸಾಧಾರಣ ಉದ್ಯೋಗ ದೊರೆಯಲಿದ್ದು, ಅದು ಕಡಿಮೆಯೆಂದು ತಿರಸ್ಕರಿಸುವುದು ಸರಿಯಲ್ಲ. ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಮೇಲಧಿಕಾರಿಗಳಿಂದ ಒತ್ತಡ ಹೆಚ್ಚುವುದು.

**ಮಿಥುನ:** ಇನ್ನೊಬ್ಬರ ಮಾತುಗಳನ್ನು ನಂಬಿ ಯಾವುದೇ ದಾಖಲೆಗಳಿಲ್ಲದೆ ವ್ಯವಹಾರ ಮಾಡುವುದು ಮೂರ್ಖತನ. ವೈಯಕ್ತಿಕ ಪ್ರಗತಿಯಿಂದ ಮನಸ್ಸಿಗೆ ನೆಮ್ಮದಿ ಇರುವುದು.

**ಕರ್ಕಾಟಕ:** ದೂರ ಪ್ರಯಾಣದ ಅನಿವಾರ್ಯವಿರುವವರು ರಾಹುಕಾಲದ ನಂತರ ಪ್ರಯಾಣ ಆರಂಭಿಸಿ. ಮಗನ ವ್ಯವಹಾರಕ್ಕೆ ಸಂಬಂಧಿಸಿದ ಶುಭ ಸುದ್ದಿ ಬರಲಿದೆ. ಕುಶಲಕರ್ಮಿಗಳಿಗೆ ಬೇಡಿಕೆ ಹೆಚ್ಚಲಿದೆ.

**ಸಿಂಹ:** ಸೇವಿಸುವ ಆಹಾರದಲ್ಲಿನ ವಿಷ ಪದಾರ್ಥದಿಂದಾಗಿ ಚರ್ಮಕ್ಕೆ ಸಂಬಂಧಿಸಿದಂತೆ ಅನಾರೋಗ್ಯ ಉಂಟಾಗಬಹುದು. ಚಿನ್ನ, ಬೆಳ್ಳಿ ಮತ್ತು ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಅಧಿಕ ಲಾಭ ಸಿಗಲಿದೆ.

**ಕನ್ಯಾ:** ಸಂಸಾರದಲ್ಲಿ ಅನುಮಾನ ಪಡುವುದು ಅಥವಾ ಹಲವು ವಿಚಾರಗಳನ್ನು ಪತ್ನಿಯಿಂದ ಮುಚ್ಚಿಡುವ ಕೆಲಸವನ್ನು ಮಾಡುವುದು ಸರಿಯಲ್ಲ. ಕೌಟುಂಬಿಕವಾಗಿ ಹೊಸ ಜವಾಬ್ದಾರಿಯೊಂದನ್ನು ನಿಭಾಯಿಸಲಿದ್ದೀರಿ.

**ತುಲಾ:** ಸಣ್ಣ ಕೈಗಾರಿಕೆಯವರಿಗೆ ಉತ್ತಮ ಸಮಯ. ಸೌಲಭ್ಯವನ್ನು ಪಡೆಯುವ ಪ್ರಯತ್ನ ನಡೆಸಬಹುದು. ಕೆಲಸ ಬದಲಿಸುವ ಯೋಜನೆಯಿಂದ ಹೊರ ಬರುವುದು ಉತ್ತಮ. ಮರದ ವ್ಯಾಪಾರಿಗಳಿಗೆ ಉತ್ತಮ ಲಾಭವಾಗಲಿದೆ.

**ವೃಶ್ಚಿಕ:** ನಿಮ್ಮ ವಿರುದ್ಧದ ಆರೋಪಗಳು ನಿರಾಧಾರ ಎಂದು ಸಾಬೀತುಗೊಂಡು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಶುಭಕಾರ್ಯಕ್ಕಾಗಿ ನೆಂಟರಿಷ್ಟರ ಆಗಮನ ಮನೆಯಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಲಿದೆ.

**ಧನು:** ಜೀವನದಲ್ಲಿ ಸಾಂಸಾರಿಕವಾಗಿ ನೆಲೆ ಕಂಡ ಸಂತೃಪ್ತಿ ಭಾವ ಮೂಡಲಿದೆ. ಆಪ್ತರೊಬ್ಬರ ನೆರವು ದೊರೆತು ಮಗನ ವಿದ್ಯಾಭ್ಯಾಸಕ್ಕೆ ಅಥವಾ ವಸತಿಗೆ ಸಹಾಯವಾಗಲಿದೆ. ಮನಸ್ಸಿಗೆ ಹಿತ ಅನುಭವ ಸಿಗಲಿದೆ.

**ಮಕರ:** ನಿಮ್ಮಂತೆಯೇ ಇತರರೂ ಸಂತೋಷವಾಗಿರಬೇಕೆಂಬ ಮನೋಭಾವದಿಂದಾಗಿ ಹೆಚ್ಚಿನ ಗೌರವವನ್ನು ಪಡೆದುಕೊಳ್ಳುವಿರಿ. ಆರಕ್ಷಕ ವರ್ಗದವರಿಗೆ ಅಥವಾ ಕಾವಲು ಪಡೆಯವರಿಗೆ ಕಾರ್ಯದೊತ್ತಡ ಹೆಚ್ಚಲಿದೆ.

**ಕುಂಭ:** ಮಗಳ ಮದುವೆಯ ವಿಚಾರದಲ್ಲಿ ಹೊಸ ಸಂಬಂಧಗಳು ಹುಡುಕಿಕೊಂಡು ಬಂದರೂ ಈ ದಿನವೇ ಒಪ್ಪಿಗೆಯ ನಿರ್ಧಾರವನ್ನು ತಿಳಿಸದಿರಿ. ಶೀತಬಾಧೆಯಂತಹ ಸಮಸ್ಯೆಯಿಂದಾಗಿ ಆಲಸ್ಯತನ ಹೆಚ್ಚಾಗುವುದು.


**ಮೀನ:** ಇನ್ನೊಬ್ಬರ ಹಣ, ವಸ್ತುವನ್ನು ಇಟ್ಟುಕೊಳ್ಳುವುದು ನಿಮ್ಮಿಬ್ಬರಲ್ಲಿರುವ ವಿಶ್ವಾಸವನ್ನು ಹಾಳುಮಾಡಬಹುದು. ವಿದ್ಯುತ್ ವಲಯದ ಕಾರ್ಮಿಕರು ಎಚ್ಚರದಿಂದ ಕಾರ್ಯನಿರ್ವಹಿಸಿ. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು.

## ಪದಬಂಧ 5862

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಬೆಟ್ಟದ ಮೇಲಿರುವ ಕೋಟೆ (4)
2.ಶ್ರೀ ಗಂಧ ಇಲ್ಲಿದೆ (4)
4.ಆರೋಹದ ನಂತರ ಇಳಿಯುವಿಕೆ (4)
7.ಮಾಡಿದ ಕೆಲಸಕ್ಕೆ ಪ್ರತಿಯಾಗಿ ದೊರೆತ ಲಾಭ (4)
9.ವನದಲ್ಲಿದ್ದವನದು ಹೊಸಪ್ರಾಯ! (5)
12.ಸ್ವಾಮಿಗಿರುವ ಆತ್ಮಾಭಿಮಾನ! (4)
13.ದೃಢಪಡಿಸುವ ಸಾಧನ (4)
15.ನಡುವಿನಲ್ಲಿ ಹಾಸ್ಯಾಸ್ಪದವಾಗುವಿಕೆ! (4)
16.ಕೊನೆಗೆ ದನವನ್ನಿಟ್ಟು ಮರೆಮಾಡುವುದು! (4)

**ಮೇಲಿಂದ ಕೆಳಕ್ಕೆ**
1.ಅಂಗಿ ತೊಟ್ಟಿಕೊಳ್ಳುವಾಗ ಪತ್ನಿ ತಿರುಗಿದ್ದಾಳಲ್ಲಾ? (3)
3.ಕುಟಿಲತೆ ತೋರುವಲ್ಲಿನ ಸಂಕೀರ್ಣ! (3)
5.ಬಿಡಲು ಯೋಗ್ಯವಾದುದು (2)
6.ಇದು ಕುದುರೆ ಮುಖ (5)
7.ಪ್ರತಿಭಾವಂತನಿಗೆ ಹೀಗೆ ವರ್ಚಸ್ಸು ಬೀರು! (5)
8.ಫಲಕದ ಹತ್ತಿರವಿರುವ ಹಣ್ಣು (2)
10.ಅಭಿನಯಿಸುವಾಗ ತೋರಿಸಿದ ಹೊಕ್ಕುಳು (2)
11.ಎಡಭಾಗವಿಲ್ಲಿ ತಿರುವುಮುರುವಾಗಿದೆ (2)
12.ಸ್ವಾಭಿಮಾನದಿಂದ ಪಡಿಸಿಕೊಂಡಿರುವ ವಶ! (3)
14.ದನಗಾಹಿಯ ಮೇಲೆ ಬಿದ್ದಿರುವ ಮಂಜು (3)



### 5861ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಕೋಲಾರ 3.ಹರಗು
6.ಸಮರ 7.ಲಾವಣಿ
8.ವಿಷಮ 10.ಮಂದಮಾರುತ
14.ಪರಿಧಿ 17.ಸಂಭವ
18.ಮಾತುಲ 19.ನಸುಕು
20.ಗರಿಕೆ

**ಮೇಲಿಂದ ಕೆಳಕ್ಕೆ:**
1.ಕೋಲೆಬಸವ 2.ರಸನ
3.ಹರವಿ 4.ಗುಲಾಮ
5.ಮಾಣಿಕ್ಯ 9.ಷಹರು
11.ದಳ್ಳುರಿ 12.ಸಾಲಭಂಜಿಕೆ
13.ವ್ಯಾಸಂಗ 14.ಪವನ
15.ಧಿಮಾಕು 16.ಓಲಗ

## ಸುಡೊಕು 6247

| | | | | | | | | |
|---|---|---|---|---|---|---|---|---|
| | 8 | 4 | | 5 | | | | |
| 1 | | | 6 | | 4 | | 7 | 3 |
| | 5 | | | 7 | | | 2 | 4 |
| 5 | | 8 | 9 | | | | | |
| | 1 | | | | | 7 | 5 | 2 |
| 4 | | 7 | | | 6 | | 8 | |
| 2 | | 5 | | 9 | | | 3 | |
| | 6 | | 3 | | 5 | 2 | | 7 |
| 3 | | 9 | | 6 | | | 4 | |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6246 ಸುಡೊಕು

| | | | | | | | | |
|---|---|---|---|---|---|---|---|---|
| 6 | 2 | 4 | 5 | 3 | 9 | 7 | 1 | 8 |
| 8 | 9 | 5 | 6 | 7 | 1 | 2 | 4 | 3 |
| 1 | 3 | 7 | 2 | 4 | 8 | 5 | 9 | 6 |
| 3 | 4 | 1 | 8 | 2 | 5 | 9 | 6 | 7 |
| 2 | 8 | 6 | 3 | 9 | 7 | 1 | 5 | 4 |
| 7 | 5 | 9 | 4 | 1 | 6 | 8 | 3 | 2 |
| 5 | 1 | 3 | 7 | 6 | 2 | 4 | 8 | 9 |
| 4 | 7 | 8 | 9 | 5 | 3 | 6 | 2 | 1 |
| 9 | 6 | 2 | 1 | 8 | 4 | 3 | 7 | 5 |

### ವೈದ್ಯಕೀಯ ಶಿಕ್ಷಣ ಇಲಾಖೆಯ ಅವ್ಯವಹಾರದಲ್ಲಿ ಈ ಹಿಂದಿನ ಬಿಜೆಪಿ ಸರ್ಕಾರವೇ ಭಾಗಿ– ತನಿಖಾ ವರದಿ ಉಲ್ಲೇಖ

# ₹181 ಕೋಟಿ ಖರೀದಿ; ₹125 ಕೋಟಿ ಅಕ್ರಮ

• ಜಯಸಿಂಹ ಆರ್.




ಬೆಂಗಳೂರು: ಕೋವಿಡ್ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯು ₹181 ಕೋಟಿ ವೆಚ್ಚದಲ್ಲಿ ಮಲ್ಟಿಪಾರಾ ಮಾನಿಟರ್‌ಗಳನ್ನು ಖರೀದಿಸಿದ್ದು, ಇದರಲ್ಲಿ ₹124.78 ಕೋಟಿಯಷ್ಟು ಅಕ್ರಮ ನಡೆದಿದೆ. ಇದರಲ್ಲಿ ಖರೀದಿ ಸಂಸ್ಥೆ, ಸರ್ಕಾರಿ ಅಧಿಕಾರಿಗಳು ಮತ್ತು ಸರ್ಕಾರವೇ ಭಾಗಿಯಾಗಿದೆ ಎಂದು ನ್ಯಾಯಮೂರ್ತಿ ಜಾನ್ ಮೈಕಲ್ ಡಿಕುನ್ಹ ಆಯೋಗದ ವರದಿ ಹೇಳಿದೆ.

ನ್ಯಾ. ಡಿಕುನ್ಹ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯ ಮೂರನೇ ಭಾಗದಲ್ಲಿ ಈ ವಿವರಣೆ ಇದೆ. ವರದಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಖರೀದಿ ಪ್ರಕ್ರಿಯೆಗಳು ನಡೆದಿದ್ದವು.

ಐಸಿಯು ಬೆಡ್‌ಗಳಲ್ಲಿ ರೋಗಿಯ ರಕ್ತದೊತ್ತಡ, ಹೃದಯದ ಬಡಿತ ಮತ್ತಿತರ ವಿವರಗಳನ್ನು ತೋರಿಸುವ ಮಾನಿಟರ್‌ಗಳನ್ನು 'ಮಲ್ಟಿಪಾರಾ ಮಾನಿಟರ್' ಎಂದು ಕರೆಯಲಾಗುತ್ತದೆ. ಕೋವಿಡ್ ಅವಧಿಯಲ್ಲಿ ಇಂತಹ ಒಟ್ಟು 3,969 ಮಾನಿಟರ್‌ಗಳನ್ನು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವು (ಡಿಎಂಇ) ಖರೀದಿಸಿತ್ತು.

ಕೋವಿಡ್ ಅವಧಿಯಲ್ಲೇ ಬಿಬಿಎಂಪಿಯು ಮಲ್ಟಿಪಾರಾ ಲೋ ಎಂಡ್ ಮಾನಿಟರ್‌ಗಳನ್ನು ತಲಾ ಒಂದಕ್ಕೆ ₹36,499ರಂತೆ ಖರೀದಿಸಿದೆ. ಹೀಗಿದ್ದೂ, ರಾಜ್ಯ ಸರ್ಕಾರವು ಈ ಮಾನಿಟರ್‌ಗಳನ್ನು ತಲಾ ಒಂದಕ್ಕೆ ಗರಿಷ್ಠ ₹1.50 ಲಕ್ಷ ನೀಡಿ ಖರೀದಿಸಬಹುದು ಎಂದು ಮಿತಿ ಹೆಚ್ಚಿಸಿದೆ. ಆದರೆ ಡಿಎಂಇ ಈ ಮಿತಿಯನ್ನೂ ಉಲ್ಲಂಘಿಸಿ, ತಲಾ ಒಂದಕ್ಕೆ ₹2.85 ಲಕ್ಷ ನೀಡಿ ಇಂತಹ ಮಾನಿಟರ್‌ಗಳನ್ನು ಖರೀದಿಸಿದೆ ಎಂಬ ಮಾಹಿತಿ ವರದಿಯಲ್ಲಿ ಇದೆ.

'ಲೋ ಎಂಡ್ ಮಾನಿಟರ್‌ಗಳ ಖರೀದಿ ಟೆಂಡರ್‌ನಲ್ಲಿ ತಲಾ ಒಂದು ಯಂತ್ರಕ್ಕೆ ₹1.30 ಲಕ್ಷ, ₹1.50 ಲಕ್ಷ ಮತ್ತು ₹2.92 ಲಕ್ಷಕ್ಕೆ ಕಂಪನಿಗಳು ಬಿಡ್ ಸಲ್ಲಿಸಿದ್ದವು. ಅಧಿಕಾರಿಗಳು ಕಡಿಮೆ ಮೊತ್ತದ ಬಿಡ್‌ಗಳನ್ನು ತಿರಸ್ಕರಿಸಿ, ತಲಾ ಒಂದಕ್ಕೆ ₹2.85 ಲಕ್ಷದಂತೆ ಎನ್‌ಕಾರ್ಟಾ ಫಾರ್ಮಾ ಕಂಪನಿಯ ಬಿಡ್ ಅನ್ನು ಒಪ್ಪಿಕೊಂಡಿದ್ದಾರೆ. ಕಂಪನಿಯು 355 ಮಾನಿಟರ್‌ಗಳನ್ನು ₹2.85 ಲಕ್ಷಕ್ಕೆ ಪೂರೈಸಲು ಮತ್ತು 200 ಮಾನಿಟರ್‌ಗಳನ್ನು ಉಚಿತವಾಗಿ ನೀಡಲು ಒಪ್ಪಿಕೊಂಡಿದೆ' ಎಂದು ವರದಿ ವಿವರಿಸಿದೆ.

'ಮೇಲ್ನೋಟಕ್ಕೆ 200 ಮಾನಿಟರ್‌ಗಳು ಉಚಿತವಾಗಿ ಸಿಗುತ್ತವೆ ಎಂದು ತೋರಿದರೂ ಸರ್ಕಾರಕ್ಕೆ ನಷ್ಟವಾಗಿದೆ. 555 ಮಾನಿಟರ್‌ಗಳನ್ನು ₹1.50 ಲಕ್ಷಕ್ಕೆ ಖರೀದಿಸಿದ್ದರೆ, ಅದರ ಮೊತ್ತ ₹8.32 ಕೋಟಿಯಾಗುತ್ತಿತ್ತು. ಆದರೆ 355 ಮಾನಿಟರ್‌ಗಳನ್ನು ತಲಾ ₹2.85 ಲಕ್ಷಕ್ಕೆ ಖರೀದಿಸಿದ್ದರ ಮೊತ್ತ ₹10.11 ಕೋಟಿಯಾಗುತ್ತದೆ. ಇಲ್ಲಿ ಸರ್ಕಾರಕ್ಕೆ ನಷ್ಟವೇ ಆಗಿದೆ. ಇದರ ಜತೆಯಲ್ಲಿ ಅನುಮತಿ ಇಲ್ಲದೆಯೇ 142 ಮಾನಿಟರ್‌ಗಳನ್ನು ಮತ್ತೆ ತಲಾ ₹2.85 ಲಕ್ಷಕ್ಕೆ ಖರೀದಿಸಲು ಎನ್‌ಕಾರ್ಟಾ ಕಂಪನಿಗೆ ಆದೇಶ ನೀಡಲಾಗಿದೆ' ಎಂದು ವರದಿ ವಿವರಿಸಿದೆ.

'ಈ ಅಕ್ರಮ ಮತ್ತೂ ಮುಂದುವರೆದಿದ್ದು, 2020ರಿಂದ 2022ರ ಅವಧಿಯಲ್ಲಿ ಇದೇ ಮೊತ್ತಕ್ಕೆ ಒಟ್ಟು 846 ಮಾನಿಟರ್‌ಗಳನ್ನು ಖರೀದಿಸಲಾಗಿದೆ. ಇವುಗಳಲ್ಲಿ 675 ಮಾನಿಟರ್‌ಗಳು ಅನಗತ್ಯವಾಗಿದ್ದವು. ಹಲವು ಆಸ್ಪತ್ರೆ ಗಳಲ್ಲಿ ಐಸಿಯು ಬೆಡ್ ಖರೀದಿಗೂ ಮುನ್ನವೇ ಇಂತಹ ಮಾನಿಟರ್‌ಗಳನ್ನು ಅಳವಡಿಸಲಾಗಿದೆ. ಪೂರೈಕೆದಾರರಿಗೆ ಅಕ್ರಮ ಲಾಭ ಮಾಡಿಕೊಡಲು ಅನಗತ್ಯವಾಗಿ 1,727 ಹೈಎಂಡ್ ಮಾನಿಟರ್‌ಗಳನ್ನು ಖರೀದಿಸಿ, ಆ ಮಾನಿಟರ್‌ಗಳಿಗೆಂದೇ ನಂತರದ ದಿನಗಳಲ್ಲಿ ನೂರಾರು ಕೋಟಿ ವೆಚ್ಚ ಮಾಡಿ ಐಸಿಯು ಬೆಡ್ ಮತ್ತು ವೆಂಟಿಲೇಟರ್‌ಗಳನ್ನು ಖರೀದಿಸಲಾಗಿದೆ. ಈ ಕಡು ಅಕ್ರಮದಲ್ಲಿ ಸರ್ಕಾರ, ಸರ್ಕಾರಿ ಅಧಿಕಾರಿಗಳು ಮತ್ತು ಪೂರೈಕೆದಾರ ಕಂಪನಿಗಳು ಅಪವಿತ್ರ ಒಪ್ಪಂದ ಮಾಡಿಕೊಂಡಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದು ವರದಿ ಶಿಫಾರಸು ಮಾಡಿದೆ.

### ಅಕ್ರಮದ ಪರಿ

**₹91.87 ಕೋಟಿ**
ಹೈ ಎಂಡ್ ಮಾನಿಟರ್‌ಗಳ ಅನಗತ್ಯ ಖರೀದಿಯಲ್ಲಿನ ಅಕ್ರಮದ ಮೊತ್ತ

**₹19.27 ಕೋಟಿ**
ಲೋ ಎಂಡ್ ಮಾನಿಟರ್‌ಗಳ ಅನಗತ್ಯ ಖರೀದಿಯಲ್ಲಿನ ಅಕ್ರಮದ ಮೊತ್ತ

**₹13.16 ಕೋಟಿ**
ಪೂರೈಕೆ ವಿಳಂಬ ಮಾಡಿದ್ದಕ್ಕೆ ಸನ್ ಝುನ್ ಮತ್ತು ಎನ್‌ಕಾರ್ಟಾ ಕಂಪನಿಗಳಿಗೆ ವಿಧಿಸಬೇಕಿದ್ದ ದಂಡ. ಆದರೆ ಇದನ್ನು ವಸೂಲಿ ಮಾಡಿಲ್ಲ

### 'ಎನ್‌ಕಾರ್ಟಾ ಲಾಭಕ್ಕಾಗಿ ನೂರಾರು ಕೋಟಿ ಅನಗತ್ಯ ಖರೀದಿ'

'200 ಮಾನಿಟರ್‌ಗಳನ್ನು 'ಉಚಿತ'ವಾಗಿ ನೀಡಿದ ಎನ್‌ಕಾರ್ಟಾ ಕಂಪನಿಗೆ ಅನುಕೂಲ ಮಾಡಿಕೊಡಲು ಮಲ್ಟಿಪಾರಾ ಮಾನಿಟರ್ ಹೈಎಂಡ್ ಅವತರಣಿಕೆ ಖರೀದಿಯಲ್ಲೂ ಭಾರಿ ಅಕ್ರಮ ಎಸಗಲಾಗಿದೆ' ಎಂದು ವರದಿ ಹೇಳಿದೆ.

'ಮಲ್ಟಿಪಾರಾ ಮಾನಿಟರ್‌ನ 'ಹೈ ಎಂಡ್' ಅವತರಣಿಕೆಯು ಮಾರುಕಟ್ಟೆಯಲ್ಲಿ ತಲಾ ಒಂದಕ್ಕೆ ₹3.28 ಲಕ್ಷದಿಂದ ₹3.88 ಲಕ್ಷ ದರದಲ್ಲಿ ಲಭ್ಯವಿದ್ದವು. ಈ ಮಾನಿಟರ್‌ಗಳ ಖರೀದಿಗೆ 2020ರ ಮಾರ್ಚ್‌ನಲ್ಲಿ ಕರೆಯಲಾಗಿದ್ದ ಟೆಂಡರ್‌ಗೆ ನ್ಯೂಟೆಕ್ ಕಂಪನಿ ತಲಾ ಒಂದಕ್ಕೆ ₹4.60 ಲಕ್ಷ ಮತ್ತು ಶೇ 12ರಷ್ಟು ಜಿಎಸ್‌ಟಿ, ಬಿಪಿಎಲ್ ₹75,000 ಮತ್ತು ಸನ್ ಝುನ್ ಎಂಟರ್‌ಪ್ರೈಸಸ್ ₹4.80 ಲಕ್ಷ ಮತ್ತು ಶೇ 12ರಷ್ಟು ಜಿಎಸ್‌ಟಿಯ ಬಿಡ್ ಸಲ್ಲಿಸಿದ್ದವು. ಸನ್ ಝುನ್‌ನ ಬಿಡ್ (ಜಿಎಸ್‌ಟಿ ಸೇರಿ ₹5.30 ಲಕ್ಷ) ಒಪ್ಪಿಕೊಳ್ಳಲಾಗಿದೆ' ಎಂದು ವರದಿ ವಿವರಿಸಿದೆ.

'2021ರಲ್ಲಿ ಇಂಥದ್ದೇ ಟೆಂಡರ್ ಕರೆಯಲಾಗಿದೆ. ಆ ಟೆಂಡರ್‌ಗೆ ಐದು ಕಂಪನಿಗಳು ಬಿಡ್ ಸಲ್ಲಿಸಿದ್ದವು ಎಂದು ನಿರ್ದೇಶನಾಲಯವು ದಾಖಲೆ ಸಲ್ಲಿಸಿದೆ. ಬಿಡ್‌ನ ಮೂಲ ಪ್ರತಿಗಳು ಇಲ್ಲ. ಬದಲಿಗೆ ಒಂದೊಂದೇ ಬಿಡಿ ಹಾಳೆಯಲ್ಲಿ ಕಂಪನಿ ಹೆಸರು ಮತ್ತು ಬಿಡ್‌ನ ಮೊತ್ತವಷ್ಟೇ ಇರುವ ಐದು ಹಾಳೆಗಳನ್ನು ನಿರ್ದೇಶನಾಲಯ ಒದಗಿಸಿದೆ. ಇದರಲ್ಲಿ ಕಡಿಮೆ ಮೊತ್ತ ನಮೂದಿಸಿದ್ದ ನಾಲ್ಕು ಬಿಡ್‌ಗಳನ್ನು ತಿರಸ್ಕರಿಸಿ, ತಲಾ ₹5.35 ಲಕ್ಷದಂತೆ ಎನ್‌ಕಾರ್ಟಾ ಕಂಪನಿಯ ಬಿಡ್ ಅನ್ನು ಒಪ್ಪಿಕೊಳ್ಳಲಾಗಿದೆ' ಎಂದು ವರದಿ ವಿವರಿಸಿದೆ. 'ಎನ್‌ಕಾರ್ಟಾಗಾಗಿ ಅನುಕೂಲ ಮಾಡಿಕೊಡಲೆಂದೇ ಟೆಂಡರ್ ಪ್ರಹಸನವನ್ನು ನಡೆಸಲಾಗಿದೆ. ಸನ್ ಝುನ್ ಮತ್ತು ಎನ್‌ಕಾರ್ಟಾ ಮೂಲಕ ವೈದ್ಯಕೀಯ ಶಿಕ್ಷಣ ಇಲಾಖೆಯು ಒಟ್ಟು 3,123 ಮಲ್ಟಿಪಾರಾ ಮಾನಿಟರ್ ಹೈ ಎಂಡ್ ಅವತರಣಿಕೆಗಳನ್ನು ಖರೀದಿಸಿದೆ. ಇವುಗಳಲ್ಲಿ 1,727 ಮಾನಿಟರ್‌ಗಳ ಖರೀದಿ ಅನಗತ್ಯವಾಗಿದ್ದು, ಇದಕ್ಕೆ ₹91.87 ಕೋಟಿ ವ್ಯರ್ಥ ಮಾಡಲಾಗಿದೆ. ಅಕ್ರಮ ಲಾಭ ಮಾಡಿಕೊಳ್ಳುವ ಉದ್ದೇಶದಿಂದಲೇ ಈ ರೀತಿಯ ಖರೀದಿ ನಡೆಸಲಾಗಿದೆ' ಎಂದು ವರದಿ ಹೇಳಿದೆ.

#### ಪೂರೈಸಿದ್ದು 'ಲೋ ಎಂಡ್', ಬಿಲ್ 'ಹೈ ಎಂಡ್'

ಮಲ್ಟಿಪಾರಾ ಮಾನಿಟರ್‌ಗಳ ಲೋ ಎಂಡ್ ಮತ್ತು ಹೈ ಎಂಡ್ ಅವತರಣಿಗೆಳ ಮಧ್ಯೆ ಇರುವುದು ಸಣ್ಣ ವ್ಯತ್ಯಾಸವಷ್ಟೇ. ಲೋ ಎಂಡ್ ಮಾನಿಟರ್‌ಗೆ 'ಇಟಿಸಿಒ2' ಎಂಬ ಉಪಕರಣ ಅಳವಡಿಸಿದರೆ ಅದು ಹೈ ಎಂಡ್ ಮಾನಿಟರ್ ಆಗುತ್ತದೆ.

ಆದರೆ ಈ ಕಂಪನಿಗಳು ಲೋ ಎಂಡ್ ಮಾನಿಟರ್‌ಗಳನ್ನು ಪೂರೈಸಿದ್ದು, ಕೆಲವಕ್ಕಷ್ಟೇ 'ಇಟಿಸಿಒ2' ಅಳವಡಿಸಿರುವ ದಾಖಲೆ ಸಲ್ಲಿಸಿವೆ. ಸಾವಿರಕ್ಕೂ ಹೆಚ್ಚು ಮಾನಿಟರ್‌ಗಳಿಗೆ 'ಇಟಿಸಿಒ2' ಅಳವಡಿಸಿದ ಬಗ್ಗೆ ದಾಖಲೆ ಇಲ್ಲ. ಆದರೆ ಹೈ ಎಂಡ್ ಮಾನಿಟರ್‌ಗಳ ಪೂರೈಕೆಗೇ ಬಿಲ್ ಸಲ್ಲಿಸಲಾಗಿದೆ. ಬಿಲ್ ಪಾವತಿಯೂ ಆಗಿದೆ. ಇಲ್ಲಿ ಭಾರಿ ಪ್ರಮಾಣದ ಅಕ್ರಮ ನಡೆದಿರುವ ಸಾಧ್ಯತೆ ಇದೆ. ಈ ಬಗ್ಗೆ ಕೂಲಂಕಶ ತನಿಖೆಯ ಅಗತ್ಯವಿದೆ ಎಂದು ವರದಿ ಶಿಫಾರಸು ಮಾಡಿದೆ.

## 'ಡಾ.ತೋಂಟದ ಸಿದ್ಧಲಿಂಗಶ್ರೀ' ಪುಸ್ತಕ ಪ್ರಶಸ್ತಿಗೆ ಐವರು ಆಯ್ಕೆ

ಪ್ರಜಾವಾಣಿ ವಾರ್ತೆ

ವಿಜಯಪುರ: ವಿಜಯಪುರದ ಕನ್ನಡ ಪುಸ್ತಕ ಪರಿಷತ್ತು 2023ನೇ ಸಾಲಿನ ಪ್ರಕಟಿತ ಪುಸ್ತಕಗಳಿಗೆ ನೀಡುವ 'ಡಾ. ತೋಂಟದ ಸಿದ್ಧಲಿಂಗಶ್ರೀ' ಪುಸ್ತಕ ಪ್ರಶಸ್ತಿಗೆ ರಾಜ್ಯದ ಐವರು ಸಾಹಿತಿಗಳ ಕೃತಿಗಳು ಆಯ್ಕೆಯಾಗಿವೆ ಎಂದು ಪರಿಷತ್ ಕಾರ್ಯದರ್ಶಿ ಶಂಕರ ಬೈಚಬಾಳ ತಿಳಿಸಿದ್ದಾರೆ.

'ಪ್ರಜಾವಾಣಿ'ಯ ಮುಖ್ಯ ಉಪಸಂಪಾದಕಿ ಬೀದರ್‌ನ ರಶ್ಮಿ ಎಸ್. ಅವರ 'ಈ ಪಿಕ್ ಯಾರ ಕ್ಲಿಕ್' (ಅನುವಾದ), ಬೆಂಗಳೂರಿನ ರಾಜಕುಮಾರ ಬಿ. ಅವರ 'ಕನ್ನಡ ಅಸ್ಮಿತೆಯ ಚಹರೆಗಳು' ( ಜೀವನ ಚರಿತ್ರೆ), ಬಾಗಲಕೋಟೆಯ ಸೋಮಲಿಂಗ ಬೇಡರ ಅವರ 'ಗೋರಿ ಮತ್ತು ಧರ್ಮ' (ಕಾವ್ಯ ), ಬೆಳಗಾವಿಯ ಡಾ.ಗುಂಡಣ್ಣ ಕಲಬುರ್ಗಿ ಅವರ ಸಂಕೀರ್ಣ ಬರಹ (ಒಟ್ಟು ಕೃತಿಗಳು) ಮತ್ತು ಯಾದಗಿರಿಯ ಸಿದ್ರಾಮ ಹೊನಕಲ್ ಅವರ 'ಶಾಹಿರಿ ಲೋಕ' (ಗಜಲ್) ಕೃತಿಗಳು ಆಯ್ಕೆಯಾಗಿವೆ.

ಪ್ರಶಸ್ತಿಯು ತಲಾ ₹10 ಸಾವಿರ ನಗದು, ಸ್ಮರಣಿಕೆ, ಪ್ರಮಾಣಪತ್ರ ಒಳಗೊಂಡಿದೆ. ಡಿಸೆಂಬರ್ ಮೊದಲ ವಾರದಲ್ಲಿ ವಿಜಯಪುರದ ಚೇತನಾ ಕಾಲೇಜಿನಲ್ಲಿ ನಡೆಯುವ ಕನ್ನಡ ಪುಸ್ತಕ ಪರಿಷತ್ತಿನ ಸಮ್ಮೇಳನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಮತ್ತು ಸಂಶೋಧಕ ಡಾ. ವೀರಣ್ಣ ರಾಜೂರ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ರಶ್ಮಿ ಎಸ್.


ರಾಜಕುಮಾರ ಬಿ.


ಸೋಮಲಿಂಗ ಬೇಡರ


ಸಿದ್ರಾಮ ಹೊನಕಲ್


ಡಾ.ಗುಂಡಣ್ಣ ಕಲಬುರ್ಗಿ

### ಮಕ್ಕಳ ದಿನಾಚರಣೆ– ಸಂವಾದ ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆಶಿ ಹೇಳಿಕೆ

# ಪುರುಷರಿಗೂ ಉಚಿತ ಬಸ್ ಪ್ರಯಾಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯೋಮಿತಿ ಆಧಾರದಲ್ಲಿ ಶಕ್ತಿ ಯೋಜನೆಯನ್ನು ಪುರುಷರಿಗೂ ವಿಸ್ತರಿಸುವ ಕುರಿತು ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಮಕ್ಕಳ ದಿನಾಚರಣೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ನೀಲಸಂದ್ರದ ಪಾಲಿಕೆ ಪ್ರಾಥಮಿಕ ಶಾಲೆ ವಿದ್ಯಾರ್ಥಿ ಚರಣ್ ಪ್ರಶ್ನೆಗೆ ಅವರು ಉತ್ತರಿಸಿದರು.

'ನೀವು ಐದು ಗ್ಯಾರಂಟಿ ನೀಡಿದ್ದೀರಿ. ಮಹಿಳೆಯರಿಗೆ ಉಚಿತ ಬಸ್ ವ್ಯವಸ್ಥೆ ಮಾಡಿದ್ದು, ನಮ್ಮ ಅಮ್ಮ ಅಕ್ಕ, ತಂಗಿಯರನ್ನು ಮಾತ್ರ ಊರಿಗೆ ಕರೆದುಕೊಂಡು ಹೋಗುತ್ತಾರೆ. ಗಂಡು ಮಕ್ಕಳಿಗೆ ಈ ಯೋಜನೆ ಇಲ್ಲವೇ' ಎನ್ನುವುದು ಚರಣ್ ಪ್ರಶ್ನೆ.

'ನಿಮ್ಮ ತಾಯಿಗೆ ₹2000, ಬಸ್ ಉಚಿತ ಪ್ರಯಾಣ, ನಿಮ್ಮ ಮನೆಗೆ 10 ಕೆಜಿ ಅಕ್ಕಿ, ಉಚಿತ ವಿದ್ಯುತ್ ನೀಡುತ್ತಿದ್ದೇವೆ. ಸರ್ಕಾರದ ಮಟ್ಟದಲ್ಲಿ ಚರ್ಚಿಸಿ, ಪುರುಷರಿಗೂ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ನಾನೂ ಮುಖ್ಯಮಂತ್ರಿಯಾಗ ಬೇಕು. ಅದಕ್ಕಾಗಿ ಏನು ಓದಬೇಕು? ಹೇಗೆ ದಾರಿ ಹುಡುಕಬೇಕು' ಎಂದು ಪಂಚಶೀಲ ನಗರದ ಪಾಲಿಕೆ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿ ವಿದ್ಯಾಸಾಗರ್ ಪ್ರಶ್ನೆಗೆ ಉತ್ತರಿಸಿದ ಶಿವಕುಮಾರ್, 'ಪ್ರಜಾಪ್ರಭುತ್ವದಲ್ಲಿ ಯಾರು ಏನು ಬೇಕಾದರು ಆಗಬಹುದು. ನಮ್ಮ ತಂದೆ ರೈತರಾಗಿದ್ದರು. ನಾನು ರಾಜಕೀಯ ಕ್ಷೇತ್ರ ಆರಿಸಿಕೊಂಡೆ. ಯಾವುದೇ ವೃತ್ತಿ, ಕ್ಷೇತ್ರ ಆಯ್ಕೆ ಮಾಡಿಕೊಳ್ಳಬೇಕಾದರೆ ಗುಣಮಟ್ಟದ ಶಿಕ್ಷಣ, ಆರ್ಥಿಕ ಸ್ಥಿತಿ ಹಾಗೂ ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಖಾಸಗಿ ಶಾಲೆಗಳಲ್ಲಿ ವ್ಯಾನ್, ಬಸ್ ವ್ಯವಸ್ಥೆ ಇರುತ್ತದೆ, ಪಾಲಿಕೆ ಶಾಲೆಗಳಿಗೆ ವ್ಯವಸ್ಥೆ ಕಲ್ಪಿಸಿದರೆ ಅನುಕೂಲವಾಗುತ್ತದೆ' ಎಂದು ವಿದ್ಯಾರ್ಥಿ ನಿರ್ಭೀತಾ ಪ್ರಶ್ನೆಗೆ ಉತ್ತರಿಸಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಪಾಲಿಕೆ ಶಾಲೆಗಳಿಗೆ ಹತ್ತಿರದ ಮಕ್ಕಳೇ ಬರುತ್ತಾರೆ. ಹಾಗಾಗಿ, ವಾಹನ ವ್ಯವಸ್ಥೆ ಮಾಡಿಲ್ಲ. ಸ್ಥಳೀಯ ಸಂಸ್ಥೆಗಳ ಜತೆ ಚರ್ಚಿಸಲಾಗು ವುದು' ಎಂದು ಭರವಸೆ ನೀಡಿದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್, ವಲಯ ಆಯುಕ್ತ ವಿನೋತ್ ಪ್ರಿಯಾ ಉಪಸ್ಥಿತರಿದ್ದರು.


ವಿಧಾನಸೌಧದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳೊಂದಿಗೆ ತುಷಾರ್ ಗಿರಿನಾಥ್, ಡಿ.ಕೆ. ಶಿವಕುಮಾರ್, ಮಧು ಬಂಗಾರಪ್ಪ.

#### ದಟ್ಟಣೆ ನಿಯಂತ್ರಿಸಲಿವೆ ಸುರಂಗ ರಸ್ತೆಗಳು

ನಗರ ಸಂಚಾರ ದಟ್ಟಣೆ ನಿಯಂತ್ರಿಸಲು ಸುರಂಗ ರಸ್ತೆಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಶಾಲಾ ಅವಧಿಯಲ್ಲಿ ವಾಹನಗಳ ದಟ್ಟಣೆ ಕಾರಣಕ್ಕೆ ನಿಗದಿತ ಸಮಯಕ್ಕೆ ಶಾಲೆಗೆ ತಲುಪಲು ಸಾಧ್ಯವಾಗುತ್ತಿಲ್ಲ. ಮಾಲಿನ್ಯವೂ ಹೆಚ್ಚಾಗಿದೆ' ಎಂಬ ಕೌಸಲ್ಯ ಪ್ರಶ್ನೆಗೆ ಅವರು ಉತ್ತರಿಸಿದರು. 'ಬೆಂಗಳೂರಿನ ಹವಾಗುಣದಿಂದಾಗಿ ತಂತ್ರಜ್ಞಾನ, ವೈದ್ಯಕೀಯ ಹಬ್ ಆಗಿ ಬೆಳೆದಿದೆ. 20 ವರ್ಷಗಳ ಹಿಂದೆ ನಗರಾಭಿವೃದ್ಧಿ ಸಚಿವನಾಗಿದ್ದಾಗ 70 ಲಕ್ಷ ಜನಸಂಖ್ಯೆಯಿತ್ತು. ಈಗ 1.40 ಕೋಟಿ ಇದೆ. ವರ್ತುಲ ರಸ್ತೆ, ಮೆಟ್ರೋ ಮಾರ್ಗ, ಉಪ ನಗರ ಯೋಜನೆಗಳಿಂದಲೂ ದಟ್ಟಣೆ ನಿಯಂತ್ರಣ ಸಾಧ್ಯವಾಗಿಲ್ಲ. ಹಾಗಾಗಿ, ಸುರಂಗ ರಸ್ತೆಗಳಿಗೆ ಆದ್ಯತೆ ನೀಡಲಾಗುತ್ತಿದೆ' ಎಂದರು.

# ಮುಡಾ: ಸಿ.ಎಂ ಮೇಲ್ಮನವಿ 23ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣದ ತನಿಖೆ ನಡೆಸಲು ರಾಜ್ಯಪಾಲರು ನೀಡಿದ್ದ ಆದೇಶಕ್ಕೆ ಅಸ್ತು ಎಂದಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಮೇಲ್ಮನವಿಯನ್ನು ಹೈಕೋರ್ಟ್ ಇದೇ 23ಕ್ಕೆ ವಿಚಾರಣೆಗೆ ನಿಗದಿಪಡಿಸಿದೆ.

ಈ ಸಂಬಂಧದ ರಿಟ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸಿದ್ದರಾಮಯ್ಯ ಪರ ಸುಪ್ರೀಂ ಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು, ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಗುರುವಾರ ಬೆಳಿಗ್ಗೆ ಮನವಿ ಮಾಡಿದರು.

ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ಅಭಿಷೇಕ್ ಮನು ಸಿಂಘ್ವಿ ಅವರಿಗೆ ಮುಖ್ಯ ನ್ಯಾಯಮೂರ್ತಿಯವರು, 'ತುರ್ತು ವಿಚಾರಣೆ ಅಗತ್ಯವಿದೆಯೇ' ಎಂದು ಪ್ರಶ್ನಿಸಿದರು. ಇದಕ್ಕೆ ಅಭಿಷೇಕ್, 'ಹೌದು; ತುರ್ತು ಅಗತ್ಯ ಸೃಷ್ಟಿಯಾಗಿದೆ' ಎಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಮೇಲ್ಮನವಿ ವಿಚಾರಣೆಯನ್ನು ಇದೇ 23ಕ್ಕೆ ನಿಗದಿಗೊಳಿಸಿ ಆದೇಶಿಸಿತು.

ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 17 ಎ ಅಡಿ ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ದೂರನ್ನು ಆಧರಿಸಿ ತನಿಖೆ ನಡೆಸಲು ಅನುಮತಿ ನೀಡಿದ್ದರು. ಈ ಅನುಮತಿ ನೀಡಿಕೆಯನ್ನು ಪ್ರಶ್ನಿಸಿ ಸಿದ್ದರಾಮಯ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ 'ಶಾಸಕರು - ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ರಾಜ್ಯಪಾಲರ ಅನುಮತಿ ನೀಡಿಕೆಯ ಕ್ರಮವನ್ನು ಎತ್ತಿ ಹಿಡಿದಿದ್ದರು. 'ಖಾಸಗಿ ದೂರುದಾರರು ರಾಜ್ಯಪಾಲರ ಅನುಮತಿ ಕೋರಬಹುದು. ಈ ಕುರಿತಾದ ಸಚಿವ ಸಂಪುಟದ ಶಿಫಾರಸನ್ನು ರಾಜ್ಯಪಾಲರು ತಿರಸ್ಕರಿಸಿದ್ದು ಸರಿಯಾಗಿದೆ' ಎಂದು ತೀರ್ಪು ನೀಡಿದ್ದರು.

#### ಆರು ಗಂಟೆ ಮರೀಗೌಡ ವಿಚಾರಣೆ ನಡೆಸಿದ ಇ.ಡಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿಗೆ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ಆರು ಗಂಟೆ ವಿಚಾರಣೆ ನಡೆಸಿದೆ.

ಮುಖ್ಯಮಂತ್ರಿಯ ಆಪ್ತರೂ ಆಗಿರುವ ಮರೀಗೌಡ ಮತ್ತು ಇನ್ನೂ ಆರು ಮಂದಿಗೆ ವಿಚಾರಣೆಗೆ ಹಾಜರಾಗುವಂತೆ ಇ.ಡಿ ಸಮನ್ಸ್ ನೀಡಿತ್ತು. ನಗರದ ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಮರೀಗೌಡ ಅವರು ಗುರುವಾರ ಬಂದು ವಿಚಾರಣೆಗೆ ಹಾಜರಾಗಿದ್ದಾರೆ. ಸಮನ್ಸ್ ಪಡೆದಿದ್ದ ಇನ್ನೂ ಇಬ್ಬರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಇ.ಡಿ ಮೂಲಗಳು ಹೇಳಿವೆ.

ಮರೀಗೌಡ ಅವರು ಮುಡಾ ಅಧ್ಯಕ್ಷರಾಗಿದ್ದ ಅವಧಿಯಲ್ಲಿ 50:50 ಅನುಪಾತದಲ್ಲಿ ಹಂಚಿಕೆಯಾದ ಪರಿಹಾರಾತ್ಮಕ ನಿವೇಶನಗಳ ಬಗ್ಗೆ ಅವರಿಂದ ವಿವರಣೆ ಕೇಳಲಾಗಿದೆ. ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನಿವೇಶನ ಹಂಚಿಕೆ ಮಾಡಿದ್ದರ ಸಂಬಂಧ ಅವರನ್ನು ಪ್ರಶ್ನಿಸಲಾಗಿದೆ. ಕೆಲವು ಪ್ರಮುಖ ಮಾಹಿತಿಗಳನ್ನು ಅವರು ನೀಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಗುರುವಾರ ವಿಚಾರಣೆಗೆ ಹಾಜರಾಗಿದ್ದವರಲ್ಲಿ ಮರೀಗೌಡ ಅವರ ಆಪ್ತರೂ ಇದ್ದರು. ಅವರನ್ನು ಪ್ರತ್ಯೇಕವಾಗಿ ಪ್ರಶ್ನಿಸಿ-ಲಾಗಿದೆ. ವಿಚಾರಣೆ ವೇಳೆ ಎದೆನೋವು ಎಂದು ಅವರು ಹೇಳಿದರು. ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಗಿದ್ದು, ಯಾವುದೇ ಅಪಾಯ ಇಲ್ಲ ಎಂದು ಮೂಲಗಳು ವಿವರಿಸಿವೆ. ರಾತ್ರಿಯೂ ವಿಚಾರಣೆ ಮುಂದುವರೆದಿತ್ತು. ಸಿದ್ದರಾಮಯ್ಯ ಪತ್ನಿಗೆ ನಿವೇಶನ ಹಂಚಿಕೆ ಪ್ರಕರಣದ ಸಂಬಂಧ ರಾಜಕೀಯ ಜಟಾಪಟ ಜೋರಾಗಿತ್ತು. ಅದರ ಬೆನ್ನಲ್ಲೇ ಅಕ್ಟೋಬರ್‌ನಲ್ಲಿ ಆರೋಗ್ಯ ಸಮಸ್ಯೆಯ ಕಾರಣ ನೀಡಿ ಮುಡಾ ಅಧ್ಯಕ್ಷ ಸ್ಥಾನಕ್ಕೆ ಮರೀಗೌಡ ರಾಜೀನಾಮೆ ನೀಡಿದ್ದರು.

## ತಿಂಗಳೊಳಗೆ ನಿಜಲಿಂಗಪ್ಪ ಮನೆ ಖರೀದಿ: ತಂಗಡಗಿ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ ಚಿತ್ರದುರ್ಗದ ಮನೆಯನ್ನು ಸರ್ಕಾರ ಒಂದು ತಿಂಗಳ ಒಳಗೆ ಖರೀದಿಸಿ, ನೋಂದಣಿ ಮಾಡುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅಧಿಕಾರಿಗಳಿಗೆ ಸೂಚಿಸಿದರು.

ವಿಕಾಸೌಧದಲ್ಲಿ ಅಧಿಕಾರಿಗಳ ಜತೆಗೆ ಗುರುವಾರ ನಡೆಸಿದ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಈಗಾಗಲೇ ₹5 ಕೋಟಿ ಹಣ ಬಿಡುಗಡೆ ಮಾಡಿದೆ. ಕಾನೂನು ಪ್ರಕಾರ ನಿಜಲಿಂಗಪ್ಪ ಅವರ ಮನೆ ಖರೀದಿಸಿ, ಸಂರಕ್ಷಿಸಲು ಹಾಗೂ ಸ್ಮಾರಕವಾಗಿ ಅಭಿವೃದ್ಧಿಗೊಳಿಸುವ ಪ್ರಕ್ರಿಯೆ ಆರಂಭಿಸಬೇಕು ಎಂದರು.

### 2024ನೇ ಸಾಲಿನ ಪ್ರಶಸ್ತಿ ಘೋಷಿಸಿದ ಇನ್ಫೊಸಿಸ್ ಸೈನ್ಸ್ ಫೌಂಡೇಷನ್

## ಕನ್ನಡಿಗ ಅರುಣ್ ಸೇರಿ 6 ಮಂದಿಗೆ 'ಇನ್ಫೊಸಿಸ್ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೊಸಿಸ್ ಸೈನ್ಸ್ ಫೌಂಡೇಷನ್ 2024ನೇ ಸಾಲಿನ 'ಇನ್ಫೊಸಿಸ್ ಪ್ರಶಸ್ತಿ'ಯನ್ನು ಘೋಷಿಸಿದ್ದು, ಕರ್ನಾಟಕದ ಅರುಣ್ ಚಂದ್ರಶೇಖರ್ ಸೇರಿ ವಿಜ್ಞಾನ ಕ್ಷೇತ್ರದ ವಿವಿಧ ವಿಭಾಗಗಳಲ್ಲಿನ ಸಂಶೋಧನೆಗೆ ಆರು ಮಂದಿ ಆಯ್ಕೆಯಾಗಿದ್ದಾರೆ.

ಫೌಂಡೇಷನ್‌ನ ಟ್ರಸ್ಟಿಗಳಾದ ಕ್ರಿಸ್ ಗೋಪಾಲಕೃಷ್ಣನ್, ಎನ್.ಆರ್. ನಾರಾಯಣ ಮೂರ್ತಿ, ಕೆ. ದಿನೇಶ್, ಡಾ. ಪ್ರತಿಮಾ ಮೂರ್ತಿ, ಮೋಹನದಾಸ್ ಪೈ ಮತ್ತು ಎಸ್.ಡಿ. ಶಿಬುಲಾಲ್ ಅವರು ಪ್ರಶಸ್ತಿಗೆ ಆಯ್ಕೆಯಾದವರ ಹೆಸರನ್ನು ಗುರುವಾರ ಸುದ್ದಿಗೋಷ್ಠಿಯಲ್ಲಿ ಘೋಷಿಸಿದರು.

ಅರ್ಥಶಾಸ್ತ್ರ ವಿಭಾಗದಲ್ಲಿ ಸ್ಟ್ಯಾನ್‌ಫೋರ್ಡ್ ವಿ.ವಿಯ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಅರುಣ್ ಚಂದ್ರಶೇಖರ್, ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗದಲ್ಲಿ ವಾಷಿಂಗ್ಟನ್ ವಿ.ವಿ ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸ್ಕೂಲ್‌ನ ಪ್ರಾಧ್ಯಾಪಕ ಶ್ಯಾಮ್ ಗೊಲ್ಲಕೋಟ, ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗದಲ್ಲಿ ಎಡಿನ್‌ಬರ್ಗ್ ವಿಶ್ವ ವಿದ್ಯಾಲಯದ ಇತಿಹಾಸ, ಶಾಸ್ತ್ರೀಯ ಮತ್ತು ಪುರಾತತ್ವ ಸ್ಕೂಲ್‌ನ ಪ್ರಾಧ್ಯಾಪಕ ಮಹಮೂದ್ ಕೂರಿಯಾ ಆಯ್ಕೆಯಾ-ಗಿದ್ದಾರೆ. ಜೀವ ವಿಜ್ಞಾನ ವಿಭಾಗದಲ್ಲಿ ಪುಣೆಯ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಜೀವವಿಜ್ಞಾನ ವಿಭಾಗದ ಸಹ ಪ್ರಾಧ್ಯಾಪಕ ಸಿದ್ಧೇಶ್ ಕಾಮತ್, ಗಣಿತ ವಿಜ್ಞಾನ ವಿಭಾಗದಲ್ಲಿ ಕೊಲ್ಕತ್ತದ ಭಾರತೀಯ ಸಾಂಖ್ಯಿಕ ಸಂಸ್ಥೆಯ (ಇಂಡಿಯನ್ ಸ್ಟ್ಯಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್) ತಾತ್ವಿಕ ಸಂಖ್ಯಾ ವಿಜ್ಞಾನ ಮತ್ತು ಗಣಿತ ವಿಭಾಗದ ಪ್ರಾಧ್ಯಾಪಕಿ ನೀನಾ ಗುಪ್ತಾ ಹಾಗೂ ಭೌತವಿಜ್ಞಾನ ವಿಭಾಗದಲ್ಲಿ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕಿ ವೇದಿಕಾ ಖೇಮಾನಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಶಸ್ತಿಯು ಚಿನ್ನದ ಪದಕ, ಪ್ರಶಂಸಾ ಪತ್ರ ಮತ್ತು ತಲಾ ₹84.40 ಲಕ್ಷ (1 ಲಕ್ಷ ಅಮೆರಿಕನ್ ಡಾಲರ್) ನಗದನ್ನು ಒಳಗೊಂಡಿದೆ ಎಂದು ಟ್ರಸ್ಟಿಗಳು ವಿವರಿಸಿದರು.

ಕ್ರಿಸ್ ಗೋಪಾಲಕೃಷ್ಣನ್, 'ವಿದ್ವಾಂಸರು ಹಾಗೂ ತಜ್ಞರನ್ನು ಒಳಗೊಂಡ ಅಂತರರಾಷ್ಟ್ರೀಯ ತೀರ್ಪುಗಾರರ ಮಂಡಳಿಯು ಈ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ. ಕಳೆದ 15 ವರ್ಷಗಳಿಂದ ಫೌಂಡೇಷನ್, ಮಾನವನ ಬದುಕಿನ ವಿವಿಧ ಆಯಾಮಗಳ ಮೇಲೆ ಪ್ರಭಾವ ಬೀರಿರುವ ಹೊಸ ಬಗೆಯ ಸಂಶೋಧನೆಗಳು ಹಾಗೂ ವಿದ್ವತ್ತನ್ನು ಗುರುತಿಸುವ ಕೆಲಸ ಮಾಡುತ್ತಿದೆ. ಈ ವರ್ಷ ಪ್ರಶಸ್ತಿಗೆ ಸಾಧಕರ ವಯೋಮಿತಿಯನ್ನು 50ರಿಂದ 40ಕ್ಕೆ ಇಳಿಸಲಾಗಿತ್ತು. ಅಸಾಮಾನ್ಯ ಪ್ರತಿಭೆಗಳನ್ನು ಬೇಗ ಗುರುತಿಸಬೇಕೆಂಬ ಉದ್ದೇಶ ವಯೋಮಿತಿ ತಗ್ಗಿಸಿದ್ದರ ಹಿಂದಿತ್ತು' ಎಂದು ತಿಳಿಸಿದರು.

'ಪ್ರಶಸ್ತಿ ಪ್ರದಾನ ಸಮಾರಂಭವು ಜನವರಿಯಲ್ಲಿ ಬೆಂಗಳೂರಿನ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ನಡೆಯಲಿದೆ' ಎಂದು ಮಾಹಿತಿ ನೀಡಿದರು.


ಅರುಣ್ ಚಂದ್ರಶೇಖರ್


ಶ್ಯಾಮ್ ಗೊಲ್ಲಕೋಟ


ಮಹಮೂದ್ ಕೂರಿಯಾ


ಸಿದ್ಧೇಶ್ ಕಾಮತ್


ನೀನಾ ಗುಪ್ತಾ


ವೇದಿಕಾ ಖೇಮಾನಿ

> ಮಾನವ ಕುಲಕ್ಕೆ ಪ್ರಯೋಜನಕಾರಿಯಾಗುವ ಅತ್ಯುತ್ತಮ ಸಂಶೋಧನೆಗಳ ಗುರುತಿಸಲು, ಮಾದರಿ ವ್ಯಕ್ತಿಗಳನ್ನು ಸೃಷ್ಟಿಸಲು ಈ ಪ್ರಶಸ್ತಿ ಸಹಕಾರಿಯಾಗಿದೆ
> **ಎನ್.ಆರ್. ನಾರಾಯಣ ಮೂರ್ತಿ,** ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ಟ್ರಸ್ಟಿ

## 'ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಸರ್ವಾಧಿಕಾರಿ ಧೋರಣೆ ಬಿಡಲಿ'

ಪ್ರಜಾವಾಣಿ ವಾರ್ತೆ

ಮಂಡ್ಯ: '87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆ ಹಾಗೂ ಸ್ಥಳ ವಿವಾದ ಕಗ್ಗಂಟಾಗಿದ್ದು, ಪರಿಷತ್ತಿನ ಅಧ್ಯಕ್ಷರ ಸರ್ವಾಧಿಕಾರಿ ಧೋರಣೆಯೇ ಕಾರಣ' ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶಗೌಡ ಆರೋಪಿಸಿದರು.

'ಸಮ್ಮೇಳನವನ್ನು ಜಿಲ್ಲಾಡಳಿತ, ಸರ್ಕಾರ ಹಾಗೂ ಪರಿಷತ್ತು ಒಟ್ಟಾಗಿ ನಡೆಸುತ್ತಿದ್ದರೂ, ಮಹೇಶ ಜೋಶಿಯವರು ಜಿಲ್ಲಾಡಳಿತದೊಂದಿಗೆ ಚರ್ಚಿಸದೇ ಹೇಳಿಕೆ ನೀಡುವುದು ಎಷ್ಟು ಸರಿ? ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಜೋಶಿಯವರು ಅಧ್ಯಕ್ಷರ ಆಯ್ಕೆಯ ಗೋಪ್ಯತೆ ಕಾಪಾಡದೇ ವಿವಾದಕ್ಕೆ ಎಡೆ ಮಾಡಿದ್ದಾರೆ. ಅಧ್ಯಕ್ಷರು ವೈಯಕ್ತಿಕ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ತೀರ್ಮಾನಗಳೆಲ್ಲವೂ ಉಸ್ತುವಾರಿ ಸಚಿವರ ಮೂಲಕವೇ ಆಗಬೇಕು' ಎಂದು ಆಗ್ರಹಿಸಿದರು.

'ಸಮ್ಮೇಳನ ಆಯೋಜನೆಗೆ ಸಂಬಂಧಿಸಿ ಜಿಲ್ಲೆಯ ಸಾಹಿತಿಗಳು, ಕಲಾವಿದರು, ಸಂಘಟಕರು ಕರ್ನಾಟಕ ಸಂಘದಲ್ಲಿ ಸಭೆ ನಡೆಸಿ ಕೈಗೊಂಡ ನಿರ್ಣಯಗಳ ಪಟ್ಟಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದು, ಅವುಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಬೇಕು. ಸರ್ಕಾರದಿಂದ ನೀಡುವ ₹25 ಕೋಟಿಯನ್ನು ದುಂದು ವೆಚ್ಚ ಮಾಡದೆ ಉಳಿಸಬೇಕು. ಅದರಲ್ಲಿ ಸುವರ್ಣ ಕರ್ನಾಟಕ ಸಾಹಿತ್ಯ ಭವನವನ್ನು ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

'ಸಮ್ಮೇಳನಕ್ಕೆ ಮುನ್ನವೇ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ ಮತ್ತು ಅಂಬೇಡ್ಕರ್ ಭವನವನ್ನು ಸುಸಜ್ಜಿತಗೊಳಿಸಬೇಕು. ನಾಲ್ವಡಿ ಪ್ರತಿಮೆ ನಿರ್ಮಾಣವನ್ನು ಪೂರ್ಣಗೊಳಿಸಬೇಕು. ಪೂರ್ಣಕುಂಭ ಸ್ವಾಗತ ಮೆರವಣಿಗೆಯಲ್ಲಿ ಪುರುಷರೂ ಇರಬೇಕು. ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಬೇಕು. ಮಂಡ್ಯ ನಗರದ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸಭೆಯಲ್ಲಿ ನಿರ್ಣಯಿಸಿದ್ದೇವೆ' ಎಂದು ತಿಳಿಸಿದರು.

'ಡಿ.10ರೊಳಗೆ ರಂಗಮಂದಿರವನ್ನು ಸಿದ್ಧಗೊಳಿಸಿ, ಆತಗೂರು ಶಾಸನವನ್ನು ಸ್ಥಾಪಿಸದಿದ್ದರೆ ಉಪವಾಸ ಸತ್ಯಾಗ್ರಹ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು. ನಿವೃತ್ತ ಪ್ರಾಂಶುಪಾಲ ಶಂಕರೇಗೌಡ, ಕರ್ನಾಟಕ ಸಂಘದ ನಿರ್ದೇಶಕ ನಾಗಪ್ಪ, ರಾಜಶೇಖರ್, ಸುರೇಶ್ ಇದ್ದರು.

> ತಾಂತ್ರಿಕ ವರದಿ ಅನುಸಾರವಾಗಿ, ಹೆದ್ದಾರಿಗೆ ಹೊಂದಿಕೊಂಡಂತಿರುವ ಮಂಡ್ಯ ಹೊರವಲಯದ ಪ್ರದೇಶದಲ್ಲೇ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ
> **ಎನ್.ಚಲುವರಾಯಸ್ವಾಮಿ** ಜಿಲ್ಲಾ ಉಸ್ತುವಾರಿ ಸಚಿವ

> ಮಂಡ್ಯ ನಗರದ ಒಳಗೇ ಸಾಹಿತ್ಯ ಸಮ್ಮೇಳನ ನಡೆಯಬೇಕೆಂಬ ಬಹುಜನರ ಅಭಿಪ್ರಾಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು
> **ಪ್ರೊ.ಬಿ.ಜಯಪ್ರಕಾಶಗೌಡ** ಕರ್ನಾಟಕ ಸಂಘದ ಅಧ್ಯಕ್ಷ

## ಸುದ್ದಿ 2 ನಿಮಿಷ

### ಆಂಬುಲೆನ್ಸ್ ಸಿಬ್ಬಂದಿಗೆ ವೇತನ ಪಾವತಿಸಲಾಗಿದೆ: ಸಚಿವ ದಿನೇಶ್

ಬೆಂಗಳೂರು:'108-ಆರೋಗ್ಯ ಕವಚ ಯೋಜನೆಯ ಆಂಬುಲೆನ್ಸ್ ಸಿಬ್ಬಂದಿಗೆ ಸರ್ಕಾರದಿಂದ ವೇತನ ಬಾಕಿ ಉಳಿಸಿಕೊಂಡಿಲ್ಲ. ನಿರ್ವಹಣಾ ಏಜೆನ್ಸಿ ಮತ್ತು ಚಾಲಕರ ನಡುವಿನ ಸಮಸ್ಯೆಯನ್ನು ಸರಿಪಡಿಸಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

'ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ವೇತನವನ್ನು ಜಿವಿಕೆ–ಇಎಂಆರ್‌ಐ ಸಂಸ್ಥೆ ಪಾವತಿಸಿಲ್ಲ' ಎಂದು ಆರೋಪಿಸಿದ್ದ ಆಂಬುಲೆನ್ಸ್ ಸಿಬ್ಬಂದಿ, ನ.16ರ ಸಂಜೆಯೊಳಗೆ ವೇತನ ಪಾವತಿಯಾಗದಿದ್ದಲ್ಲಿ ಮುಷ್ಕರ ಕೈಗೊಳ್ಳುವುದಾಗಿ ಎಚ್ಚರಿಸಿದ್ದರು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಸಚಿವರು, 'ಸಿಬ್ಬಂದಿಗೆ ಸೆಪ್ಟೆಂಬರ್ ವರಗಿನ ವೇತನವನ್ನು ಏಜೆನ್ಸಿಯವರು ಪಾವತಿಸಿದ್ದಾರೆ. ಚಾಲಕರ ವೇತನ ಬಾಕಿ ಉಳಿಸಿಕೊಳ್ಳದಂತೆ ಇಎಂಆರ್‌ಐ ಏಜೆನ್ಸಿಯವರಿಗೆ ಕಟ್ಟುನಿಟ್ಟಾಗಿ ಆದೇಶಿಸಲಾಗಿದೆ. ಅಕ್ಟೋಬರ್ ವೇತನ ಕೂಡ ಪ್ರಗತಿಯಲ್ಲಿದ್ದು, ಆದಷ್ಟು ಬೇಗ ಪಾವತಿಸುವಂತೆ ಸೂಚಿಸಲಾಗಿದೆ' ಎಂದಿದ್ದಾರೆ.

'ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ 108 ವ್ಯವಸ್ಥೆಯಲ್ಲಿ ಒಂದಷ್ಟು ಲೋಪದೋಷಗಳಾಗಿದ್ದವು. 108 ಆರೋಗ್ಯ ಕವಚ ಯೋಜನೆಯ ಸಿಬ್ಬಂದಿಗೆ ಕನಿಷ್ಠ ವೇತನ ಜಾರಿಗೊಳಿಸಿದ್ದಲ್ಲದೇ, ಸರ್ಕಾರದ ಅನುಮತಿ ಇಲ್ಲದೆ ನಿಯಮಬಾಹಿರವಾಗಿ ಶೇ 45 ರಷ್ಟು ವೇತನ ಹೆಚ್ಚಳ ಮಾಡಲಾಗಿತ್ತು. ಹೀಗೆ ಹೆಚ್ಚಳ ಮಾಡಲಾದ ಶೇ 45 ರಷ್ಟು ವೇತನವನ್ನು ಕಡಿತಗೊಳಿಸದಂತೆ ಈಗ ಸಿಬ್ಬಂದಿ ಬೇಡಿಕೆ ಇಡುತ್ತಿದ್ದಾರೆ' ಎಂದು ತಿಳಿಸಿದ್ದಾರೆ.

'ಆಂಬುಲೆನ್ಸ್ ಚಾಲಕರಿಗೆ ₹35 ಸಾವಿರಕ್ಕೂ ಹೆಚ್ಚು ವೇತನ ದೊರೆಯುತ್ತಿದೆ. ಇದರ ಮೇಲೂ ಮೂಲ ವೇತನದಲ್ಲಿ ಶೇ 45 ರಷ್ಟು ಹೆಚ್ಚಳ ಮಾಡುವಂತೆ ಸಿಬ್ಬಂದಿ ಬೇಡಿಕೆ ಇಟ್ಟಿದ್ದು, ನಿಯಮ ಬಾಹಿರವಾಗಿ ಈ ಬಗ್ಗೆ ಕ್ರಮ ಕೈಗೊಳ್ಳಲು ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ' ಎಂದಿದ್ದಾರೆ.



### ಶಾಸಕರಿಗೆ ₹50 ಕೋಟಿ ಆಮಿಷ: ಜಟಾಪಟಿ

ಬೆಂಗಳೂರು: 'ರಾಜ್ಯ ಸರ್ಕಾರವನ್ನು ಕೆಡವಲು ಸಂಚು ರೂಪಿಸಿರುವ ಬಿಜೆಪಿ, ಕಾಂಗ್ರೆಸ್‌ನ 50 ಶಾಸಕರಿಗೆ ತಲಾ ₹50 ಕೋಟಿ ಆಮಿಷ ಒಡ್ಡಿದೆ' ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡಿರುವ ಆರೋಪ ನಿಜ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೆಲ ಸಚಿವರು ಹೇಳಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿ ವಿರೋಧ ಪಕ್ಷದ ಹಲವು ನಾಯಕರು ಮುಖ್ಯಮಂತ್ರಿ ಮಾಡಿದ್ದ ಆರೋಪವನ್ನು ನಿರಾಕರಿಸಿದ್ದು, ಹೇಳಿಕೆಯನ್ನು ಖಂಡಿಸಿದ್ದಾರೆ.

**ಆಮಿಷ ಒಡ್ಡಿದ್ದು ನಿಜ:** ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಡಿ.ಕೆ. ಶಿವಕುಮಾರ್, 'ರಾಜ್ಯ ಸರ್ಕಾರವನ್ನು ಅಸ್ಥಿರಗೊ ಳಿಸಲು ಕಾಂಗ್ರೆಸ್ ಪಕ್ಷದ ಶಾಸಕರಿಗೆ ಬಿಜೆಪಿ ಆಮಿಷ ಒಡ್ಡುತ್ತಿದೆ. ಉಳಿದ ವಿಚಾರಗಳನ್ನು ನಂತರ ಬಹಿರಂಗ ಪಡಿಸಲಾಗುವುದು' ಎಂದರು.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಮಾತನಾಡಿ, 'ಕಳೆದ 18 ತಿಂಗಳಿನಿಂದಲೂ ಸರ್ಕಾರ ಕೆಡವಲು ಬಿಜೆಪಿ ಪ್ರಯತ್ನ ಮಾಡುತ್ತಿದೆ. ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರದು ಬಿಜೆಪಿಯೇತರ ಸರ್ಕಾರಗಳನ್ನು ಅಸ್ಥಿರಗೊಳಿಸುವುದೇ ಕೆಲಸ' ಎಂದು ಟೀಕಿಸಿದರು.

### 2025: 19 ದಿನ ಸರ್ಕಾರಿ ರಜೆ

**ಸಾರ್ವತ್ರಿಕ ರಜಾ ದಿನಗಳು**

| ದಿನಾಂಕ | ರಜೆ |
|---|---|
| ಜ.14 | ಮಕರ ಸಂಕ್ರಾಂತಿ |
| ಫೆ.26 | ಮಹಾಶಿವರಾತ್ರಿ |
| ಮಾ.31 | ಕುತುಬ್–ಎ–ರಂಜಾನ್ |
| ಏ.10 | ಮಹಾವೀರ ಜಯಂತಿ |
| ಏ.14 | ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ |
| ಏ.18 | ಗುಡ್ ಫ್ರೈಡೇ |
| ಏ.30 | ಬಸವ ಜಯಂತಿ |
| ಮೇ.1 | ಕಾರ್ಮಿಕರ ದಿನಾಚರಣೆ |
| ಮೇ.7 | ಬಕ್ರೀದ್ |
| ಆ.15 | ಸ್ವಾತಂತ್ರ್ಯ ದಿನಾಚರಣೆ |
| ಆ.27 | ವರಸಿದ್ಧಿ ವಿನಾಯಕ ವ್ರತ |
| ಸೆ.5 | ಈದ್–ಮಿಲಾದ್ |
| ಅ.1 | ಮಹಾನವಮಿ, ಆಯುಧಪೂಜೆ, ವಿಜಯದಶಮಿ |
| ಅ.2 | ಗಾಂಧಿ ಜಯಂತಿ |
| ಅ.7 | ಮಹರ್ಷಿ ವಾಲ್ಮೀಕಿ ಜಯಂತಿ |
| ಅ.20 | ನರಕ ಚತುರ್ದಶಿ |
| ಅ.22 | ಬಲಿಪಾಡ್ಯಮಿ, ದೀಪಾವಳಿ |
| ನ.1 | ಕನ್ನಡ ರಾಜ್ಯೋತ್ಸವ |
| ಡಿ.25 | ಕ್ರಿಸ್‌ಮಸ್ |

ಭಾನುವಾರ ಬರುವ ಗಣರಾಜ್ಯೋತ್ಸವ (ಜ.26), ಯುಗಾದಿ ಹಬ್ಬ (ಮಾ.30), ಮೊಹರಂ (ಜು.6), ಕನಕದಾಸ ಜಯಂತಿ (ನ.8) ಈ ಪಟ್ಟಿಯಲ್ಲಿ ಸೇರಿಲ್ಲ.

**ಪರಿಮಿತ ರಜೆಗಳು**

| | |
|---|---|
| ಜ.1 | ಹೊಸ ವರ್ಷಾರಂಭ |
| ಫೆ.6 | ಮಧ್ವ ನವಮಿ |
| ಫೆ.14 | ಶಬ್–ಎ–ಬರಾತ್ |
| ಮಾ.13 | ಹೋಳಿ ಹಬ್ಬ |
| ಮಾ.27 | ಶಬ್–ಎ–ಖದರ್ |
| ಮಾ.28 | ಜುಮತ್–ಉಲ್–ವಿದಾ |
| ಏ.2 | ದೇವರ ದಾಸಿಮಯ್ಯ ಜಯಂತಿ |
| ಏ.19 | ಹೋಲಿ ಸ್ಯಾಟರ್‌ಡೇ |
| ಮೇ.2 | ಶಂಕರಾಚಾರ್ಯ ಮತ್ತು ರಾಮಾನುಜಾಚಾರ್ಯ ಜಯಂತಿ |
| ಮೇ.12 | ಬುದ್ಧ ಪೂರ್ಣಿಮಾ |
| ಆ.8 | ವರಮಹಾಲಕ್ಷ್ಮಿ ವ್ರತ |
| ಆ.16 | ಶ್ರೀಕೃಷ್ಣ ಜನ್ಮಾಷ್ಟಮಿ |
| ಆ.26 | ಸ್ವರ್ಣಗೌರಿ ವ್ರತ |
| ಸೆ.6 | ಅನಂತಪದ್ಮನಾಭ ವ್ರತ |
| ಸೆ.8 | ಕನ್ಯಾ ಮರಿಯಂ ಜಯಂತಿ |
| ಸೆ.17 | ವಿಶ್ವಕರ್ಮ ಜಯಂತಿ |
| ಅ.18 | ತುಲಾ ಸಂಕ್ರಮಣ |
| ನ.5 | ಗುರುನಾನಕ್ ಜಯಂತಿ |
| ಡಿ.5 | ಹುತ್ತರಿ ಹಬ್ಬ |
| ಡಿ.24 | ಕ್ರಿಸ್‌ಮಸ್ ಈವ್ |


ಭಾನುವಾರ ಬರುವ ರಾಮನವಮಿ (ಏ.6), ಬ್ರಹ್ಮಶ್ರೀ ನಾರಾಯಣಗುರು ಜಯಂತಿ (ಸೆ.7), ಋಗ್ ಉಪಾಕರ್ಮ ಮತ್ತು ಯಜುರ್ ಉಪಾಕರ್ಮ (ಆ.8) ಎರಡನೇ ಶನಿವಾರ ಬರುವುದರಿಂದ ಈ ಪಟ್ಟಿಯಲ್ಲಿ ಸೇರಿಸಿಲ್ಲ.



ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರದ ನಾಂದೇಡ್‌ನಲ್ಲಿ ಚುನಾವಣಾ ಪ್ರಚಾರದ ವೇಳೆ ಬಸ್ ನಿಲ್ದಾಣಕ್ಕೆ ತೆರಳಿ ಪ್ರಯಾಣಿಕರ ಕೈ ಕುಲುಕಿದರು —ಪಿಟಿಐ ಚಿತ್ರ

# ಕಣದಲ್ಲಿದ್ದಾರೆ 2 ಸಾವಿರಕ್ಕೂ ಅಧಿಕ ಪಕ್ಷೇತರರು


ಮಹಾರಾಷ್ಟ್ರದ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ 2,086 ಪಕ್ಷೇತರ ಅಭ್ಯರ್ಥಿಗಳು ಕಣದಲ್ಲಿದ್ದು ಸ್ಪರ್ಧೆಯು ಭಾರಿ ಜಿದ್ದಾಜಿದ್ದಿನಿಂದ ಕೂಡಿರಲಿದೆ ಎನ್ನಲಾಗುತ್ತಿದೆ. 1995ರಲ್ಲಿ ಮಹಾರಾಷ್ಟ್ರದ ಚುನಾವಣಾ ಇತಿಹಾಸದಲ್ಲಿಯೇ ಅತ್ಯಂತ ದೊಡ್ಡ ಸಂಖ್ಯೆಯಲ್ಲಿ (3,196) ಪಕ್ಷೇತರ ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಇವರಲ್ಲಿ 45 ಅಭ್ಯರ್ಥಿಗಳು ಗೆಲುವನ್ನೂ ಸಾಧಿಸಿದ್ದರು. ಆಗಿನ ಶಿವಸೇನಾ–ಬಿಜೆಪಿ ಮೈತ್ರಿ ಸರ್ಕಾರಕ್ಕೆ ಈ ಎಲ್ಲ ಪಕ್ಷೇತರ ಶಾಸಕರು ಬೆಂಬಲ ನೀಡಿದ್ದರು




## 'ಬಂಡಾಯ'ದ ಬಿಸಿ

ಚುನಾವಣೆಯಲ್ಲಿ ವಿವಿಧ ಪ್ರಮುಖ ಪಕ್ಷಗಳ ಒಟ್ಟು 571 ಬಂಡಾಯ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೆ. ಇದು ಪ್ರಮುಖ ರಾಜಕೀಯ ಪಕ್ಷಗಳಿಗೆ ಹೆಚ್ಚು ತಲೆನೋವಾಗಿ ಪರಿಣಮಿಸಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನಿಂದ ಬಂಡಾಯವೆದ್ದ ಅಭ್ಯರ್ಥಿಗಳೇ ಅಧಿಕ ಸಂಖ್ಯೆಯಲ್ಲಿದ್ದಾರೆ. 'ಮಹಾಯುತಿ' ಹಾಗೂ 'ಮಹಾ ವಿಕಾಸ ಆಘಾಡಿ' ಮೈತ್ರಿಕೂಟಗಳ ಈ ಬಂಡಾಯ ಅಭ್ಯರ್ಥಿಗಳು ಆಯಾ ಕ್ಷೇತ್ರದಲ್ಲಿ ಬಹಳ ಶಕ್ತಿಯುತವಾಗಿಯೇ ಇದ್ದಾರೆ. ವಿವಿಧ ಸಣ್ಣ ಪಕ್ಷಗಳ ಅಭ್ಯರ್ಥಿಗಳು ಕೂಡ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳಿಗೆ ತೀವ್ರ ಪೈಪೋಟಿ ನೀಡಲಿದ್ದಾರೆ. ಬಂಡಾಯ ಅಭ್ಯರ್ಥಿಗಳಾಗಲಿ, ಸಣ್ಣ ಪಕ್ಷಗಳ ಅಭ್ಯರ್ಥಿಗಳಾಗಲಿ ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸದಿದ್ದರೂ ಪ್ರಮುಖ ಪಕ್ಷಗಳ ಮತಗಳನ್ನು ವಿಭಜಿಸುವಲ್ಲಿ ಹೆಚ್ಚಿನ ಪಾತ್ರ ವಹಿಸುವ ಸಾಧ್ಯತೆ ಇದೆ.

ಮಾಯಾವತಿ ಅವರ 'ಬಹುಜನ ಸಮಾಜ ಪಕ್ಷ' ಅತಿ ಹೆಚ್ಚು ಅಭ್ಯರ್ಥಿಗಳನ್ನು (237) ಕಣಕ್ಕಿಳಿಸಿದೆ. ಪ್ರಕಾಶ್ ಅಂಬೇಡ್ಕರ್ ಅವರ 'ವಂಚಿತ್ ಬಹುಜನ ಆಘಾಡಿ'ಯು (200) ನಂತರದ ಸ್ಥಾನದಲ್ಲಿದೆ. ರಾಜ್ ಠಾಕ್ರೆ ಅವರ ಎಂಎನ್‌ಎಸ್, 125 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಛತ್ರಪತಿ ರಾಜರ್ಷಿ ಸಾಹು ಮಹಾರಾಜ್ ಹಾಗೂ ಛತ್ರಪತಿ ಶಿವಾಜಿ ಮಹಾರಾಜ್ ವಂಶಸ್ಥ ಯುವರಾಜ್ ಸಾಂಬಾಜಿ ರಾಜೇ ಛತ್ರಪತಿ ಅವರ 'ಮಹಾರಾಷ್ಟ್ರ ಸ್ವರಾಜ್ಯ ಪಕ್ಷ' 125 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.




## ಪ್ರಮುಖ ಪಾತ್ರ

'ಮತದಾನಕ್ಕೂ ಮೊದಲಿನ ಚುನಾವಣಾ ವಾತಾವರಣವನ್ನು ಗಮನಿಸಿದರೆ, ಪಕ್ಷೇತರರು ಹಾಗೂ ಸಣ್ಣ ಪಕ್ಷಗಳ ಅಭ್ಯರ್ಥಿಗಳು ಈ ಬಾರಿಯ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂಬುದು ತೋರುತ್ತಿದೆ. ಜೊತೆಗೆ, ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಬಂಡಾಯ ಅಭ್ಯರ್ಥಿಗಳೂ ಕಣದಲ್ಲಿದ್ದಾರೆ' ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

ಆಧಾರ: ಪಿಟಿಐ, ಚುನಾವಣಾ ಆಯೋಗ

# ಬಿಜೆಪಿ ವಿರುದ್ಧ ರಾಹುಲ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನಂದುರ್‌ಬಾರ್/ಮುಂಬೈ: ಆದಿವಾಸಿಗಳನ್ನು 'ವನವಾಸಿ'ಗಳು ಎಂದು ಕರೆದ ವಿಚಾರವಾಗಿ ಆರ್‌ಎಸ್‌ಎಸ್–ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರದ ನಂದುರ್‌ಬಾರ್‌ನಲ್ಲಿ ಗುರುವಾರ ತೀವ್ರ ವಾಗ್ದಾಳಿ ನಡೆಸಿದರು.

ಕೆಂಪು ಬಣ್ಣದ ಪಾಕೆಟ್ ಆಕಾರದ ಸಂವಿಧಾನದ ಪ್ರತಿಯನ್ನು ತೋರಿಸುತ್ತಾ, 'ದೇಶದ ಸ್ವಾತಂತ್ರ್ಯಕ್ಕಾಗಿ ಜೀವವನ್ನೇ ಮುಡಿಪಾಗಿಟ್ಟ ಬಿರ್ಸಾ ಮುಂಡಾ ಅವರ ಸಿದ್ಧಾಂತವನ್ನು ಭಾರತದ ಸಂವಿಧಾನವು ಪ್ರತಿಧ್ವನಿಸುತ್ತದೆ. ಬಿರ್ಸಾ ಮುಂಡಾ ಅವರು ಬ್ರಿಟಿಷರ ವಿರುದ್ಧ ಹೋರಾಡಿದರು. ಇಂದು ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಹೋರಾಡಬೇಕಿದೆ' ಎಂದು ಹೇಳಿದರು.

'ಪ್ರಧಾನಿ ನರೇಂದ್ರ ಮೋದಿ ಅವರು ನಿಮ್ಮನ್ನು 'ಆದಿವಾಸಿ'ಗಳು ಎನ್ನುವ ಬದಲು 'ವನವಾಸಿ'ಗಳು ಎಂದು ಕರೆದಿದ್ದಾರೆ. ಎರಡೂ ಭಿನ್ನ. ಆದಿವಾಸಿಗಳು ಎಂದರೆ ಮೂಲ ನಿವಾಸಿಗಳು; ವನವಾಸಿಗಳು ಎಂದರೆ ಅರಣ್ಯ ವಾಸಿಗಳು' ಎಂದು ವಿವರಿಸಿದರು.

## ಅಮಿತ್ ಶಾ ಹೇಳಿಕೆಗೆ ಖರ್ಗೆ ಟೀಕೆ

ಪುಣೆ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಲು ಕಾಂಗ್ರೆಸ್ ಬಯಸಿದೆ ಎಂದು ಪ್ರತಿಪಾದಿಸಿರುವ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಟೀಕಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಈ ವಿವಾದಾತ್ಮಕ ನಿಬಂಧನೆಯನ್ನು ಈಗಾಗಲೇ ಸಂಸತ್ತು ರದ್ದುಗೊಳಿಸಿದೆಯಲ್ಲ ಎಂದಿದ್ದಾರೆ.

ಪುಣೆಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಾಜದಲ್ಲಿ ಒಡಕು ಮೂಡಿಸುವ ಸಲುವಾಗಿ ಬಿಜೆಪಿಯು ಈ ವಿಷಯವನ್ನು ಜೀವಂತವಾಗಿರಿಸಲು ಬಯಸಿದೆ. ಕಾಂಗ್ರೆಸ್‌ನ ಯಾವ ನಾಯಕರು, ಎಲ್ಲಿ ಈ ಮಾತುಗಳನ್ನು ಹೇಳಿದ್ದಾರೆ' ಎಂದು ಪ್ರಶ್ನಿಸಿದ್ದಾರೆ. 'ನೀವು ಈ ಮಾತುಗಳನ್ನು ಬೇಕಿದ್ದರೆ ಕಾಶ್ಮೀರದಲ್ಲಿ ಹೋಗಿ ಹೇಳಿ. ಅಲ್ಲಿ ಈಗಾಗಲೇ ಚುನಾವಣೆ ಮುಗಿದಿದೆ' ಎಂದಿದ್ದಾರೆ.

# 'ನುಸುಳುಕೋರರಿಗೂ ಸಿಲಿಂಡರ್'



ರಾಂಚಿ (ಪಿಟಿಐ): ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಜಾರ್ಖಂಡ್ ಉಸ್ತುವಾರಿ ಗುಲಾಮ್ ಅಹ್ಮದ್ ಮಿರ್ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಎಲ್ಲ ನಾಗರಿಕರಿಗೆ ₹450ಕ್ಕೆ ಅಡುಗೆ ಅನಿಲ ಸಿಲಿಂಡರ್ ನೀಡಲಾಗುವುದು. ಅವರು ನುಸುಳುಕೋರರು ಆಗಿರಲಿ, ಅಲ್ಲದೇ ಇರಲಿ' ಎಂದು ಹೇಳಿದ್ದಾರೆ. ಅವರ ಈ ಹೇಳಿಕೆಯನ್ನು 'ದೇಶ ವಿರೋಧಿ' ಎಂದು ಬಿಜೆಪಿ ಟೀಕಿಸಿದೆ.

ಜಾರ್ಖಂಡ್‌ನ ಪ್ರಮುಖ ನಗರಗಳಲ್ಲಿ ಎಲ್‌ಪಿಜಿ ಸಿಲಿಂಡರ್ ₹860ಕ್ಕೆ ಲಭ್ಯವಿದೆ. ಬಿಜೆಪಿಯು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಾಂಗ್ಲಾದೇಶದ ನುಸುಳುಕೋರರ ವಿಷಯವನ್ನು ಪ್ರಮುಖವಾಗಿಸಿದೆ.

'ನಮ್ಮ ಸರ್ಕಾರ ರಚನೆಯಾದರೆ ಡಿಸೆಂಬರ್ 1ರಿಂದ ₹450ಕ್ಕೆ ಅಡುಗೆ ಅನಿಲ ಸಿಲಿಂಡರ್ ನೀಡುವುದಾಗಿ ಭರವಸೆ ನೀಡಿದ್ದೇವೆ. ಜನಸಾಮಾನ್ಯರಿಗಾಗಿ ಈ ಯೋಜನೆ ಜಾರಿಯಾಗಲಿದೆ. ಅವರು ಹಿಂದೂಗಳು, ಮುಸ್ಲಿಮರು, ನುಸುಳುಕೋರರೇ ಆಗಿರಲಿ ಜಾರ್ಖಂಡ್‌ನ ಎಲ್ಲ ನಾಗರಿಕರಿಗೂ ಇದು ಅನ್ವಯವಾಗಲಿದೆ' ಎಂದು ಬೆರ್ಮೊ ವಿಧಾನಸಭಾ ಕ್ಷೇತ್ರದ ಚಂದ್ರಾಪುರದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಿರ್ ಹೇಳಿದರು.

ಜೆಎಂಎಂ ಮೈತ್ರಿಕೂಟವು 'ವೋಟ್ ಬ್ಯಾಂಕ್ ರಾಜಕೀಯ'ಕ್ಕಾಗಿ ರಾಜ್ಯದಲ್ಲಿ ಒಳನುಸುಳುವಿಕೆಯನ್ನು ಪ್ರೋತ್ಸಾಹಿಸುತ್ತಿದೆ ಎಂದು ಬಿಜೆಪಿ ನಾಯಕರು ಆರೋಪಿಸುತ್ತಿರುವ ಸಂದರ್ಭದಲ್ಲೇ ಮಿರ್, ಈ ಹೇಳಿಕೆ ನೀಡಿದ್ದಾರೆ.

**ಟೀಕೆ:** ಗಿರಿಡೀಹ್ ಜಿಲ್ಲೆಯಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, 'ನುಸುಳುಕೋರರಿಗೆ ₹450ಕ್ಕೆ ಎಲ್‌ಪಿಜಿ ಸಿಲಿಂಡರ್ ನೀಡುವುದಾಗಿ ಕಾಂಗ್ರೆಸ್‌ನ ಮಿರ್ ಹೇಳಿದ್ದಾರೆ. ಕಾಂಗ್ರೆಸ್– ಜೆಎಂಎಂ– ಆರ್‌ಜೆಡಿ ಮೈತ್ರಿಕೂಟವು ಒಳನುಸುಳುವಿಕೆಯನ್ನು ಪ್ರೋತ್ಸಾಹಿಸುತ್ತಿದೆ' ಎಂದು ಟೀಕಿಸಿದ್ದಾರೆ. ಜಾರ್ಖಂಡ್‌ನಲ್ಲಿ ಮೊದಲ ಹಂತದ ಮತದಾನ ಬುಧವಾರ ನಡೆದಿದ್ದು, ಕೊನೆಯ ಹಂತದ ಮತದಾನ ಇದೇ 20ರಂದು ನಡೆಯಲಿದೆ.

## 'ಹಕ್ಕು ಕಸಿಯಲು ಅವಕಾಶ ನೀಡೆವು'



'ಹಿಂದೂಗಳು, ಮುಸ್ಲಿಮರು ಮತ್ತು ನುಸುಳುಕೋರರಿಗೆ ಕಡಿಮೆ ದರದಲ್ಲಿ ಎಲ್‌ಪಿಜಿ ಸಿಲಿಂಡರ್ ನೀಡುತ್ತೇವೆ ಎಂದು ಕಾಂಗ್ರೆಸ್‌ನ ಉಸ್ತುವಾರಿ ಭರವಸೆ ನೀಡಿದ್ದಾರೆ. ಬುಡಕಟ್ಟು ಜನರ ಹಕ್ಕು ಕಸಿದು ನುಸುಳುಕೋರರಿಗೆ ನೀಡುವುದಕ್ಕೆ ಬಿಜೆಪಿ ಬಿಡುವುದಿಲ್ಲ' ಎಂದು ಬೊಕಾರೊದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದರು.

## ಬಾಂಗ್ಲಾದೇಶೀಯರಿಗೆ ಸಿಲಿಂಡರ್: ಟೀಕೆ



ನವಿ ಮುಂಬೈ: 'ಕಾಂಗ್ರೆಸ್ ಪಕ್ಷವು ಜನರನ್ನು ಬಡತನದತ್ತ ಒಯ್ಯಲು ಯತ್ನಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ರೋಹಿಂಗ್ಯಾ ಸಮುದಾಯದವರು ಮತ್ತು ಬಾಂಗ್ಲಾ ದೇಶಿಯರಿಗೆ ಉಚಿತವಾಗಿ ಸಿಲಿಂಡರ್ ನೀಡುವ ಭರವಸೆಯನ್ನು ಕಾಂಗ್ರೆಸ್ ನೀಡುತ್ತಿದೆ ಎಂದು ಇಲ್ಲಿ ವಾಗ್ದಾಳಿ ನಡೆಸಿದರು. ಮಹಾವಿಕಾಸ ಅಘಾಡಿ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬಂದರೆ ಅವರು ಇದನ್ನೇ ಮಾಡುತ್ತಾರೆ ಎಂದು ಹೊರವಲಯದ ಖಾರ್ಗರ್‌ನಲ್ಲಿ ಪ್ರಚಾರ ಸಭೆಯಲ್ಲಿ ಹೇಳಿದರು.

ಕಾಂಗ್ರೆಸ್‌ನ ಸಚಿವರೊಬ್ಬರು ಹಿಂದೂ, ಮುಸ್ಲಿಂ, ಒಳನುಸುಳುಕೋರರಿಗೆ ಉಚಿತ ಸಿಲಿಂಡರ್ ನೀಡುವ ಭರವಸೆ ನೀಡುತ್ತಿದ್ದಾರೆ. ಬಾಂಗ್ಲಾದೇಶಿಯರಿಗೆ ಉಚಿತ ನೆರವು ನೀಡುವುದನ್ನು ಬಹಿರಂಗವಾಗಿಯೇ ಘೋಷಿಸುತ್ತಿದ್ದಾರೆ ಎಂದು ಮೋದಿ ವಾಗ್ದಾಳಿ ನಡೆಸಿದರು.

# 'ಬಟೇಂಗೆ' ಹೇಳಿಕೆಯ ಅರ್ಥ ಗ್ರಹಿಸಲು ವಿಫಲ: ಫಡಣವೀಸ್



ಮುಂಬೈ (ಪಿಟಿಐ): ಆಡಳಿತಾರೂಢ 'ಮಹಾಯುತಿ' ಮೈತ್ರಿಕೂಟದ ಕೆಲವು ನಾಯಕರು 'ಬಟೇಂಗೆ ತೊ ಕಟೇಂಗೆ' (ಒಗ್ಗಟ್ಟಿಲ್ಲದಿರುವುದು ವಿನಾಶಕ್ಕೆ ಕಾರಣವಾಗುತ್ತದೆ) ಹೇಳಿಕೆಯ ಅರ್ಥ ಗ್ರಹಿಸಲು ವಿಫಲರಾಗಿದ್ದಾರೆ ಎಂದು ಮಹಾರಾಷ್ಟ್ರದ ಉಪಮುಖ್ಯಮಂತ್ರಿ, ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ವಿರೋಧ ಪಕ್ಷಗಳ ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟದ ಪ್ರಚಾರ ತಂತ್ರಕ್ಕೆ ಪ್ರತಿಯಾಗಿ ಬಿಜೆಪಿಯು ಈ ನಿರೂಪಣೆಯನ್ನು ಮುನ್ನೆಲೆಗೆ ತಂದಿದೆ. ಆದರೆ ತಮ್ಮದೇ ಪಕ್ಷದ ಅಶೋಕ್ ಚವಾಣ್ ಮತ್ತು ಪಂಕಜಾ ಮುಂಡೆ ಅವರು ಈ ಹೇಳಿಕೆಯ 'ತಿರುಳು' ಅರ್ಥಮಾಡಿಕೊಂಡಿಲ್ಲ ಎಂದು ಗುರುವಾರ ಸುದ್ದಿಗಾರರೊಂದಿಗಿನ ಸಂವಾದದ ವೇಳೆ ತಿಳಿಸಿದ್ದಾರೆ.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ನೀಡಿದ್ದ 'ಬಟೇಂಗೆ ತೊ ಕಟೇಂಗೆ' ಹೇಳಿಕೆಯನ್ನು ಮುಂದಿಟ್ಟುಕೊಂಡು ಬಿಜೆಪಿಯು, ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

'ಕಾಂಗ್ರೆಸ್ ನೇತೃತ್ವದ ಎಂವಿಎ ವಿಭಜಕ ರಾಜಕಾರಣಕ್ಕೆ ಪ್ರತಿಯಾಗಿ ನಾವು ಈ ಹೇಳಿಕೆಯನ್ನು ಬಳಸಿಕೊಂಡಿದ್ದೇವೆ. ಎಲ್ಲರೂ ಒಗ್ಗಟ್ಟಿನಿಂದ ಇರಬೇಕು ಎಂಬುದೇ ಈ ಹೇಳಿಕೆಯ ಅರ್ಥ' ಎಂದು ಹೇಳಿದರು.

ಬಿಜೆಪಿಯವರೇ ಆದ ಅಶೋಕ್ ಚವಾಣ್ ಮತ್ತು ಪಂಕಜಾ ಮುಂಡೆ ಅಲ್ಲದೆ, 'ಮಹಾಯುತಿ' ಮೈತ್ರಿಕೂಟದ ಭಾಗವಾಗಿರುವ ಎನ್‌ಸಿಪಿ ಮುಖ್ಯಸ್ಥ ಅಜಿತ್ ಪವಾರ್ ಅವರೂ ಈ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದ್ದಾರೆ.

'ನಾವು ಮುಸ್ಲಿಮರ ವಿರುದ್ಧ ಇದ್ದೇವೆ ಎಂಬುದು ಇದರ ಅರ್ಥವಲ್ಲ. ಸರ್ಕಾರವು ಎಲ್ಲ ಸಮುದಾಯಗಳಿಗೂ ವಿವಿಧ ಯೋಜನೆಗಳನ್ನು ಜಾರಿಗೊಳಿಸಿದೆ. 'ಲಡ್ಕಿ ಬಹೀಣ್ ಯೋಜನೆ' ಮುಸ್ಲಿಂ ಮಹಿಳೆಯರಿಗೆ ಅನ್ವಯಿಸುವುದಿಲ್ಲ ಎಂದು ನಾವು ಹೇಳಿದ್ದೇವೆಯೇ' ಎಂದು ಫಡಣವೀಸ್ ಪ್ರಶ್ನಿಸಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಎಚ್‌ಎನ್‌ಎಲ್‌ಸಿ ನಿಷೇಧ

ನವದೆಹಲಿ (ಪಿಟಿಐ): ಹಿಂಸಾತ್ಮಕ ಕೃತ್ಯಗಳು, ಭಾರತದ ಸಾರ್ವಭೌಮತ್ವ, ಸಹಬಾಳ್ವೆಗೆ ಧಕ್ಕೆ ತರುವಂತಹ ಚಟುವಟಿಕೆಗಳಲ್ಲಿ ಭಾಗಿಯಾದ ಕಾರಣ ಮೇಘಾಲಯ ಮೂಲದ ಬಂಡುಕೋರರ ತಂಡ ಹಿನ್ನಿವ್ರೆಪ್ ನ್ಯಾಷನಲ್ ಲಿಬರೇಶನ್ ಕೌನ್ಸಿಲ್ (ಎಚ್‌ಎನ್‌ಎಲ್‌ಸಿ) ಅನ್ನು ಐದು ವರ್ಷಗಳ ಕಾಲ ನಿಷೇಧಿಸಲಾಗಿದೆ.

ಖಾಸಿ ಹಾಗೂ ಜೈಂತಿಯಾ ಆದಿವಾಸಿಗಳು ಹೆಚ್ಚಾಗಿ ವಾಸಿಸುವ ಮೇಘಾಲಯದ ಪ್ರದೇಶಗಳನ್ನು ಪ್ರತ್ಯೇಕಿಸುವುದಾಗಿ ಎಚ್‌ಎನ್‌ಎಲ್‌ಸಿ ಘೋಷಿಸಿದೆ. ಅಲ್ಲದೆ ಸಂಘಟನೆಗೆ ಹಣ ವಸೂಲಿ ಮಾಡಲು ನಾಗರಿಕರಿಗೆ ಬೆದರಿಕೆ ಹಾಕುವುದನ್ನು ಮುಂದುವರೆಸಿದೆ ಎಂದು ಗೃಹ ಸಚಿವಾಲಯ ತನ್ನ ಅಧಿಸೂಚನೆಯಲ್ಲಿ ತಿಳಿಸಿದೆ.

### ದೆಹಲಿ: ಎಎಪಿಯ ಮಹೇಶ್ ಖಿಚಿ ಮೇಯರ್

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯ ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಮಹೇಶ್ ಖಿಚಿ ಅವರು ಗುರುವಾರ ಗೆಲುವು ಸಾಧಿಸಿದರು.

ಖಿಚಿ ಅವರು ಬಿಜೆಪಿ ಅಭ್ಯರ್ಥಿ ಕಿಶನ್ ಲಾಲ್ ಅವರನ್ನು ಮೂರು ಮತಗಳ ಅಂತರದಲ್ಲಿ ಪರಾಭವಗೊಳಿಸಿ ಗೆಲುವಿನ ನಗೆ ಬೀರಿದರು. ಖಿಚಿ ಅವರು 133 ಮತಗಳನ್ನು ಪಡೆದರೆ, ಕಿಶನ್ ಲಾಲ್ ಅವರು 130 ಮತಗಳನ್ನು ಪಡೆದಿದ್ದಾರೆ. ಒಟ್ಟು ಚಲಾವಣೆಯಾಗಿದ್ದ 265 ಮತಗಳ ಪೈಕಿ ಎರಡು ಮತಗಳನ್ನು ಅಸಿಂಧುಗೊಳಿಸಲಾಗಿದೆ. ಮೇಯರ್ ಚುನಾವಣೆಯಲ್ಲಿ ಪರಾಭವಗೊಂಡ ನಂತರ ಬಿಜೆಪಿಯು ಉಪ ಮೇಯರ್ ಸ್ಪರ್ಧೆಯಿಂದ ಹಿಂದೆ ಸರಿಯಿತು. ಇದರಿಂದಾಗಿ ಎಎಪಿಯ ರವೀಂದ್ರ ಭಾರದ್ವಾಜ್ ಅವರಿಗೆ ಹಾದಿ ಸುಗಮವಾಯಿತು. ಭಾರದ್ವಾಜ್ ಅವರನ್ನು ಉಪಮೇಯರ್ ಆಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸ್ಪರ್ಧೆಯಲ್ಲಿ ದಲಿತ ಅಭ್ಯರ್ಥಿ ಖಿಚಿ ಗೆಲುವು ಸಾಧಿಸುತ್ತಿದ್ದಂತೆಯೇ ಎಎಪಿ ಕೌನ್ಸಿಲರ್‌ಗಳು 'ಜೈ ಭೀಮ್' ಎಂದು ಘೋಷಣೆ ಕೂಗಿದರು.

# ಪರೀಕ್ಷಾ ಆಕಾಂಕ್ಷಿಗಳ ಬೇಡಿಕೆಗೆ ಸಮ್ಮತಿ

ಪ್ರಯಾಗರಾಜ್ (ಪಿಟಿಐ): ಪರೀಕ್ಷಾ ಆಕಾಂಕ್ಷಿಗಳ ಪ್ರತಿಭಟನೆ ಬೆನ್ನಲ್ಲೇ, ಅವರ ಬೇಡಿಕೆಗಳಿಗೆ ಸಮ್ಮತಿ ಸೂಚಿಸಿರುವ ಉತ್ತರ ಪ್ರದೇಶ ಲೋಕಸೇವಾ ಆಯೋಗವು (ಯುಪಿಪಿಎಸ್‌ಸಿ) ಪರಿಶೀಲನಾ ಅಧಿಕಾರಿ (ಆರ್‌ಒ) ಮತ್ತು ಸಹಾಯಕ ಪರಿಶೀಲನಾ ಅಧಿಕಾರಿ (ಎಆರ್‌ಒ) ಪರೀಕ್ಷೆಗಳನ್ನು ಗುರುವಾರ ಮುಂದೂಡಿದೆ. ಅಲ್ಲದೆ ರಾಜ್ಯ ನಾಗರಿಕ ಸೇವಾ (ಪಿಸಿಎಸ್) ಪೂರ್ವಭಾವಿ ಪರೀಕ್ಷೆಯನ್ನು ಹಳೆಯ ಮಾದರಿಯಲ್ಲಿ ಒಂದೇ ದಿನದಲ್ಲಿ ನಡೆಸುವುದಾಗಿ ಘೋಷಿಸಿದೆ.

ಆರ್‌ಒ ಮತ್ತು ಎಆರ್‌ಒ ಪರೀಕ್ಷೆಗಳಲ್ಲಿ ಮುಕ್ತ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಲು ಸಮಿತಿಯೊಂದನ್ನು ರಚಿಸಲಾಗುವುದು. ಆ ಸಮಿತಿಯು ಎಲ್ಲಾ ಆಯಾಮಗಳಲ್ಲಿ ಅಧ್ಯಯನ ನಡೆಸಿ ವಿಸ್ತೃತ ವರದಿಯನ್ನು ಸಲ್ಲಿಸಲಿದೆ ಎಂದೂ ಆಯೋಗ ಪ್ರಕಟಿಸಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸೂಚನೆ ಮೇರೆಗೆ ಯುಪಿಪಿಎಸ್‌ಸಿ ಈ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡಿದೆ ಎಂದು ಆಯೋಗದ ಕಾರ್ಯದರ್ಶಿ ಅಶೋಕ್ ಕುಮಾರ್ ತಿಳಿಸಿದರು.

ಆರ್‌ಒ–ಎಆರ್‌ಒ ಪರೀಕ್ಷೆಯನ್ನು ಡಿಸೆಂಬರ್ 22 ಮತ್ತು 23ರಂದು ಮೂರು ಪಾಳಿಗಳಲ್ಲಿ ಹಾಗೂ ಪಿಸಿಎಸ್ ಪೂರ್ವಭಾವಿ ಪರೀಕ್ಷೆಯನ್ನು ಡಿಸೆಂಬರ್ 7 ಮತ್ತು 8ರಂದು ಎರಡು ಪಾಳಿಗಳಲ್ಲಿ ನಡೆಸುವುದಾಗಿ ಆಯೋಗ ಈ ಹಿಂದೆ ಪ್ರಕಟಿಸಿತ್ತು. ಇದಕ್ಕೆ ರಾಜ್ಯದಾದ್ಯಂತ ತೀವ್ರ ವಿರೋಧ ವ್ಯಕ್ತವಾಗಿತ್ತು. ಭಾರಿ ಸಂಖ್ಯೆಯಲ್ಲಿ ಪರೀಕ್ಷಾ ಆಕಾಂಕ್ಷಿಗಳು ಇತ್ತೀಚೆಗೆ ಆಯೋಗದ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದರು.

# ವೈದ್ಯನಿಗೆ ಇರಿದ ಪ್ರಕರಣ ತಮಿಳುನಾಡಲ್ಲಿ ಪ್ರತಿಭಟನೆ

ಚೆನ್ನೈ (ಪಿಟಿಐ): ಸರ್ಕಾರಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ತಜ್ಞ ವೈದ್ಯರೊಬ್ಬರಿಗೆ ಮಹಿಳಾ ರೋಗಿಯ ಪುತ್ರ ಚಾಕುವಿನಿಂದ ಇರಿದಿರುವುದನ್ನು ಖಂಡಿಸಿ ವೈದ್ಯರು ತಮಿಳುನಾಡಿನಾದ್ಯಂತ ಗುರುವಾರ ಪ್ರತಿಭಟನೆ ನಡೆಸಿದರು. ವೈದ್ಯಕೀಯ ವೃತ್ತಿಪರರಿಗೆ ಸುರಕ್ಷತೆ ಒದಗಿಸಬೇಕು ಎಂದೂ ಒತ್ತಾಯಿಸಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮತ್ತು ತಮಿಳುನಾಡು ಸರ್ಕಾರಿ ವೈದ್ಯರ ಸಂಘದ ಸದಸ್ಯರು ನಡೆಸಿದ ಮುಷ್ಕರದಿಂದ, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನೀಡುವ ವೈದ್ಯಕೀಯ ಸೇವೆಗಳಲ್ಲಿ ಯಾವುದೇ ವ್ಯತ್ಯಯ ಉಂಟಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬುಧವಾರ ಹೊರ ರೋಗಿ ಕೊಠಡಿಯಲ್ಲಿ ರೋಗಿಯೊಬ್ಬರ ಪುತ್ರನಿಂದ ಇರಿತಕ್ಕೆ ಒಳಗಾದ ಕಲೈಗ್ನರ್ ಸೆಂಟಿನರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ (ಕೆಸಿಎಸ್‌ಎಸ್‌ಎಚ್) ಡಾ. ಬಾಲಾಜಿ ಜಗನ್ನಾಥನ್ ಅವರು ಚಿಕಿತ್ಸೆಗೆ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ಅಧಿಕಾರಿ ಹೇಳಿದರು. ಆರೋಗ್ಯ ಸಚಿವ ಮಾ.ಸುಬ್ರಮಣಿಯನ್ ಅವರು ಬಾಲಾಜಿ ಜಗನ್ನಾಥನ್ ಅವರನ್ನು ಗುರುವಾರ ಬೆಳಿಗ್ಗೆ ಭೇಟಿ ಮಾಡಿ, ಅವರ ಆರೋಗ್ಯ ವಿಚಾರಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 'ಡಾ.ಬಾಲಾಜಿ ಅವರು ಚೇತರಿಸಿಕೊಳ್ಳುತ್ತಿದ್ದು, ವೈದ್ಯಕೀಯ ಪರೀಕ್ಷೆಯ ನಂತರ ವಾರ್ಡ್‌ಗೆ ಸ್ಥಳಾಂತರಿಸಲಾಗುವುದು' ಎಂದು ತಿಳಿಸಿದರು.

'ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಜಿಲ್ಲಾ ಕೇಂದ್ರಗಳ ಆಸ್ಪತ್ರೆಗಳು ಮತ್ತು ತಾಲ್ಲೂಕು ಆಸ್ಪತ್ರೆಗಳು ರೋಗಿಗಳ ಪರಿಚಾರಕರಿಗೆ ತಾತ್ಕಾಲಿಕ ಗುರುತಿನ ಟ್ಯಾಗ್‌ಗಳನ್ನು ಒದಗಿಸುತ್ತಿವೆ. ರೋಗಿಗಳ ಪರಿಚಾರಕರಿಗೆ ನಾಲ್ಕು ಬಣ್ಣದ ಟ್ಯಾಗ್ ನೀಡುವ ವ್ಯವಸ್ಥೆಯನ್ನು ಅಕ್ಟೋಬರ್ ಆರಂಭದಲ್ಲಿ ರಾಜೀವ್ ಗಾಂಧಿ ಸರ್ಕಾರಿ ಜನರಲ್ ಆಸ್ಪತ್ರೆಯಲ್ಲಿ ಪರಿಚಯಿಸಲಾಯಿತು. ಇದನ್ನು ಇತರ ಸರ್ಕಾರಿ ಆಸ್ಪತ್ರೆಗಳಿಗೂ ವಿಸ್ತರಿಸಲಾಗುವುದು' ಎಂದು ಸಚಿವರು ಇದೇ ವೇಳೆ ತಿಳಿಸಿದರು.

'ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಪ್ರತಿಭಟನೆ ನಡೆಸಲಾಯಿತು. ರೋಗಿಗಳ ಮೇಲೆ ಪರಿಣಾಮ ಉಂಟು ಮಾಡುವ ಉದ್ದೇಶ ವಿರಲಿಲ್ಲ. ರೋಗಿಗಳಿಗೆ ಎಲ್ಲ ರೀತಿಯ ಚಿಕಿತ್ಸಾ ಸೌಲಭ್ಯಗಳನ್ನು ನೀಡಲಾಗುತ್ತಿದೆ' ಎಂದು ಕೆಸಿಎಸ್‌ಎಸ್‌ಎಚ್ ನಿರ್ದೇಶಕ ಡಾ. ಎಲ್.ಪಾರ್ಥಸಾರಥಿ ಪ್ರತಿಕ್ರಿಯಿಸಿದರು.

# 'ಗ್ಯಾಸ್ ಚೇಂಬರ್ ಒಳಗೆ ಬಂದಂತಿದೆ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ಗಾಳಿಯು ಶುದ್ಧವಾಗಿರುವ, ಗಾಳಿಯ ಗುಣಮಟ್ಟ ಸೂಚ್ಯಂಕವು 35 ಅಂಶಗಳಷ್ಟಿರುವ ವಯನಾಡ್‌ನಿಂದ ದೆಹಲಿಗೆ ವಾಪಸಾದೆ. ದೆಹಲಿಯನ್ನು ಪ್ರವೇಶಿಸುತ್ತಿದ್ದಂತೆಯೇ 'ಗ್ಯಾಸ್ ಚೇಂಬರ್' ಒಳಗೆ ಬಂದಂತೆ ಭಾಸವಾಯಿತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಗುರುವಾರ ಪೋಸ್ಟ್ ಹಂಚಿಕೊಂಡಿದ್ದಾರೆ.



ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಪ್ರಿಯಾಂಕಾ ಅವರು ಹಲವು ದಿನಗಳಿಂದ ವಯನಾಡ್‌ನಲ್ಲಿಯೇ ಇದ್ದು, ಸತತ 12 ದಿನ ಪ್ರಚಾರ ನಡೆಸಿದ್ದರು. ಮತದಾನ ಮುಗಿದ ಬಳಿಕ, ಈಗ ಅವರು ದೆಹಲಿಗೆ ವಾಪಸ್ ಆಗಿದ್ದಾರೆ.

'ಕಲುಷಿತ ಗಾಳಿಯು ಚಾದರದಂತೆ ನಗರವನ್ನು ಹೊದ್ದುಕೊಂಡಿದೆ. ಮೇಲಿನಿಂದ ನೋಡಿದರೆ ಭಯಾನಕ ಎನಿಸುವಂತಿದೆ. ದೆಹಲಿಯ ಗಾಳಿಯ ಗುಣಮಟ್ಟವು ವರ್ಷದಿಂದ ವರ್ಷಕ್ಕೆ ಇಳಿಕೆ ಕಾಣುತ್ತಲೇ ಇದೆ. ನಾವೆಲ್ಲರೂ ಒಟ್ಟಾಗಿ ಈ ಬಗ್ಗೆ ಕೆಲಸ ಮಾಡಲೇಬೇಕಿದೆ' ಎಂದು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ.



ನವದೆಹಲಿಯಲ್ಲಿ ಗುರುವಾರ ಬೆಳಿಗ್ಗೆ ಕಲುಷಿತ ಗಾಳಿಯಿಂದಾಗಿ ಕಂಡು ಬಂದ ದೃಶ್ಯ —ಪಿಟಿಐ ಚಿತ್ರ

## ದೆಹಲಿಯಲ್ಲಿ 'ಅಪಾಯಕಾರಿ' ಸ್ಥಿತಿ

ದೆಹಲಿಯಲ್ಲಿ ಹಲವು ದಿನಗಳಿಂದ ಗಾಳಿಯ ಗುಣಮಟ್ಟವು ತೀವ್ರ ಕುಸಿತ ಕಂಡಿದೆ. ಚಳಿಗಾಲ ಆರಂಭದ ಈ ದಿನಗಳಲ್ಲಿ ಮೊದಲ ಬಾರಿಗೆ ನಗರದ ಗಾಳಿ ಗುಣಮಟ್ಟದ ಸೂಚ್ಯಂಕವು ಬುಧವಾರ 'ಅಪಾಯಕಾರಿ' ಮಟ್ಟಕ್ಕೆ ತಲುಪಿತ್ತು. ಗುರುವಾರ ನಗರದ ಗಾಳಿ ಗುಣಮಟ್ಟದ ಸೂಚ್ಯಂಕವು 428 ಅಂಶಗಳಷ್ಟಿತ್ತು ಮತ್ತು ಸತತ ಎರಡನೇ ದಿನವೂ ಗಾಳಿಯು 'ಅಪಾಯಕಾರಿ' ಮಟ್ಟದಲ್ಲಿತ್ತು.

ಉಸಿರಾಟದ ಸಮಸ್ಯೆಗಳಿಂದ ಬಳಲುತ್ತಿರುವ ಜನರು ನಗರದ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. 'ಶುಕ್ರವಾರದ ಹೊತ್ತಿಗೆ ವಾಯು ಗುಣಮಟ್ಟದ ಸ್ಥಿತಿಯು ಸರಿಹೋಗಲಿದೆ' ಎಂದು ದೆಹಲಿ ಸರ್ಕಾರ ಹೇಳಿದೆ.

**ತುರ್ತು ವಿಚಾರಣೆ:** ದೆಹಲಿಯು ಜಗತ್ತಿನಲ್ಲಿಯೇ ಅತ್ಯಂತ ಮಾಲಿನ್ಯದ ನಗರವಾಗಬಾರದು. ಆದ್ದರಿಂದ ವಾಯು ಗುಣಮಟ್ಟ ಸುಧಾರಿಸುವ ಕುರಿತು ಕ್ರಮಗಳನ್ನು ಜಾರಿ ಮಾಡುವ ಸಂಬಂಧ ಸಲ್ಲಿಸಲಾಗಿದ್ದ ಅರ್ಜಿಯನ್ನು ತುರ್ತು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದೆ. ವಿಚಾರಣೆಯು ಇದೇ 18ರಂದು ನಡೆಯಲಿದೆ.

# ಪ್ರಧಾನಿ ಮೋದಿಗೆ ಡೊಮಿನಿಕಾ ದೇಶದ ಗೌರವ

ನವದೆಹಲಿ (ಪಿಟಿಐ): ಡೊಮಿನಿಕಾ ದೇಶವು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತನ್ನ ಅತ್ಯುನ್ನತ ನಾಗರಿಕ ಗೌರವ 'ಡೊಮಿನಿಕಾ ಅವಾರ್ಡ್ ಆಫ್ ಆನರ್' ನೀಡಲು ನಿರ್ಧರಿಸಿದೆ ಎಂದು ಅಲ್ಲಿನ ಸರ್ಕಾರ ಹೇಳಿದೆ.

ಕೋವಿಡ್– 19 ಸಾಂಕ್ರಾಮಿಕದ ಅವಧಿಯಲ್ಲಿ ಮೋದಿ ಅವರು ಡೊಮಿನಿಕಾಕ್ಕೆ ನೀಡಿದ ನೆರವು ಮತ್ತು ಉಭಯ ದೇಶಗಳ ಬಾಂಧವ್ಯವನ್ನು ಬಲಪಡಿಸುವಲ್ಲಿ ಅವರು ತೋರಿದ ಬದ್ಧತೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ನವೆಂಬರ್ 19ರಿಂದ 21ರವರೆಗೆ ಗಯಾನಾದ ಜಾರ್ಜ್‌ಟೌನ್‌ನಲ್ಲಿ ನಡೆಯಲಿರುವ ಮುಂಬರುವ ಭಾರತ-ಕೆರಿಕಮ್ (ಕೆರಿಬಿಯನ್ ಕಮ್ಯುನಿಟಿ) ಶೃಂಗಸಭೆಯಲ್ಲಿ ಡೊಮಿನಿಕಾ ದ್ವೀಪ ರಾಷ್ಟ್ರದ ಅಧ್ಯಕ್ಷೆ ಸಿಲ್ವೆನಿ ಬರ್ಟನ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಡೊಮಿನಿಕಾ ಪ್ರಧಾನ ಮಂತ್ರಿಯವರ ಕಚೇರಿಯ ಹೇಳಿಕೆ ತಿಳಿಸಿದೆ.

'ಪ್ರಧಾನಿ ಮೋದಿ ಅವರು 2021ರ ಫೆಬ್ರುವರಿಯಲ್ಲಿ ಡೊಮಿನಿಕಾಕ್ಕೆ 70,000 ಡೋಸ್ ಅಸ್ಟ್ರಾಜೆನೆಕಾ ಕೋವಿಡ್–19 ಲಸಿಕೆ ಪೂರೈಸಿದ್ದರು. ಈ ಉದಾರ ಕೊಡುಗೆಯು, ಡೊಮಿನಿಕಾಕ್ಕೆ ಕೆರಿಬಿಯನ್‌ನಲ್ಲಿರುವ ತನ್ನ ನೆರೆಯ ದೇಶಗಳಿಗೆ ನೆರವು ನೀಡಲು ಅನುವು ಮಾಡಿಕೊಟ್ಟಿತ್ತು' ಎಂದಿದೆ.

ಗುಜರಾತ್, ಮಹಾರಾಷ್ಟ್ರದ 13 ಕಡೆಗಳಲ್ಲಿ ತಪಾಸಣೆ

# ಹಣ ಅಕ್ರಮ ವರ್ಗಾವಣೆ: ಇ.ಡಿ ಶೋಧ

ಮುಂಬೈ (ಪಿಟಿಐ): ಮಾಲೇಗಾಂವ್‌ನ ವ್ಯಾಪಾರಿಯ ವಿರುದ್ಧ ದಾಖಲಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯದ ಹಲವು ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿದರು.

ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ ಮಾಲೇಗಾಂವ್‌ನ ವ್ಯಾಪಾರಿ ಸಿರಾಜ್ ಅಹ್ಮದ್ ಹಾರೂನ್ ಮೆಮನ್ ವಿರುದ್ಧ ಪೊಲೀಸರು ಕಳೆದ ವಾರ ಎಫ್‌ಐಆರ್ ದಾಖಲಿಸಿದ್ದರು.

ಮಾಲೇಗಾಂವ್‌ನಲ್ಲಿ ಚಹಾ ಮತ್ತು ತಂಪು ಪಾನೀಯಗಳ ಏಜೆನ್ಸಿ ಹೊಂದಿರುವ ಹಾರೂನ್ ಅವರು ₹100 ಕೋಟಿಗೂ ಹೆಚ್ಚು ಮೊತ್ತದ ವಹಿವಾಟು ನಡೆಸಲು ಹಲವರ ಬ್ಯಾಂಕ್ ಖಾತೆಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆರೋಪ ಇದೆ.

ಇ.ಡಿ ಅಧಿಕಾರಿಗಳು ಹಣದ ಅಕ್ರಮ ವಹಿವಾಟು ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಮಹಾರಾಷ್ಟ್ರದ ಮಾಲೇಗಾಂವ್, ನಾಸಿಕ್ ಮತ್ತು ಮುಂಬೈ ಅಲ್ಲದೆ ಗುಜರಾತ್‌ನ ಸೂರತ್ ಹಾಗೂ ಅಹಮದಾಬಾದ್‌ನ ಒಟ್ಟು 13 ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ.

ಆರೋಪಿಯು ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಗೆ ಬಳಸಲು ಹಣವನ್ನು ಅಕ್ರಮ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಇದಕ್ಕಾಗಿ, ನಾಸಿಕ್ ಮರ್ಚಂಟ್ ಕೋಆಪರೇಟಿವ್ ಬ್ಯಾಂಕ್‌ನಲ್ಲಿ ಹೊಸ ಖಾತೆಗಳನ್ನು ತೆರೆಯಲು ಹನ್ನೆರಡಕ್ಕೂ ಹೆಚ್ಚು ಮಂದಿಯ ಕೆವೈಸಿ (ಪ್ಯಾನ್, ಆಧಾರ್ ಮಾಹಿತಿ) ವಿವರಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಲಾಗಿದೆ. ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಸುಮಾರು 170 ಬ್ಯಾಂಕ್ ಶಾಖೆಗಳಿಂದ ₹100 ಕೋಟಿಗೂ ಅಧಿಕ ಹಣ ವರ್ಗಾವಣೆ ಮಾಡಿರುವುದನ್ನು ಇ.ಡಿ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

## ಸ್ಯಾಂಟಿಯಾಗೊ ಮಾರ್ಟಿನ್‌ಗೆ ಸೇರಿದ ಸ್ಥಳಗಳಲ್ಲಿ ಶೋಧ

ಚೆನ್ನೈ (ಪಿಟಿಐ): ಚೆನ್ನೈಯ 'ಲಾಟರಿ ಕಿಂಗ್' ಸ್ಯಾಂಟಿಯಾಗೊ ಮಾರ್ಟಿನ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಲವು ರಾಜ್ಯಗಳಲ್ಲಿ ಗುರುವಾರ ಶೋಧ ನಡೆಸಿದರು ಎಂದು ಅಧಿಕೃತ ಮೂಲಗಳು ತಿಳಿಸಿವೆ.


ಸ್ಯಾಂಟಿಯಾಗೊ ಮಾರ್ಟಿನ್ ಸುಮಾರು ₹1,300 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳನ್ನು ಖರೀದಿಸಿ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿದ ಅತಿದೊಡ್ಡ ದೇಣಿಗೆದಾರ ಎನಿಸಿಕೊಂಡಿದ್ದಾರೆ.

ಮಾರ್ಟಿನ್ ಅವರ ಚೆನ್ನೈ ನಿವಾಸದಲ್ಲಿ ವಶಪಡಿಸಿಕೊಂಡಿದ್ದ ಲೆಕ್ಕಪತ್ರವಿಲ್ಲದ ₹7.2 ಕೋಟಿ ಹಣಕ್ಕೆ ಸಂಬಂಧಿಸಿ ಮಾರ್ಟಿನ್ ಮತ್ತು ಇತರ ಕೆಲವರ ವಿರುದ್ಧದ ಪ್ರಾಥಮಿಕ ಎಫ್‌ಐಆರ್ ಕೈಬಿಡಲು ಕೆಳ ನ್ಯಾಯಾಲಯವು ಪೊಲೀಸರಿಗೆ ಅನುಮತಿಸಿ, ಆದೇಶ ನೀಡಿತ್ತು. ಈ ಆದೇಶ ರದ್ದುಪಡಿಸಿ ಈ ಪ್ರಕರಣದಲ್ಲಿ ಮಾರ್ಟಿನ್ ಮತ್ತು ಅವರ ಪಾಲುದಾರರ ವಿರುದ್ಧ ತನಿಖೆ ಮುಂದುವರಿಸಲು ಮದ್ರಾಸ್ ಹೈಕೋರ್ಟ್ ಕಳೆದ ತಿಂಗಳು ಇ.ಡಿಗೆ ಅನುಮತಿ ನೀಡಿತ್ತು. ಇದರ ಬೆನ್ನಲ್ಲೇ ಮಾರ್ಟಿನ್ ಅವರಿಗೆ ಸೇರಿದ ಹಲವು ಸ್ಥಳಗಳಲ್ಲಿ ಇ.ಡಿ ಶೋಧ ನಡೆಸಿದೆ.

ಮಾರ್ಟಿನ್ ಮತ್ತು ಅವರ ಅಳಿಯ ಆಧವ್ ಅರ್ಜುನ್ ಹಾಗೂ ಇವರ ಪಾಲುದಾರರಿಗೆ ಸಂಬಂಧಿಸಿದ ಸುಮಾರು 20 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಇವರ ವ್ಯವಹಾರ ಗಳಿರುವ ಚೆನ್ನೈ, ಕೊಯಮತ್ತೂರು, ಹರಿಯಾಣದ ಫರಿದಾಬಾದ್, ಪಂಜಾಬ್‌ನ ಲುಧಿಯಾನ ಹಾಗೂ ಕೋಲ್ಕತ್ತದಲ್ಲಿ ಸಮಗ್ರ ಶೋಧ ನಡೆಸಲಾಗುತ್ತಿದೆ ಎಂದು ಇ.ಡಿ ಮೂಲಗಳು ಹೇಳಿವೆ. ಲಾಟರಿ ವಂಚನೆ, ಲಾಟರಿ ಅಕ್ರಮ ಮಾರಾಟದ ಸಂಬಂಧ ಮಾರ್ಟಿನ್ ಮತ್ತು ಅವರ ವ್ಯವಹಾರ ಜಾಲದ ವಿರುದ್ಧ ಇ.ಡಿಯು ಪೊಲೀಸ್ ಎಫ್‌ಐಆರ್ ಆಧರಿಸಿ ಕ್ರಮ ಕೈಗೊಂಡಿದೆ. ಈ ಹಿಂದೆಯೂ ಇ.ಡಿ, ಮಾರ್ಟಿನ್ ಅವರ ವ್ಯವಹಾರಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಿತ್ತು.

ಇ.ಡಿಯು ಕಳೆದ ವರ್ಷ ಮಾರ್ಟಿನ್ ವಿರುದ್ಧದ ಪ್ರಕರಣದಲ್ಲಿ ₹457 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿದೆ. ಕೇರಳದಲ್ಲಿ ರಾಜ್ಯದಲ್ಲಿ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡಿ ಸಿಕ್ಕಿಂ ಸರ್ಕಾರಕ್ಕೆ ಸುಮಾರು ₹900 ಕೋಟಿ ನಷ್ಟ ಉಂಟು ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

**ಷೇರುಪೇಟೆ ವಹಿವಾಟು** 110




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 23,559 |
| ಇಂದಿನ ಅಂತ್ಯ | 23,532 |
| ▼ | 26 |
| ದಿನದ ಕನಿಷ್ಠ | 23,484 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100ಕ್ಕೆ | ₹585 |
| 12 ಕ್ಕೆ | ₹75 |
| ಮೈಸೂರು | |
| 100ಕ್ಕೆ | ₹587 |

**ವಿನಿಮಯ ದರ**

| | |
|---|---|
| $ ಡಾಲರ್ | 84.46 |
| £ ಪೌಂಡ್ | 106.85 |
| € ಯುರೊ | 88.91 |
| ¥ ಯೆನ್ (100ಕ್ಕೆ) | 54 |

**ಎನ್.ಆರ್.ಪುರ ರಬ್ಬರ್**



| | |
|---|---|
| ಆರ್‌ಎಸ್‌ಎಸ್-4 | ₹179 |
| ಆರ್‌ಎಸ್‌ಎಸ್-5 | ₹173 |
| ಗುಡ್ ಲಾಟ್ | ₹169 |

(ಪ್ರತಿ ಕೆ.ಜಿಗೆ)

**ರಾಮನಗರ ರೇಷ್ಮೆಗೂಡು**



| | |
|---|---|
| ಮಿಶ್ರತಳಿ (ಸಿ.ಬಿ) | ₹300-596 |
| ದ್ವಿತಳಿ (ಬಿ.ವಿ) | ₹355-715 |

## ಹಿಗ್ಗಿದ ವಿದೇಶಿ ವ್ಯಾಪಾರ ಕೊರತೆ

ನವದೆಹಲಿ (ಪಿಟಿಐ): ಅಕ್ಟೋಬರ್ ತಿಂಗಳಿನಲ್ಲಿ ರಫ್ತಿಗಿಂತಲೂ ಆಮದು ಪ್ರಮಾಣ ಹೆಚ್ಚಾಗಿದ್ದು, ವಿದೇಶಿ ವ್ಯಾಪಾರದ ಕೊರತೆಯು ₹2.29 ಲಕ್ಷ ಕೋಟಿ ಆಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ರಫ್ತುವಿನ ಮೌಲ್ಯಕ್ಕಿಂತ ಆಮದು ಮೌಲ್ಯವೇ ಹೆಚ್ಚು ಇದ್ದರೆ, ಈ ಅಂತರವನ್ನು ವ್ಯಾಪಾರ ಕೊರತೆ ಎನ್ನಲಾಗುತ್ತದೆ.

ರಫ್ತು ಪ್ರಮಾಣದಲ್ಲಿ ಶೇ 17.25ರಷ್ಟು ಏರಿಕೆಯಾಗಿದೆ. ಒಟ್ಟು ₹3.31 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ರಫ್ತು ಮಾಡಲಾಗಿದೆ. ಇದು ಕಳೆದ ಒಂದು ದಶಕದಲ್ಲಿ ತಿಂಗಳೊಂದರಲ್ಲಿ ಆಗಿರುವ ಅತಿಹೆಚ್ಚು ರಫ್ತು ಪ್ರಮಾಣವಾಗಿದೆ ಎಂದು ಕೇಂದ್ರ ವಿವರಿಸಿದೆ. ಆದರೆ, ಆಮದು ಪ್ರಮಾಣವು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 3.9ರಷ್ಟು ಹೆಚ್ಚಳವಾಗಿದೆ. ಒಟ್ಟು ₹5.60 ಲಕ್ಷ ಕೋಟಿ ಮೌಲ್ಯದ ಸರಕುಗಳನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಹೇಳಿದೆ.

### ಎಂಪಿಸಿ ಮಾನದಂಡ ದೋಷಪೂರಿತ: ಸಚಿವ ಪೀಯೂಷ್ ಗೋಯಲ್

# ರೆಪೊ ದರ ಕಡಿತಕ್ಕೆ ಒತ್ತಾಯ



ಮುಂಬೈ (ರಾಯಿಟರ್ಸ್): 'ದೇಶದ ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಕ್ಕೆ ಮುಂದಾಗಬೇಕಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಒತ್ತಾಯಿಸಿದ್ದಾರೆ.

ದೇಶದ ಹಣದುಬ್ಬರದ ಗುರಿ ಮತ್ತು ರೆಪೊ ದರ ನಿಗದಿಗೆ ಸಂಬಂಧಿಸಿದಂತೆ ಆರ್‌ಬಿಐ ರೂಪಿಸಿರುವ ಚೌಕಟ್ಟಿನ ಬಗ್ಗೆ ಪರಾಮರ್ಶೆ ನಡೆಸುವಂತೆ ಕೇಂದ್ರ ಸಚಿವರೊಬ್ಬರು ಹೇಳಿಕೆ ನೀಡಿರುವುದು ಇದೇ ಮೊದಲು.


ಗುರುವಾರ ಖಾಸಗಿ ವಾಹಿನಿಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡುವ ಅಗತ್ಯವಿದೆ. ಹಾಗಾಗಿ, ಆರ್‌ಬಿಐ ರೆಪೊ ದರ ಕಡಿತಗೊಳಿಸಲಿದೆ ಎಂಬ ಭರವಸೆ ನನಗಿದೆ' ಎಂದರು.

ರೆಪೊ ದರ ಕಡಿತದ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಆಹಾರ ಹಣದುಬ್ಬರದ ಸ್ಥಿತಿಗತಿ ಅವಲೋಕಿಸುವುದು ಸಂಪೂರ್ಣ ದೋಷಪೂರಿತ ಸಿದ್ಧಾಂತವಾಗಿದೆ ಎಂದು ಅಭಿಪ್ರಾಯಪಟ್ಟರು.

'ಬಡ್ಡಿದರ ಕಡಿತಗೊಳಿಸಬೇಕು ಎಂಬುದು ಕೇಂದ್ರ ಸರ್ಕಾರದ ಒತ್ತಾಯವಲ್ಲ. ನನ್ನ ವೈಯಕ್ತಿಕ ಸಲಹೆಯಾಗಿದೆ. ಆರ್ಥಿಕ ಸಮೀಕ್ಷೆಯ ಬಿಡುಗಡೆ ವೇಳೆ ಮುಖ್ಯ ಆರ್ಥಿಕ ಸಲಹೆಗಾರರು ಕೂಡ ಇದೇ ಅಭಿಪ್ರಾಯ ಮಂಡಿಸಿದ್ದರು' ಎಂದರು.

ಆಹಾರ ಪದಾರ್ಥಗಳ ಬೆಲೆಯನ್ನು ಹೊರಗಿಟ್ಟು ಹಣದುಬ್ಬರವನ್ನು ನಿರ್ಧರಿಸಬೇಕಿದೆ ಎಂದು 2023–24ನೇ ಸಾಲಿನ ಆರ್ಥಿಕ ಸಮೀಕ್ಷೆಯಲ್ಲಿಯೂ ಹೇಳಲಾಗಿದೆ.

### ಎಂಪಿಸಿ ಸಭೆಯಲ್ಲಿ ನಿರ್ಧಾರ: ದಾಸ್



ಮುಂಬೈ (ಪಿಟಿಐ): 'ಡಿಸೆಂಬರ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ರೆಪೊ ದರ ಕಡಿತದ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಖಾಸಗಿ ವಾಹಿನಿಯೊಂದು ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಚಿವ ಪೀಯೂಷ್ ಗೋಯಲ್ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು 14 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, 'ಕೆಲವು ಅಡೆತಡೆ ಹೊರತಾಗಿಯೂ ಹಣದುಬ್ಬರವು ಇಳಿಕೆಯ ಹಾದಿಗೆ ಮರಳಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಅಮೆರಿಕದಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಏರಿಕೆಯಾಗುತ್ತಿದೆ. ಸರಕುಗಳ ಬೆಲೆಯಲ್ಲಿ ಏರಿಳಿತವಾಗಿದೆ. ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಆರ್ಥಿಕತೆ ಬೆಳವಣಿಗೆಯು ಸರಾಗವಾಗಿ ಚಲಿಸುತ್ತಿದೆ' ಎಂದರು.

ರೂಪಾಯಿ ಮೌಲ್ಯ ಕುಸಿತದ ಬಗ್ಗೆ ಮಾತನಾಡಿದ ಅವರು, 'ದೇಶದ ಚಾಲ್ತಿ ಖಾತೆ ಕೊರತೆಯು ನಿರ್ವಹಿಸಬಹುದಾದ ಮಟ್ಟದಲ್ಲಿದೆ. ರಫ್ತು ಪ್ರಮಾಣ ಏರಿಕೆಯಾಗುತ್ತಿದೆ. ಸೇವಾ ವಲಯದ ರಫ್ತು ಕೂಡ ಸದೃಢವಾಗಿದೆ' ಎಂದು ಹೇಳಿದರು.

## ಓಲಾ ಎಲೆಕ್ಟ್ರಿಕ್ ಸೇವಾ ಲೋಪ: ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ಓಲಾ ಎಲೆಕ್ಟ್ರಿಕ್ ಕಂಪನಿಯ ಇ-ಸ್ಕೂಟರ್‌ನ ಗುಣಮಟ್ಟ ಮತ್ತು ಮಾರಾಟ ಸೇವೆಯಲ್ಲಿನ ಲೋಪ ಕುರಿತು ದಾಖಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ (ಸಿಸಿಪಿಎ) ಆದೇಶಿಸಿದೆ.

15 ದಿನದೊಳಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಭಾರತೀಯ ಮಾನದಂಡ ಮಂಡಳಿಯ (ಬಿಐಎಸ್) ಮಹಾನಿರ್ದೇಶಕರಿಗೆ (ತನಿಖೆ) ಸಿಸಿಪಿಎ ಮುಖ್ಯಸ್ಥೆ ನಿಧಿ ಖರೆ ಅವರು, ನವೆಂಬರ್ 6ರಂದು ನಿರ್ದೇಶನ ನೀಡಿದ್ದಾರೆ.

ಓಲಾ ಎಲೆಕ್ಟ್ರಿಕ್‌ನ ಸೇವೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಗ್ರಾಹಕರ ಸಹಾಯವಾಣಿಯಡಿ (ಎನ್‌ಸಿಎಚ್) 10 ಸಾವಿರಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿವೆ. ಹಾಗಾಗಿ, ಓಲಾ ಎಲೆಕ್ಟ್ರಿಕ್‌ಗೆ ಪ್ರಾಧಿಕಾರವು ಷೋಕಾಸ್ ನೋಟಿಸ್ ನೀಡಿತ್ತು.

**ಸುದ್ದಿ 2 ನಿಮಿಷ**

## ಆದಾಯ ಮೂಲ ಹೆಚ್ಚಿಸಿಕೊಳ್ಳಲು ಪಾಲಿಕೆಗಳಿಗೆ ಆರ್‌ಬಿಐ ಸಲಹೆ

ಮುಂಬೈ (ಪಿಟಿಐ): ಮಹಾನಗರ ಪಾಲಿಕೆಗಳು ತಮ್ಮ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳುವತ್ತ ಗಮನಹರಿಸಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸಲಹೆ ನೀಡಿದೆ.

ಆಸ್ತಿ ತೆರಿಗೆ, ಬಳಕೆದಾರರ ಶುಲ್ಕದ ಹೊಂದಾಣಿಕೆ ಮತ್ತು ಉತ್ತಮ ತೆರಿಗೆ ಸಂಗ್ರಹ ಪದ್ಧತಿ ಅಳವಡಿಸಿಕೊಳ್ಳಬೇಕು. ಆ ಮೂಲಕ ಹೆಚ್ಚು ಆದಾಯ ಸಂಗ್ರಹಕ್ಕೆ ಒತ್ತು ನೀಡಬೇಕು ಎಂದು ಆರ್‌ಬಿಐ ಬಿಡುಗಡೆ ಮಾಡಿರುವ ಮಹಾನಗರ ಪಾಲಿಕೆ ಹಣಕಾಸು ವರದಿ ತಿಳಿಸಿದೆ.

ನಗರ ಪ್ರದೇಶದಲ್ಲಿ ಜನಸಂಖ್ಯೆಯು ಕ್ಷಿಪ್ರವಾಗಿ ಬೆಳೆಯುತ್ತಿದೆ. ನಗರ ವಾಸಿಗಳಿಗೆ ಗುಣಮಟ್ಟದ ಸೇವೆ ಒದಗಿಸಬೇಕಿದೆ. ಇದಕ್ಕಾಗಿ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕಿದೆ ಎಂದು ಹೇಳಿದೆ.

ಪ್ರಸ್ತುತ ದೇಶದಲ್ಲಿರುವ ಮಹಾನಗರ ಪಾಲಿಕೆಗಳ ಆದಾಯ ಸಂಗ್ರಹ ಕಡಿಮೆ ಪ್ರಮಾಣದಲ್ಲಿದೆ. ತಮ್ಮ ಕಾರ್ಯಾಚರಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹೆಚ್ಚಿನ ಪ್ರಮಾಣದ ನಿಧಿ ಪಡೆಯುತ್ತಿವೆ ಎಂದು ಹೇಳಿದೆ.

ರಾಜ್ಯ ಸರ್ಕಾರಗಳು ತೆರಿಗೆ ಪದ್ಧತಿಯನ್ನು ಸುಧಾರಣೆ ಮಾಡುವ ಮೂಲಕ ಪಾಲಿಕೆಗಳ ಹಣಕಾಸು ಸ್ಥಿತಿಯ ಬಲವರ್ಧನೆಗೆ ಒತ್ತು ನೀಡಬೇಕಿದೆ ಎಂದು ಸಲಹೆ ನೀಡಿದೆ.

2023–24ನೇ ಸಾಲಿನ ಬಜೆಟ್‌ನಲ್ಲಿ ಮಹಾರಾಷ್ಟ್ರ ಸರ್ಕಾರವು, ಆ ರಾಜ್ಯದಲ್ಲಿರುವ ಪಾಲಿಕೆಗಳಿಗೆ ₹11,104 ಕೋಟಿ ಅನುದಾನವನ್ನು ಹಂಚಿಕೆ ಮಾಡಿದೆ. ಇದೇ ವರ್ಷದಲ್ಲಿ ಗುಜರಾತ್, ಕರ್ನಾಟಕ, ಮಧ್ಯಪ್ರದೇಶ, ಹರಿಯಾಣ ಮತ್ತು ತೆಲಂಗಾಣವು ತಲಾ ₹1 ಸಾವಿರ ಕೋಟಿಗೂ ಹೆಚ್ಚು ಹಂಚಿಕೆ ಮಾಡಿವೆ ಎಂದು ಹೇಳಿದೆ.

## ನಿಕೋಟಿನ್ ಅಂಶ ಇಳಿಕೆ ತಂಬಾಕು ಧಾರಣೆ ಕುಸಿತ

ಹುಣಸೂರು (ಮೈಸೂರು ಜಿಲ್ಲೆ): 'ರಾಜ್ಯದಲ್ಲಿ ಕಳೆದ ಸಾಲಿನಡಿ ಹೆಚ್ಚು ಮಳೆಯಾಗಿದ್ದರಿಂದ ತಂಬಾಕಿನಲ್ಲಿ ನಿಕೋಟಿನ್ ಅಂಶ ಗಣನೀಯವಾಗಿ ಕಡಿಮೆಯಾಗಿದೆ. ಹೀಗಾಗಿ, ಕಂಪನಿಗಳು ಹೆಚ್ಚಿನ ದರಕ್ಕೆ ಖರೀದಿಸಲು ಹಿಂದೇಟು ಹಾಕಿವೆ' ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ತಾಲ್ಲೂಕಿನ ಕಟ್ಟೆಮಳಲವಾಡಿಯ ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಗುರುವಾರ ನಡೆದ ತಂಬಾಕು ಬೆಳೆಗಾರರ ಸಭೆಯಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ 'ಬಿ' ಗ್ರೇಡ್ ತಂಬಾಕಿಗೆ ಕಂಪನಿಗಳು ವೈಜ್ಞಾನಿಕ ದರ ನೀಡುತ್ತಿಲ್ಲ ಎಂಬ ಆರೋಪದ ಬಗ್ಗೆ ಮಂಡಳಿಯ ಅಧಿಕಾರಿಯೊಂದಿಗೆ ಚರ್ಚಿಸಲಾಗಿದೆ. ನಿಕೋಟಿನ್ ಅಂಶ ಗಣನೀಯವಾಗಿ ಕುಸಿದಿದ್ದರಿಂದಲೇ ಹೊರ ದೇಶದಲ್ಲಿ ಬೇಡಿಕೆ ಇಲ್ಲ ಎಂಬ ಕಾರಣ ನೀಡಿದ್ದಾರೆ. ಇದಕ್ಕೆ ಪರಿಹಾರ ನೀಡುವಂತೆ ಮನವಿ ಮಾಡಿದ್ದೇನೆ' ಎಂದರು.

'ಬೆಳೆಗಾರ ನಿಧನರಾದರೆ, ತಂಬಾಕು ಬೆಳೆಗಾರರ ಕಲ್ಯಾಣ ನಿಧಿಯಿಂದ ಕುಟುಂಬದವರಿಗೆ ನೀಡಲಾಗುವ ₹50 ಸಾವಿರ ಪರಿಹಾರವನ್ನು ₹1 ಲಕ್ಷಕ್ಕೆ ಹೆಚ್ಚಿಸಲು ಕೋರಿದ್ದೇನೆ. ತಂಬಾಕು ವಾಣಿಜ್ಯ ಬೆಳೆ ಎಂಬ ಕಾರಣಕ್ಕೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಿಂದ ಕೈ ಬಿಡಲಾಗಿತ್ತು. ಈ ಸಂಬಂಧ ಪ್ರಧಾನಿಯೊಂದಿಗೆ ಚರ್ಚಿಸಿ ತಂಬಾಕು ಸೇರ್ಪಡೆಗೆ ಕ್ರಮ ವಹಿಸಲಾಗಿದೆ' ಎಂದರು.



## ಬೋಯಿಂಗ್‌ನಿಂದ 17 ಸಾವಿರ ಉದ್ಯೋಗಿಗಳು ವಜಾ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದ ವಿಮಾನ ತಯಾರಿಕಾ ಕಂಪನಿ ಬೋಯಿಂಗ್ 17 ಸಾವಿರ ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಜಾಗತಿಕ ಮಟ್ಟದಲ್ಲಿ ಇರುವ ಒಟ್ಟು ಉದ್ಯೋಗಿಗಳ ಪೈಕಿ ಶೇ 10ರಷ್ಟು ಕಡಿತಗೊಳಿಸಲಾಗುವುದು. ಈ ವಾರದಿಂದಲೇ ನೋಟಿಸ್ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಕಂಪನಿ ತಿಳಿಸಿದೆ. ಕಂಪನಿಯ ದಕ್ಷತೆ ಹೆಚ್ಚಿಸುವುದು ಹಾಗೂ ವೆಚ್ಚ ಸರಿದೂಗಿರುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಪ್ರಸಕ್ತ ವರ್ಷದ ಆರಂಭದಿಂದಲೂ ಬೋಯಿಂಗ್ ಕಂಪನಿಯು ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಮೆರಿಕದಲ್ಲಿ ಕಂಪನಿಯ 33 ಸಾವಿರ ಉದ್ಯೋಗಿಗಳು ಹಲವು ವಾರಗಳವರೆಗೆ ಪ್ರತಿಭಟನೆ ನಡೆಸಿದ್ದರು. ಇದರಿಂದ ಕಂಪನಿಯ ವಾಣಿಜ್ಯ ವಿಮಾನಗಳ ತಯಾರಿಕೆಗೆ ಪೆಟ್ಟು ಬಿದ್ದಿತ್ತು.

# 'ದಕ್ಷಿಣ ಭಾಗಕ್ಕೂ ಕೋರೆ ಸಾಧನೆ ತಿಳಿಸಿ'

### ಕೆಎಲ್‌ಇ ಸಂಸ್ಥೆಯ 109ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಪ್ರಭಾಕರ ಕೋರೆ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರಾಗಿ ನಾಲ್ಕು ದಶಕಗಳಾಗಿವೆ. ಅವರ ನಿಷ್ಕಲ್ಮಶ ಸೇವೆ ದಕ್ಷಿಣ ಕರ್ನಾಟಕ ಭಾಗಕ್ಕೂ ಗೊತ್ತಾಗಬೇಕು. ಎಲ್ಲ ಶಾಸಕರು, ಜನಪ್ರತಿನಿಧಿಗಳ ನೇತೃತ್ವದಲ್ಲಿ ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ಬೃಹತ್ ಸಮಾರಂಭ ಹಮ್ಮಿಕೊಳ್ಳಲಾಗುವುದು' ಎಂದು ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆಯ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದಲ್ಲಿ ಗುರುವಾರ ಕೆಎಲ್‌ಇ ಸಂಸ್ಥೆಯ 109ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಬಡವರಿಗಾಗಿ ಸರ್ಕಾರಗಳು ಎಷ್ಟು ಕಾಳಜಿ ತೋರುತ್ತವೆಯೋ, ಅಷ್ಟೇ ಕಾಳಜಿಯನ್ನು ಕೆಎಲ್‌ಇ ಸಂಸ್ಥೆ ಕೂಡ ತೋರಿದೆ. ಗುಣಮಟ್ಟದ ಶಿಕ್ಷಣ ನೀಡಿ ದೇಶದ ಸಾರ್ವಭೌಮತೆ ಎತ್ತಿಹಿಡಿಯುವಲ್ಲಿ ಪ್ರಭಾಕರ ಕೋರೆ ಪ್ರಮುಖರು' ಎಂದರು.



ಬೆಳಗಾವಿಯಲ್ಲಿ ಗುರುವಾರ ನಡೆದ ಕೆಎಲ್‌ಇ ಸಂಸ್ಥೆಯ 109ನೇ ಸಂಸ್ಥಾಪನಾ ದಿನಾಚರಣೆಯನ್ನು ಸಚಿವ ವಿ. ಸೋಮಣ್ಣ ಉದ್ಘಾಟಿಸಿದರು. ಡಾ.ದೀಪಾ ಮೆಟಗುಡ್ಡ, ಡಾ.ಫರ್ವೆಜ್ ಕೆ. ಗ್ರಾಂಟ, ಪ್ರಭಾಕರ ಕೋರೆ, ಮಹಾಂತೇಶ ಕೌಜಲಗಿ ಇದ್ದರು ಪ್ರಜಾವಾಣಿ ಚಿತ್ರ

'ಸಪ್ತರ್ಷಿಗಳೆಂದು ಕರೆಯುವ ಏಳು ಶಿಕ್ಷಕರು, ಮೂವರು ದಾನಿಗಳು ಸೇರಿ ಸಂಸ್ಥೆ ಕಟ್ಟಿದರು. ಪ್ರಾಮಾಣಿಕತೆಯಿಂದ ಕೋರೆ ಅವರು ಮುನ್ನಡೆಸಿದರು. ಅವರು ಮುಖ್ಯಮಂತ್ರಿ ಆಗಿದ್ದರೆ ರಾಜ್ಯದ ಶೈಕ್ಷಣಿಕ ಪ್ರಗತಿ ಯಾವ ಮಟ್ಟಕ್ಕೆ ಬೆಳೆಯುತ್ತಿತ್ತು ಎಂಬುದನ್ನು ಅಂದಾಜಿಸಬಹುದು. ಅಂಥವರ ಸಾಧನೆಯನ್ನು ಎಲ್ಲರಿಗೂ ತಿಳಿಸಬೇಕಿದೆ. ಕೇಂದ್ರ ಸರ್ಕಾರದಿಂದಲೇ ಅವರ ಸಾಧನೆ ಗುರುತಿಸಲಾಗುವುದು' ಎಂದು ಹೇಳಿದರು.

ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ, ಹಳೆಯ ವಿದ್ಯಾರ್ಥಿ, ಪುಣೆಯ ರುಬಿ ಹಾಲ್ ಕ್ಲಿನಿಕ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ.ಫರ್ವೆಜ್ ಕೆ. ಗ್ರಾಂಟ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ, ಶಾಸಕ ಮಹಾಂತೇಶ ಕೌಜಲಗಿ, ಕಾರ್ಯದರ್ಶಿ ಬಿ.ಜಿ. ದೇಸಾಯಿ, ಕೆಎಲ್‌ಇ ಆಜೀವ ಸದಸ್ಯರ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷೆ ಡಾ.ದೀಪಾ ಮೆಟಗುಡ್ಡ ಇದ್ದರು.

**ಅಡಿಕೆ ಧಾರಣೆ (₹ಗಳಲ್ಲಿ)**

| | | | | | |
|---|---|---|---|---|---|
| ಬಂಟ್ವಾಳ | | ರಾಶಿ | 23899-50599 | ತಟ್ಟಿಬೆಟ್ಟೆ | 27109-33099 |
| ಕೋಕ | 20000-27500 | ಸಿಪ್ಪೆಗೋಟು | 7569-16349 | ಶಿರಸಿ | |
| ಹಳತು | 42000-50000 | ಶಿವಮೊಗ್ಗ | | ಬೆಟ್ಟೆ | 32018-41310 |
| ಚಿತ್ರದುರ್ಗ | | ಬೆಟ್ಟೆ | 46774-57250 | ಬಿಳಿಗೋಟು | 21400-29726 |
| ಅಪಿ | 48739-49169 | ಗೊರಬಲು | 17309-36869 | ಚಾಲಿ | 32181-36122 |
| ಬೆಟ್ಟೆ | 30619-31059 | ಹೊಸತು | 47219-49459 | ರಾಶಿ | 40009-43989 |
| ಕೆಂಪುಗೋಟು | 24600-25000 | ರಾಶಿ | 31138-50009 | ಯಲ್ಲಾಪುರ | |
| ರಾಶಿ | 48229-48689 | ಸರಕು | 44100-87210 | ಬಿಳಿಗೋಟು | 20200-27699 |
| ಸಾಗರ | | ಸಿದ್ದಾಪುರ | | ಚಾಲಿ | 30099-36140 |
| ಬಿಳಿಗೋಟು | 13899-24199 | ಬಿಳಿಗೋಟು | 23509-26399 | ಕೋಕ | 4020-18899 |
| ಚಾಲಿ | 18690-32960 | ಚಾಲಿ | 31099-35099 | ಕೆಂಪುಗೋಟು | 15699-24503 |
| ಕೋಕ | 10569-24788 | ಕೋಕ | 18899-23709 | ರಾಶಿ | 38980-53299 |
| ಕೆಂಪುಗೋಟು | 13899-30500 | ರಾಶಿ | 41899-45809 | ತಟ್ಟಿಬೆಟ್ಟೆ | 27906-37495 |

## ಬಾಂಬ್ ಬೆದರಿಕೆ: ಇಂಡಿಗೊ ವಿಮಾನ ತುರ್ತು ಭೂಸ್ಪರ್ಶ

ರಾಯಪುರ (ಪಿಟಿಐ): ಬಾಂಬ್ ಸ್ಫೋಟದ ಬೆದರಿಕೆ ಬಂದ ಕಾರಣ ಕೋಲ್ಕತ್ತಕ್ಕೆ ಸಾಗುತ್ತಿದ್ದ ಇಂಡಿಗೊ ವಿಮಾನವು ಛತ್ತೀಸಗಢದ ರಾಜಧಾನಿ ರಾಯಪುರ ವಿಮಾನ ನಿಲ್ದಾಣದಲ್ಲಿ ಗುರುವಾರ ತುರ್ತು ಭೂಸ್ಪರ್ಶ ಮಾಡಿತು ಎಂದು ಪೊಲೀಸರು ತಿಳಿಸಿದರು.

ವಿಮಾನವು ನಾಗ್ಪುರದಿಂದ ಕೋಲ್ಕತ್ತಕ್ಕೆ ಹೊರಟಿತ್ತು. ಬಾಂಬ್ ಬೆದರಿಕೆ ಕರೆ ನಂತರ ಮಾರ್ಗವನ್ನು ಬದಲಾಯಿಸಲಾಯಿತು. ಈ ಸಂದರ್ಭದಲ್ಲಿ ವಿಮಾನದಲ್ಲಿ 187 ಪ್ರಯಾಣಿಕರು ಮತ್ತು ಆರು ಮಂದಿ ಸಿಬ್ಬಂದಿ ಇದ್ದರು ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಸಿಂಗ್ ಮಾಹಿತಿ ನೀಡಿದರು.

ಬೆಳಿಗ್ಗೆ 9 ಗಂಟೆಗೆ ವಿಮಾನವು ಲ್ಯಾಂಡ್ ಆದ ನಂತರ, ಪ್ರತ್ಯೇಕ ಸ್ಥಳಕ್ಕೆ ವಿಮಾನವನ್ನು ಕೊಂಡೊಯ್ದು ಭದ್ರತಾ ಪರಿಶೀಲನೆ ನಡೆಸಲಾಯಿತು. ತಾಂತ್ರಿಕ ಸಿಬ್ಬಂದಿ ಮತ್ತು ಬಾಂಬ್ ನಿಷ್ಕ್ರಿಯ ದಳವು ಪರಿಶೀಲನೆ ನಡೆಸಿತು ಎಂದು ತಿಳಿಸಿದರು.



**ಸಂಕ್ಷಿಪ್ತ ಸುದ್ದಿ**

### ಎಸ್‌ಬಿಐ ಬಡ್ಡಿದರ ಹೆಚ್ಚಳ

ಮುಂಬೈ (ಪಿಟಿಐ): ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಮಾರ್ಜಿನಲ್ ಕಾಸ್ಟ್ ಆಫ್ ಫಂಡ್ಸ್ ಆಧಾರಿತ ಸಾಲದ (ಎಂಸಿಎಲ್‌ಆರ್) ಮೇಲಿನ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದೆ.

ಶುಕ್ರವಾರದಿಂದಲೇ ಈ ಹೊಸ ಆದೇಶ ಜಾರಿಗೆ ಬರಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಒಂದು ವರ್ಷದ ಎಂಸಿಎಲ್‌ಆರ್ ಬಡ್ಡಿದರವನ್ನು ಶೇ 9ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ದೀರ್ಘಾವಧಿಯ ಗೃಹ ಸಾಲದ ಮೇಲಿನ ಇಎಂಐ ಏರಿಕೆಯಾಗಲಿದೆ.

ಎಸ್‌ಬಿಐ ನೀಡಿರುವ ಸಾಲದ ಪೈಕಿ ಶೇ 42ರಷ್ಟು ಸಾಲಗಳು ಎಂಸಿಎಲ್‌ಆರ್ ಬಡ್ಡಿದರದೊಟ್ಟಿಗೆ ಸಂಯೋಜನೆಗೊಂಡಿವೆ.

### ತೈಲ ಬೆಲೆ ಸ್ಥಿರತೆ: ಪುರಿ

ನವದೆಹಲಿ (ಪಿಟಿಐ): 'ಅಮೆರಿಕ ಮತ್ತು ಕೆನಡಾದಿಂದ ಹೆಚ್ಚಿನ ಪ್ರಮಾಣದಲ್ಲಿ ಜಾಗತಿಕ ಮಾರುಕಟ್ಟೆಗೆ ಕಚ್ಚಾ ತೈಲ ಪೂರೈಕೆಯಾಗುವ ನಿರೀಕ್ಷೆಯಿದೆ. ಹಾಗಾಗಿ, ತೈಲ ಪೂರೈಕೆ ಬಗ್ಗೆ ಎದುರಾಗಿರುವ ಆತಂಕ ಕಡಿಮೆಯಾಗಲಿದ್ದು, ಬೆಲೆಯು ಸ್ಥಿರತೆ ಕಾಣುವ ಸಾಧ್ಯತೆಯಿದೆ' ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದಿಂದ (ಸಿಐಐ) ಗುರುವಾರ ಹಮ್ಮಿಕೊಂಡಿದ್ದ ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ಪಾಶ್ಚಿಮಾತ್ಯ ರಾಷ್ಟ್ರಗಳು ಕಚ್ಚಾ ತೈಲದ ಉತ್ಪಾದನೆಯನ್ನು ಹೆಚ್ಚಿಸಿವೆ. ಈ ಬೆಳವಣಿಗೆಯು ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ದೇಶಗಳ ಸಂಘಟನೆಗೆ (ಒಪೆಕ್) ತೈಲ ಉತ್ಪಾದನೆ ಹೆಚ್ಚಳಕ್ಕೆ ಪ್ರೇರಣೆ ನೀಡಲಿದೆ' ಎಂದರು.

ಬ್ರೆಜಿಲ್, ಗಯಾನ ಕೂಡ ತೈಲದ ಉತ್ಪಾದನೆಯನ್ನು ಹೆಚ್ಚಿಸಿವೆ. ಇದರಿಂದ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಗೆ ತೈಲ ಪೂರೈಕೆಯಾಗಲಿದ್ದು, ಪರಿಸ್ಥಿತಿಯು ಸುಧಾರಿಸಲಿದೆ ಎಂದು ಹೇಳಿದರು. ಬೆಲೆ ಸ್ಥಿರತೆಯು ತೈಲ ಪೂರೈಕೆ ಮತ್ತು ಜಾಗತಿಕ ಬಿಕ್ಕಟ್ಟಿನ ಮೇಲೆ ಅವಲಂಬಿತವಾಗಿದೆ ಎಂದರು.

### ಚಿನ್ನ, ಬೆಳ್ಳಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹700 ಇಳಿಕೆಯಾಗಿದ್ದು, ₹77,050 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ದರವು 10 ಗ್ರಾಂಗೆ ಇಷ್ಟೇ ಪ್ರಮಾಣದಲ್ಲಿ ಕಡಿಮೆಯಾಗಿದ್ದು, ₹76,650 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2,310 ಇಳಿಕೆಯಾಗಿದ್ದು, ₹90,190ಕ್ಕೆ ಮಾರಾಟವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆಗಿಂತಲೂ ಚಿನ್ನದ ಪೂರೈಕೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ನಿಗದಿತ ಗುರಿಗಿಂತಲೂ ಹೆಚ್ಚು ದಾಖಲಾಗಿದ್ದರೂ ಬಡ್ಡಿದರ ಕಡಿತಗೊಳಿಸಿತ್ತು. ಆದರೆ, ಹಣದುಬ್ಬರದ ಏರಿಕೆಯಿಂದಾಗಿ ಮುಂದಿನ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಬಡ್ಡಿದರ ಕಡಿತಗೊಳಿಸುವುದಕ್ಕೆ ತಾತ್ಕಾಲಿಕ ವಿರಾಮ ನೀಡುವ ಸಾಧ್ಯತೆಯಿದೆ. ಹಾಗಾಗಿ, ಚಿನ್ನದ ಬೆಲೆಯಲ್ಲಿ ಇಳಿಕೆಯಾಗುತ್ತಿದೆ ಎಂದು ಹೇಳಿದ್ದಾರೆ.

### ತಾಪಮಾನ ಬದಲಾವಣೆ ಸವಾಲು: ವಾರ್ಷಿಕ 1.3 ಟ್ರಿಲಿಯನ್ ಡಾಲರ್ ನೆರವಿಗೆ ಹಕ್ಕೊತ್ತಾಯ

# ಆರ್ಥಿಕ ನೆರವು: ಶ್ರೀಮಂತ ರಾಷ್ಟ್ರಗಳಿಗೆ ತಾಕೀತು


ಬಾಕು (ಅಜರ್‌ಬೈಜಾನ್) (ರಾಯಿಟರ್ಸ್): 'ತಾಪಮಾನ ಬದಲಾವಣೆ ಸವಾಲುಗಳನ್ನು ಎದುರಿಸಲು ಈಗ ಬದ್ಧವಾಗಿರುವಂತೆ ಅಭಿವೃದ್ಧಿ ರಾಷ್ಟ್ರಗಳು ವಾರ್ಷಿಕ 1 ಟ್ರಿಲಿಯನ್ ಡಾಲರ್ (₹84 ಲಕ್ಷ ಕೋಟಿ) ಆರ್ಥಿಕ ನೆರವು ನೀಡಬೇಕು, ತಡವಾದರೆ ಈ ಮೊತ್ತ ಇನ್ನಷ್ಟು ಹೆಚ್ಚಲಿದೆ' ಎಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಎಚ್ಚರಿಸಿವೆ.

ಹಸಿರು ಇಂಧನ ಗುರಿ ಸಾಧನೆ ಹಾಗೂ ಪ್ರತಿಕೂಲ ಹವಾಮಾನ ಪರಿಣಾಮಗಳಿಂದ ರಕ್ಷಣೆಗೆ ಇದು ಅಗತ್ಯ ಎಂದೂ ಭಾರತ ಸೇರಿದಂತೆ ನಾಲ್ಕು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಹಕ್ಕೊತ್ತಾಯ ಮಾಡಿವೆ.

ತಾಪಮಾನ ಬದಲಾವಣೆ ಕುರಿತಂತೆ ಇಲ್ಲಿ ನಡೆಯುತ್ತಿರುವ ವಾರ್ಷಿಕ 'ಸಿಒಪಿ29' ಶೃಂಗಸಭೆಯಲ್ಲಿ ನಡೆದ ವಿಸ್ತೃತ ಚರ್ಚೆಯ ಕೇಂದ್ರ ಬಿಂದು ಬಹುತೇಕ ಆರ್ಥಿಕ ನೆರವು ಕುರಿತ ವಿಷಯವೇ ಆಗಿತ್ತು.

ಶ್ರೀಮಂತ, ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಮತ್ತು ಖಾಸಗಿ ವಲಯಗಳು ತಾಪಮಾನ ಕ್ರಿಯಾ ಚಟುವಟಿಕೆಗಳಿಗೆ ವಾರ್ಷಿಕ ಎಷ್ಟು ಮೊತ್ತದ ನೆರವು ನೀಡಲಿವೆ ಅಥವಾ ನೀಡಬೇಕಾದ ನೆರವು ಕುರಿತಂತೆ ಹೊಸ ಗುರಿಗೆ ಈ ರಾಷ್ಟ್ರಗಳು ಸಮ್ಮತಿಸಲಿವೆಯೇ ಎಂಬುದು ಈ ಸಮಾವೇಶದ ಯಶಸ್ಸನ್ನು ನಿರ್ಧರಿಸಲಿದೆ.

ಅಭಿವೃದ್ಧಿ ಹೊಂದಿದ ಮತ್ತು ಶ್ರೀಮಂತ ರಾಷ್ಟ್ರಗಳು ವಾರ್ಷಿಕ ಸುಮಾರು 1 ಟ್ರಿಲಿಯನ್ ಡಾಲರ್ ನೀಡಬೇಕು ಎಂಬುದು ಈ ಹಿಂದಿನ ಗುರಿಯಾಗಿದ್ದು, ಅದು 2025ನೇ ಸಾಲಿಗೆ ಅಂತ್ಯವಾಗಲಿದೆ ಎಂದು ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ (ಒಇಸಿಡಿ) ಈ ಮೊದಲು ತಿಳಿಸಿತ್ತು.



ಬಾಕುವಿನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆಯ ತಾಪಮಾನ ಬದಲಾವಣೆ (ಸಿಒಪಿ29) ಸಮಾವೇಶದ ಅಧ್ಯಕ್ಷತೆಯನ್ನು ಮುಕ್ತಾರ್ ಬಾಬಾಯೆವ್ ಅವರಿಗೆ ಈ ಹಿಂದಿನ ಸಮಾವೇಶದ ಅಧ್ಯಕ್ಷ, ಯುಎಇ ಸಚಿವರಾದ ಸುಲ್ತಾನ್ ಅಹ್ಮದ್ ಅಲ್ ಜಬೇರ್ ಅವರು ಹಸ್ತಾಂತರಿಸಿದರು —ಎಎಫ್‌ಪಿ ಚಿತ್ರ

ಆದರೆ, ಈ ಪೈಕಿ ಹೆಚ್ಚಿನ ಮೊತ್ತವನ್ನು ಅನುದಾನದ ಬದಲಿಗೆ ಸಾಲದ ರೂಪದಲ್ಲಿ ನೀಡಲಿದೆ. ಈ ವ್ಯವಸ್ಥೆ ಬದಲಾಗಬೇಕು ಎಂಬುದು ನೆರವು ಸ್ವೀಕರಿಸಿರುವ ಕೆಲವು ರಾಷ್ಟ್ರಗಳ ಪ್ರತಿಪಾದನೆಯಾಗಿದೆ.

ಸಮಾವೇಶದಲ್ಲಿ ಈ ಕುರಿತ ಚರ್ಚೆಗೆ ತಾಪಮಾನ ಆರ್ಥಿಕ ನೆರವು ಕುರಿತ ಉನ್ನತ ಮಟ್ಟದ ತಜ್ಞರ ಸ್ವತಂತ್ರ ಸಮಿತಿಯ ವರದಿ ಮುನ್ನುಡಿಯಾಯಿತು. ಅಭಿವೃದ್ಧಿ ಹೊಂದಿದ ಮತ್ತು ಶ್ರೀಮಂತ ರಾಷ್ಟ್ರಗಳು ನೀಡಬೇಕಾಗಿರುವ 'ತಾಪಮಾನ ಆರ್ಥಿಕ ನೆರವು'ಅನ್ನು 2035ರ ವರೆಗೂ ವಾರ್ಷಿಕ 1.3 ಟ್ರಿಲಿಯನ್ ಡಾಲರ್‌ಗೆ ಏರಿಸಬೇಕು. ಪಾವತಿ ವಿಳಂಬವಾದರೆ ಈ ಮೊತ್ತವೂ ಏರಬೇಕು ಎಂದು ಈ ವರದಿ ಅಭಿಪ್ರಾಯಪಟ್ಟಿತು.

2030ರ ವೇಳೆಗೆ ಹೂಡಿಕೆಯಾಗುವ ಮೊತ್ತದಲ್ಲಿ ಕೊರತೆಯಾದರೆ ಅದರಿಂದ ನಂತರದ ವರ್ಷಗಳ ಒತ್ತಡ ಹೆಚ್ಚಲಿದೆ. ತಾಪಮಾನ ಸ್ಥಿರತೆ ಗುರಿ ಸಾಧಿಸುವ ಹಾದಿಯು ಇನ್ನಷ್ಟು ಕಠಿಣವಾಗಲಿದೆ ಎಂದು ಎಚ್ಚರಿಸಿತು.

ತಾಪಮಾನ ಬದಲಾವಣೆ ನಿಯಂತ್ರಿಸುವಲ್ಲಿ ಈಗಿನ ಸಾಧನೆ ಕಡಿಮೆ ಆದಷ್ಟೂ, ನಂತರದ ವರ್ಷಗಳಲ್ಲಿ ಈ ಉದ್ದೇಶ ಸಾಧನೆಗೆ ಹೂಡಬೇಕಾದ ಮೊತ್ತವೂ ಏರಿಕೆಯಾಗಲಿದೆ ಎಂದು ವರದಿಯು ಎಚ್ಚರಿಸಿತ್ತು.

ಆರ್ಥಿಕ ನೆರವು ಕುರಿತು ಹೊಸ ಒಪ್ಪಂದ ಏರ್ಪಡುವ ಕುರಿತು ಮಾತುಕತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ತಾಪಮಾನ ಬದಲಾವಣೆ ಕುರಿತ ವಿಶ್ವಸಂಸ್ಥೆಯ ಮಂಡಳಿಯು ಪ್ರಕಟಿಸಿರುವ ವರದಿಯ ಪ್ರಕಾರ, ಸಂಬಂಧಿತ ರಾಷ್ಟ್ರಗಳು ಭಿನ್ನ ನಿಲುವು ಹೊಂದಿದ್ದು, ಸಹಮತ ಮೂಡುವ ಸಾಧ್ಯತೆಗಳಿಲ್ಲ.

ಈ ಮಧ್ಯೆ ಆರ್ಥಿಕವಾಗಿ ಪ್ರಬಲವಾಗಿರುವ 10 ರಾಷ್ಟ್ರಗಳ ಸಮೂಹವು ಈಗಾಗಲೇ 2030ರವರೆಗೆ ತಾಪಮಾನ ಆರ್ಥಿಕ ನೆರವಿಗೆ ಸಂಬಂಧಿಸಿದಂತೆ ವಾರ್ಷಿಕ 120 ಬಿಲಿಯನ್ ಡಾಲರ್ ಅನ್ನು ನೀಡಲು ತೀರ್ಮಾನಿಸಿವೆ ಎಂದು ತಿಳಿದುಬಂದಿದೆ. ಇದರಲ್ಲಿ ಖಾಸಗಿ ವಲಯದ 65 ಬಿಲಿಯನ್ ಡಾಲರ್ ಸೇರಿದೆ.

**ಪ್ರಮುಖಾಂಶಗಳು**

- ಕ್ರಿಪ್ಟೊ ಕರೆನ್ಸಿಗಳು ಹಾಗೂ ಪ್ಲಾಸ್ಟಿಕ್ ಮೇಲೆ ತೆರಿಗೆ ವಿಧಿಸುವಂತೆ ಫ್ರಾನ್ಸ್, ಕೆನ್ಯಾ ಹಾಗೂ ಬಾರ್ಬಡೋಸ್ ನೇತೃತ್ವದ ಕಾರ್ಯಪಡೆ ಸಲಹೆ ನೀಡಿದೆ. ಈ ತೆರಿಗೆ ವಿಧಿಸುವ ಮೂಲಕ ವಾರ್ಷಿಕ 25–35 ಶತಕೋಟಿ ಡಾಲರ್ ಸಂಗ್ರಹಿಸಬಹುದು. ಹವಾಮಾನ ಬದಲಾವಣೆ ಪರಿಣಾಮಗಳನ್ನು ಎದುರಿಸುವುದಕ್ಕಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಈ ಹಣ ನೀಡಬಹುದಾಗಿದೆ
- ಜಾಗತಿಕ ತಾಪಮಾನ ಏರಿಕೆ ತಡೆಯಲು ಎಲ್ಲ ದೇಶಗಳು ಪ್ರಯತ್ನ ಮುಂದುವರಿಸಿದ್ದರೂ ಸತತ ಮೂರನೇ ವರ್ಷವೂ ನಿರೀಕ್ಷಿತ ಫಲ ಸಿಕ್ಕಿಲ್ಲ. ಭೂಮಿಯ ಉಷ್ಣಾಂಶವು ಕೈಗಾರಿಕೀಕರಣ ಅವಧಿಗೂ ಮುಂಚಿನ ಅವಧಿಯಲ್ಲಿದ್ದ ತಾಪಮಾನಕ್ಕಿಂತಲೂ 1.3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದೆ. ಹವಾಮಾನ ಬದಲಾವಣೆ ಕಾರಣಗಳಿಂದ ತಾಪಮಾನವು 2.7 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ
- ವಾಯುಮಾಲಿನ್ಯವು ಗಡಿ ಸಮಸ್ಯೆಯೂ ಆಗಿದೆ. ಗಡಿ ಉದ್ದಕ್ಕೂ ವಾಯುಮಾಲಿನ್ಯ ತಡೆಗಟ್ಟುವುದಕ್ಕಾಗಿ ಪಾಕಿಸ್ತಾನ ಹಾಗೂ ಬಾಂಗ್ಲಾದೇಶಗಳು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಭಾರತ ಒತ್ತಾಯಿಸಿದೆ. ಭೂತಾನ್ ಪ್ರಧಾನಿ ತ್ಸೆರಿಂಗ್ ಟೋಬ್ಗೆ ನೇತೃತ್ವದಲ್ಲಿ ನಡೆದ, ಪರಸ್ಪರ ಗಡಿ ಹಂಚಿಕೊಳ್ಳುವ 8 ರಾಷ್ಟ್ರಗಳ ಸಭೆಯಲ್ಲಿ ಭಾರತ ಈ ಒತ್ತಾಯ ಮಾಡಿದೆ
- ದೆಹಲಿಯ ಗಾಳಿ ಗುಣಮಟ್ಟ ಮತ್ತಷ್ಟು ಕಡಿಮೆ ಆಗಿರುವುದಕ್ಕೆ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಗಾಳಿಗೆ ಮಿಥೇನ್, ಬ್ಲ್ಯಾಕ್ ಕಾರ್ಬನ್‌ನಂತಹ ಮಾಲಿನ್ಯಕಾರಕಗಳು ಸೇರುವ ಪ್ರಮಾಣವನ್ನು ಗಮನಾರ್ಹವಾಗಿ ತಗ್ಗಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

### ಭರವಸೆ ಈಡೇರಿಸಿ ಭಾರತ, ಚೀನಾ ಆಗ್ರಹ

ಬಾಕು (ಅಜರ್‌ಬೈಜಾನ್): ಹವಾಮಾನ ಬದಲಾವಣೆಗೆ ಸಂಬಂಧಿತ ಆರ್ಥಿಕ ನೆರವು ನೀಡುವ ತಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕು ಎಂದು ಶ್ರೀಮಂತ ರಾಷ್ಟ್ರಗಳಿಗೆ, 'ಬೇಸಿಕ್' ರಾಷ್ಟ್ರಗಳು ಒತ್ತಾಯಿಸಿವೆ.

ತಾಪಮಾನ ಬದಲಾವಣೆ ಕುರಿತು ಇಲ್ಲಿ ನಡೆಯುತ್ತಿರುವ ವಾರ್ಷಿಕ 'ಸಿಒಪಿ29' ಸಮಾವೇಶದಲ್ಲಿ ಶ್ರೀಮಂತ ರಾಷ್ಟ್ರಗಳು ತಮ್ಮ ಆರ್ಥಿಕ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸಿದವು. ಇದನ್ನು 'ಬೇಸಿಕ್' ರಾಷ್ಟ್ರಗಳು ತಿರಸ್ಕರಿಸಿದವು.

ಬ್ರೆಜಿಲ್, ದಕ್ಷಿಣ ಆಫ್ರಿಕಾ, ಭಾರತ ಹಾಗೂ ಚೀನಾ ಒಳಗೊಂಡ ಗುಂಪನ್ನು 'ಬೇಸಿಕ್' ರಾಷ್ಟ್ರಗಳು ಎನ್ನಲಾಗುತ್ತದೆ.

### ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ: ಉತ್ತರ ಪ್ರದೇಶ ವಿರುದ್ಧ ಕರ್ನಾಟಕ ಮೇಲುಗೈ

# ಶ್ರೀಜಿತ್ ಶತಕ, ಮಿಂಚಿದ ಪರಂತಾಪ್

ಪ್ರಜಾವಾಣಿ ವಾರ್ತೆ

**ಲಖನೌ:** ಪದಾರ್ಪಣೆ ಪಂದ್ಯವಾಡಿದ ಕೆ.ಎಲ್.ಶ್ರೀಜಿತ್ ಮತ್ತು ಯಶೋವರ್ಧನ್ ಪರಂತಾಪ್ ರಣಜಿ ಟ್ರೋಫಿ ಕ್ರಿಕೆಟ್ 'ಸಿ' ಗುಂಪಿನ ಪಂದ್ಯದಲ್ಲಿ ಉತ್ತರ ಪ್ರದೇಶ ವಿರುದ್ಧ ಕರ್ನಾಟಕ ತಂಡಕ್ಕೆ ಗುರುವಾರ ಮೇಲುಗೈ ದೊರಕಿಸಿಕೊಟ್ಟರು. ಆ ಮೂಲಕ ದೊಡ್ಡ ಮಟ್ಟದ ವೇದಿಕೆಯಲ್ಲಿ ತಮ್ಮ ಆಗಮನವನ್ನು ಸ್ಮರಣೀಯವಾಗಿಸಿದರು.

ಹೋದ ವರ್ಷದ ಡಿಸೆಂಬರ್‌ನಲ್ಲಿ 28 ವರ್ಷ ವಯಸ್ಸಿನ ವಿಕೆಟ್ ಕೀಪರ್ ಬ್ಯಾಟರ್ ಕೆ.ಎಲ್.ಶ್ರೀಜಿತ್ (ಕೃಷ್ಣನ್ ಶ್ರೀಜಿತ್) ಅವರು ಮೊದಲ ಬಾರಿ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶತಕ ದಾಖಲಿಸಿದ್ದರು. ಆದರೆ, ಸೀನಿಯರ್ ತಂಡದಲ್ಲಿ ಆಡಲು ಸುಮಾರು ಒಂದು ವರ್ಷ ಕಾದಿದ್ದು ವ್ಯರ್ಥವಾಗಲಿಲ್ಲ. ಏಕನಾ ಕ್ರೀಡಾಂಗಣದಲ್ಲಿ ಅವರು 153 ಎಸೆತಗಳಲ್ಲಿ 110 ರನ್ ಬಾರಿಸಿದರು. ಅವರು ಪದಾರ್ಪಣೆ ಪಂದ್ಯದಲ್ಲಿ ಶತಕ ಬಾರಿಸಿದ ಕರ್ನಾಟಕದ ಎಂಟನೇ ಆಟಗಾರ.

ಆಲ್‌ರೌಂಡರ್ ಯಶೋವರ್ಧನ್ ಅವರು ಕೆಚ್ಚೆದೆಯ ಆಟವಾಡಿ 125 ಎಸೆತಗಳಲ್ಲಿ 55 ರನ್ ಬಾರಿಸಿ ಕರ್ನಾಟಕದ ಲೀಡ್ ಉಬ್ಬುವಂತೆ ಮಾಡಿದರು. ಉತ್ತರ ಪ್ರದೇಶದ 89 ರನ್‌ಗಳಿಗೆ ಉತ್ತರವಾಗಿ ಬುಧವಾರ 5 ವಿಕೆಟ್‌ಗೆ 127 ರನ್ ಗಳಿಸಿದ್ದ ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ 275 ರನ್ ಗಳಿಸಿತು.

ಆದರೆ ಎರಡನೇ ಇನಿಂಗ್ಸ್‌ನಲ್ಲಿ ಸುಧಾರಿತ ಆಟವಾಡಿದ ಆತಿಥೇಯ ತಂಡ ದಿನದಾಟ ಮುಗಿದಾಗ 1 ವಿಕೆಟ್‌ಗೆ 78 ರನ್ ಗಳಿಸಿತು. ಇನಿಂಗ್ಸ್ ಬಾಕಿ ತೀರಿಸಲು ಇನ್ನೂ 108 ರನ್ ಗಳಿಸಬೇಕಾಗಿದೆ. ಇನ್ನೂ ಎರಡು ದಿನಗಳ ಆಟ ಬಾಕಿಯಿದ್ದು, ಕರ್ನಾಟಕಕ್ಕೆ ಮಹತ್ವದ ಗೆಲುವಿಗೆ ಯತ್ನಿಸಲಿದೆ. ಎಂಟರ ಘಟ್ಟದ ಅವಕಾಶ ಜೀವಂತಗೊಳಿಸಲು ಮಯಂಕ್ ಬಳಗಕ್ಕೆ ಗೆಲುವು ಅನಿವಾರ್ಯವಾಗಲಿದೆ.

ಮೊದಲ ದಿನವೇ ಮುನ್ನಡೆ ಪಡೆದಿದ್ದ ಕರ್ನಾಟಕ ಅದನ್ನು ಸಾಧ್ಯವಾದಷ್ಟು ಹೆಚ್ಚಿಸುವ ಗುರಿ ಹೊಂದಿತ್ತು. ಶ್ರೇಯಸ್ ಗೋಪಾಲ್ ದಿನದ ಆರನೇ ಓವರಿನಲ್ಲಿ ನಿರ್ಗಮಿಸಿದರು. ಹೀಗಾಗಿ ಕೃಷ್ಣನ್ ಶ್ರೀಜಿತ್ ಮತ್ತು ಬೌಲರ್‌ಗಳಷ್ಟೇ ಆಡಲು ಉಳಿದಿದ್ದರು. ಉತ್ತರ ಪ್ರದೇಶ ತಿರುಗೇಟು ನೀಡುವಂತೆ ಕಂಡಿತು.

ಆದರೆ ಶ್ರೀಜಿತ್ ಜೊತೆಗೂಡಿದ ಪರಂತಾಪ್ ಆ ಎಲ್ಲ ಲೆಕ್ಕಾಚಾರಗಳನ್ನು ಹುಸಿಗೊಳಿಸಿದರು. ಅನುಭವಿ ಬ್ಯಾಟರ್‌ನಂತೆ ಆಡಿದ ಅವರು ಎಚ್ಚರಿಕೆ ಮಿಶ್ರಿತ ಆಕ್ರಮಣದ ಆಟ ಆಡಿದರು. 20 ವರ್ಷ ವಯಸ್ಸಿನ ಪರಂತಾಪ್ ಜೊತೆ ಏಳನೇ ವಿಕೆಟ್‌ಗೆ ಉಪಯುಕ್ತ 61 ರನ್ ಸೇರಿಸಿದ್ದರಿಂದ ಕರ್ನಾಟಕ ಮೇಲುಗೈ ಸಾಧಿಸಿತು.

ಶ್ರೀಜಿತ್ ನಿರ್ಗಮನದ ಬಳಿಕ ಪರಂತಾಪ್ ಅವರು ಏಕಾಗ್ರತೆ ಕಳೆದುಕೊಳ್ಳಲಿಲ್ಲ. ಎಂಟನೇ ವಿಕೆಟ್‌ಗೆ ವಿದ್ಯಾಧರ ಪಾಟೀಲ್ (38, 62ಎ) ಜೊತೆ ಅಮೂಲ್ಯ 51 ರನ್‌ಗಳು ಬಂದು ಕರ್ನಾಟಕದ ಹಿಡಿತ ಬಲಗೊಂಡಿತು. ಈಗ ಅವರು ಚೆಂಡಿನಲ್ಲೂ ಉತ್ತಮ ಪ್ರದರ್ಶನ ನೀಡಿದರೆ ಕರ್ನಾಟಕಕ್ಕೆ ಅಗತ್ಯವಿರುವ ಜಯ ದಕ್ಕಬಹುದು.

ಉತ್ತರ ಪ್ರದೇಶದ ಆರಂಭ ಆಟಗಾರ ಮಾಧವ ಕೌಶಿಕ್ (ಬ್ಯಾಟಿಂಗ್ 33) ಮತ್ತು ನಾಯಕ ಆರ್ಯನ್ ಜುರೆಲ್ (ಬ್ಯಾಟಿಂಗ್ 35) ಅವರು ಮುರಿಯದ ಎರಡನೇ ವಿಕೆಟ್‌ಗೆ 70 ರನ್ ಸೇರಿಸಿ ಹೋರಾಟ ಕಾದಿರಿಸಿದ್ದಾರೆ.



ಕೆ.ಎಲ್. ಶ್ರೀಜಿತ್ —ಪ್ರಜಾವಾಣಿ ಸಂಗ್ರಹ ಚಿತ್ರ

**ರಣಜಿ ಟ್ರೋಫಿ: ಗರಿಷ್ಠ ರನ್ ಜೊತೆಯಾಟ**

| ಆಟಗಾರರು | ರನ್ | ವಿಕೆಟ್ | ತಂಡ | ಎದುರಾಳಿ | ವರ್ಷ |
|---|---|---|---|---|---|
| ಕಶ್ಯಪ್ ಬಾಕ್ಲೆ<br>ಸ್ನೇಹಲ್ ಕೌಥಣಕರ್ | 606* | 3ನೇ | ಗೋವಾ | ಅರುಣಾಚಲ ಪ್ರದೇಶ | 2024 |
| ಎಸ್.ಎಂ.ಗುಗಳೆ<br>ಎ.ಆರ್.ಬಾವ್ನೆ | 594* | 3ನೇ | ಮಹಾರಾಷ್ಟ್ರ | ದೆಹಲಿ | 2016 |
| ಎಸ್.ಡಿ. ಜೋಗಿಯಾನಿ<br>ಆರ್.ಎ. ಜಡೇಜ | 539 | 3ನೇ | ಸೌರಾಷ್ಟ್ರ | ಗುಜರಾತ್ | 2012 |
| ಎಸ್ ಗನಿ<br>ಬಬುಲ್ ಕುಮಾರ್ | 538 | 4ನೇ | ಬಿಹಾರ | ಮಿಜೋರಾಂ | 2022 |
| ಆರ್. ಸಂಜಯ್ ಯಾದವ್<br>ಡಿ.ಬಿ. ರವಿತೇಜ | 440* | 5ನೇ | ಮೇಘಾಲಯ | ಮಿಜೋರಾಂ | 2020 |

**ಸ್ಕೋರ್ ಕಾರ್ಡ್**

**ಮೊದಲ ಇನಿಂಗ್ಸ್: ಉತ್ತರಪ್ರದೇಶ: 89 (40.3 ಓವರ್‌ಗಳಲ್ಲಿ): ಕರ್ನಾಟಕ: 79.5 ಓವರ್‌ಗಳಲ್ಲಿ 275: (ಬುಧವಾರ 31 ಓವರ್‌ಗಳಲ್ಲಿ 5ಕ್ಕೆ 127)**
ಶ್ರೀಜಿತ್ ಸಿ ನಿಗಂ ಬಿ ಮಾವಿ 110 (153ಎ, 4x12)
ಶ್ರೇಯಸ್ ಸಿ ಜುರೆಲ್ ಬಿ ಅಕೀಬ್ 15 (44ಎ, 4x2)
ಯಶೋವರ್ಧನ್ ಸಿ ಸಮೀರ್ ಬಿ ನಿಗಂ 55 (125ಎ, 4x5)
ವಿದ್ಯಾಧರ ಸಿ ಶರ್ಮಾ ಬಿ ಕೃತಗ್ಯ 38 (62ಎ, 4x7)
ಮೊಹ್ಸಿನ್ ಬಿ ನಿಗಂ 0 (7ಎ)
ವಾಸುಕಿ ಕೌಶಿಕ್ ಔಟಾಗದೇ 0 (6ಎ)
**ಇತರೆ:** 15 (ಬೈ 5, ಲೆಗ್‌ಬೈ 5, ನೋಬಾಲ್ 2, ವೈಡ್ 3)
**ವಿಕೆಟ್ ಪತನ:** 6-141 (ಶ್ರೇಯಸ್ ಗೋಪಾಲ್, 36.3), 7-202 (ಕೃಷ್ಣನ್ ಶ್ರೀಜಿತ್, 59.3), 8-253 (ವಿದ್ಯಾಧರ ಪಾಟೀಲ, 74.4), 9-254 (ಮೊಹ್ಸಿನ್ ಖಾನ್, 75.6), 10-275 (ಯಶೋವರ್ಧನ್ ಪರಂತಾಪ್, 79.5)
**ಬೌಲಿಂಗ್:** ಶಿವಂ ಮಾವಿ 23–2–96–3, ಅಕೀಬ್ ಖಾನ್ 19–3–53–3, ಸೌರಭ್ ಕುಮಾರ್ 24–4–72–1, ವಿಪ್ರಜ ನಿಗಂ 9.5–0–32–2, ಕೃತಗ್ಯ ಸಿಂಗ್ 4–0–12–1

**ಎರಡನೇ ಇನಿಂಗ್ಸ್: ಉತ್ತರ ಪ್ರದೇಶ 1ಕ್ಕೆ 78 (26 ಓವರ್‌ಗಳಲ್ಲಿ)**
ಅಭಿಷೇಕ್ ಎಲ್‌ಬಿಡಬ್ಲ್ಯು ಬಿ ವಿದ್ಯಾಧರ 3 (10ಎ)
ಮಾಧವ್ ಕೌಶಿಕ್ ಔಟಾಗದೇ 33 (76ಎ, 4x4)
ಆರ್ಯನ್ ಜುರೇಲ್ ಔಟಾಗದೇ 35 (72ಎ, 4x5)
**ಇತರೆ:** 7 (ಬೈ 4, ಲೆಗ್‌ಬೈ 1, ನೋಬಾಲ್ 2)
**ವಿಕೆಟ್ ಪತನ:** 1–8 (ಅಭಿಷೇಕ್ ಗೋಸ್ವಾಮಿ 3.2)
**ಬೌಲಿಂಗ್:** ವಾಸುಕಿ ಕೌಶಿಕ್ 8–2–16–0, ವಿದ್ಯಾಧರ ಪಾಟೀಲ 8–1–25–1, ಯಶೋವರ್ಧನ್ ಪರಂತಾಪ್ 4–0–10–0, ಮೊಹ್ಸಿನ್ ಖಾನ್ 2–0–7–0, ಶ್ರೇಯಸ್ ಗೋಪಾಲ್ 4–0–15–0

## ರಣಜಿಯಲ್ಲಿ ದಾಖಲೆ ಜೊತೆಯಾಟ

**ಪೊರ್ವೊರಿಮ್, ಗೋವಾ (ಪಿಟಿಐ):** ಗೋವಾದ ಸ್ನೇಹಲ್ ಕೌಥಣಕರ್ (ಔಟಾಗದೇ 314) ಮತ್ತು ಕಶ್ಯಪ್ ಬಾಕ್ (ಔಟಾಗದೇ 300) ಅವರು ಮುರಿಯದ ಮೂರನೇ ವಿಕೆಟ್‌ಗೆ 606 ರನ್ ಸೇರಿಸಿ ರಣಜಿ ಟ್ರೋಫಿ ಕ್ರಿಕೆಟ್ ಇತಿಹಾಸದಲ್ಲಿ ಹೊಸ ದಾಖಲೆ ಬರೆದಿದ್ದಾರೆ. ಈ ಪಂದ್ಯವನ್ನು ಗೋವಾ ತಂಡವು ಇನಿಂಗ್ಸ್ ಮತ್ತು 551 ರನ್‌ಗಳಿಂದ ಗೆದ್ದಿದೆ.

ರಣಜಿ ಟ್ರೋಫಿ ಪ್ಲೇಟ್ ಲೀಗ್ ಗುಂಪಿನ ಅರುಣಾಚಲ ಪ್ರದೇಶದ ವಿರುದ್ಧ ಪಂದ್ಯದಲ್ಲಿ ಕಶ್ಯಪ್ ಮತ್ತು ಸ್ನೇಹಲ್ ಜೋಡಿಯು ದಾಖಲೆ ಬರೆದಿದೆ. ಈ ಮೂಲಕ 2016ರಲ್ಲಿ ದೆಹಲಿ ವಿರುದ್ಧ ಮಹಾರಾಷ್ಟ್ರದ ಎಸ್.ಎಂ.ಗುಗಳೆ ಮತ್ತು ಎ.ಆರ್. ಬಾವ್ನೆ ಅವರು ಮೂರನೇ ವಿಕೆಟ್‌ಗೆ ಜೊತೆಯಾಟದಲ್ಲಿ ನಿರ್ಮಿಸಿದ್ದ (ಮುರಿಯದ 594 ರನ್) ದಾಖಲೆಯನ್ನು ಮುರಿದಿದೆ. ಇದು ರಣಜಿ ಕ್ರಿಕೆಟ್‌ನಲ್ಲಿ ಯಾವುದೇ ವಿಕೆಟ್‌ನಲ್ಲಿ ಗರಿಷ್ಠ ರನ್ ಜೊತೆಯಾಟವಾಗಿದೆ.

ಬಿರುಸಿನ ಆಟವಾಡಿದ ಸ್ನೇಹಲ್, 215 ಎಸೆತಗಳನ್ನು ಎದುರಿಸಿ 146.04ರ ಸರಾಸರಿಯಲ್ಲಿ ರನ್ ಕಲೆ ಹಾಕಿದರು. ಅವರು 45 ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸಿಡಿಸಿದರು. ಕಶ್ಯಪ್ 269 ಎಸೆತಗಳಲ್ಲಿ 111.52 ಸರಾಸರಿಯಲ್ಲಿ ರನ್ ಸೂರೆಗೈದರು. ಅದರಲ್ಲಿ 39 ಬೌಂಡರಿ ಮತ್ತು ಎರಡು ಸಿಕ್ಸರ್ ಒಳಗೊಂಡಿತ್ತು.

ರಣಜಿ ಟ್ರೋಫಿ ಟೂರ್ನಿಯಲ್ಲಿ ಇಬ್ಬರು ಬ್ಯಾಟರ್‌ಗಳು ಒಂದೇ ಇನಿಂಗ್ಸ್‌ನಲ್ಲಿ ತ್ರಿಶತಕ ದಾಖಲಿಸಿದ ಎರಡನೇ ನಿದರ್ಶನ ಇದಾಗಿದೆ. 1989ರಲ್ಲಿ ಗೋವಾ ವಿರುದ್ಧ ತಮಿಳುನಾಡಿನ ಡಬ್ಲ್ಯು.ವಿ. ರಾಮನ್ ಮತ್ತು ಅರ್ಜುನ್ ಕೃಪಾಲ್ ಸಿಂಗ್ ಕ್ರಮವಾಗಿ 313 ಮತ್ತು 302 ರನ್ ಗಳಿಸಿದ್ದರು.

ಅರುಣಾಚಲ ಪ್ರದೇಶ ತಂಡವು ಮೊದಲ ಇನಿಂಗ್ಸ್‌ನಲ್ಲಿ 84 ರನ್ ಗಳಿಸಿತ್ತು. ಇದಕ್ಕೆ ಉತ್ತರವಾಗಿ ಗೋವಾ ತಂಡ ಎರಡು ವಿಕೆಟ್‌ಗೆ 727 ರನ್ ಗಳಿಸಿ, 643 ರನ್ ಇನಿಂಗ್ಸ್ ಮುನ್ನಡೆಯೊಂದಿಗೆ ಡಿಕ್ಲೇರ್ ಮಾಡಿಕೊಂಡಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಅರುಣಾಚಲ ಪ್ರದೇಶ ತಂಡವು 92 ರನ್‌ಗೆ ಕುಸಿದು ಸೋಲೊಪ್ಪಿಕೊಂಡಿತು.

# ಸರಣಿ ಗೆಲುವಿನತ್ತ ಭಾರತದ ಚಿತ್ತ

### ದಕ್ಷಿಣ ಆಫ್ರಿಕಾ ವಿರುದ್ಧ ನಾಲ್ಕನೇ ಟಿ20 ಹಣಾಹಣಿ ಇಂದು

**ಜೊಹಾನೆಸ್‌ಬರ್ಗ್ (ಪಿಟಿಐ):** ಭಾರತ ತಂಡ ಶುಕ್ರವಾರ ನಡೆಯುವ ಟಿ20 ಸರಣಿಯ ನಾಲ್ಕನೇ ಹಾಗೂ ಅಂತಿಮ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದ್ದು ಸರಣಿ ಗೆಲುವಿನ ವಿಶ್ವಾಸದಲ್ಲಿದೆ. ಆದರೆ ಕೆಲವೇ ಸಮಯದ ಹಿಂದೆ 'ಫಿನಿಷರ್' ಎನಿಸಿಕೊಂಡಿದ್ದ ರಿಂಕು ಸಿಂಗ್ ಅವರ ಕಳಪೆ ಫಾರ್ಮ್ ತಂಡದ ಚಿಂತೆಗೆ ಕಾರಣವಾಗಿದೆ.

ಎರಡೂ ತಂಡಗಳ ಬ್ಯಾಟಿಂಗ್ ಸ್ವಲ್ಪ ಸಪ್ಪೆಯೆನಿಸಿರುವ ನಡುವೆಯೇ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಶತಕಗಳನ್ನು ಬಾರಿಸಿ ಗಮನ ಸೆಳೆದಿದ್ದಾರೆ. ಬುಧವಾರ ಮೂರನೇ ಪಂದ್ಯವನ್ನು 11 ರನ್‌ಗಳಿಂದ ಗೆದ್ದ ಭಾರತ ಸರಣಿಯಲ್ಲಿ 2–1 ಮುನ್ನಡೆ ಸಾಧಿಸಿದೆ. ಬ್ಯಾಟರ್‌ಗಳಿಂದ ಸಾಂಘಿಕ ಪ್ರಯತ್ನ ನಡೆದರೆ ಭಾರತ 3–1 ರಿಂದ ಸರಣಿ ಗೆಲ್ಲುವ ಅವಕಾಶ ಹೊಂದಿದೆ.

'ವಾಂಡರರ್ಸ್' ಕ್ರೀಡಾಂಗಣ ಭಾರತಕ್ಕೆ ಸವಿನೆನಪುಗಳ ತಾಣ. ಇಲ್ಲಿಯೇ ಭಾರತ 2007ರ ಟಿ20 ವಿಶ್ವಕಪ್‌ನ ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು ಸೋಲಿಸಿ ಚೊಚ್ಚಲ ಆವೃತ್ತಿಯಲ್ಲೇ ಚಾಂಪಿಯನ್ ಆಗಿತ್ತು. ನಾಯಕ ಸೂರ್ಯಕುಮಾರ್, ವರ್ಷದ ಹಿಂದೆ ನಡೆದ ಟಿ20 ಸರಣಿಯಲ್ಲಿ ತಮ್ಮ ಕೊನೆಯ ಶತಕ ಹೊಡೆದಿದ್ದರು. ಭಾರತ ಜಯಗಳಿಸಿತ್ತು ಕೂಡ. ಮೂರು ಪಂದ್ಯಗಳ ಆ ಸರಣಿ 1–1 ಸಮನಾಗಿದ್ದು, ಒಂದು ಪಂದ್ಯ ಮಳೆಯ ಪಾಲಾಗಿತ್ತು. ಸೂರ್ಯ ನಾಯಕತ್ವದಲ್ಲಿ ಭಾರತದ ಗೆಲುವಿನ ಪ್ರಮಾಣ ಶೇ 81.25ರಷ್ಟು ಇದೆ. ಅವರ ನೇತೃತ್ವದಲ್ಲಿ 16 ಪಂದ್ಯಗಳಲ್ಲಿ 13ರಲ್ಲಿ ಜಯಗಳಿಸಿದೆ.

**ರಿಂಕುಗೆ ಸವಾಲು:** ಟಿ20 ಕ್ರಿಕೆಟ್ ತಾರೆಗಳಲ್ಲಿ ಒಬ್ಬರಾಗಿ ಉದಯಿಸಿದ್ದ ರಿಂಕು ಸಿಂಗ್ ಅವರ ಆಟದ ಮಟ್ಟ ಕೆಲವು ತಿಂಗಳಿಂದ ಹಠಾತ್ತನೇ ಕುಸಿದಿದ್ದು ಕಳವಳಕ್ಕೆ ಕಾರಣವಾಗಿದೆ. ಬ್ಯಾಟಿಂಗ್ ಕ್ರಮಾಂಕ ಆರು ಮತ್ತು ಏಳರಲ್ಲಿ ಬದಲಾಗುತ್ತಿರುವುದೂ ಅಲಿಗಢದ ಆಟಗಾರನಿಗೆ ಸಮಸ್ಯೆಯಾಗಿದೆ.

ಮೂರು ಪಂದ್ಯಗಳಲ್ಲಿ ಅವರು ಗಳಿಸಿರುವುದು 11, 9 ಮತ್ತು 8 ರನ್. ಎರಡು ಪಂದ್ಯಗಳಲ್ಲಿ ಆರನೇ ಕ್ರಮಾಂಕದಲ್ಲಿ, ಒಂದರಲ್ಲಿ ಏಳನೇ ಕ್ರಮಾಂಕದಲ್ಲಿ ಆಡಿದ್ದಾರೆ. ಮೊದಲ ಬೌಂಡರಿ ಗಳಿಸಲೂ ಸಾಕಷ್ಟು ಸಮಯ ತೆಗೆದುಕೊಂಡಿದ್ದಾರೆ. ಅವರು ಮೊದಲಿನಂತೆ ಆಕ್ರಮಣಕಾರಿಯಾಗಿ ಕಾಣುತ್ತಿಲ್ಲ.

ಸಂಜು ಸ್ಯಾಮ್ಸನ್ ಆರಂಭ ಆಟಗಾನಾಗಿ, ತಿಲಕ್ ವರ್ಮಾ ಮೂರನೇ ಕ್ರಮಾಂಕದಲ್ಲಿ ಮತ್ತು ಹಾರ್ದಿಕ್ ಪಾಂಡ್ಯ ಮಧ್ಯಮ ಕ್ರಮಾಂಕದಲ್ಲಿ ಆಡುತ್ತಿರುವ ಕಾರಣ ರಿಂಕು ಕೆಳಕ್ರಮಾಂಕದಲ್ಲಿ ಆಡಬೇಕಾಗಿದೆ. ತಂಡದ ಚಿಂತಕರ ಚಾವಡಿ ಈ ಸಮಸ್ಯೆ ಆದಷ್ಟು ಬೇಗ ಬಗೆಹರಿಸಬೇಕಾಗಿದೆ.

ಭಾರತ ಮೊದಲೆರಡು ಪಂದ್ಯಗಳಿಗೆ 15 ಆಟಗಾರರಲ್ಲಿ 12 ಆಟಗಾರರನ್ನು ಬಳಸಿಕೊಂಡಿದೆ. ಪದಾರ್ಪಣೆಗೆ ಕಾಯುತ್ತಿರುವ ಇಬ್ಬರು ವೇಗದ ಬೌಲರ್‌ಗಳಾದ ಯಶ್ ದಯಾಳ್ ಅಥವಾ ವೈಶಾಖ ವಿಜಯಕುಮಾರ್ ಅವರು ಅವಕಾಶ ಪಡೆಯುವರೇ ಎಂಬುದೂ ಕುತೂಹಲಕ್ಕೆ ಕಾರಣವಾಗಿದೆ. ರಮಣದೀಪ್ ಸಿಂಗ್ ಕೂಡ ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ಉಪಯುಕ್ತ ಪಾತ್ರ ವಹಿಸಬಲ್ಲವರಾಗಿದ್ದು ಅವರೂ ಅವಕಾಶಕ್ಕೆ ಎದುರು ನೋಡುತ್ತಿದ್ದಾರೆ.

**ಪಂದ್ಯ ಆರಂಭ: ರಾತ್ರಿ 8.30.**
**ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ**



ರಿಂಕು ಸಿಂಗ್

## ಸಂಕ್ಷಿಪ್ತ ಸುದ್ದಿ

### ಆಸ್ಟ್ರೇಲಿಯಾ ಸರಣಿಗೆ ವೇಗಿ ಶಮಿ?

**ನವದೆಹಲಿ (ಪಿಟಿಐ):** ರಣಜಿ ಟ್ರೋಫಿ ಮೂಲಕ ಕ್ರಿಕೆಟ್‌ಗೆ ಪುನರಾಗಮನ ಪಂದ್ಯದಲ್ಲೇ ನಾಲ್ಕು ವಿಕೆಟ್‌ಗಳನ್ನು ಪಡೆದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರ ಪ್ರದರ್ಶನ, ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ತಂಡದಲ್ಲಿ ಆಶಾಕಿರಣ ಮೂಡಿಸಿದೆ.

ಕಳೆದ ವರ್ಷದ ಕೊನೆಯಲ್ಲಿ ಸ್ವದೇಶದಲ್ಲಿ ಏಕದಿನ ವಿಶ್ವಕಪ್ ಟೂರ್ನಿ ವೇಳೆ ಗಾಯಗೊಂಡಿದ್ದ ಶಮಿ ಅವರು ಇಂದೋರ್‌ನಲ್ಲಿ ರಣಜಿ ಪಂದ್ಯದ ಮೂಲಕ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿದ್ದಾರೆ.

ಬಂಗಾಳ ತಂಡದ ಪರ ಆಡುತ್ತಿರುವ ಶಮಿ, ಮಧ್ಯಪ್ರದೇಶ ತಂಡದ ನಾಯಕ ಶುಭಂ ಶರ್ಮಾ, ಆಲ್‌ರೌಂಡರ್ ಸಾರಾಂಶ್ ಜೈನ್ ಅವರ ವಿಕೆಟ್ ಸೇರಿದಂತೆ ನಾಲ್ಕು ವಿಕೆಟ್‌ಗಳನ್ನು ಪಡೆದರು. ಇವರಲ್ಲಿ ಮೂವರು ಬೌಲ್ಡ್ ಆದರೆ, ಒಬ್ಬರು ವಿಕೆಟ್ ಕೀಪರ್ ವೃದ್ಧಿಮಾನ್ ಸಹಾಗೆ ಕ್ಯಾಚಿತ್ತರು. ನಾಲ್ಕು ಸ್ಪೆಲ್‌ಗಳಲ್ಲಿ ಒಟ್ಟು 19 ಓವರ್ ಮಾಡಿದ ವೇಗಿ 54 ರನ್ನಿಗೆ 4 ವಿಕೆಟ್ ಪಡೆದರು.

ಭಾರತ ತಂಡದ ಆಯ್ಕೆಗಾರರು ಶಮಿ ಬೌಲಿಂಗ್ ಮೇಲೆ ಕಣ್ಣಿಟ್ಟಿದ್ದು, ಎರಡನೇ ಇನಿಂಗ್ಸ್‌ನಲ್ಲಿ ಅವರ ದೇಹ ಹೇಗೆ ಸ್ಪಂದಿಸುತ್ತದೆ ಎಂಬುದನ್ನೂ ಗಮನಿಸಲಿದ್ದಾರೆ. ರಣಜಿ ಪಂದ್ಯ ನವೆಂಬರ್ 16ರಂದು ಮುಗಿಯಲಿದ್ದು, ಆ ಬಳಿಕವಷ್ಟೇ ಅವರು ಭಾರತ ತಂಡಕ್ಕೆ ಮರಳಿ ಸೇರುವರೇ ಎಂಬುದು ತೀರ್ಮಾನವಾಗಲಿದೆ.

ನಿರೀಕ್ಷೆಗೆ ತಕ್ಕಂತೆ ಬೌಲಿಂಗ್ ಪ್ರದರ್ಶಿಸಿದರೆ, ಆಸ್ಟ್ರೇಲಿಯಾ ವಿರುದ್ಧ ಸರಣಿಯ ಎರಡನೇ ಟೆಸ್ಟ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಜತೆ ದಾಳಿಗಿಳಿಯುವ ಸಾಧ್ಯತೆಯಿದೆ.

### ಸೋಲಿನ ಸುಳಿಯಲ್ಲಿ ಧೀರಜ್ ಗೌಡ ಬಳಗ

**ಬೆಂಗಳೂರು:** ಹಾಲಿ ಚಾಂಪಿಯನ್ ಕರ್ನಾಟಕ ತಂಡವು ಇಲ್ಲಿನ ಆಲೂರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲೂ ಸೋಲಿನ ಸುಳಿಯಲ್ಲಿದೆ.

ಬರೋಡಾ ವಿರುದ್ಧದ ಮೊದಲ ಪಂದ್ಯದಲ್ಲಿ ಪರಾಭವಗೊಂಡಿದ್ದ ಕರ್ನಾಟಕ ತಂಡವು ದೆಹಲಿ ವಿರುದ್ಧದ ಪಂದ್ಯದಲ್ಲೂ ಮುಗ್ಗರಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ 88 ರನ್‌ಗಳ ಹಿನ್ನಡೆ ಅನುಭವಿಸಿದ್ದ ಧೀರಜ್ ಗೌಡ ನೇತೃತ್ವದ ಕರ್ನಾಟಕ, ಎರಡನೇ ಇನಿಂಗ್ಸ್‌ನಲ್ಲಿ ಗೆಲುವಿಗೆ 229 ರನ್‌ಗಳ ಗುರಿ ಪಡೆದಿದೆ. ಆದರೆ, 32 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದೆ.

**ಸಂಕ್ಷಿಪ್ತ ಸ್ಕೋರ್:** ದೆಹಲಿ: 190 ಮತ್ತು 41.4 ಓವರ್‌ಗಳಲ್ಲಿ 140 (ಮಂಥನ್ ತನ್ವರ್ 28, ಮೋಹಕ್ ಕುಮಾರ್ 33; ಧೀರಜ್ ಗೌಡ 42ಕ್ಕೆ 4, ಸಿದ್ಧಾರ್ಥ್ ಅಖಿಲ್ 22ಕ್ಕೆ 3). ಕರ್ನಾಟಕ: 105 ಮತ್ತು 8 ಓವರ್‌ಗಳಲ್ಲಿ 4ಕ್ಕೆ 32 (ಉಧವ್ ಮೋಹನ್ 7ಕ್ಕೆ 3).

### ಎಸ್‌ಕೆಡಿಆರ್‌ಡಿಪಿ– ಬಿ.ಸಿ.ಟ್ರಸ್ಟ್ ಕಾರ್ಯಕ್ರಮದಲ್ಲಿ ಸದಸ್ಯರಿಗೆ ಚೆಕ್ ವಿತರಣೆ

# ₹607 ಕೋಟಿ ಲಾಭಾಂಶ ವಿತರಣೆ

ಪ್ರಜಾವಾಣಿ ವಾರ್ತೆ

**ಉಜಿರೆ (ದಕ್ಷಿಣ ಕನ್ನಡ):** ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ (ಎಸ್‌ಕೆಡಿಆರ್‌ಡಿಪಿ) ಬಿ.ಸಿ. ಟ್ರಸ್ಟ್ ವತಿಯಿಂದ ಸ್ವಸಹಾಯ ಸಂಘಗಳ ಸದಸ್ಯರಿಗೆ ಒಟ್ಟು ₹ 607.71 ಕೋಟಿ ಲಾಭಾಂಶವನ್ನು ಧರ್ಮಸ್ಥಳದಲ್ಲಿ ಗುರುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಾಂಕೇತಿಕವಾಗಿ ಬೆಳ್ತಂಗಡಿಯ ಧನ್ಯಶ್ರೀ ಸಂಘ, ಕುಂದಾಪುರದ ಶ್ರೀನಿಧಿ ಸಂಘ, ಹೊಸಪೇಟೆಯ ಶ್ರೀಶಂಕರ ಸಂಘ, ಆನೇಕಲ್‌ನ ಅಪೂರ್ವ ಸಂಘ, ಖಾನಾಪುರದ ಅಹದ್ ಸಂಘ, ಹಾಸನದ ರೌಷನ್ ಸಂಘಗಳ ಸದಸ್ಯರಿಗೆ ಲಾಭಾಂಶದ ಚೆಕ್ ವಿತರಿಸಿದರು.

ಬಳಿಕ ಮಾತನಾಡಿದ ನಿರ್ಮಲಾ ಸೀತಾರಾಮನ್, 'ಹಿಂದೆ ಗ್ರಾಮೀಣಾಭಿವೃದ್ಧಿಯು ಕಲ್ಯಾಣ ಕಾರ್ಯಕ್ರಮಕ್ಕೆ ಸೀಮಿತವಾಗಿತ್ತು. ಸರ್ಕಾರದ ಹಣಕಾಸಿನ ನೆರವನ್ನು ಸ್ವಸಹಾಯ ಗುಂಪುಗಳ ಸದಸ್ಯರು ಸಣ್ಣ ಪುಟ್ಟ ಉದ್ದೇಶಗಳಿಗೆ ಬಳಸುತ್ತಿದ್ದರು. ಆದರೆ, ಈಗ ಗ್ರಾಮೀಣಾಭಿವೃದ್ಧಿಯು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುತ್ತಿದೆ. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಗಳಂತಹ ಉತ್ತೇಜನಾ ಸಂಸ್ಥೆಗಳೂ ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಲು ನೆರವಾಗುತ್ತಿವೆ' ಎಂದರು.

'ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸರ್ಕಾರದ ಗ್ರಾಮಾಭಿವೃದ್ಧಿ ಯೋಜನೆಗಳ ಪ್ರಯೋಗಶಾಲೆ ಇದ್ದಂತೆ. ಇಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನವಾದ ಕಾರ್ಯಕ್ರಮಗಳ ಯಶಸ್ಸನ್ನು ಆಧರಿಸಿ ಅವುಗಳನ್ನು ರಾಷ್ಟ್ರ ಮಟ್ಟದಲ್ಲಿ ಸರ್ಕಾರದ ನೀತಿಯಾಗಿ ಜಾರಿಗೊಳಿಸಲಾಗುತ್ತಿದೆ' ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, 'ಯಾರೂ ಸ್ವಸಹಾಯ ಸಂಘಗಳಿಗೆ ಲಾಭಾಂಶ ವಿತರಿಸುವ ಯೋಚನೆ ಮಾಡಿಲ್ಲ. ₹600 ಕೋಟಿಗೂ ಹೆಚ್ಚು ಲಾಭಾಂಶ ವಿತರಿಸಿ ನಾವು ಅದನ್ನು ಸಾಧಿಸಿ ತೋರಿಸಿದ್ದೇವೆ. ಈ ಮಾದರಿಯನ್ನು ದೇಶದ ಇತರ ಭಾಗಗಳಿಗೂ ವಿಸ್ತರಿಸಬೇಕು' ಎಂದು ಹೇಳಿದರು.




ಧರ್ಮಸ್ಥಳದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಸದಸ್ಯರಿಗೆ ಲಾಭಾಂಶವನ್ನು ಗುರುವಾರ ವಿತರಿಸಿದರು. ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ, ಜ್ಞಾನ ವಿಕಾಸ ಕಾರ್ಯಕ್ರಮದ ಅಧ್ಯಕ್ಷೆ ಹೇಮಾವತಿ ವಿ.ಹೆಗ್ಗಡೆ, ನಬಾರ್ಡ್ ಅಧ್ಯಕ್ಷ ಶಾಜಿ ಕೆ.ವಿ ಭಾಗವಹಿಸಿದ್ದರು

# ಜಮೀರ್ ಮಾತು: ಲಾಭ-ನಷ್ಟ ಎರಡೂ ಆಗಿದೆ

### ಒಕ್ಕಲಿಗರ ಮತ ಬ್ಯಾಂಕ್ ಮೇಲೆ ಪರಿಣಾಮ ಬೀರಿದೆ: ಸಿ.ಪಿ. ಯೋಗೇಶ್ವರ್

ಪ್ರಜಾವಾಣಿ ವಾರ್ತೆ

**ಚನ್ನಪಟ್ಟಣ (ರಾಮನಗರ):** 'ಪ್ರಚಾರದ ವೇಳೆ ಜೆಡಿಎಸ್ ನಾಯಕರಾದ ಎಚ್.ಡಿ. ದೇವೇಗೌಡರ ಮತ್ತು ಎಚ್.ಡಿ. ಕುಮಾರಸ್ವಾಮಿ ಬಗ್ಗೆ ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಆಡಿದ ಮಾತಿನಿಂದ ಚುನಾವಣೆಯಲ್ಲಿ ನನಗೆ ಲಾಭ ಮತ್ತು ನಷ್ಟ ಎರಡೂ ಆಗಿದೆ. ಆದರೆ, ವೈಯಕ್ತಿಕವಾಗಿ ಜಮೀರ್ ಮಾತು ಖಂಡಿಸುವೆ' ಎಂದು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಹೇಳಿದ್ದಾರೆ.

'ಜಮೀರ್ ಮಾತು ಮುಸ್ಲಿಮರ ಮತಗಳನ್ನು ಕ್ರೋಡೀಕರಿಸಿದರೆ, ಮತ್ತೊಂದೆಡೆ ಒಕ್ಕಲಿಗ ಸಮುದಾಯದ ಮತಗಳ ಮೇಲೆ ಪರಿಣಾಮ ಬೀರಿದೆ. ಮತದಾನದ ಬಳಿಕ ಈ ವಿಷಯವನ್ನು ಪಕ್ಷದ ಮುಖಂಡರು ಮತ್ತು ಬೆಂಬಲಿಗರು ನನ್ನ ಗಮನಕ್ಕೆ ತಂದಿದ್ದಾರೆ' ಎಂದರು.

ಚುನಾವಣೆ ಬಳಿಕ ಮಾಧ್ಯಮಗಳ ಜತೆ ಗುರುವಾರ ಮಾತನಾಡಿದ ಅವರು, 'ರಾಜ್ಯ ರಾಜಕೀಯದಲ್ಲಿ ಒಕ್ಕಲಿಗರ ನಾಯಕರಾಗಿರುವ ದೇವೇಗೌಡ ಮತ್ತು ಕುಮಾರಸ್ವಾಮಿ ಅವರನ್ನು ನಿಂದಿಸಿದರೆ ಸಮುದಾಯ ಸಹಿಸದು. ಒಂದು ವೇಳೆ ಇಬ್ಬರ ಬಗ್ಗೆ ಜಮೀರ್ ಆಡಿದ ಮಾತನ್ನು ಸಮುದಾಯ ಗಂಭೀರವಾಗಿ ಪರಿಗಣಿಸಿದ್ದರೆ ಜೆಡಿಎಸ್ ಪರ ಒಕ್ಕಲಿಗ ಮತಗಳು ಕ್ರೋಡೀಕರಣವಾಗಿರುವ ಸಾಧ್ಯತೆ ಇದೆ' ಎಂದು ವಿಶ್ಲೇಷಿಸಿದರು.

'ನನ್ನ ರಾಜಕೀಯ ಜೀವನದ ದೊಡ್ಡ ಚುನಾವಣೆ ಇದಾಗಿದ್ದು, ಇಷ್ಟೊಂದು ತೀವ್ರತೆ ಪಡೆಯುತ್ತದೆ ಅಂದುಕೊಂಡಿರಲಿಲ್ಲ. ಕ್ಷೇತ್ರದಲ್ಲಿ ಸಮಬಲದ ಪೈಪೋಟಿ ಇದ್ದು, ಇಬ್ಬರಲ್ಲಿ ಯಾರೇ ಗೆದ್ದರೂ ಕೂದಲೆಳೆಯ ಅಂತರದಲ್ಲಿ ಮಾತ್ರ' ಎಂದರು.

'ಕೇಂದ್ರ ಸಚಿವ ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾದ ಕ್ಷೇತ್ರವನ್ನು ತಮ್ಮ ಕುಟುಂಬದ ಹಿಡಿತದಲ್ಲಿಯೇ ಉಳಿಸಿಕೊಳ್ಳಲು ಅವರು ಹೋರಾಡಿದರು. ದೇವೇಗೌಡ ತಮ್ಮ ಮೊಮ್ಮಗನನ್ನು ಗೆಲ್ಲಿಸಲು ಶಪಥ ಮಾಡಿದ್ದರು. ಒಕ್ಕಲಿಗ ಸಮುದಾಯದ ಮುಖದಂತಿರುವ ಜೆಡಿಎಸ್, ಹಳೆ ಮೈಸೂರು ಭಾಗದಲ್ಲಿ ಪ್ರಾಬಲ್ಯ ಹೊಂದಿದೆ. ಬಿಜೆಪಿ ಜೊತೆಗಿನ ಮೈತ್ರಿಯೂ ಅವರಿಗೆ ನೆರವಾಗಿರಬಹುದು' ಎಂದು ಅಭಿಪ್ರಾಯಪಟ್ಟರು.

'ನಾನು ಎದುರಿಸಿರುವ ಎಲ್ಲಾ ಚುನಾವಣೆಗಳಲ್ಲೂ 80 ರಿಂದ 90 ಸಾವಿರ ಮತ ಪಡೆದಿದ್ದೇನೆ. ಈ ಚುನಾವಣೆಯಲ್ಲಿ ಒಂದು ಲಕ್ಷಕ್ಕಿಂತ ಅಧಿಕ ಮತ ಪಡೆದರೆ ಗೆಲುವು ನಿಶ್ಚಿತ. ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 15 ಸಾವಿರ ಮತ ಪಡೆದಿತ್ತು. ಈ ಚುನಾವಣೆಯ ಮತ ಲೆಕ್ಕಾಚಾರದಿಂದ ನಾನು ಹತಾಶನಾಗಿಲ್ಲ. ಆದರೆ, ವಾಸ್ತವವನ್ನು ಒಪ್ಪಿಕೊಳ್ಳುತ್ತಲೇ ಸಮಬಲದ ಹೋರಾಟದಲ್ಲಿ ಗೆಲ್ಲುತ್ತೇನೆಂಬ ವಿಶ್ವಾಸ ಹೊಂದಿದ್ದೇನೆ' ಎಂದು ಯೋಗೇಶ್ವರ್ ಹೇಳಿದರು.

'ಬಿಜೆಪಿಯಲ್ಲಿದ್ದಾಗ ನನಗಿದ್ದ ಮತಬ್ಯಾಂಕ್, ಕಾಂಗ್ರೆಸ್ ಸೇರಿದ ಬಳಿಕವೂ ನನ್ನನ್ನು ಹಿಂಬಾಲಿಸುವುದೇ ಎಂಬುದು ಫಲಿತಾಂಶ ಬಂದ ಬಳಿಕವೇ ಗೊತ್ತಾಗಲಿದೆ' ಎಂದರು.



**ನಾನು ಗೆದ್ದರೆ ಸರ್ಕಾರದ ಸಾಧನೆ, ವೈಯಕ್ತಿಕ ವರ್ಚಸ್ಸು ಕೆಲಸ ಮಾಡಿದೆ ಎಂದರ್ಥ. ಸೋತರೆ ಜನ ನನ್ನ ಪಕ್ಷಾಂತರ ತಿರಸ್ಕರಿಸಿದ್ದಾರೆ, ಸರ್ಕಾರದ ಸಾಧನೆ ಕೆಲಸ ಮಾಡಿಲ್ಲ ಎಂದರ್ಥ**
**ಸಿ.ಪಿ. ಯೋಗೇಶ್ವರ್,** ಕಾಂಗ್ರೆಸ್ ಅಭ್ಯರ್ಥಿ

### 'ಮತದಾರ ಈಗಾಗಲೇ ಉತ್ತರ ಕೊಟ್ಟಿದ್ದಾನೆ'



ನಿಖಿಲ್ ಕುಮಾರಸ್ವಾಮಿ

'ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರು ಚುನಾವಣೆ ಪ್ರಚಾರದ ಸಂದರ್ಭದಲ್ಲಿ ನನ್ನ ತಾತ ಎಚ್.ಡಿ. ದೇವೇಗೌಡ ಮತ್ತು ತಂದೆ ಎಚ್.ಡಿ. ಕುಮಾರಸ್ವಾಮಿ ಕುರಿತು ಆಡಿರುವ ಮಾತುಗಳಿಗೆ ಮತದಾರರು ಈಗಾಗಲೇ ಉತ್ತರ ಕೊಟ್ಟಿದ್ದಾರೆ' ಎಂದು ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

'ಜನ ಏನು ತೀರ್ಪು ಕೊಟ್ಟಿದ್ದಾರೆ ಎಂಬುದನ್ನು ನವೆಂಬರ್ 23ರಂದು ಹೊರಬೀಳುವ ಫಲಿತಾಂಶದವರೆಗೆ ಕಾದು ನೋಡಬೇಕಿದೆ. ನನ್ನ ಹಣೆಬರಹ ಬರೆಯುವುದು ಚನ್ನಪಟ್ಟಣದ ಮತದಾರರೇ ಹೊರತು, ಬೇರೆ ಯಾರೋ ಅಲ್ಲ ಎಂಬುದು ಗೊತ್ತಾಗುತ್ತದೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

# 'ಪ್ರತಿಗಾಮಿ ಸರ್ಕಾರಗಳಿಗೆ ಅದಾನಿ ನೆರವು'

**ಕಲಬುರಗಿ:** 'ಕೈಗಾರಿಕೋದ್ಯಮಿ ಗೌತಮ್ ಅದಾನಿ ದೇಶದ ಪ್ರತಿಗಾಮಿ ಸರ್ಕಾರಗಳಿಗೆ ನೆರವು ನೀಡುತ್ತಿದ್ದಾರೆ. ಇವರಿಗೆ ತತ್ವ, ಸಿದ್ಧಾಂತದ ಮೇಲೆ ನಡೆಯುತ್ತಿರುವ ಪಕ್ಷಗಳು ಬೇಕಿಲ್ಲ' ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅದಾನಿ ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದು, ಧರ್ಮದ ಆಧಾರದ ಮೇಲೆ ಒಗ್ಗಟ್ಟಾಗುವ ಶಕ್ತಿಗಳನ್ನು ಬೆಂಬಲಿಸುತ್ತಿದ್ದಾರೆ. ನರೇಂದ್ರ ಮೋದಿ-ಅಮಿತ್ ಶಾ ಅವರು ಅದಾನಿಯಂತಹ ಭಾರಿ ಬಂಡವಾಳಗಾರರಿಂದ ಹಣ ಪಡೆದು ಚುನಾವಣೆ ನಡೆಸುತ್ತಿದ್ದಾರೆ. ಮೋದಿ, ಶಾ ಇಂತಹ ಉದ್ಯಮಿಗಳನ್ನೇ ಬೆಳೆಸುತ್ತಿದ್ದಾರೆ' ಎಂದು ದೂರಿದರು.

'ಮಹಾರಾಷ್ಟ್ರ, ಜಾರ್ಖಂಡ್‌ಗೆ ಚುನಾವಣೆ ಪ್ರಚಾರಕ್ಕೆ ಹೋದಾಗಲೆಲ್ಲ ನಮ್ಮ ರಾಜ್ಯಕ್ಕೆ ಏನು ಕೊಡುತ್ತೀರಿ ಎಂದು ಜನರು ಕೇಳುತ್ತಿದ್ದಾರೆ. ಬಿಜೆಪಿಯವರು ಕಾಶ್ಮೀರದಲ್ಲಿ 370 ಕಲಂ ರದ್ದತಿ ಬಗ್ಗೆ ಪದೇ ಪದೇ ಹೇಳುತ್ತಿದ್ದಾರೆ. ಆಯಾ ರಾಜ್ಯಕ್ಕೆ ಏನು ಕೊಡುತ್ತಾರೆ ಎಂಬುದರ ಬಗ್ಗೆಯೂ ಹೇಳಬೇಕು. ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೆ ಕರ್ನಾಟಕ ಮಾದರಿಯಲ್ಲಿ ಗ್ಯಾರಂಟಿಗಳನ್ನು ನೀಡುವುದಾಗಿ ಹೇಳಿದ್ದೇವೆ' ಎಂದರು.

# ಕೋವಿಡ್: ಎಸ್‌ಐಟಿ ತನಿಖೆ

ಒಂದನೇ ಪುಟದಿಂದ...

'ಭ್ರಷ್ಟಾಚಾರ, ಬೇಜವಾಬ್ದಾರಿಯುತ ವರ್ತನೆ, ಸಾವಿನ ಮಾಹಿತಿಯನ್ನೇ ಮುಚ್ಚಿಟ್ಟ ಪ್ರಕರಣಗಳೂ ನಡೆದಿದ್ದವು. ಆ ಕುರಿತು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ತನಿಖೆ ನಡೆಸುವುದಕ್ಕೂ ಅಡ್ಡಿಪಡಿಸಲಾಗಿತ್ತು. ಈಗ ವಿಚಾರಣಾ ಆಯೋಗದ ಶಿಫಾರಸಿನ ಅನುಸಾರ ತನಿಖೆಗೆ ನಿರ್ಧರಿಸಲಾಗಿದೆ' ಎಂದು ಪಾಟೀಲ ವಿವರಿಸಿದರು.

₹330ರಿಂದ ₹400 ದರದಲ್ಲಿ ರಾಜ್ಯದಲ್ಲೇ ಪಿಪಿಇ ಕಿಟ್ ಲಭ್ಯವಿತ್ತು. ಆದರೆ, ವಿದೇಶಿ ಕಂಪನಿಗಳಿಗೆ ₹2,117 ದರ ನೀಡಿ ಮೂರು ಲಕ್ಷ ಕಿಟ್ ಖರೀದಿ ಮಾಡಲಾಗಿತ್ತು. ಒಂದೇ ದಿನ ಎರಡು ದರಗಳಲ್ಲೂ ಖರೀದಿಸಲಾಗಿತ್ತು. ಖಾಸಗಿ ಪ್ರಯೋಗಾಲಯಗಳಿಗೆ ಅಕ್ರಮವಾಗಿ ₹6.93 ಕೋಟಿ ಪಾವತಿಸಲಾಗಿತ್ತು. ಮಾನ್ಯತೆಯೇ ಇಲ್ಲದ ನಾಲ್ಕು ಪ್ರಯೋಗಾಲಯಗಳಿಗೆ ₹4.28 ಕೋಟಿಯನ್ನು ಅಕ್ರಮವಾಗಿ ಪಾವತಿಸಲಾಗಿದೆ ಎಂದು ಆಯೋಗ ವರದಿಯಲ್ಲಿ ಹೇಳಿದೆ. ಈ ಎಲ್ಲ ಪ್ರಕರಣಗಳ ಬಗ್ಗೆಯೂ ಎಸ್‌ಐಟಿ ತನಿಖೆ ನಡೆಸಲಿದೆ ಎಂದರು.

'ಆಗ ಅಧಿಕಾರಿಗಳು ಮತ್ತು ರಾಜಕೀಯ ನಾಯಕರ ಅಪವಿತ್ರ ಮೈತ್ರಿಯು ನಡೆಸಿದ್ದ ದುರಾಡಳಿತ ಜನರಲ್ಲಿ ನಡುಕ ಹುಟ್ಟಿಸಿತ್ತು. ಆ ಬಗ್ಗೆ ಸರಿಯಾದ ತನಿಖೆಯೇ ನಡೆದಿರಲಿಲ್ಲ. ಮೈಕಲ್ ಡಿಕುನ್ಹ ಆಯೋಗ ಸಲ್ಲಿಸಿದ್ದ ಮಧ್ಯಂತರ ವರದಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯ ಸಂಪುಟ ಉಪ ಸಮಿತಿ ಪರಿಶೀಲಿಸಿ, ಸಲಹೆಗಳನ್ನು ನೀಡಿದೆ. ಅದರ ಆಧಾರದಲ್ಲಿ ಎಸ್‌ಐಟಿ ಮೂಲಕ ತನಿಖೆ ನಡೆಸುವ ನಿರ್ಧಾರಕ್ಕೆ ಬರಲಾಯಿತು' ಎಂದು ಹೇಳಿದರು.

ಐಜಿಪಿ ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ಐಪಿಎಸ್ ಅಧಿಕಾರಿಯೊಬ್ಬರು ಎಸ್‌ಐಟಿ ನೇತೃತ್ವ ವಹಿಸಲಿದ್ದಾರೆ. ಅಧಿಕಾರಿಗಳ ನಿಯೋಜನೆ ಕುರಿತು ಪ್ರತ್ಯೇಕ ಆದೇಶ ಹೊರಡಿಸಲಾಗುವುದು. ಪ್ರಕರಣಗಳಲ್ಲಿ ಯಾರು ಭಾಗಿಯಾಗಿದ್ದಾರೋ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಿ ಆರೋಪಪಟ್ಟಿ ಸಲ್ಲಿಸಲಾಗುವುದು ಎಂದರು.

### ದಂಗೆಕೋರರ ನಿಯಂತ್ರಿಸಲು 5 ಜಿಲ್ಲೆಗಳಲ್ಲಿ ಕಾಯ್ದೆ ಅನುಷ್ಠಾನ

# ಮಣಿಪುರದಲ್ಲಿ ಮತ್ತೆ ಆಫ್‌ಸ್ಪಾ ಜಾರಿ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರವು, ದಂಗೆಕೋರರನ್ನು ನಿಯಂತ್ರಿಸುವ ಸಲುವಾಗಿ ಜನಾಂಗೀಯ ಹಿಂಸಾಚಾರ ಪೀಡಿತ ಮಣಿಪುರದ ಜಿರೀಬಾಮ್ ಜತೆಗೆ ಐದು ಜಿಲ್ಲೆಗಳಲ್ಲಿ ಇನ್ನೂ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯ ಪ್ರದೇಶಗಳನ್ನು ಸಶಸ್ತ್ರ ಪಡೆಗಳ (ವಿಶೇಷ ಅಧಿಕಾರ) ಕಾಯ್ದೆ, 1958 (ಆಫ್‌ಸ್ಪಾ) ವ್ಯಾಪ್ತಿಗೆ ಗುರುವಾರ ಮತ್ತೊಮ್ಮೆ ತಂದಿದೆ.

ಇತ್ತೀಚಿನ ಗೆಜೆಟ್ ಅಧಿಸೂಚನೆಯ ಪ್ರಕಾರ, ಭದ್ರತಾ ಪರಿಸ್ಥಿತಿಯ ಹೆಚ್ಚಿನ ಪರಿಶೀಲನೆಯು ಆಫ್‌ಸ್ಪಾ ಅಡಿಯಲ್ಲಿ ಇನ್ನೂ ಆರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿರುವ ಪ್ರದೇಶಗಳನ್ನು 'ಸಂಘರ್ಷಪೀಡಿತ ಪ್ರದೇಶ'ಗಳೆಂದು ಘೋಷಿಸಲು ಕಾರಣವಾಗಿದೆ. ಇದರೊಂದಿಗೆ, ಮಣಿಪುರದ 13 ಪೊಲೀಸ್ ಠಾಣೆಗಳ ವ್ಯಾಪ್ತಿಯ ಪ್ರದೇಶಗಳು ಮಾತ್ರ ಆಫ್‌ಸ್ಪಾ ವ್ಯಾಪ್ತಿಯಿಂದ ಹೊರಗುಳಿದಿವೆ.

### ಸಿಆರ್‌ಪಿಎಫ್ ಹಿಂಪಡೆಯಲು ಒತ್ತಾಯ

**ಗುವಾಹಟಿ:** ಮಣಿಪುರದ ಜಿರೀಬಾಮ್ ಜಿಲ್ಲೆಯಲ್ಲಿ ಸಿಆರ್‌ಪಿಎಫ್ ಜತೆಗೆ ನಡೆದ ಗುಂಡಿನ ಚಕಮಕಿಯಲ್ಲಿ ಹಮರ್ ಸಮುದಾಯಕ್ಕೆ ಸೇರಿದ 10 ಮಂದಿ ಬಂಡುಕೋರರ ಹತ್ಯೆಯಾಗಿರುವುದಕ್ಕೆ ಆಕ್ರೋಶಗೊಂಡಿರುವ ಕುಕಿ ಜೊ ಸಂಘಟನೆಗಳು ಸಂಘರ್ಷ ಪೀಡಿತ ರಾಜ್ಯದ ಕುಕಿ ಜನವಸತಿ ಪ್ರದೇಶಗಳಿಂದ ಸಿಆರ್‌ಪಿಎಫ್ ಅನ್ನು ಸಂಪೂರ್ಣ ಹಿಂಪಡೆಯಬೇಕು ಎಂದು ಒತ್ತಾಯಿಸಿವೆ.

ಮಣಿಪುರಕ್ಕೆ ಹೆಚ್ಚುವರಿ 20 ಸಿಆರ್‌ಪಿಎಫ್ ತುಕಡಿಗಳನ್ನು ಕೇಂದ್ರ ಸರ್ಕಾರ ನಿಯೋಜಿಸಿದ ಬೆನ್ನಲ್ಲೇ ಈ ಒತ್ತಾಯ ಕೇಳಿಬಂದಿದೆ.

ನ. 7 ರಂದು ಜಿರೀಬಾಮ್‌ನಲ್ಲಿ ಹಮರ್ ಸಮುದಾಯಕ್ಕೆ ಸೇರಿದ ಮಹಿಳೆಯೊಬ್ಬರ ಹತ್ಯೆ ಮತ್ತು ನ. 8ರಂದು ನಡೆದಿರುವ 10 ಯುವಕರ ಹತ್ಯೆಯ ಬಗ್ಗೆ ತನಿಖೆ ನಡೆಸಬೇಕು ಎಂದು ಜಿರೀಬಾಮ್ ಮತ್ತು ಫೆರ್ಜಾಲ್ ಜಿಲ್ಲೆಯ ಕುಕಿ ಜೊ ಸಂಘಟನೆಗಳ ವೇದಿಕೆಯಾದ ಸ್ಥಳೀಯ ಬುಡಕಟ್ಟು ಸಲಹಾ ಸಮಿತಿ (ಐಟಿಎಸಿ) ಹೇಳಿಕೆಯಲ್ಲಿ ಒತ್ತಾಯಿಸಿದೆ.

ಆಂತರಿಕವಾಗಿ ಸ್ಥಳಾಂತರಗೊಂಡ ಮೈತೇಯಿ ಸಮುದಾಯದವರಿಗೆ ಆಶ್ರಯ ನೀಡಿದ್ದ ಪೊಲೀಸ್ ಠಾಣೆ ಮತ್ತು ಸಿಆರ್‌ಪಿಎಫ್ ಶಿಬಿರದ ಸಮೀಪ ಗುಂಡಿನ ದಾಳಿ ನಡೆಸಿದ್ದರಿಂದ ಪ್ರತಿದಾಳಿಯಲ್ಲಿ 10 ಮಂದಿ ಸಶಸ್ತ್ರ ಉಗ್ರರನ್ನು ಹೊಡೆದುರುಳಿಸಲಾಗಿದೆ ಎಂದು ಮಣಿಪುರ ಪೊಲೀಸರು ಹೇಳಿದ್ದಾರೆ.

ಆದರೆ, ಇದನ್ನು ಅಲ್ಲಗಳೆದಿರುವ ಕುಕಿ ಜೊ ಸಂಘಟನೆಗಳು, 'ಕೊಲ್ಲಲ್ಪಟ್ಟವರು ಉಗ್ರಗಾಮಿಗಳಲ್ಲ, ಹಮರ್ ಸಮುದಾಯಕ್ಕೆ ಸೇರಿದ ಗ್ರಾಮ ಸ್ವಯಂಸೇವಕರು. ಅವರು ತಮ್ಮ ಹಳ್ಳಿಗಳನ್ನು ಮೈತೇಯಿಗಳ ಸಂಭವನೀಯ ದಾಳಿಗಳಿಂದ ರಕ್ಷಿಸುತ್ತಿದ್ದರು' ಎಂದು ಪ್ರತಿಪಾದಿಸಿವೆ.

### ಅಪಹರಣ ಖಂಡಿಸಿ ಮಾನವ ಸರಪಳಿ

**ಇಂಫಾಲ್ (ಪಿಟಿಐ):** ಶಸ್ತ್ರಸಜ್ಜಿತ ಬುಡಕಟ್ಟು ಉಗ್ರರು ಜಿರೀಬಾಮ್ ಜಿಲ್ಲೆಯಲ್ಲಿ ಮೂವರು ಮಹಿಳೆಯರು ಮತ್ತು ಮೂವರು ಮಕ್ಕಳನ್ನು ಅಪಹರಿಸಿದ್ದಾರೆ ಎಂದು ಆರೋಪಿಸಿ ಇಂಫಾಲ್ ಕಣಿವೆಯಾದ್ಯಂತ ಶಾಲಾ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಸಂಸ್ಥೆಗಳ ಮುಂಭಾಗ ಮಾನವ ಸರಪಳಿ ನಿರ್ಮಿಸಿ ಪ್ರತಿಭಟಿಸಿದರು.

ಆರು ಮಂದಿಯನ್ನು ಕೂಡಲೇ ಸುರಕ್ಷಿತವಾಗಿ ಬಿಡುಗಡೆಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು. ಕಪ್ಪು ಬಾವುಟ ಹಿಡಿದು, ಕಪ್ಪು ಬ್ಯಾಡ್ಜ್ ಧರಿಸಿ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮೈತೇಯಿ ಸಮುದಾಯದ ವಿದ್ಯಾರ್ಥಿ ಬಣ ಮಾನವ ಸರಪಳಿಯನ್ನು ಆಯೋಜಿಸಿತ್ತು. 'ಇಂದು ದೇಶದಲ್ಲಿ ಮಕ್ಕಳ ದಿನ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮುಗ್ಧ ಮಕ್ಕಳನ್ನು ಬಿಡುಗಡೆ ಮಾಡಿ ಹಾಗೂ ನಮ್ಮ ಸ್ನೇಹಿತರನ್ನೂ ಬಿಡುಗಡೆ ಮಾಡಿ' ಎಂದು ಫಲಕಗಳನ್ನು ಪ್ರದರ್ಶಿಸಲಾಯಿತು.

'ಮಣಿಪುರಕ್ಕೆ ಇಂದು ಅತ್ಯಂತ ದುಃಖಕರ ಮಕ್ಕಳ ದಿನವಾಗಿದೆ' ಎಂದು ಇಲ್ಲಿನ ವಿದ್ಯಾರ್ಥಿ ತೌನೊಜಮ್ ಥಡೋಯ್ ಬೇಸರ ವ್ಯಕ್ತಪಡಿಸಿದರು.

ಅಪಹರಣ ಆದವರನ್ನು ರಕ್ಷಿಸಲು ಕಾರ್ಯಾಚರಣೆ ನಡೆಯುತ್ತಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೀಪಿಕಾ ಐದು ಗೋಲು • ಥಾಯ್ಲೆಂಡ್ ತಂಡಕ್ಕೆ 13–0 ಸೋಲು

# ಗೋಲುಮಳೆಗರೆದ ಭಾರತ



ಥಾಯ್ಲೆಂಡ್ ವಿರುದ್ಧ ಪಂದ್ಯದಲ್ಲಿ ಗೋಲು ಗಳಿಸಿದ ನಂತರ ಭಾರತದ ಆಟಗಾರ್ತಿಯರು ಸಂಭ್ರಮ ಪಟ್ಟಿದ್ದು ಹೀಗೆ....

ರಾಜಗೀರ್ (ಬಿಹಾರ) (ಪಿಟಿಐ): ಯುವ ಆಟಗಾರ್ತಿ ದೀಪಿಕಾ ಗಳಿಸಿದ ಐದು ಗೋಲುಗಳ ನೆರವಿನಿಂದ ಭಾರತ ತಂಡ, ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿ ಪಂದ್ಯದಲ್ಲಿ ಗುರುವಾರ ದುರ್ಬಲ ಥಾಯ್ಲೆಂಡ್ ತಂಡವನ್ನು 13-0 ಗೋಲುಗಳಿಂದ ಸದೆಬಡಿಯಿತು. ಜೊತೆಗೆ ಸೆಮಿಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು.

ಸ್ಕೋರ್ ಹೇಳುವಂತೆ ಇದು ಏಕಪಕ್ಷೀಯ ಪಂದ್ಯವಾಗಿದ್ದು, ಪ್ರಾಚೀನ ನಗರದ ನೂತನ ಹಾಕಿ ಕ್ರೀಡಾಂಗಣದಲ್ಲಿ ಭಾರತದ ಆಟಗಾರ್ತಿಯರು ಮನಬಂದಂತೆ ಎದುರಾಳಿ ಗೋಲಿ ನತ್ತ ನುಗ್ಗಿದರು. ಥಾಯ್ಲೆಂಡ್ ಆಟಗಾರ್ತಿಯರು ಒಂದೂ ಗೋಲು ಗಳಿಸಲಾಗಲಿಲ್ಲ.

ದೀಪಿಕಾ ಪಂದ್ಯದ ಮೂರನೇ, 19ನೇ, 43ನೇ, 45ನೇ ಮತ್ತು 46ನೇ ನಿಮಿಷ ಗೋಲುಗಳನ್ನು ಗಳಿಸಿದರು. ಪ್ರೀತಿ ದುಬೆ (9 ಮತ್ತು 40ನೇ ನಿಮಿಷ), ಲಾಲ್ರೆಮ್‌ಸಿಯಾಮಿ (12, 56ನೇ ನಿಮಿ) ಮತ್ತು ಮನಿಷಾ ಚೌಹಾನ್ (45 ಮತ್ತು 58ನೇ ನಿಮಿ) ತಲಾ ಎರಡು ಗೋಲುಗಳನ್ನು ತಂದಿತ್ತರು. ಬ್ಯೂಟಿ ಡಂಗ್‌ಡಂಗ್ (30ನೇ) ಮತ್ತು ನವನೀತ್ ಕೌರ್ (53ನೇ ನಿಮಿಷ) ಇನ್ನೆರಡು ಗೋಲುಗಳಿಗೆ ಕಾರಣರಾದರು.

ಭಾರತದ ಮುಂಚೂಣಿ ಆಟಗಾರ್ತಿಯರ ನಿರಂತರ ದಾಳಿಯಿಂದಾಗಿ ಥಾಯ್ಲೆಂಡ್ ರಕ್ಷಣಾಕೋಟೆ ನುಚ್ಚುನೂರಾಯಿತು. ಭಾರತಕ್ಕೆ ದೊರಕಿದ 12 ಪೆನಾಲ್ಟಿ ಕಾರ್ನರ್‌ಗಳಲ್ಲಿ ಐದು ಗೋಲುಗಳಾಗಿ ಪರಿವರ್ತನೆಯಾದವು. ಭಾರತ, ಇದಕ್ಕೆ ಮೊದಲು ಮಲೇಷ್ಯಾ ವಿರುದ್ಧ 4-0 ಯಿಂದ ಮತ್ತು ದಕ್ಷಿಣ ಕೊರಿಯಾ ವಿರುದ್ಧ 3-2 ಗೋಲುಗಳಿಂದ ಜಯಗಳಿಸಿತ್ತು.

ಭಾರತ ಶನಿವಾರ ನಡೆಯುವ ಪಂದ್ಯದಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಬೆಳ್ಳಿ ಪದಕ ವಿಜೇತ ಚೀನಾ ತಂಡವನ್ನು ಎದುರಿಸಲಿದೆ.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

### ಮಲೇಷ್ಯಾಕ್ಕೆ ಜಯ

ಮಲೇಷ್ಯಾ ಇನ್ನೊಂದು ಪಂದ್ಯದಲ್ಲಿ 2–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು. ಚೀನಾ ಅಜೇಯ ಓಟ ಮುಂದುವರಿಸಿ ಇದೇ (2–1) ಅಂತರದಿಂದ ಜಪಾನ್ ತಂಡವನ್ನು ಪರಾಭವಗೊಳಿಸಿತು.

ಭಾರತ ಮತ್ತು ಚೀನಾ ತಂಡಗಳು ರೌಂಡ್ ರಾಬಿನ್ ಹಂತದ ಮೂರು ಪಂದ್ಯಗಳ ನಂತರ ತಲಾ 9 ಪಾಯಿಂಟ್ಸ್ ಕಲೆಹಾಕಿವೆ.

ಚೀನಾದ ಗೋಲು ವ್ಯತ್ಯಾಸ (+21), ಆತಿಥೇಯರಿಗಿಂತ (+18) ಉತ್ತಮವಾಗಿದ್ದು ಅದು ಅಗ್ರಸ್ಥಾನದಲ್ಲಿದೆ. ರೌಂಡ್ ರಾಬಿನ್ ಲೀಗ್‌ನಲ್ಲಿ ಆರು ತಂಡಗಳಿದ್ದು, ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್‌ನಲ್ಲಿ ಆಡುವ ಅರ್ಹತೆ ಸಂಪಾದಿಸುತ್ತವೆ.

# ಮೂರನೇ ಮಿನಿ ಒಲಿಂಪಿಕ್ಸ್‌ಗೆ ಚಾಲನೆ

## ಶಾಲಾ ವಿದ್ಯಾರ್ಥಿಗಳಿಗೆ ಕ್ರೀಡಾ ಕೃಪಾಂಕ ಪರಿಶೀಲನೆ: ಮುಖ್ಯಮಂತ್ರಿ ಭರವಸೆ

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ಮೂರನೇ ಮಿನಿ ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಪಟುವಿನಿಂದ ಕ್ರೀಡಾಜ್ಯೋತಿ ಸ್ವೀಕರಿಸಿದರು. ಶಾಸಕ ರಿಜ್ವಾನ್ ಅರ್ಷದ್, ಸಚಿವ ಕೆ.ಜೆ.ಜಾರ್ಜ್, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್ ಮತ್ತು ಅಂತರರಾಷ್ಟ್ರೀಯ ಮಾಜಿ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಭಾಗವಹಿಸಿದ್ದರು.

ಬೆಂಗಳೂರು: ಕ್ರೀಡೆಗಳಲ್ಲಿ ಭಾಗವಹಿಸುವ ಶಾಲಾ ಮಕ್ಕಳ ಪ್ರೋತ್ಸಾಹಕ್ಕೆ ಕೃಪಾಂಕ ನೀಡಬೇಕೆಂಬ ಬೇಡಿಕೆ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ಭರವಸೆ ನೀಡಿದರು.

ಕಂಠೀರವ ಕ್ರೀಡಾಂಗಣದಲ್ಲಿ ಮೂರನೇ ಮಿನಿ ಒಲಿಂಪಿಕ್ಸ್ (14 ವರ್ಷದೊಳಗಿನವರ) ಕೂಟ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಾಸ್ತಾವಿಕ ಭಾಷಣದಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ಅವರು ಈ ಬಗ್ಗೆ ಬೇಡಿಕೆಯಿಟ್ಟಿದ್ದರು.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದವರಿಗೆ ಪೊಲೀಸ್ ಇಲಾಖೆಯಲ್ಲಿ ಶೇ 3 ಮತ್ತು ಇತರೆ ಇಲಾಖೆಗಳಲ್ಲಿ ಶೇ 2ರಷ್ಟು ಉದ್ಯೋಗ ಮೀಸಲಿಡಲಾಗಿದೆ. ಇದರಿಂದ ಸಾಕಷ್ಟು ಕ್ರೀಡಾಪಟುಗಳಿಗೆ ಅನುಕೂಲವಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಕ್ರೀಡಾಪಟುಗಳಾಗಲು ಬಯಸುವವರಿಗೆ ಪರಿಶ್ರಮ ಮತ್ತು ಉತ್ತಮ ತರಬೇತಿ ಅಗತ್ಯ. ಅವರಿಗೆ ಸರ್ಕಾರ ಮತ್ತು ಕ್ರೀಡಾ ಸಂಸ್ಥೆಗಳು ಅವಕಾಶಗಳನ್ನು ಕಲ್ಪಿಸಬೇಕು ಎಂದರು.

ಕೆಒಎ ಅಧ್ಯಕ್ಷ ಗೋವಿಂದರಾಜ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ನಡೆಯುತ್ತಿರುವ ಏಳು ದಿನಗಳ ಈ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಐದು ಸಾವಿರ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ.

ಕೊಪ್ಪಳ ಜಿಲ್ಲೆಯ ವಾಲಿಬಾಲ್ ಆಟಗಾರ್ತಿ ಕಾವೇರಿ ಅವರು ಕ್ರೀಡಾಪಟುಗಳ ಪರ ಪ್ರಮಾಣ ಸ್ವೀಕರಿಸಿದರು.

## ಯೋಧಾಸ್, ಮುಂಬಾಗೆ ಜಯ

ನೊಯ್ಡಾ (ಪಿಟಿಐ): ಭವಾನಿ ರಜಪೂತ್ ಮತ್ತು ಭರತ್ ಹೂಡಾ ಅವರ ಅಮೋಘ ರೇಡಿಂಗ್ ಬಲದಿಂದ ಯು.ಪಿ ಯೋಧಾಸ್ ತಂಡವು ಗುರುವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 40–34 ರಿಂದ ತೆಲುಗು ಟೈಟನ್ಸ್ ವಿರುದ್ಧ ಗೆಲುವು ಸಾಧಿಸಿತು.

ಮಧ್ಯಂತರದ ವೇಳೆಗೆ 4 (16–20) ಪಾಯಿಂಟ್ಸ್‌ಗಳಿಂದ ಹಿನ್ನಡೆಯಲ್ಲಿದ್ದ ಯೋಧಾಸ್ ಉತ್ತರಾರ್ಧದಲ್ಲಿ ಪಾರಮ್ಯ ಮೆರೆಯಿತು. ಭವಾನಿ ಮತ್ತು ಭರತ್ ಕ್ರಮವಾಗಿ ಕ್ರಮವಾಗಿ 12 ಮತ್ತು 11 ಅಂಕ ಕಲೆಹಾಕಿದರು.

ಟೈಟನ್ಸ್‌ನ ವಿಜಯ್ ಮಲಿಕ್ (15 ಅಂಕ) ಏಕಾಂಗಿ ಹೋರಾಟ ನಡೆಸಿದರು. ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ.

ಯೋಧಾಸ್ ತಂಡಕ್ಕೆ ಇದು 9 ಪಂದ್ಯಗಳಲ್ಲಿ ನಾಲ್ಕನೇ ಗೆಲುವಾಗಿದೆ. ಒಟ್ಟು 25 ಅಂಕ ಸಂಗ್ರಹಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. 27 ಅಂಕ ಹೊಂದಿರುವ ಟೈಟನ್ಸ್ ಆರನೇ ಸ್ಥಾನದಲ್ಲಿದೆ.

**ಮುಂಬಾಗೆ ಜಯ:** ದಿನದ ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವು 35–32ರಿಂದ ತಮಿಳು ತಲೈವಾಸ್ ತಂಡವನ್ನು ಸೋಲಿಸಿತು.

ಈ ಗೆಲುವಿನೊಂದಿಗೆ ಮುಂಬಾ (34 ಅಂಕ) ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದಿದೆ. ತಲೈವಾಸ್ (22) 10ನೇ ಸ್ಥಾನದಲ್ಲಿದೆ.

## ಬ್ಯಾಡ್ಮಿಂಟನ್: ಸಿಂಧು ನಿರ್ಗಮನ

ಕುಮಮೊಟೊ (ಜಪಾನ್), (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಕುಮಾಮೊಟೊ ಮಾಸ್ಟರ್ಸ್ ಜಪಾನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದರು. ಇದರೊಂದಿಗೆ ಈ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ವಿಶ್ವಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಸಿಂಧು ಗುರುವಾರ ನಡೆದ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ 21-17, 16-21, 17-21 ರಲ್ಲಿ ಕೆನಡಾದ ಮಿಚೆಲ್ ಲಿ ಎದುರು ಸೋಲನುಭವಿಸಿದರು.

## ತಮಿಳುನಾಡು, ದೆಹಲಿ ಚಾಂಪಿಯನ್

ಮೈಸೂರು: ತಮಿಳುನಾಡು ಹಾಗೂ ದೆಹಲಿ ತಂಡಗಳು ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಗುರುವಾರ ಮುಕ್ತಾಯಗೊಂಡ ಅಂಚೆ ನೌಕರರ 38ನೇ ಅಖಿಲ ಭಾರತ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರು ಹಾಗೂ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊಮ್ಮಿದವು.

ಪುರುಷರ ಸಿಂಗಲ್ಸ್‌ನ ಫೈನಲ್‌ನಲ್ಲಿ ಹಿಮಾಚಲ ಪ್ರದೇಶದ ಅಜಯ್ ಕೈತ್ 21-11, 21-12ರಿಂದ ಉತ್ತರ ಪ್ರದೇಶದ ಅಮಿತ್ ಶರ್ಮಾ ಅವರನ್ನು ಮಣಿಸಿದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಪಶ್ಚಿಮ ಬಂಗಾಳದ ಅನುರಿಯಾ ದಾಸ್ 21-12, 21-14 ರಿಂದ ಗುಜರಾತಿನ ವೈಶಾಲಿ ಎಫ್. ಬರಿಯಾ ವಿರುದ್ಧ ಗೆದ್ದರು.

## ಪಾಕಿಸ್ತಾನಕ್ಕೆ ತಲುಪಿದ ಟ್ರೋಫಿ

ಕರಾಚಿ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಅಂತಿಮ ವೇಳಾಪಟ್ಟಿಯನ್ನು ಐಸಿಸಿ ಇನ್ನೂ ಪ್ರಕಟಿಸಿಲ್ಲ. ಆದರೆ, ಈ ಮಧ್ಯೆ ಟ್ರೋಫಿ ಪಾಕಿಸ್ತಾನ ತಲುಪಿದ್ದು, ದೇಶದ ವಿವಿಧೆಡೆ ಅದರ ಪ್ರದರ್ಶನ ನಡೆಯಲಿದೆ.

ಉತ್ತರ ಪಾಕಿಸ್ತಾನದ ಸ್ಕರ್ದುನಿಂದ ಇದೇ 16ರಂದು ಟ್ರೋಫಿ ಪ್ರವಾಸ ಪ್ರಾರಂಭವಾಗುತ್ತದೆ. ಪಂದ್ಯಗಳು ನಡೆಯಲಿರುವ ಪ್ರಮುಖ ನಗರಗಳಲ್ಲಿ ಟ್ರೋಫಿಯ ಪ್ರದರ್ಶನ ನಡೆಯಲಿದೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ತಿಂಗಳ ಆರಂಭದಲ್ಲಿ ಲಾಹೋರ್‌ನಲ್ಲಿ ಟ್ರೋಫಿಯನ್ನು ಅನಾವರಣಗೊಳ್ಳಬೇಕಿತ್ತು. ಬಿಸಿಸಿಐ, ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸುವುದಿಲ್ಲ ಎಂದು ಐಸಿಸಿಗೆ ತಿಳಿಸಿದ ನಂತರ ಸಮಾರಂಭವನ್ನು ಮುಂದೂಡಲಾಗಿತ್ತು.

ಹೈಬ್ರಿಡ್ ಮಾದರಿಯಲ್ಲಿ ಟೂರ್ನಿಯನ್ನು ಆಯೋಜಿಸುವ ಕುರಿತು ಐಸಿಸಿಯು ಪಿಸಿಬಿಯಿಂದ ಪ್ರತಿಕ್ರಿಯೆ ಕೋರಿದ ಬೆನ್ನಲ್ಲೇ ಟ್ರೋಫಿಯನ್ನು ಗುರುವಾರ ದುಬೈನಿಂದ ಇಸ್ಲಾಮಾಬಾದ್‌ಗೆ ತರಲಾಗಿದೆ.

## ಆಸ್ಟ್ರೇಲಿಯಾಕ್ಕೆ ಮಣಿದ ಪಾಕಿಸ್ತಾನ

ಬ್ರಿಸ್ಬೇನ್ (ಎಎಫ್‌ಪಿ): ಅನುಭವಿ ಬ್ಯಾಟರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಮಿಂಚಿನ ಬ್ಯಾಟಿಂಗ್ ಮೂಲಕ ಫಾರ್ಮಿಗೆ ಮರಳಿದ ಬಳಿಕ ವೇಗದ ಬೌಲರ್‌ಗಳಾದ ಕ್ಸೇವಿಯರ್ ಬಾರ್ಟ್ಲೆಟ್ ಮತ್ತು ನಥಾನ್ ಎಲ್ಲಿಸ್ ತಲಾ ಮೂರು ವಿಕೆಟ್ ಪಡೆದರು. ಇದರಿಂದಾಗಿ ಆಸ್ಟ್ರೇಲಿಯಾ ಟಿ20 ಸರಣಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮೇಲೆ 29 ರನ್‌ಗಳ ಸುಲಭ ಜಯಪಡೆಯಿತು.

ಗುರುವಾರ ಮಧ್ಯಾಹ್ನದ ಮಳೆಯಿಂದಾಗಿ 20 ಓವರುಗಳ ಈ ಪಂದ್ಯ ತಲಾ ಏಳು ಓವರ್‌ಗಳಿಗೆ ಮೊಟಕುಗೊಂಡಿತು. ರನ್‌ಬರ ಎದುರಿಸುತ್ತಿದ್ದ ಮ್ಯಾಕ್ಸ್‌ವೆಲ್ 19 ಎಸೆತಗಳಲ್ಲಿ 43 ರನ್ ಸಿಡಿಸಿದರು. ಮಾರ್ಕಸ್ ಸ್ಟೊಯಿನಿಸ್ 7 ಎಸೆತಗಳಲ್ಲಿ ಅಜೇಯ 21 ರನ್ ಗಳಿಸಿದರು. ಆತಿಥೇಯರು 4 ವಿಕೆಟ್‌ಗೆ 93 ರನ್ ಗಳಿಸಿದರು. ನಂತರ ವೇಗದ ದಾಳಿಗೆ ಪಾಕಿಸ್ತಾನ ತಂಡದ ಬ್ಯಾಟಿಂಗ್ ಕುಸಿಯಿತು. ಅದು 7 ಓವರುಗಳಲ್ಲಿ 9 ವಿಕೆಟ್‌ಗೆ 64 ರನ್ ಗಳಿಸಲಷ್ಟೇ ಶಕ್ತವಾಯಿತು. ಮೊದಲ ಆರು ಆಟಗಾರರಲ್ಲಿ ಯಾರೂ ಎರಡಂಕಿ ಮೊತ್ತ ತಲಪಲಿಲ್ಲ. ಮೂರು ಪಂದ್ಯಗಳ ಸರಣಿಯಲ್ಲಿ ಆಸ್ಟ್ರೇಲಿಯಾ 1-0 ಮುನ್ನಡೆ ಪಡೆಯಿತು. ಪಾಕಿಸ್ತಾನ ಇತ್ತೀಚೆಗೆ ನಡೆದ ಏಕದಿನ ಸರಣಿಯನ್ನು 2-1 ರಿಂದ ಗೆದ್ದಿತ್ತು.

**ಸ್ಕೋರುಗಳು:** ಆಸ್ಟ್ರೇಲಿಯಾ: 7 ಓವರುಗಳಲ್ಲಿ 4 ವಿಕೆಟ್‌ಗೆ 93 (ಗ್ಲೆನ್ ಮ್ಯಾಕ್ಸ್‌ವೆಲ್ 43, ಅಬ್ಬಾಸ್ ಅಫ್ರಿದಿ 9ಕ್ಕೆ2); ಪಾಕಿಸ್ತಾನ: 7 ಓವರುಗಳಲ್ಲಿ 9 ವಿಕೆಟ್‌ಗೆ 64 (ಅಬ್ಬಾಸ್ ಅಫ್ರಿದಿ ಔಟಾಗದೇ 20; ಕ್ಸೇವಿಯರ್ ಬಾರ್ಟ್ಲೆಟ್ 13ಕ್ಕೆ3, ನಥಾನ್ ಎಲ್ಲಿಸ್ 9ಕ್ಕೆ3, ಆ್ಯಡಂ ಜಂಪಾ 11ಕ್ಕೆ2). ಪಂದ್ಯದ ಆಟಗಾರ: ಗ್ಲೆನ್ ಮ್ಯಾಕ್ಸ್‌ವೆಲ್.